UNIVERSAL LIBRARY

OU_200385

UNIVERSAL LIBRARY

NARASIMHARAJA WADIYAR SERIES.

# ಅಪ್ಯತಪ್ರಲಿನ

ಬಿ. ವೆಂಕಟಾಚಾರ್ಯ.



ಬಿ. ವೆಂಕಟಾಚಾರ್ಯ.

# ವಿಜ್ಞಾಪನೆ.

ಈ ಗ್ರಂಥವು ಮೊದಲು "ವಾಗ್ಭೂಷಣ" ಎಂಬ ಮಾಸಪತ್ರಿಕೆಯಲ್ಲಿ ಧಾರಾವಾಹಕವಾಗಿ ಪ್ರಚಾರವಾಗಿ ಸಂಪೂರ್ಣವಾಯಿತು. ಪತ್ರಿಕೆಗೆ ಸಲುವಾಗಿ ಮುದ್ರಿತವಾದುದರಲ್ಲಿ ಉಳಿದ ಸ್ವಲ್ಪ ಪ್ರತಿಗಳು ಮಾತ್ರ ಪುಸ್ತಕಾಕಾರದಲ್ಲಿ ಪ್ರಚಾರವಾದವು. ಅವೂ ಮುಗಿದು ಹೋಗಿ ಬಹಳ ಕಾಲವಾಯಿತು. ಅನೇಕರು ಈ ಪುಸ್ತಕವನ್ನು ಬಹಳವಾಗಿ ಅಪೇಕ್ಷಿಸುತ್ತಿರುವದರಿಂದ ಮೊದಲು ಪ್ರತಿಯನ್ನು ಪರಿಶೋಧಿಸಿ ಪುನಃ ಮುದ್ರಿಸಿರುತ್ತೆ. ಶೈಲಿಯು ಹೊಸದಾಗಿರುವುದು. ಓದಿದರೆ ನೂತನ ಗ್ರಂಥವಾಗಿ ತೋರುವುದು.

ಈ ಗ್ರಂಥದ ಕಥೆಯು ಓದಲು ಬಹು ಮನೋಹರವಾಗಿರುವುದರಿಂದ ಯುವಕರಿಂದಲೂ, ವೃದ್ಧರಿಂದಲೂ, ಹೆಂಗಸರಿಂದಲೂ, ಗಂಡಸರಿಂದಲೂ ಓದಲ್ಪಡುವುದಕ್ಕೆ ಯೋಗ್ಯವಾಗಿದೆ. ಸೌಂದರ್ಯ ಸೃಷ್ಟಿಯಲ್ಲಿ ಗಿರಿರಾಣಿಯು ತ್ರಿಲೋಕ ಸುಂದರಿಯಾದ ತಿಲೋತ್ತಮೆಯಂತಿರುವಳು. ಚರಿತೆಯಲ್ಲಾದರೋ ಅವಳು ಮಾಧುರ್ಯದ ದ್ಯುತಮಣಿಯಾಗಿರುವಳು. ಅಮೃತಪುಲಿನವು ಅಮೃತ ಪರಿಪೂರ್ಣವಾಗಿರುವುದು !

ಗ್ರಂಥಕರ್ತರಾದ ನಮ್ಮ ತಂದೆಯವರ ಗ್ರಂಥಗಳು ಮುಗಿದುಹೋಗುತ್ತಿರುವುವು. ಅವುಗಳ ಪುನಃ ಸಂಸ್ಕರಣಗಳು ಕನ್ನಡ ಭಾಷಾಸೇವಿಗಳಾದ ಮಹನೀಯರ ಧಾರಾವಾಹಕವಾದ ಉದಾರ ಆಶ್ರಯದಿಂದ ಕೈಗೂಡತಕ್ಕ ಕೆಲಸವಾಗಿದೆ— ಇತಿ

ಮೈಸೂರು
1—11—1916.

ಬಿ. ಎ. ನರಸಿಂಹೈಯ್ಯಂಗಾರ್ಯ.

# ವಿಜ್ಞಾಪನೆ.

ಶ್ರೀಬಂಕಿಮ.ಬಾಬುಯವರ ತರುವಾಯ ಪ್ರಸಿದ್ಧ ಲೇಖಕರೆಂದು ಪ್ರಖ್ಯಾತರಾಗಿರುವ ಶ್ರೀನನಿಲಾಲವಂದ್ಯೋಪಾಧ್ಯಾಯರವರ ಗ್ರಂಥವನ್ನವಲಂಬಿಸಿ ಅವರ ಅಪ್ಪಣೆಯನ್ನು ಪಡೆದು, ಈ ಗ್ರಂಥವನ್ನು ಕನ್ನಡದಲ್ಲಿ ಬರೆದುದಾಗಿದೆ. ನನಿಲಾಲಬಾಬುಯವರ ಗ್ರಂಥಗಳು ಸರ್ವತ್ರ ಪ್ರಚಾರವಾಗಿ ಬಹು ಮುಖವಾಗಿ ಪ್ರಶಂಸಿಸಲ್ಪಟ್ಟಿವೆ. ಚರಿತ್ರಾಂಕನದಲ್ಲಿಯೂ, ಘಟನೆಗಳನ್ನು ಸಮಂಜಸಗೊಳಿಸಿ ಹೇಳುವುದರಲ್ಲಿಯೂ, ವರ್ಣನೆಗಳ ಕೌಶಲದಲ್ಲಿಯೂ, ಭಾಷೆಯ ರಮಣೀಯತೆಯಲ್ಲಿಯೂ, ನನಿಬಾಬುಯವರು ತಮ್ಮ ಅಸಾಧಾರಣ ಕೃತಿತ್ವವನ್ನು ತೋರಿದ್ದಾರೆ. ಅವರ ಗ್ರಂಥಗಳಲ್ಲಿ ಭಾವಗಳು ಆದ್ಯಂತವಾಗಿ ವಿಶುದ್ಧವಾಗಿರುವುವು. ಎಲ್ಲರೂ ಏಕತ್ರ ಕುಳಿತು ಓದಬಹುದು. ನನಿಬಾಬುಯವರ ಕೃತಿತ್ವವು ಆದರ್ಶಯೋಗ್ಯವಾದುದು. ಅಕಬರಷಹನ ವಿರಾಟು ಚರಿತ್ರೆಯು ಪರಿಸ್ಫುಟವಾಗಿರುವುದು. ಅಜಯಸಿಂಹನು ರಾಜಪೂತರ ವೀರತ್ವದ ಸಜೀವ ವಿಗ್ರಹವಾಗಿ ತೋರುವನು.

ಪ್ರಸಿದ್ಧವಾದ ಒಂದಾನೊಂದು ಇಂಗ್ಲೀಷು ಪತ್ರಿಕೆಯು ಅಮೃತಪುಲಿನವನ್ನು ಸಮಾಲೋಚನೆ ಮಾಡುವುದರಲ್ಲಿ ಗ್ರಂಥವನ್ನು ಕುರಿತು ಹೀಗೆಂದು ಹೇಳಿದೆ—

"The plan of the book shows considerable skill and design, and the execution is worthy of the plan. The heroine in particular, interests, engages, even overpowers the reader."

ನನಿಬಾಬುಯವರ ಗ್ರಂಥಗಳನ್ನು ನಾವು ಕನ್ನಡಿಸಿರುವುದರಲ್ಲಿ ಅಮೃತಪುಲಿನವು ಎರಡನೆಯ ಗ್ರಂಥವಾಗಿರುವುದು. ಈ ಗ್ರಂಥವನ್ನು ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದವರು ತಮ್ಮ ಮಾಸಪತ್ರಿಕೆಯಲ್ಲಿ ಪ್ರಚಾರಪಡಿಸಿದುದಕ್ಕೆ ಸಲವಾಗಿ ಅವರಿಗೆ ಚಿರಋಣಿಗಳಾಗಿರುವೆವು.— ಇತಿ

ಮೈಸೂರು, ೧೯೦೭. ಬಿ. ವೆಂಕಟಾಚಾರ್ಯ.

ಶ್ರೀ



ಶ್ರೀಯೈ ನಮಃ

# ಅಮೃತಪುಲಿನ

## ಉಪಕ್ರಮಣಿಕೆ.

ಈಗ್ಗೆ ಮುನ್ನೂರುವರ್ಷಕ್ಕೆ ಹಿಂದೆ ಬೇಸಿಗೇಕಾಲದಲ್ಲೊಂದುದಿನ ಸೂರ್ಯದೇವನು ಅರಾವಳಿಗಿರಿಯ ಪಾರ್ಶ್ವದಲ್ಲಿ ಅಸ್ತನಾಗುತ್ತಿದ್ದನು. ಗಿರಿಯ ಚರಣದ ತಲಕ್ಕೆ ಸಮೀಪ ಕಿಬ್ಬಿಯಲ್ಲಿ ನೀಲವಾದ ನೀರನ್ನುಳ್ಳ ತರಂಗಶೀಲವಾದ ವೇತ್ರಾವತಿನದಿಯು ಪ್ರೇಮತರಂಗದಿಂದಲೂ ತರಂಗಭಂಗದಿಂದಲೂ ಹರಿದುಹೋಗುತ್ತಿತ್ತು. ಅಸ್ತನಾಗುತ್ತಿದ್ದ ಸೂರ್ಯದೇವನ ಸುವರ್ಣಕಾಂತಿಮಯವಾದ ರಶ್ಮಿಯಿಂದ ತಲತಲಿಸುತ್ತಿದ್ದ ವಿಶಾಲಗಾತ್ರವುಳ್ಳ ಅರಾವಳಿಯು ವೀರರನ್ನು ಪಡೆದು ಪೋಷಿಸುವ ರಾಜಪುತಾನೆಯ ಗೌರವಕ್ಕೆ ಕದಲದ ಮೈಗಾವಲಿದವನಹಾಗೆ ವೀರದರ್ಪದಿಂದ ನಿಂತು ಜ್ಯೋತಿರ್ಮಯ

ವಾದ ಹೊಂಬಣ್ಣದ ಕಿರೀಟದಿಂದ ಉನ್ನತವಾದ ಶಿಖರವನ್ನು ಬೆಳಗುಮಾಡಿಕೊಂಡು ಸಹಸ್ರ ರಶ್ಮಿಯ ಸಹಸ್ರ ಬಣ್ಣಗಳಿಂದ ನೀರದೇಶವನ್ನು ಹೊಳಪುಮಾಡಿಕೊಂಡು ನದಿಯ ಶೀತಲವಾದ ಜಲದಲ್ಲಿ ಕಾಲನ್ನು ತೊಳಕೊಳ್ಳುತ್ತಿತ್ತು. ಪ್ರೇಮದಿಂದ ಮುಗ್ಧೆಯಾಗಿ ನೀರನನ್ನೊಲವಿಸುವ ಪ್ರಣಯಿನಿಯಹಾಗೆ ಹರಿಯುತ್ತಿದ್ದಾ ನದಿಯು ಜ್ಯೋತಿರ್ಮಯವಾಗಿದ್ದ ಸುಂದರವಾದ ಕಾಂತಿಯನ್ನು ಹೃದಯದಲ್ಲಿ ಧರಿಸಿ ಪುಲಕದಿಂದ ಶಾಂತವಾಗಿ ಮೃದುವಾದ ಸಂಗೀತದ ಧ್ವನಿಯಿಂದ ಕುಣಿದಾಡುತ್ತಿತ್ತು.

ಆ ಸಮಯದಲ್ಲಿ ಎಂಟುವರ್ಷದ ಹುಡುಗಿಯೊಬ್ಬಳು ಹತ್ತುವರ್ಷದ ಹುಡುಗನೊಬ್ಬನ ಭುಜದಮೇಲೆ ಕೈಹಾಕಿಕೊಂಡು ಮೌನವಾಗಿ ನಿಂತು ವ್ಯಸನದಿಂದ ಬಾಡಿದ ಮುಖವುಳ್ಳವಳಾಗಿ ಉತ್ಸುಕನಯನಗಳಿಂದ ನಾಲ್ಕೂಕಡೆಯೂ ನೋಡುತ್ತಿದ್ದಳು. ಸ್ವಲ್ಪ ಹೊತ್ತಾದಬಳಿಕ ಹುಡುಗನು “ ಹಿರಣೆ! ನೀನು ನನ್ನಮೇಲೆ ಕೋಪಗೊಂಡಿರುವ ಹಾಗಿದೆಯಲ್ಲವೇ ?” ಎಂದನು.

ಹುಡುಗಿಯು ತುಟಿಗಳನ್ನು ಸ್ವಲ್ಪ ತೆರೆದು ಕುತ್ತಿಗೆಯನ್ನು ಸ್ವಲ್ಪ ವಾರೆಮಾಡಿ ಅರನೋಟದಿಂದ ಹುಡುಗನ ಮುಖವನ್ನು ನೋಡುತ್ತ “ ನೀನು ನನ್ನ ನವಿಲನ್ನು ಹಾರಿಸಿ ಓಡಿಸಿದುದೇಕೆ ?” ಎಂದಳು.

ಹುಡುಗ:—ನಿನಗೆ ಅದಕ್ಕಿಂತ ಹೆಚ್ಚು ಚಂದವುಳ್ಳ ನವಿಲನ್ನು ತಂದು ಕೊಡುವೆನು.

ಹುಡುಗಿ:—ನನಗೆ ಬೇರೆ ನವಿಲು ಬೇಡ. ನನ್ನ ನವಿಲನ್ನು ಓಡಿಸಿದುದೇಕೆ ?

ಹುಡುಗ:—ನಿನ್ನ ನವಿಲಿಗಿಂತ ಹೆಚ್ಚು ಚಲುವಾದ ನವಿಲನ್ನು ತಂದುಕೊಟ್ಟರೆ ?

ಹುಡುಗಿ:—ನಾನು ಅದನ್ನೋಡಿಸಿಬಿಡುವೆನು. ನನ್ನ ನವಿಲು ನನಗೆ ಬೇಕು.

ಹುಡುಗ:—ನಿನ್ನ ನವಿಲನ್ನೇ ತಂದುಕೊಟ್ಟರೆ ?

ಹುಡುಗಿ:—ಎಲ್ಲಿ ? ತಂದುಕೊಡು !

ಹುಡುಗನು ಬೆಟ್ಟದ ಕಡೆ ಕೈಬೆಟ್ಟನ್ನು ತೋರಿಸಿ, ‘ ಅದೊ, ನೋಡು !’ ಎಂದನು.

ಹುಡುಗಿಯು ನೋಡಿದಳು. ನಿಜವಾಗಿಯೂ ಅವಳ ನವಿಲೇ ಗುಡ್ಡದ ತಪ್ಪಲಲ್ಲಿ ಗರಿಯನ್ನು ಹರಡಿಕೊಂಡು ಅವಳನ್ನು ನೋಡುತ್ತ ಕೇಕು ಹಾಕುತ್ತ ಕುಣಿಯುತ್ತಿತ್ತು. ಆ ಕೇಗುಕೂಗಿನಲ್ಲಿ “ ನಾನು ನಿನ್ನ ನವಿಲೆ ? ಹಾಗಿದ್ದರೆ ಬಂದು ಹಿಡಿದುಕೋ, ನೋಡೋಣ !” ಎಂದು ಹೇಳಿದ ಹಾಗೆ ತೋರುವುದು. ಹುಡುಗರಿಬ್ಬರೂ ಕೈಹಿಡಿದು

ಕೊಂಡು, ನದಿಯ ಅಲೆಗಳಮೇಲೆ ಕಮಲಗಳೆರಡು ತೇಲಿಹೋಗುವಹಾಗೆ, ಕ್ರೌಂಚ ಹಕ್ಕಿಗಳೆರಡು ತಂಗಾಳಿಯಲ್ಲಿ ಹಾರಿಹೋಗುವಹಾಗೆ, ನವಿಲನ್ನು ಹಿಡಿಕೊಳ್ಳುವುದಕ್ಕೆ ಓಡಿಹೋದರು. ಹತ್ತಿರ ಹೋಗುವದರೊಳಗೆ ನವಿಲು ಅಲ್ಲಿಂದೆದ್ದು ಹಾರಿಹೋಗಿ ಬೆಟ್ಟ ವಲ್ಲೆಲ್ಲೋ ಅಡಗಿಕೊಂಡಿತು. ಹುಡುಗಿಯು ತನ್ನ ನವಿಲ ಹೆಸರನ್ನು ಹಿಡಿದು ಬಹಳ ಆದರದಿಂದ ಕರೆದಳು ! ನವಿಲು ಬರಲಿಲ್ಲ. ಹಿರಣ್ಮಯಿಯು ಕಣ್ಣೀರು ತುಂಬಿದವಳಾಗಿ ಹುಡುಗನನ್ನು ನೋಡಿ, " ಅಜಯ ! ನನ್ನ ನವಿಲು ನನ್ನ ಬಳಿಗೆ ಬರುವಹಾಗಿ ಲ್ಲವೇ ? " ಎಂದು ಕೇಳಿದಳು.

ಅಜಯನು ಆದರದಿಂದ ಹಿರಣ್ಮಯಿಯ ಗಲ್ಲವನ್ನು ಹಿಡಿದು ಅವಳ ಕಣ್ಣೀರನ್ನೊ ರಸಿ " ಯೋಚಿಸಲೇಕೆ ? ಹಿರಣ್ಮಯಿ ! ನಾನು ಹೇಗಾದರೂಮಾಡಿ ನಿನ್ನ ನವಿಲನ್ನು ಎಲ್ಲಿ ದ್ದರೂ ಹಿಡಿದು ತಂದುಕೊಡುವೆನು. ಅದು ಈ ಗಿರಿಯ ತುದಿಗೆ ಹೋಗಿದ್ದರೂ ಅದರಮೇಲೆ ಹತ್ತಿಹೋಗಿ ಅದನ್ನು ಹಿಡಿದು ತರುವೆನು. ಅಲ್ಲಿಂದದು ನದಿಯೊಳಗೆ ಹೋಗಿದ್ದರೂ ನದಿಯೊಳಗೆ ಧುಮುಕಿ ಅದನ್ನು ಹಿಡಿದುಕೊಂಡು ಬರುವೆನು. ನನಗೆ ಈಸುವುದಕ್ಕೆ ಬರುವುದು ನೀನು ಸ್ವಲ್ಪ ಕಾದಿರು. ನಾನು ಈಗಲೇ ಹೋಗಿ ಹಿಡಿದು ಕೊಂಡು ಬರುವೆನು" ಎಂದನು.

ಹಿರಣ್ಮಯಿಯು ಅಜಯನ ಕೈಹಿಡಿದುಕೊಂಡು ಬೆಟ್ಟದ ಕಡೆಯೂ ಬಳಿಕ ನದಿಯ ಕಡೆಯೂ ನೋಡಿದಳು. ಬೆಟ್ಟದ ಪ್ರಾಂತಪ್ರದೇಶ? ಪ್ರಾಕಾಂಪವಾದ ನ್ಮಯಲ್ಲಿ ಸಂಧ್ಯಾಗಗನದ ಕರಾಳ ಛಾಯೆಯು ಬಿದ್ದು ಬೆಟ್ಟವು ಹುಬ್ಬು ಗಂಟುಹಾಕಿಕೊಂಡು ಹುಡುಗರನ್ನು ನೋಡುತ್ತಿ ದ್ದಹಾಗೆ ಕಂಡಿತು. ನದಿಯ ವಕ್ಷದಲ್ಲಿಯೂ ಅಂಧಕಾರವು ಕವಿಯುತ್ತ ಬಂದಿತು. ಅಂಧಕಾರದಲ್ಲಿ ತರಂಗಭಂಗವು ಭಯಂಕರವಾಗಿ ಕಾಣುತ್ತಿತ್ತು. ಅಜಯನು ಆ ಗಂಟು ಹುಬ್ಬಿಕ್ಕಿನ ಬೆಟ್ಟದಲ್ಲಿ ಕಾಣದೆ ಮರೆಯಾಗಿ ಹೋಗುವನೆಂದೂ ಅಂಧಕಾರಮಯವಾದ ಆ ನದಿಯಲ್ಲಿ ಧುಮುಕಿಬಿಟ್ಟರೆ ಮುಳುಗಿ ಹೋಗುವನೆಂದೂ ಹಿರಣ್ಮಯಿಯು ಅಂಜಿ ಅಳುವು ದಕ್ಕೆ ತೊಡಗಿ " ಬೇಡ ಬೇಡ, ಅಜಯ ! ನವಿಲನ್ನು ತರುವುದಕ್ಕೆ ಹೋಗಬೇಡ" ಎಂದಳು.

ಅಜಯ—ಹಿರಣ್ಮಯಿ ! ಭಯವೇನು ? ನಿನ್ನ ನವಿಲನ್ನು ಈಗಲೇ ಹಿಡಿದುಕೊಂಡು ಬರುವೆನು.

ಹುಡುಗಿ—(ಅಳುತಳುತ)—ಬೆಟ್ಟದಿಂದ ನೀನು ಹಿಂದಿರುಗಿ ಬಾರದೆ ಹೋದರೆ? ಈ ಕತ್ತಲೆಯಲ್ಲಿ ಮಾರ್ಗ ತಪ್ಪಿ ಹೋದರೆ ? ಈ ನದಿಯಲ್ಲಿ ಬಿದ್ದು ಮುಳುಗಿ ಹೋದರೆ? ನಿನ್ನ ಕಾಲಿಗೆ ಬೀಳುವೆನು—ನನ್ನನ್ನು ಬಿಟ್ಟು ಹೋಗಬೇಡ.

ಅಜಯ—(ನಕ್ಕು)—ಹಾಗಾದರೆ, ನಾಳೆ ಹಗಲುಹೊತ್ತು ಪುನಃ ಬಂದು ನವಿಲನ್ನು ಹುಡುಕೋಣವೆ?

ಹುಡುಗಿ—ಇನ್ನೂ ಸ್ವಲ್ಪ ಹೊತ್ತು ಇಲ್ಲಿ ಇರೋಣ ಕತ್ತಲೆಯಲ್ಲಿ ನವಿಲು ಹೆದರಿ ತಾನಾಗಿಯೇ ಬಂದರೆ ಬರಬಹುದು. ಬರುವಹಾಗಿದೆ, ನೋಡು.

ನದಿಯ ತೀರದಲ್ಲಿ ಯಾರೋ ಬರುವ ಶಬ್ದವಾಯಿತು. ನವಿಲು ಬರುವುದೆಂದು ಹುಡುಗಿಯು ಆನಂದದಿಂದ ಹಿಂದಿರುಗಿ ಬಂದು “ಯಾರೋ ಬರುತ್ತಾರೆ, ನೋಡು!” ಎಂದಳು.

ಹುಚ್ಚು ಹೆಂಗಸೊಬ್ಬಳು ಕೈಯಿಂದ ತಾಳವನ್ನು ಹಾಕುತ್ತ ಬಾಯಿಯಲ್ಲಿ ಹಾಡುತ್ತ ಹುಡುಗರಿಬ್ಬರ ಎದುರಿಗೆ ಬಂದು ನಿಂತಳು. ಹುಚ್ಚಿಯು ಚಿಂದಿಬಟ್ಟೆಯನ್ನುಟ್ಟು ಮುಖಕ್ಕೆ ಬೂದಿಯನ್ನು ಹಚ್ಚಿಕೊಂಡಿದ್ದರೂ ಅವಳ ಆ ದೀರ್ಘವಾದ ಸುಂದರ ದೇಹದಲ್ಲಿ ಪೂರ್ಣ ಯೌವನದಿಂದ ಪೂರ್ಣವಿಕಸಿತವಾದ ಸೌಂದರ್ಯದ ರಾಶಿಯು ಉಜ್ವಲಿಸುತ್ತಿತ್ತು. ಉಜ್ವಲದಿಂದ ಇಂಬಾಗಿದ್ದ ಕಣ್ಣುಗಳು ಒಂದು ಪಾರ್ಥಿವವಾದ ಕಾಂತಿಯನ್ನು ಬೀರುತ್ತಿದ್ದವು. ಅವಳ ಆ ವಿಶಾಲವಾದ ಲಲಾಟವು ಅಳವಿಲ್ಲದ ಮಾನಸಿಕಶಕ್ತಿಯನ್ನು ತೋರುತ್ತಿತ್ತು. ಅವಳ ಆ ಮನೋಹರವಾದ ರಣಗೂದಲು ಕಳೆದುಹೋಗಿದ್ದ ಗೌರವದಿಂದಲೂ ಹೀನವಾಗಿದ್ದ ಸೌಂದರ್ಯದಿಂದಲೂ ಗಾಳಿಗೆ ಚಂಚಲವಾಗಿ ಚರಣಸಮೀಪ ಹರಿದಾಡುತ್ತಿತ್ತು.

ಉನ್ಮಾದಿನಿಯು ಹುಡುಗರಿಬ್ಬರನ್ನೂ ನೋಡಿ ಚಪ್ಪಳೆ ಹೊಡೆಯುತ್ತ ಘಟ್ಟಿಯಾಗಿ ನಕ್ಕು, “ಹಾ, ಹಾ! ನಿನ್ನನ್ನು ಬಲ್ಲೆನು. ನೀನು ಆ ಪಿಶಾಚಿಯ ಹೊಟ್ಟೆಯಲ್ಲಿ ಹುಟ್ಟಿದವಳು. ನಿನ್ನ ಮುಖಮೋರೆಗಳಿಂದಲೂ ನಿನ್ನ ಕಣ್ಣುಗಳ ನೋಟದಿಂದಲೂ ಗುಂಗುರುಗುಂಗುರು ಮುಂಗುರುಗಳಿಂದಲೂ ನಿನ್ನನ್ನು ಗುರ್ತಿಸಬಲ್ಲೆನು ಗೊತ್ತಾಗುವುದಿಲ್ಲವೇ! ಮಾತಿಲ್ಲದೆ ನಿಂತು ನೋಡುತ್ತೀಯೆ. ಆ ಪಿಶಾಚಿಯವಿಚಾರವನ್ನು ಹೇಳುವೆನು, ಕೇಳು. ಆ ರಾಕ್ಷಸಿಯು ಅತ್ಯಂತ ಸುಂದರಿಯೆಂದು ಅವಳನ್ನು ಜನರು ತಾರಾಬಾಯಿಯೆಂದು ಕರೆಯುತ್ತಿದ್ದರು!!” ಎಂದಳು.

ಹುಡುಗಿಯು ಭಯದಿಂದಲೂ ಆಶ್ಚರ್ಯದಿಂದಲೂ ಎದೆಗುಂದಿದವಳಾಗಿ ಬಿರಿಗಣ್ಣಿನಿಂದ ಉನ್ಮಾದಿನಿಯ ಮಾತುಗಳನ್ನು ಕೇಳುತ್ತಿದ್ದಳು. ಹುಡುಗನು ಎರಡು ಹೆಜ್ಜೆಗಳು ಮುಂದರಿದು ಬಲಗೈ ಮುಷ್ಟಿಯನ್ನು ಎತ್ತಿ ತೋರಿಸುತ್ತ, “ನೀನಾರು!

ನನ್ನ ಹಿರಣೆಯನ್ನು ಬೈಯ್ಯುವುದೇಕೆ! ಬೈಬೇಡ, ಕೇಳು, ಇಲ್ಲವಾದರೆ ಈ ಮುಷ್ಟಿಯಿಂದೊಂದೇ ಹೇಟಿಗೆ ನಿನ್ನ ತಲೆಯನ್ನು ಚೂರ್ಣಮಾಡುವೆನು'' ಎಂದನು.

ಉನ್ಮಾದಿನಿಯು ಏಕಲಸ್ವರದಿಂದ ನಕ್ಕು. “ಭಲ, ಹುಡುಗ! ಏನು ಹೇಳಿದೆ? ನಿನ್ನ ಹಿರಣೆಯೆ! ನಿನಗೆ ಇಂಥಾದುಬುದ್ಧಿಯು ಹುಟ್ಟಿತೇಕೆ? ನಿಮ್ಮ ತಂದೆಯ ಕಮಲಮಾರು ದುರ್ಗವು, ಆ ರಾಕ್ಷಸಿಯಾದ ತಾರಾಬಾಯಿಯನ್ನೂ ಅವಳ ಹೊಟ್ಟೆಯಲ್ಲಿ ಹುಟ್ಟಿದ ಹುಡುಗಿಯನ್ನೂ ಉನ್ಮಾದಿನಿಯಾದ ನನ್ನ ಕೈಯಿಂದುದ್ಧಾರ ಮಾಡಬಲ್ಲದೆ? ನಾನು ಹೇಳುವುದನ್ನು ಮನವಿಟ್ಟು ಕೇಳು. ನೀನು ಇಂದಿನಿಂದಾ ರಾಕ್ಷಸಿಯ ಹುಡುಗಿಯ ಸಂಗವನ್ನು ಬಿಡು; ಇಲ್ಲವಾದರೆ ನೀನು ಅವಳೊಂದಿಗೆ ಸಾಯುವೆ! ಈ ಕಾಳ ಕತ್ತಲೆ ಕವಿಕೊಂಡಿರುವ ನದಿಯಲ್ಲಿ ಬಿದ್ದು ಮುಳುಗಿಹೋಗುವೆ! ಜೋಕೆ! ಎಚ್ಚರವಾಗಿರು. ಅವಳ ಸಂಗವನ್ನು ಬಿಡು.'' ಎಂದು ಹೇಳಿದಳು.

ಹೀಗೆಂದು ಹೇಳುತ್ತ ಉನ್ಮಾದಿನಿಯು ಚಪ್ಪಾಳೆಹೊಡೆಯುತ್ತ ಬೆಟ್ಟದಕಡೆ ಹೊರಟುಹೋದಳು. ಹುಡುಗರಿಬ್ಬರೂ ನದಿಯ ತೀರದಲ್ಲಿ ಕುಳಿತಿದ್ದರು. ಕತ್ತಲೆಯು ಹೆಚ್ಚಾಗಿ ನವಿಲೂ ಬಾರದಿರುವುದನ್ನು ಕಂಡು, ಹುಡುಗನು, ಮರುದಿನ ಪುನಃ ಬಂದು ನವಿಲನ್ನು ಹಿಡಿಯಬೇಕೆಂದು ಹೇಳಿದನು.

ಹುಡುಗಿ:—ಅಜಯ! ನಾನು ಬರುವುದಿಲ್ಲ. ನಿನ್ನ ಜತೆಯಲ್ಲಿ ಬರಲಾರೆನು. ಬಂದರೆ ಉನ್ಮಾದಿನಿಯು ಏನು ಹೇಳಿದಳು, ಗೊತ್ತಾಯಿತೇ?

ಹುಡುಗ:—ಹುಚ್ಚಿಯು ಹೇಳಿದರೆ ಅದಕ್ಕೆ ಭಯಪಡಬೇಕೆ? ಅವಳು ಓಡಿಹೋದಳು. ಇಲ್ಲವಾಗಿದ್ದರೆ ಅವಳನ್ನು ನದಿಯಲ್ಲಿ ಮುಳುಗಿಸಿಬಿಡುತ್ತಿದ್ದೆ. ಆಗ ಗೊತ್ತಾಗುತ್ತಿತ್ತು.

# ಮೊದಲನೆಯ ಭಾಗ

## ಮೊದಲನೆಯ ಪರಿಚ್ಛೇದ

ಕ್ರಿಸ್ತಶಕೆಯ ಹದಿನಾರನೆಯ ಶತಾಬ್ದವು ಹಿಂದೂ ವೀರರ ಗೌರವದೊಂದಿಗೆ ಕಾಲತರಂಗದಲ್ಲಿ ಅತೀತದ ಅನಂತಕಾಲದ ಅಂಧತಮಸ್ಸಿನಲ್ಲಿ ಸೇರಿಹೋಯಿತು. ಯವನರ ಸೌಭಾಗ್ಯದ ಪೂರ್ಣ ಅಭ್ಯುದಯವು ಕೈಗೂಡಿ ಅಕಬರಷಹನು ಭಾರತಸಿಂಹಾಸನವನ್ನಲಂಕರಿಸಿದ್ದನು. ರಾಜಸ್ಥಾನದ ಪಂಕಜರವಿಯಾದ ರಾಣಾಪ್ರತಾಪಸಿಂಹನು ಅಸ್ತಮಿತಪ್ರಾಯನಾಗಿದ್ದನು. ಅವನು ಭಾರತವರ್ಷಕ್ಕೆ ಅವಶ್ಯಂಭಾವಿಯಾದ ಅದೃಷ್ಟಕ್ಕೆ ತಕ್ಕಹಾಗೆ, ನಿರ್ವೀರ್ಯರಾಗಿ ಹೀನತ್ವವನ್ನು ಹೊಂದಿದ್ದ ಸ್ವಜಾತಿಯವರೊಡನೆ ಕೂಡಿ ಯವನರ ಸಂಗಡ ಹೋರಾಡಿ ಅದರಿಂದ ಫಲೋದಯವಾಗದೆ, ತನ್ನ ಪೂರ್ವಪುರುಷನಾಗಿದ್ದ ಬಪ್ಪರಾಯನ ಪವಿತ್ರವಾದ ಭಸ್ಮರಾಶಿಯಲ್ಲಿ ವಿಶ್ರಮವನ್ನು ಹೊಂದುವ ಸಲವಾಗಿ ಸಮಯವನ್ನು ನೋಡಿಕೊಂಡಿದ್ದನು, ಅಂಧಕಾರವು ಅನಿವಾರ್ಯವಾಗಿ ಬರುವುದೆಂದು ತಿಳಿದು ಸೂರ್ಯದೇವನು ಅಸ್ತಾಚಲವನ್ನಾಶ್ರಯಿಸಿ ವಿಷಾದದಿಂದ ಕಣ್ಣುಮುಚ್ಚಿಕೊಳ್ಳುತ್ತಿದ್ದನು! ವೀರವೃಂದದ ಲೀಲೆಗೆ ನೆಲೆಯಾಗಿದ್ದ ರಾಜಸ್ಥಾನವು ಕರಾಳ ಕಾಲದಂಡ ಪ್ರಹಾರದಿಂದ ಸೊಲ್ಲಿಲ್ಲದೆ ಮೃತಪ್ರಾಯವಾಗಿದ್ದಿತು! ರಾಜಪೂತರ ಶೌರ್ಯಕ್ಕೂ ಕ್ಷತ್ರಿಯರ ಮಹತ್ವಕ್ಕೂ ಮುಖ್ಯವಾಗಿದ್ದ ರಂಗಭೂಮಿಗೆ ಅಡ್ಡವಾಗಿ ಜವನಿಕೆಯು ಇಳಿಯಬಿದ್ದು ಮರೆಯಾಗಿ ಹೋಯಿತು! ಅರಾವಳಿ ಬೆಟ್ಟವು ವೀರರ ಪದಸ್ವರದಿಂದ ಕಂಪಿತವಾಗುವುದು ನಿಂತಿತು! ಸಮರಾತ್ರಿಯಲ್ಲಿ ಚಂಬಲ ನದಿಯ ತರಂಗದಲ್ಲಿ ಒರೆಗಳಚಿದ ಕತ್ತಿಗಳ ಝುಂಝುನ ಧ್ವನಿಯೂ ವೀರಜನನಿಯ ಲಲಿತವಾದ ತಾನವೂ, ಮಾರ್ದನಿಗೊಳ್ಳುವುದು ನಿಂತು ಹೋಯಿತು! ಅತುಳವಾದ ಸ್ಫೂರ್ತಿಯೂ ಎಲ್ಲಿಯಿಲ್ಲದಾ ಉತ್ಸಾಹವೂ ಯವನರ ಮೋಹಮಂತ್ರದಿಂದ ನಿದ್ರೆಗೈಯುತ್ತಿದ್ದವು.

ಹಾಗಿದ್ದರೆ, ಈದಿನ ಉದಯಪುರದಲ್ಲಿ ಆನಂದದ ಕೋಲಾಹಲವೇತಕ್ಕೆ! ರಾಜಪ್ರಾಸಾದವು ಹೂವಿನ ಮಾಲೆಗಳಿಂದಲಂಕೃತವಾಗಿರುವುದೇಕೆ? ಇಂದು ವಿಜಯದಶಮಿ. ಯವನಸಮ್ರಾಜ ಅಕಬರಷಹನು ರಾಣಾಪ್ರತಾಪಸಿಂಹನ ಸಂಗಡ ಸಂಧಿಸ್ಥಾಪನೆ ಮಾಡಿಕೊಂಡ ಬಳಿಕ ಸ್ವಂತವಾಗಿ ಉದಯಪುರಕ್ಕೆ ಬರುತ್ತಿದ್ದನಾದುದರಿಂದ

ಅವನಿಗೆ ಅಭ್ಯರ್ಥನಮಾಡುವುದಕ್ಕೆ ಸಲವಾಗಿ ರಾಜಪೂತರು ರಾಜಧಾನಿಯಲ್ಲಿ ಇಷ್ಟು ಆನಂದೋತ್ಸವ. ಅನೇಕದಿವಸಕ್ಕೆ ಹಿಂದೆ ಮಿವಾರದ ರಾಜ್ಯಾಧಿಕಾರವು ಅಲ್ಲಾಉದ್ದೀನನ ಕೈತಪ್ಪಿದಾಗ ವೀರಸ್ಪಂದದವರಲ್ಲಿ ಇಂಥಾ ಉತ್ಸವವನ್ನೊಂದು ನಡಿದು ವಿಜಯ ಭೇರಿ ಯಾದುದನ್ನು ಕೇಳಿಸ್ದೆವು. ಚಿತ್ತೋರದ ರಾಜಪ್ರಾಸಾದವು ಹೀಗೆ ಹೂವಿನ ಹಾರಗಳಿಂದ ಶೋಭಿತವಾಗಿದ್ದುದನ್ನು ನೋಡಿದ್ದೆವು. ಹಿಂದೂ ಸೂರ್ಯಸ್ವರೂಪನಾಗಿದ್ದ ಬಪ್ಪರಾಯನು ರಾಜಗುರುವೆಂದು ಬಿರುದಾಂಕಿತನಾಗಿ ವೀರದರ್ಪದಿಂದ ಮಿವಾರದ ಸಿಂಹಾಸನವನ್ನೇರಿದ ದಿನ ಪಂಚರಂಗಿನ ಪತಾಕವು ಹೀಗೆ ಉಲ್ಲಾಸದಿಂದ ಚಿತೋರ ದುರ್ಗದ ಉಚ್ಚಶಿಖರವನ್ನಲಂಕರಿಸಿದ್ದಿತು. ಈದಿನ ರಾಜಪೂತರನ್ನು ಸಂತೋಷಪಡಿಸುವುದಕ್ಕೋಸ್ಕರ ಅಮಲನ್ನುಂಟುಮಾಡುವ ಪದಾರ್ಥಗಳು ರಾಶಿರಾಶಿಯಾಗಿ ಸಿದ್ಧಮಾಡಲ್ಪಟ್ಟಿವೆ. ರಾಜಪೂತವೀರರಾ! ಅವನ್ನು ದರಪೂರಣ ಮಾಡಿಕೊಂಡು ವಿಕೃತವಾದ ಮೆದುಳಲ್ಲಿ ಸ್ವಲ್ಪಮಾತ್ರ ಉಳಿದಿರುವ ವಿವೇಕ ಶಕ್ತಿಯನ್ನು ಹಾಳುಮಾಡಿಕೊಂಡು ಮಾದಕವಾದಾ ಪದಾರ್ಥಗಳನ್ನು ಪಾನಮಾಡಿರೀ. ಇಲ್ಲದಿದ್ದರೆ ಹೇಗೆ ತಾನೇ ಯಾವಪ್ರಾಣದಿಂದ ಇಂದು ಯವನ ಸಮ್ರಾಜನ ಪದತಲದಲ್ಲಿ ತಲೆಯನ್ನು ಬಗ್ಗಿಸಲಾದೀತು! ಅದೋ, ಕೇಳಿರೀ, ಅಕಬರಷಹನ ಸೈನ್ಯದ ಕೋಲಾಹಲದ ಗದ್ದಲವು ಕೇಳಿಸುತ್ತದೆ!

ಆದಿನ ಸಾಯಂಕಾಲ ಉದಯಪುರಕ್ಕೆ ಪಶ್ಚಿಮಭಾಗದಲ್ಲಿರುವ ಕಾನನದಲ್ಲಿ ಅರಾವಳಿ ಬೆಟ್ಟವನ್ನು ನಡುಗಿಸುತ್ತ ಬೆಟ್ಟದ ತಪ್ಪಲಲ್ಲಿ ಸಹಸಾದ್ರಿಕ ಸಶಸ್ತ್ರರಾದ ಯೋದ್ಧರು ಸೇರಿದ್ದರು. ಅವರಲ್ಲರ್ಧಮಂದಿ ಸಮ್ರಾಜನ ಅನುಚರರು. ಉಳಿದವರು ರಾಜಪೂತರು, ಕುದುರೆಗಳು ಕನೆಯುವ ಕುಸುಕು ಶಬ್ದದಿಂದಲೂ ಆನೆಗಳು ಚೀಲಿಟ್ಟು ಘೀಂಕರಿಸುವ ಅಬ್ಬರಣೆಯಿಂದಲೂ ಅರಣ್ಯವೆಲ್ಲಾ ಪ್ರತಿಧ್ವನಿತವಾಗುತ್ತಿತ್ತು. ಎಲ್ಲರ ಮುಖಮುಂಡಲವೂ ಆನಂದದಿಂದರಳಿತ್ತು. ಈ ದಿನ ರಾಜಸ್ಥಾನದಲ್ಲಿ ಚಿರಕಾಲದಿಂದ ನಡೆದುಬಂದ ವಿಜಯದಶಮಿಯ ಉತ್ಸವ. ಅದರಲ್ಲಿ ದಿಲ್ಲಿಯ ಸಮ್ರಾಜನು ಸ್ವಂತವಾಗಿ ಮಿವಾರದ ರಾಣಾನಸಂಗಡ ಬೇಟೆಗೆ ಹೊರಟಿದ್ದಾನೆ. ಈ ದಿನ ನಡಿಯುವ ಪಶು ಯುದ್ಧದಲ್ಲಿ ತಮ್ಮ ತಮ್ಮ ಶೌರ್ಯವನ್ನು ತೋರಿಸುವುದಕ್ಕೆ ಸಲವಾಗಿ ಎಲ್ಲರೂ ಉತ್ಸುಕರಾಗಿದ್ದಾರೆ! ಆದರೆ ಯೌವನ ಪುರುಷನೊಬ್ಬನು ಮಾತ್ರ ಕನಲ್ಕೆಯಿಂದ ಕಂದಿದ ಮುಖವುಳ್ಳವನಾಗಿ ಎಲ್ಲರಿಗಿಂತ ಹಿಂದೆ ಕುದುರೆ ಸವಾರನಾಗಿ ಮೆಲ್ಲ ಮೆಲ್ಲಗೆ ಹೋಗುತ್ತಿದ್ದನು. ಕುದುರೆಯು ಗರ್ವದಿಂದ ಕುತ್ತಿಗೆಯನ್ನು ಅಲ್ಲಾಡಿಸುತ್ತ ಮುಂಗಾಲುಗಳನ್ನು ದರ್ಪದಿಂದೆತ್ತಿಹಾಕಿ ಕುಣಿದಾಡುತ್ತ ತನ್ನ ಯಜಮಾನನನ್ನು ಮುಂಬಳಿ

ಹೋಗಲು ಇಂಗಿತ ಮಾಡುತ್ತಿತ್ತು. ಯೌವನಪುರುಷನು ಕಡಿವಾಣವನ್ನು ಬಲವಾಗಿ ಹಿಡಿದೆಳೆದು ಮುಂದೆ ಹೋಗುತ್ತಿದ್ದ ಸೈನ್ಯದವರಿಗೆ ಹಿಂದೆ ಸ್ವಲ್ಪದೂರದಲ್ಲಿ ಹೋಗುತ್ತಿದ್ದನು. ಕುದುರೆಯು ಅಸ್ಥಿರವಾಗಿದ್ದುದನ್ನು ಕಂಡು ಯಜಮಾನನು ಅದರ ಕುತ್ತಿಗೆಯನ್ನು ಕೈಯಿಂದ ತಟ್ಟಿ, ಎಲೈ, ದಾನವದಮನ! ಈ ದಿನ ನೀನು ಯವನನ ಚರಣ ಸೇವೆಯನ್ನು ಮಾಡಲು ಆತುರಗೊಂಡಿರುವೆಯೋ? ತಂದೆಯು ಅಪ್ಪಣೆ ಮಾಡದಿದ್ದರೆ, ಈ ವಿಷಾದಕರವಾದ ಕೋಲಾಹಲದಲ್ಲಿ, ಈ ಪಶುಯುದ್ಧದಲ್ಲಿ ಈ ಶಿಶುಗಳ ರಂಗ ಸ್ಥಳಕ್ಕೆ ನಿನ್ನನ್ನು ಕರೆತರುತ್ತಿದ್ದೆನೆ? ಎಂದು ಹೇಳಿದನು.

ಕ್ರಮವಾಗಿ ಎಲ್ಲರೂ ನಡು ಕಾಡೊಳಗೆ ಪ್ರವೇಶಿಸಿದರು. ಎಲ್ಲರಿಗೂ ಮುಂದಾಗಿ ಸಮ್ರಾಜ ಅಕಬರಷಹನೂ ಅವನಿಗೆ ಬಲದ ಪಾರ್ಶ್ವದಲ್ಲಿ ರಾಣಾಪ್ರತಾಪಸಿಂಹನೂ ಹೋಗುತ್ತಿದ್ದರು. ಪ್ರತಾಪಸಿಂಹನು ನಿಟ್ಟುಸುರನ್ನು ಬಿಟ್ಟು ಸಮ್ರಾಜನನ್ನು ಕುರಿತು, " ದಿಲ್ಲೀಶ್ವರ! ಇತ್ತಕಡೆ ನೋಡೋಣಾಗಲಿ; ಆ ನದಿಯ ಪಾರ್ಶ್ವದಲ್ಲಿ ಕಾಣಿಸುವ ಬಿಳಿದಾದ ಶಿಲೆಯ ಕಂಭಗಳಿರುವ ಸ್ಥಳದ ಬಳಿ, ರಾಜಪುತಾನದ ವೀರರು ಸಂಗ್ರಾಮ ಸಿಂಹನ ಪ್ರಾಣರಕ್ಷಣೆಗೋಸ್ಕರ ತಮಗೆ ಪಿತಾಮಹನಾಗಿದ್ದ ಬೇಬರನ ಸಂಗಡ ಯುದ್ಧವನ್ನು ಮಾಡಿ ಪ್ರಾಣಬಿಟ್ಟರು. ಮತ್ತೊಂದುಕಡೆ ನೋಡೋಣಾಗಲಿ; ಆ ಬೆಟ್ಟದ ಮೇಲೆ ಕಾಣಿಸುವ ಅರ್ಧ ಬಿದ್ದು ಹೋಗಿರುವ ಉಪ್ಪರಿಗೆಯ ಪ್ರಾಸಾದದ ಮೇಲುಭಾಗದಲ್ಲಿ ದೇವಿ ಮಿರಾಬಾಯಿಯು ವೀರಾಂಗನೆಯರೊಡನೆ ಸೇರಿ ಗಾನ ಮಾಡುತ್ತ ರಾಜಪೂತವೀರರನ್ನು ಯವನರ ಸಂಗಡ ಯುದ್ಧವನ್ನು ಮಾಡಲು ಪ್ರೋತ್ಸಾಹಪಡಿಸಿದಳು " ಎಂದು ಹೇಳಿದನು.

ಅಕಬರ:—ರಾಜನೆ! ನಾನು ಈ ಕಾನನದಲ್ಲಿ ಈ ರಾಜಪೂತರ ರಂಗಭೂಮಿಯಲ್ಲಿ ನೀವು ಹೇಳುವುದಕ್ಕಿಂತ ಹೆಚ್ಚಾದ ಕೀರ್ತಿಸ್ತಂಭಗಳನ್ನು ತೋರಿಸಬಲ್ಲೆನು. ಅಲ್ಲಿ ನೋಡೋಣಾಗಲಿ, ಆ ಕಲ್ಲು ಕಂಭಗಳ ಪಾರ್ಶ್ವದಲ್ಲಿ ವೀರಶ್ರೇಷ್ಠನಾದ ಪ್ರತಾಪ ಸಿಂಹನು ಇನ್ನೂರು ಮಂದಿ ಸೈನ್ಯದವರನ್ನು ಮಾತ್ರ ತೆಗೆದುಕೊಂಡು ಬಂದು ಸಹಸ್ರಾಧಿಕ ಮೊಗಲರ ಸೈನ್ಯದವರನ್ನು ಮಾತ್ರ ತೆಗೆದುಕೊಂಡು ಬಂದು ಸಹಸ್ರಾಧಿಕ ಮೊಗಲರ ಸೈನ್ಯವನ್ನು ನಿಮಿಷಮಾತ್ರದಲ್ಲಿ ಸೋಲಿಸಿದನು. ಮತ್ತೊಂದು ಕಡೆ ಆ ಬೆಟ್ಟದ ಕಿಬ್ಬಿಯಲ್ಲಿ ಛದ್ಮವೇಷಧಾರಿಯಾಗಿ ಬಂದ ಅಕಬರನ ವೀರತ್ವದ ಅಹಂಕಾರವು ಮಿವಾರಾಧಿಪನ ಎದುರಿಗೆ ಅಳಿಸಿ ಹೋಯಿತು. ಈ ನಿರ್ಜನವಾದ ಕಾನನದಲ್ಲೆಲ್ಲಿ ನೋಡಿದರೂ ಪ್ರತಿಯೊಂದು ತಪ್ಪಲಲ್ಲಿಯೂ ವೀರಕೇಸರಿಯಾದ ಪ್ರತಾಪಸಿಂಹನ ಗೌರವವನ್ನು ಜ್ಞಾಪಿಸತಕ್ಕ ಕುರುಹುಗಳನೇಕವಿರುವುವು. ಈ ಜಗತ್ತಿನಲ್ಲಿ ಪ್ರತಾಪಸಿಂಹನ ಹಾಗೆ ವೀರಪುರುಷರು ಎಲ್ಲಿಯೂ ಯಾವಾಗಲೂ ಹುಟ್ಟಿರಲಿಲ್ಲ!

ಪ್ರತಾಪಸಿಂಹನು ಹುಬ್ಬನ್ನು ಸುರಿಸಿಕೊಂಡು, “ ದಿಲ್ಲೀಶ್ವರ! ಮತ್ತಾರಾದರೂ ತಮ್ಮ ಹಾಗೆ ಹೇಳಿದ್ದರೆ ಮುಖಸ್ತುತಿಯೆಂದಾಗಲೀ ಹಾಸ್ಯವೆಂದಾಗಲೀ ತಿಳಿಯುತ್ತಿದ್ದೆನು! ಪ್ರತಾಪಸಿಂಹನು ಕಾಪುರುಷನಾಗಿಲ್ಲದಿದ್ದರೆ, ಸೂರ್ಯವಂಶದಲ್ಲಿ ಕುಲಾಂಗಾರನಾಗಿ ಹುಟ್ಟದಿದ್ದರೆ, ದಿಲ್ಲಿಯಸಾಮ್ರಾಜನಿಗೆ ತನ್ನ ಸ್ವಾತಂತ್ರ್ಯವನ್ನು ಮಾರುತ್ತಿರಲಿಲ್ಲ. ಅಮರರಿಗೆ ವಾಸ ಭೂಮಿಯಾಗಿದ್ದ ಮೇವಾರದೇಶವು ಈ ದಿನ ಮೊಗಲರ ಸೈನ್ಯದ ಪಾದ ಧೂಳಿಯಿಂದ ಮೈಲಾಗಿ ಅಂಧಕಾರದಿಂದ ಆವೃತವಾಗುತ್ತಿರಲಿಲ್ಲ ” ಎಂದು ಹೇಳಿದನು.

ಅಕಬರ:—ರಾಜನೆ! ತಾವು ಅನ್ಯಾಯವನ್ನು ಹೇಳೋಣಾಗುತ್ತದೆ! ಜಗತ್ತಿಗೆ ಪ್ರಖ್ಯಾತವಾಗಿರುವ ಈ ರಾಜವಂಶದ ಸ್ವಾತಂತ್ರ್ಯವನ್ನು ಅಪಹರಿಸಬೇಕೆಂದು ಅಕಬರನಿಗೆ ಉದ್ದೇಶವಲ್ಲ. ನಿಮ್ಮ ಸ್ನೇಹಿತನಾಗಿರುವ ದಿಲ್ಲೀಶ್ವರನನ್ನು ಅಂಥಾ ಪಾಮರನಾದ ಅಧಮನೆಂದು ತಿಳಿಯಕೂಡದು. ಎರಡು ಜಾತಿಯೂ ತಮ್ಮ ತಮ್ಮ ವೈರವನ್ನೂ ಜಾತಿಗೆ ಸಂಬಂಧವಾದ ಸಂಸ್ಕಾರಗಳನ್ನೂ ಬಿಟ್ಟು ಪರಸ್ಪರ ಸೇರಿ ಹೋದರೆ ಭಾರತ ಸಾಮ್ರಾಜ್ಯದ ತಳಹದಿಯು ದೃಢವಾಗಿ ಸ್ಥಾಪಿತವಾಗುವುದೆಂದು ನನ್ನ ಇಷ್ಟವಾಗಿರುವುದು.

ಪ್ರತಾಪಸಿಂಹನು ದೀರ್ಘನಿಶ್ವಾಸವನ್ನು ಬಿಟ್ಟು, “ಮಾತೃಭೂಮಿಯನ್ನು ರಕ್ಷಿಸಿಕೊಳ್ಳುವುದಕ್ಕೆ ಸಲುವಾಗಿ ರಾಜಪೂತನು ಯವನನ ಶಕ್ತಿಯನ್ನು ಭಿಕ್ಷೆಬೇಡುವುದು ಹಿಂದುಗಳ ಹಣೆಯಲ್ಲಿ ಬರೆದಿದ್ದರೆ ಅಕಬರಸುತನ ಕಾಲದಿಂದ ಆ ಪದ್ಧತಿಯು ಏರ್ಪಡುವುದಕ್ಕೆ ಸಂದೇಹವಿಲ್ಲ” ಎಂದು ಹೇಳುತ್ತಿದ್ದ ಹಾಗೆ ದೂರ ಪರ್ವತದ ಪ್ರಾಂತವನ್ನು ನೋಡುತ್ತ ಉಚ್ಚಸ್ವರದಿಂದ ಹೀಗೆಂದು ಹೇಳುವುದಕ್ಕೆ ತೊಡಗಿದನು. “ದಿಲ್ಲೀಶ್ವರ ಇಂದು ಭಾರತ ವರ್ಷದ ಭಾವೀ ಅದೃಷ್ಟಪರೀಕ್ಷೆಯಾಗುವುದು. ಅತ್ತಕಡೆ ದೂರ ಕಾನನ ಪ್ರಾಂತದಲ್ಲಿ ಕಾಣುವ ಪ್ರಕಾಂಡ ದೇಹವುಳ್ಳ ಬಿಳಿದಾದ ಬಣ್ಣದ ಕಾಡುಕೋಣದಿಂದ ಇಂದು ಯವನರ ಹಣೆಬರಹವೂ ಹಿಂದುಗಳ ಹಣೆಬರಹವೂ ನಿರ್ಧರ ಮಾಡಲ್ಪಟ್ಟು ಹೋಗಲಿ! ಈ ವಿಜಯದಶಮಿಯ ದಿನ ಭಗವತಿ ಸಿಂಹವಾಹಿನಿಯು ದೈತ್ಯರನ್ನು ಜಯಿಸಿದುದಕ್ಕೆ ಕುರುಹು ಆಗಿ ವಿಜಯೋತ್ಸವವು ನಡಿಯುವ ಪದ್ಧತಿಯುಂಟು. ಇಲ್ಲೀಗ ಸೇರಿರುವ ಐನೂರು ಮಂದಿ ಹಿಂದೂ ವೀರರಲ್ಲೊಬ್ಬನು ಸೂರ್ಯಾಸ್ತದೊಳಗೆ ಆ ಕಾಡುಕೋಣಕ್ಕೆದುರಾಗಿ ನಿಂತು ಹೋರಾಡಿ ಗೆದ್ದರೆ ಹಿಂದೂಗಳ ಸೌಭಾಗ್ಯವು ಲೋಪವಾಗಲು ಇನ್ನೂ ಹೆಚ್ಚು ಕಾಲ ವಿಳಂಬವಿರುವುದೆಂದು ತಿಳಿಯುವೆನು. ಅಥವಾ ಇಲ್ಲಿರುವ ಐನೂರು ಮಂದಿ ಮೊಗಲರಲ್ಲೊಬ್ಬನು ಆ ಮೃಗವನ್ನು ಬೆನ್ನಟ್ಟಿ

ಹೋಗಿ ಅದರೊಂದಿಗೆ ಎದುರು ನಿಂತು ಹೋರಾಡಿ ಗೆದ್ದು ಬಂದರೆ ರಾಜಪುತಾನದ ರಾಜ್ಯ ಲಕ್ಷ್ಮಿಯು ಮೇವಾರದ ದುರ್ಗವನ್ನು ಬಿಟ್ಟು ಹೊರಟು ಹೋಗುವಳೆಂದು ತಿಳಿಯುವೆನು!"

ಹೀಗೆಂದು ಹೇಳುತ್ತಿದ್ದಹಾಗೆ ಮೇವಾರಾಧಿಪನ ಮುಖಮಂಡಲವು ಆಶೆಯಿಂದಲೂ ಉತ್ಸಾಹದಿಂದಲೂ ಅಭಿಮಾನದಿಂದಲೂ ಅರಕ್ತಿಮವಾಗುತ್ತ ಬಂದಿತು. ಅವನ ಕಣ್ಣುಗಳೆರಡೂ ಇದ್ದಹಾಗೆ ದೀಪ್ತವಾದ ಬೆಂಕಿಯ ಜ್ಯೋತಿಯಿಂದ ಬೆಳಕಾಗಿ ತೀಕ್ಷ್ಣದೃಷ್ಟಿಯಿಂದ ಹಿಂದೂಗಳಕಡೆ ತಿರುಗಿ ನೋಡಿದನು. ಮೊಗಲಸಮ್ರಾಜನೂ ತನ್ನನುಚರರ ಕಡೆ ತಿರುಗಿನೋಡಿ, ಮೃಗವನ್ನು ಬೆನ್ನಟ್ಟಿಹೋಗಲು ಇಂಗಿತ ಮಾಡಿದನು. ಅವರು 'ಅಲ್ಲಾ ಇಲ್ ಅಲ್ಲಾ' ಎಂದು ಕೂಗುತ್ತ ಗಗನವನ್ನು ಪ್ರತಿಧ್ವನಿಗೊಳಿಸಿ ಹೊರಟರು. ರಜಪೂತರು "ಮಹಾರಾಣಾ ಪ್ರತಾಪಸಿಂಹನಿಗೆ ಜಯವಾಗಲಿ" ಎಂದು ಹೇಳುತ್ತ ಕುದುರೆಗಳನ್ನು ವೇಗದಿಂದ ಓಡಿಸಿದರು. ಮೇವಾರಾಧಿಪನ ವಜ್ರಗಂಭೀರಧ್ವನಿಯು ಎಲ್ಲರಿಗಿಂತ ಹಿಂದೆ ವಿಷಣ್ಣವದನನಾಗಿ ಮೆಲ್ಲಮೆಲ್ಲಗೆ ಹೋಗುತ್ತಿದ್ದ ಯೌವನಪುರುಷನ ಕಿವಿಗೆ ಬಿತ್ತು. ಅವನು ಕೂಡಲೇ ಕುದುರೆಯ ಕಡಿವಾಣವನ್ನು ಸಡಿಲುಬಿಟ್ಟನು. ಕುದುರೆಯು ದುರ್ದಮನೀಯವಾದ ವೇಗದಿಂದ ಹೊರಟಿತು. ಸಹಸ್ರಾಧಿಕ ಸಂಖ್ಯೆಯ ಸವಾರರು ಬೆನ್ನಟ್ಟಿ ಬರುತ್ತಿದ್ದುದನ್ನು ಕಂಡು ಕಾಡುಕೋಣವು ಪ್ರಾಣಭಯದಿಂದ ಓಡಿಹೋಗಿ ಎಲ್ಲೋ ಅಡಗಿಕೊಂಡಿತು.

ಸೂರ್ಯದೇವನು ಅಸ್ತನಾಗುವುದಕ್ಕೆ ಬಂದಿದ್ದನು. ಕಾಡಿನಲ್ಲೆಲ್ಲತ್ತಟ್ಟ ನಿರ್ಜನವಾಗಿ ನಿಶ್ಶಬ್ದವಾಗಿತ್ತು. ಯುವಕನೊಬ್ಬನು ಮಾತ್ರ ವ್ಯಾಕುಲದಿಂದ ನಾಲ್ಕು ಕಡೆಯೂ ನೋಡುತ್ತ ಒಂದೊಂದು ತಡವೆ ಅಸ್ತನಾಗುತ್ತಿದ್ದ ಸೂರ್ಯನನ್ನು ನೋಡುತ್ತಿದ್ದನು. ಅವನು ಕುದುರೆಯ ಕುತ್ತಿಗೆಯನ್ನು ತಟ್ಟುತ್ತ "ದಾನವದಮನ! ನಾವು ಪುನಃ, ಉದಯಪುರಕ್ಕೆ ಹೋಗಿ ಮುಖವನ್ನು ತೋರಿಸುವದು ಹೇಗೆ? ಒಂದು ಅಡವಿಯ ಮೃಗವನ್ನೆದುರಿಸಿ ಹೊಡಿಯಬೇಕೆಂಬ ಸಂಕಲ್ಪವೂ ಕೈಗೂಡುವಹಾಗೆ ಮಾಡಲು ದೇವರಿಗೆ ಇಷ್ಟವಿಲ್ಲ! ಇದುವರೆಗೂ ಎಡೆಬಿಡದೆ ಮೃಗವನ್ನಟ್ಟಿಕೊಂಡು ಬಂದೆನು. ಕಡೆಗೊಂದುನಿಮಿಷದಲ್ಲಿ ಅದು ಎಲ್ಲೋ ಹೋಗಿ ಅಡಗಿಕೊಂಡಿತು!" ಎಂದು ಹೇಳಿದನು.

ಇದ್ದಿದ್ದ ಹಾಗೆ ಸ್ವಲ್ಪದೂರ ಅಡವಿಯಲ್ಲಿ ಹೆಚ್ಚು ಜುಡುಪಾಗಿ ಕಾಡು ಬೆಳೆದು ಜುಡುಪೆಯಹಾಗಿದ್ದ ಪ್ರದೇಶದಿಂದ ಬೆನ್ನಟ್ಟಿ ಓಡಿಸಿದ ಬಳಿಕ ಎದುರುಬಿದ್ದ ಕಾಡುಕೋಣವು ಗಂಭೀರವಾಗಿ ಡುರಕಿಹಾಕಿ ಗರ್ಜಿಸಿದ ಶಬ್ದವು ಬಂತು. ಅದರೊಂದಿಗೆ

ಯುದ್ಧಕಾಲದಲ್ಲಿ ಯೋಧನು ಮಾಡುವ ಹೆಚ್ಚು ಗಭೀರವಾದ ಆಸ್ಫಾಲನ ಶಬ್ದವೂ ಕೇಳಿಸಿತು. ಯುವಕನು ಚಮಕಿತನಾಗಿ ಕುದುರೆಯನ್ನು ಅತ್ತಕಡೆ ಬಿಟ್ಟನು. ನಿಬಿಡ ವಾಗಿ ಕಂಟಕಮಯವಾಗಿದ್ದ ಹಳುವಿನಲ್ಲಿ ಹೋಗುವುದರಲ್ಲಿ ಅವನ ಮೈಯೆಲ್ಲಾ ಮುಳ್ಳು ಚುಚ್ಚಿ ಘಾಯವಾಯಿತಲ್ಲದೆ, ಅವನ ಆ ದಾನವದಮನದ ಬಿಳಿದಾದ ಮೈಯೆಲ್ಲಾ ರಕ್ತಪ್ರವಾಹದಿಂದ ಕೆಂಪು ಬಣ್ಣ ತಿರುಗಿತು. ಸ್ವಲ್ಪ ಮುಂದರಿದು ಹೋಗಿ ನೋಡಲಾಗಿ ಬಿಳಿದಾದ ಆ ಪ್ರಕಾಂಡದೇಹವುಳ್ಳ ಕಾಡುಕೋಣವು ಕುತ್ತಿಗೆಯನ್ನು ಬಗ್ಗಿಸಿ ಕೊಂಬುಗಳನ್ನು ನೆಟ್ಟಗೆ ಮಾಡಿಕೊಂಡು ಒಬ್ಬ ಕುದುರೆ ಸವಾರನನ್ನು ಆಕ್ರಮ ಣಮಾಡಲು ಓಡುತ್ತಿತ್ತು. ಸವಾರನು ನಗುಮೊಗನಾಗಿ ಕತ್ತಿಯನ್ನೆತ್ತಿ ಹಿಡಿದು ಅದು ಬರುವುದನ್ನು ಕಾದಿದ್ದನು. ನೋಡಲಾಗಿ ಕುದುರೆಸವಾರನು ಭಾರತದ ಸಮ್ರಾಜನಾದ ಅಕಬರಷಹನಾಗಿದ್ದನು! ಯುವಕನ ಪ್ರಯತ್ನಗಳೆಲ್ಲಾ ವಿಫಲವಾದುವೆಂದು ತೋರಿತು- ಭಾರತದ ಸಮ್ರಾಜನೇ ಮಹಿಷವನ್ನು ಸಮುಖ ಯುದ್ಧದಲ್ಲಿ ಹೊಡಿಯುವವನಾಗಿದ್ದನು. ಮಹಿಷವು ಹತ್ತಿರ ಬಂದಕೂಡಲೇ ಅಕಬರನು ಅದರ ತಲೆಗೆ ಗುರಿಯಿಟ್ಟು ಕತ್ತಿಯಿಂದ ಹೊಡೆದನು. ಆದರೆ ಆ ಸಮಯದಲ್ಲಿ ಕುದುರೆಯು ಬೆದರಿ ಹಾರಿತು. ಕತ್ತಿಯ ಪೆಟ್ಟು ಎಸೆತಪ್ಪಿ ಮಹಿಷದ ತಲೆಗೆ ಬೀಳದೆ ಎದುರಿಗಿದ್ದ ಮರದ ಕೊಂಬೆಗೆ ತಗಲಿ ಕತ್ತಿಯು ಎರಡು ತುಂಡಾಗಿ ಮುರಿದುಹೋಯಿತು. ಮಹಿಷದ ಭೀಷಣವಾದ ಕೊಂಬು ಕುದು ರೆಯ ಹೊಟ್ಟೆಯನ್ನು ಸೀಳಿತು. ಅಕಬರನ ಮುಖಮಂಡಲವು ಪಾಂಡುವರ್ಣವನ್ನು ತಾಳಿತು. ಅವನು ಕುದುರೆಯಿಂದಿಳಿದು ಪಕ್ಕದಲ್ಲಿದ್ದ ಮರದ ಕೊಂಬೆಯನ್ನು ಮುರಿದು ಕೈಯಲ್ಲಿ ಹಿಡಿದುಕೊಂಡು ನಿಂತನು. ಮಹಿಷವು ಹೊಸ ಉತ್ಸಾಹದಿಂದಲೂ ಜಯೋ ಲ್ಲಾಸದಿಂದಲೂ ಕುತ್ತಿಗೆಯನ್ನು ತಿರಿಗಿಸಿಕೊಂಡು ಅವನ ಕಡೆ ತಿರುಗಿತು. ಯುವಕನು ಕುದುರೆಯಿಂದ ಧುಮುಕಿ ಬೇಗನೆ ಹೋಗಿ ಅಕಬರನೆದುರಿಗೆ ನಿಂತನು. ಮಹಿಷವು ಹೊಸದಾಗಿ ಆಕ್ರಮಣಮಾಡುವವನನ್ನು ಲಕ್ಷ್ಯಮಾಡಿತು. ಯುವಕನು ನಕ್ಕು, "ಮೊಗಲ ಸಮ್ರಾಜನೆ! ರಾಜಪೂತವೀರನು ಮಹಿಷದ ಸಂಗಡ ಯುದ್ಧಮಾಡುವ ಬಗೆ ಯನ್ನು ನೋಡೋಣಾಗಲಿ" ಎಂದು ಹೇಳಿದನು.

ಅನಂತರ ಯುವಕನು ದರ್ಪದಿಂದ ಮಹಿಷದ ತಲೆಗೆ ಒಂದುಸಲ ಕಾಲಿಂದೊದ್ದು ಕತ್ತಿಯನ್ನು ಕಂಕುಳಲ್ಲಿದ್ದ ಒರೆಯಲ್ಲಿ ಕೂಡಿಸಿ, ಬಳಿಕ ಹಾರಿಹೋಗಿ ಮಹಿಷದ ಬೆನ್ನಿ ನಮೇಲೇರಿಕೊಂಡು ಬಲದಕೈಯಿಂದ ಅದರ ಕೊಂಬನ್ನು ಹಿಡಿದು ಎಡಗೈಯಿಂದ ಅದರ ಮುಂಗಾಲನ್ನು ಹಿಡಿದೆತ್ತಿ ಕೊಂಬಿನಲ್ಲಿ ಸಿಲುಕಿಸಿ ಎರಡನ್ನೂ ಮುಷ್ಟಿಯಿಂದ ಹಿಡಿದು ಕೊಂಡು, ಬಲದಕೈಯನ್ನೆತ್ತಿ, ನೋಡೋಣಾಗಲಿ, ಸಮ್ರಾಜನೆ! ನನ್ನ ಮುಷ್ಟಿಯ

ಪ್ರಹಾರದಿಂದಲೇ ಮಹಿಷವನ್ನು ಹೊಡೆದುಹಾಕುವೆನು; ಆದರೆ ಪಶ್ಚಿಮದಲ್ಲಿ ಸೂರ್ಯದೇವನು ಅಸ್ತಮಿತನಾಗುತ್ತಿದ್ದಾನೆ. ರಾಣಾಪ್ರತಾಪಸಿಂಹನು ಸೂರ್ಯಾಸ್ತದೊಳಗೆ ಮಹಿಷವನ್ನು ಸಂಹರಿಸಬೇಕೆಂದು ಅಪ್ಪಣೆಮಾಡಿರುವದರಿಂದ ಈ ಪವಿತ್ರವಾದ ಕತ್ತಿಯನ್ನು ಪಶುರಕ್ತದಿಂದ ತೋಯಿಸಬೇಕಾಗಿದೆ, ಎಂದನು.

ಹೀಗೆಂದು ಹೇಳಿ ಯುವಕನು ಕತ್ತಿಯನ್ನು ಪುನಃ ಒರೆಯಿಂದ ಕಳಚಿ ಮಹಿಷದ ಪ್ರಕಾಂಡದೇಹವನ್ನು ಎರಡು ತುಂಡಾಗಿ ಕಡಿದುಹಾಕಿದನು. ಅಕಬರನು ಆಶ್ಚರ್ಯದಿಂದ ಸ್ತಂಭಿತನಾಗಿ ಕ್ಷಣಕಾಲ ರಾಜಪೂತ ಯುವಕನ ಸುಕುಮಾರವಾದ ವೀರದೇಹವನ್ನು ನೋಡಿ, ಸಂಗಡ ತಂದಿದ್ದ ಭೇರಿಯ ನಾದವನ್ನು ಮಾಡಿ ತನ್ನ ಅನುಚರರೆಲ್ಲರೂ ಬಂದು ಸೇರುವ ಹಾಗೆ ಇಂಗಿತದಿಂದ ಅಪ್ಪಣೆ ಮಾಡಿದನು. ಹಿಂದೂ ಮುಸಲ್ಮಾನ ಸವಾರರೆಲ್ಲರೂ ಅತ್ತಡೆ ಹೊರಟರು. ಆದರೆ ರಾಣಾಪ್ರತಾಪಸಿಂಹನು ಅವರೆಲ್ಲರಿಗೂ ಮುನ್ನಾಗಿ ಮಿಂಚಿನ ವೇಗದಿಂದ ಶಿಕಾರಿಯಾದೆಡೆಗೆ ಬಂದನು. ಅವನ ಮುಖಮಂಡಲವು ಚೆಂಗುಡಿಯಹಾಗೆ ಕೆಂಬಣ್ಣವೇಕಿಡಿಕೆಂಡಗಳನ್ನು ಉಗಿಯುತ್ತಿದ್ದವು. ಅವನು ಹುಬ್ಬುಗಳನ್ನು ಸುರುಗಿಸಿಕೊಂಡು, 'ಯವನವೀರ! ಮೆವಾರದ ರಾಜಲಕ್ಷ್ಮಿಯು ರಾಜಪೂತರ ದುರ್ಗವನ್ನು ಬಿಟ್ಟು ತೊಲಗಿದಳೆಂದು ನಾನು ಮೊದಲೇ ಹೇಳಿದ್ದೆನಲ್ಲವೆ? ಅದಕ್ಕೆ ಪ್ರಮಾಣವು ಈಗ ಪ್ರತ್ಯಕ್ಷವಾಯಿತು,! ಈ ಕಾಡು ಮಹಿಷವು ತಮ್ಮ ಕತ್ತಿಯಿಂದ ಹತವಾಯಿತಲ್ಲವೆ!' ಎಂದನು.

ಅಕಬರ:—(ನಕ್ಕು)-ಮೆವಾರದ ರಾಜನೆ! ನೀವು ರಾಜಸ್ಥಾನದ ಭವಿಷ್ಯದ ಗರ್ಭದಲ್ಲಿ ಅಕಾರಣವಾಗಿ ಅಂಧಕಾರವನ್ನು ಕಲ್ಪಿಸಿಕೊಳ್ಳುವಿರಿ. ಈ ವೀರ ಯುವಕನು ಮಹಿಷವನ್ನು ಸಂಹರಿಸಿದನು! ಇಂದು ತರುಣತಪನಿಗೆ ಸಮನಾದ ಈ ಯುವಕನ ವೀರತ್ವವನ್ನು ನೋಡಿ ಆಶ್ಚರ್ಯದಿಂದ ಸ್ತಂಭಿತನಾದೆನು. ಕ್ಷತ್ರಿಯ ಕುಲಕ್ಕೆ ತಿಲಕಪ್ರಾಯನಾಗಿ ಅತುಲಸಾಹಸವುಳ್ಳ ವೀರಬಾಲನು ಯಾರೆಂಬುವದನ್ನು ಹೇಳಬಲ್ಲಿರಾ?

ಪ್ರತಾಪಸಿಂಹನು ಸ್ವಾಭಿಮಾನದಿಂದ ಹಿಗ್ಗಿ, 'ಅವನು ನನ್ನ ಕಿರಿಯಮಗ ಅಜಯಸಿಂಹ' ನೆಂದು ಉತ್ತರವನ್ನು ಕೊಟ್ಟನು.

## ಎರಡನೆಯ ಪರಿಚ್ಛೇದ.

ಉದಯಪುರದ ರಾಜಪ್ರಾಸಾದವು ದೀಪಮಾಲೆಗಳಿಂದಲಂಕೃತವಾಗಿದೆ. ಉಪ್ಪರಿಗೆಯ ಮೇಲುಭಾಗದಲ್ಲಿ ರಮಣಿಯರಿಬ್ಬರು ಬೇಟೆಯಿಂದ ಯೋದ್ಧರು ಬರುವುದನ್ನು ಔತ್ಸುಕ್ಯದಿಂದ ಎದುರುನೋಡಿಕೊಂಡು ಕುಳಿತಿದ್ದಾರೆ. ಅವರಲ್ಲೊಬ್ಬಳು ರಾಣಾಪ್ರತಾ

ಪಸಿಂಹನ ಮಗಳು ಕಮಲಾವತಿ—ಮತ್ತೊಬ್ಬಳು ಅವಳಿಗೆ ಕೂರ್ಪಾಳಿಯಾದ ಗ್ವಾಲಿಯರದ ರಾಜನ ಮಗಳು ಹಿರಣ್ಮಯಿ. ಗ್ವಾಲಿಯರದ ರಾಜನು ಯವನಯುದ್ಧದಲ್ಲಿ ಪ್ರತಾಪಸಿಂಹನಿಗೆ ಬಲದ ಬಾಹುವಾಗಿದ್ದನು. ಅವನು ಯವನರ ಯುದ್ಧದಲ್ಲಿ ಪ್ರಾಣ ತ್ಯಾಗವನ್ನು ಮಾಡಿದ ಬಳಿಕ ಅವನಿಗೆ ಏಕಪುತ್ರಿಯಾಗಿದ್ದ ಹಿರಣ್ಮಯಿಯು ಅದು ಮೊದಲ್ಗೊಂಡು ಪ್ರತಾಪನ ಅಂತಃಪುರದಲ್ಲಿ ಆದರದಿಂದ ಪ್ರತಿಪಾಲಿತೆಯಾಗಿರುತ್ತಿದ್ದಳು. ಕಮಲಾವತಿಯೂ ಹಿರಣ್ಮಯಿಯೂ ಚಿಕ್ಕಂದಿನಿಂದ ಪರಸ್ಪರ ಕಲೇಗಲವಾಗಿರುತ್ತಿದ್ದರು. ಅಸಂಖ್ಯ ದೀಪಮಾಲೆಗಳಿಂದೆಸೆದ ಜಲಕಾದ ಬೆಳಕು ಸುಂದರಿಯರಿಬ್ಬರ ಮುಖಮಂಡಲದಲ್ಲಿ ಪ್ರತಿಫಲಿತವಾಗಿ ಮತ್ತಷ್ಟು ಉಜ್ವಲತರವಾಗಿ ಕಣ್ಗೊಳಿಸುತ್ತಿತ್ತು. ತಾರಕಾಮಯವಾಗಿದ್ದ ಗಗನದಲ್ಲಿ ಚಂದ್ರಯುಗಳವುದಯವಾಗಿದ್ದಹಾಗಿದ್ದಿತು!

ಕಮಲಾವತಿ:—ಹಿರಣ್ಮಯಿ! ಈ ದಿನವೆಲ್ಲಾ ಎಲ್ಲಿದ್ದೆ? ಒಂದುಸಲವಾದರೂ ನಿನ್ನನ್ನು ನೋಡಲಿಲ್ಲವೇಕೆ? ಎಂದಳು.

ಹಿರಣ್ಮಯಿ:—ಈ ಹೂವಿನ ಹಾರವನ್ನು ಕಟ್ಟುತ್ತಿದ್ದೆನು.

ಕಮಲಾವತಿ:—(ನಕ್ಕು)—ಯಾರಕುತ್ತಿಗೆಗೆ ಹಾಕುವೆ?

“ಈ ದಿನ ಬೇಟೆಯಲ್ಲಿ ಹೆಚ್ಚು ವೀರತ್ವವನ್ನು ತೋರುವವರ ಕುತ್ತಿಗೆಗೆ ಇದು ಉಪಹಾರವಾಗಿರುವುದು.”

“ನಿನಗೆ ಬಹಳ ಧೈರ್ಯವಲ್ಲವೆ? ಬೇಟೆಗೆ ಹೋಗಿರತಕ್ಕವರು ಐನೂರುಮಂದಿ ಕ್ಷತ್ರಿಯರು, ಐನೂರುಮಂದಿ ಮುಸಲ್ಮಾನರು, ಸಾವಿರಮಂದಿ ವೀರರೆಲ್ಲರೂ ಬೇಟೆಯಲ್ಲಿ ದಕ್ಷರಾಗಿದ್ದಾರೆ. ಅಷ್ಟು ಜನರೆಲ್ಲಾರು ಅದೃಷ್ಟಬಲದಿಂದ ಸರ್ವಶ್ರೇಷ್ಠರಾಗುವರೋ ಅದನ್ನು ಗೊತ್ತುಮಾಡುವದು ಹೇಗೆ? ಒಂದು ವೇಳೆ ಮುಸಲ್ಮಾನನೊಬ್ಬನು ಎಲ್ಲರಿಗಿಂತ ಹೆಚ್ಚು ಪರಾಕ್ರಮವನ್ನು ತೋರಿದ್ದರೆ?”

“ಹಾಗಾಗಿದ್ದರೆ ಅಡವಿಯಿಂದೊಂದು ನರಿಯನ್ನು ಹಿಡಿದು ತಂದು ಅದರ ಕುತ್ತಿಗೆಗೆ ಈ ಹಾರವನ್ನು ಹಾಕುವೆನು. ಸಿಂಹಕ್ಕಿಂತ ನರಿಯ ಶೌರ್ಯವು ಹೆಚ್ಚಾಗದೆ, ಮೇವಾರದ ಅಧಿಷ್ಠಾತ್ರಿ ಭಗವತಿ ಗೌರಿಯು ಮಿಥ್ಯಾವಾದಿನಿಯಾಗದಿದ್ದರೆ, ಈ ಹಾರದಲ್ಲಿ ಯಾರ ಹೆಸರನ್ನು ಬರೆದಿರುವುದೋ ಆ ವೀರನಿಗೆ ಇದನ್ನು ಉಪಹಾರವಾಗಿ ಕೊಡುವೆನು.

ಕಮಲಾವತಿಯು ಹಿರಣ್ಮಯಿಯ ಕೈಯಿಂದ ಹಾರವನ್ನು ತೆಗೆದುಕೊಂಡು ನೋಡಿ, " ಇದರಲ್ಲಿ ನಮ್ಮ ಅಣ್ಣನ ಹೆಸರನ್ನು ಬರೆದಿರುತ್ತಿ ! ಈ ದಿನ ಅವನು ಅಷ್ಟು ಮಂದಿಯಲ್ಲಿ ಎಲ್ಲರಿಗಿಂತ ಹೆಚ್ಚು ವೀರತ್ವವನ್ನು ತೋರಿಸಿರುವನೆಂದು ನಿನಗೆ ಹೇಗೆ ಗೊತ್ತಾಯಿತೆ !" ಎಂದು ಹೇಳಿದಳು.

ಹಿರಣ್ಮಯಿಯು ಸ್ವಲ್ಪ ಹೊತ್ತು ಕಮಲಾವತಿಯ ಮುಖವನ್ನು ನೋಡಿ ಬಳಿಕ ಹೇಳತೊಡಗಿದಳು. "ಹಾಗಾದರೆ ಕೇಳು, ಹೇಳುವೆನು ! ದೇವಿ ಸಿಂಹವಾಹಿನಿಯು ನೆನ್ನೆ ರಾತ್ರಿ ನನಗೆ ಕನಸಿನಲ್ಲಿ ಕಾಣಿಸಿಕೊಂಡಳು ! ಅವಳು ನನ್ನೆದುರಿಗೆ ನಿಂತು ಹಸನ್ಮುಖಿಯಾಗಿ ಹರ್ಷದಿಂದ ಅರ್ಧ ಕಣ್ಣುಗಳಿಂದ ನೋಡುತ್ತ "ನನ್ನ ಮಕ್ಕಳಾದ ಕ್ಷತ್ರಿಯ ವೀರರಲ್ಲಿ ಎಲ್ಲರಿಗಿಂತ ನನಗೆ ಪ್ರಿಯತಮರಾದವರಾರು, ಗೊತ್ತುಂಟೆ ?" ಎಂದು ಕೇಳಿದಳು. ನಾನು, ಅಜಯನೆಂದು ಹೇಳಿದೆನು. ದೇವಿಯು ನಕ್ಕು, "ನಿಜವನ್ನು ಹೇಳಿದೆ, ವೀರನಾದ ಅಜಯಸಿಂಹನು ಎಲ್ಲರಿಗಿಂತ ಶ್ರೇಷ್ಠನಾದ ವೀರನಾಗಿರುವನು. ಇಂದು ಯವನ ಸಮ್ರಾಜನು ಅವನ ವೀರತ್ವವನ್ನು ನೋಡಿ ಆಶ್ಚರ್ಯ ಪಡಬೇಕೆಂದು ಈ ಪ್ರಕಾಂಡ ದೇಹವುಳ್ಳ ಕಾಡು ಜಂತುವನ್ನು ಸಂಗಡ ಕರೆತಂದಿರುವೆನು. ಅಲ್ಲಿ ಸೇರಿರುವ ಸಹಸ್ರಾಧಿಕ ವೀರರಲ್ಲಿ ಅಜಯಸಿಂಹನೊಬ್ಬನು ಮಾತ್ರ ಅಸ್ತ್ರವಿಲ್ಲದೆ ಈ ಪಶುವನ್ನು ಸಂಹರಿಸಲಾಪನು" ಎಂದು ಹೇಳಿದಳು. ನಾನು ಆ ಪಶುವನ್ನು ನೋಡಿ ಭಯದಿಂದ ಕುಂದಿದವಳಾಗಿ ಕಣ್ಣೀರು ಬಿಡುತ್ತ ಕೈಮುಗಿದುಕೊಂಡು, ತಾಯೆ ! ಈ ಪ್ರಕಾಂಡವಾದ ಪಶುವಿನೊಂದಿಗೆ ಅಜಯನನ್ನು ಯುದ್ಧ ಮಾಡಗೊಡಿಸಬೇಡ. ಅದರ ಭಯಂಕರವಾದ ಕೊಂಬುಗಳಿಂದ ಅವನ ಸುಕುಮಾರವಾದ ದೇಹವು ಚೀರುಪಟ್ಟು ಗಾಯವಾಗಿ ಹೋಗುವದು ! ಎಂದೆನು. ದೇವಿಯು ಕ್ರೋಧದಿಂದಲೂ ವಿಷಾದದಿಂದಲೂ ಹುಬ್ಬು ಗಂಟುಹಾಕಿಕೊಂಡು ನನ್ನನ್ನು ನೋಡಿ ಬಳಿಕ ಅಜಯಸಿಂಹನನ್ನು ನೋಡಿ, ಯುದ್ಧಕ್ಕೆ ಹೊರಡೆಂದು ಸಂಜ್ಞೆ ಮಾಡಿದಳು. ಅಜಯನು ನಗುತ ಹೋಗಿ ಆ ಮಹಾ ಪಶುವನ್ನು ಲೀಲಾಜಾಲವಾಗಿ ಸಂಹರಿಸಿದನು. ನಾನು ಆಶ್ಚರ್ಯದಿಂದಲೂ ಆನಂದದಿಂದಲೂ ವಿಹ್ವಲೆಯಾಗಿ ಪ್ರೀತಿಗೆ ಉಪಹಾರ ಸ್ವರೂಪವಾಗಿ ಅವನಿಗೆ ಒಂದು ಹೂಮಾಲೆಯನ್ನು ಹಾಕಲು ಹೋದೆನು. ಸಿಂಹವಾಹಿನಿಯು ಹುಬ್ಬು ಗಂಟುಹಾಕಿಕೊಂಡು ನನ್ನನ್ನು ನೋಡುತ್ತ ಗಂಭೀರಸ್ವರದಿಂದ, 'ಹಿರಣ್ಮಯಿ ! ವೀರನಾದ ಅಜಯಸಿಂಹನನ್ನು ಮುಟ್ಟಬೇಡ. ನೀನು ಕ್ಷತ್ರಿಯಕುಲದ ರಮಣಿಯಾಗಿದ್ದು ರಜಪೂತ ವೀರನು ಮಾಡುವ ಯುದ್ಧಕ್ಕೆ ಅಡ್ಡಿ ಮಾಡುತ್ತಿ. ನೀನು ಅಜಯಸಿಂಹನ ಮೈಯನ್ನು ಮುಟ್ಟಲು ಯೋಗ್ಯಳಲ್ಲ, ಎಚ್ಚರದಿಂದಿರು !" ಎಂದು ಹೇಳಿದಳು.

ನಾನು ಭಯದಿಂದ ನಡುಗಿದೆನು. ಲಜ್ಜೆಯಿಂದಲೂ ಅಭಿಮಾನದಿಂದಲೂ ನನ್ನ ಮೈ ಯೆಲ್ಲಾ ಮುಳ್ಳು ಚುಚ್ಚಿದ ಹಾಗಾಯಿತು. ನಾನು ಹಿಮ್ಮೆಟ್ಟಿ ಹೋಗಿ ದೂರದಿಂದ ಮಾಲೆಯನ್ನು ಅಜಯನಿಗೆ ಹಾಕಿದೆನು. ಅಜಯನು ನಗುತ ಹಾರವನ್ನು ತೆಗೆದು ಕೊಂಡು ಕುತ್ತಿಗೆಗೆ ಹಾಕಿಕೊಳ್ಳುವಾಗ ಅವನ ಕತ್ತಿಯು ತಗಲಿ ಹಾರವು ಹರಿದು ಹೋಯಿತು. ಸಿಂಹವಾಹಿನಿಯು ನನ್ನನ್ನು ನೋಡಿ, ನಕ್ಕು ಅದೃಶ್ಯವಾಗಿ ಹೋದಳು.''

ಕಮಲಾವತಿಯು ಸ್ವಲ್ಪ ನಡುಗಿ, ''ಇದು ಸ್ವಪ್ನಮಾತ್ರ! ಆದರೆ ಒಂದೊಂದು ಸಮಯದಲ್ಲಿ ಸ್ವಪ್ನವೂ ನಿಜವಾಗುವದುಂಟು! ಭಗವತಿ ಸಿಂಹವಾಹಿನಿಯು ಮೊದಲು ಪ್ರಸನ್ನೆಯಾಗಿ ನಿನಗೆ ದರ್ಶನವನ್ನು ಕೊಟ್ಟವಳು ಕಡೆಗೆ ನಿನ್ನ ಮೇಲೆ ಕೋಪ ಮಾಡಿ ಅಣ್ಣನನ್ನು ಮುಟ್ಟಬೇಡವೆಂದು ಹೇಳಿದಳೇಕೆ?'' ಎಂದು ಹೇಳಿದಳು.

ಹಿರಣ್ಮಯಿ :—(ನಿಟ್ಟುಸಿರನ್ನು ಬಿಟ್ಟು) ನಿನ್ನ ಅಣ್ಣನನ್ನು ಮುಟ್ಟುವುದಕ್ಕೆ ನನಗೆ ಯೋಗ್ಯತೆಯುಂಟೆ? ಹಾಗಿದ್ದರೆ, ಸಾಕ್ಷಾತ್ ಮಹಾದೇವಿಯೇ ಬೇಡವೆಂದು ನಿಷೇಧ ಮಾಡಲೇಕೆ? ಹೋಗಲಿ! ಸ್ವಪ್ನವು ನಿಜವೋ, ಸುಳ್ಳೋ ಈಗ ಗೊತ್ತಾಗು ತ್ತದೆ. ಇಂದು ಅಜಯನು ವೀರಾಗ್ರಗಣ್ಯನೆಂದು ಎಲ್ಲರೂ ಅವನನ್ನು ಸಮ್ಮಾನಿಸಿದರೆ ನನ್ನ ಆಶೆಯು ಕೈಗೂಡುವ ಹಾಗಾಯಿತು! ನಾನು ಆದರದಿಂದ ಕಟ್ಟಿದ ಹಾರವು ನರಿಯ ಕುತ್ತಿಗೆಗೆ ಹಾಕಿದ ಹಾಗಾಗುವುದಿಲ್ಲ. ಅದೋನೋಡು! ವೀರರೆಲ್ಲರೂ ಬರುತ್ತಿದ್ದಾರೆ!

ಕಮಲಾವತಿ :—ಇದೇನೆ, ಆಶ್ಚರ್ಯ! ಸಿಂಹವಾಹಿನಿಗೆ ಪ್ರಿಯನಾದ ಅಜ ಯನು ಜಯಮಾಲೆಯಿಂದ ಶೋಭಿತನಾಗಿ ಜಯಪತಾಕವನ್ನು ಕೈಯಲ್ಲಿ ಹಿಡಿದು ಮುಸಲ್ಮಾನ ಸೈನಿಕರ ಮಧ್ಯದಲ್ಲಿ ನಗುಮೊಗನಾಗಿ ಬರುತ್ತಿದ್ದಾನೆ! ಮತ್ತೂ ನೋಡು ಎಲ್ಲರಿಗೂಮುಂದಾಗಿ ಅಕಬರಷಹನ ಬಲದ ಪಾರ್ಶ್ವದಲ್ಲಿ ತಂದೆಯು ನಿಂತು ತನ್ನವಂಶಕ್ಕೆ ಗೌರವಸ್ವರೂಪವಾದ ಮಗನನ್ನು ಗರ್ವದಿಂದ ಬಾರಿಬಾರಿಗೂ ನೋಡುತ್ತಿದ್ದಾನೆ.

ವೀರರೆಲ್ಲರೂ ಜಯಘೋಷಣೆಯಿಂದ ಕೋಲಾಹಲ ಮಾಡುತ್ತ ಪ್ರಾಸಾದದ ತಲದಲ್ಲಿ ಬಂದು ನಿಂತರು. ಹಿರಣ್ಮಯಿಯು ಚಂಚಲ ಹೃದಯವುಳ್ಳವಳಾಗಿ ಕಂಪಿತಕರ ದಿಂದ ಪುಷ್ಪಹಾರವನ್ನು ತೆಗೆದುಕೊಂಡು ಅಜಯಸಿಂಹನ ತಲೆಗೆ ಸರಿಯಾಗಿ ಮೇಲಿಂದ ಹಾಕಿದಳು. ಹಾರವು ಅಜಯನ ತಲೆಯ ಮೇಲೆ ಬೀಳದೆ ಅವನ ಭುಜಕ್ಕೆ ತಾಕಿ ಅವನ ಪಾರ್ಶ್ವದಲ್ಲಿದ್ದ ಉದ್ದವಾದ ದಾಡಿಯುಳ್ಳ ಗಿಡ್ಡಾದ ಒಕ್ಕಣ್ಣಿನ ಯವನ ಸೈನಿ ಕನ ತಲೆಯ ಮೇಲೆ ಬಿದ್ದಿತು. ಯವನನು ತಲೆಯೆತ್ತಿ ಮೇಲೆನೋಡಿ ನಕ್ಕು ಎರಡು ಕೈಗಳಿಂದ ಸಲಾಮನ್ನು ಮಾಡಿ ಹಾರವನ್ನು ಹಾಕಿಕೊಂಡನು.

ಕಮಲಾವತಿಯು ನಡುಗಿ, ಏನು ಸರ್ವನಾಶ! ಹಾರವನ್ನು ಯಾರ ಕುತ್ತಿಗೆಗೆ ಹಾಕಿಬಿಟ್ಟೆಯೆ? ಎಂದಳು.

## ಮೂರನೆಯ ಪರಿಚ್ಛೇದ.

ರಾಜಪೂತ ವೀರರೂ ಮುಸಲಮಾನ ವೀರರೂ ಕುದುರೆಗಳಿಂದಿಳಿದು ರಾಜಪ್ರಾಸಾದದೊಳಗೆ ಪ್ರವೇಶಮಾಡಿದರು. ರಾಣಾಪ್ರತಾಪಸಿಂಹನೂ ಅಕಬರಷಹನೂ ಮಾತಾಡಿಕೊಂಡು ಉದಯಪುರಾಭಿಮುಖವಾಗಿ ಮೆಲ್ಲಮೆಲ್ಲನೆ ನಡೆದುಕೊಂಡು ಹೋದರು. ಅಕಬರನು, ರಾಜನೆ! ನಾನು ಹೇಳುವುದಕ್ಕೆ ತಾವು ಒಪ್ಪದಿರಲು ಕಾರಣವೇನೂ ತೋರುವುದಿಲ್ಲವೆಂದನು.

"ತಮ್ಮ ಪ್ರಸ್ತಾಪವು ಅಸಂಭಾವಿತವಾದುದು. ನನ್ನ ವೃದ್ಧಾಪ್ಯದಲ್ಲಿ ನನಗೆ ಕಡೆಗಾಲದಲ್ಲಿ, ನನ್ನ ಕಣ್ಣಿಗೆ ಮಣಿ ಸ್ವರೂಪವಾಗಿರುವ ವೀರನಾದ ನನ್ನ ಮಗನನ್ನು ಕಣ್ಣಿಗೆ ಮರೆಯಾಗಿ ಕರೆದುಕೊಂಡು ಹೋಗಬೇಕೆಂದು ಹೇಳುತ್ತೀರಿ.

"ತಾವು ಪರ್ಯಾಲೋಚನೆಯನ್ನು ಮಾಡಿ ನೋಡಬಹುದು. ನಾನು ಮಾಡಿರುವ ಪ್ರಸ್ತಾಪವು ನಮ್ಮಿಬ್ಬರಿಗೂ ಮಂಗಳಕರವಾದುದು. ಇಂದು ತಮ್ಮ ಮಗನ ಶೌರ್ಯ ಧೈರ್ಯ ಪರಾಕ್ರಮಗಳನ್ನು ನಾನೇ ಪ್ರತ್ಯಕ್ಷವಾಗಿ ನೋಡಿ ಸಂಪೂರ್ಣ ಅನುಭವ ಮಾಡಿದೆನು. ಅವನು ದಿಲ್ಲಿಯ ದರಬಾರಲ್ಲಿದ್ದರೆ ಅವನಲ್ಲಿ ನೆಲೆಗೊಂಡಿರುವ ಅನ್ಯತ್ರ ದುರ್ಲಭವಾದಾ ಸದ್ಗುಣಗಳೆಲ್ಲಾ ಚೆನ್ನಾಗಿ ಸ್ಫೂರ್ತಿಗೊಂಡು ವೃದ್ಧಿಯನ್ನೈದು ಹೆಚ್ಚು ಪ್ರಕಾಶವಾಗುವುದಕ್ಕೆ ಅವಕಾಶವಾಗುವುದು."

"ಬಪರಾಯನ ವಂಶದವರು ವೀರ ಶೌರ್ಯ ಔದಾರ್ಯಾದಿ ಗುಣಗಳನ್ನು ಯವನರಿಂದ ಕಲಿತುಕೊಂಡರೆಂದು ಕೇಳಿದರೆ ನನ್ನ ಹೃದಯವು ಶೂಲದಿಂದಿರಿದಿಟ್ಟ ಹಾಗಾಗುವದೆಂಬುದನ್ನು ತಾವು ಮರೆತಹಾಗಿದೆ."

ದಿಲ್ಲೀಶ್ವರನ ಲಲಾಟವು ಮುಹೂರ್ತಮಾತ್ರ ಕೆಂಪೇರಿದ ಹಾಗಾಯಿತು. ಆದರೆ ಅವನಾಭಾವವನ್ನು ಹೊರಪಡಿಸದೆ ಅಂಕೆಗೆ ತೆಗೆದುಕೊಂಡು ಹಾಸ್ಯವದನನಾಗಿ, "ರಾಜನೆ! ನಿಮ್ಮ ಮಗನು ನನ್ನ ಬಳಿ ಇದ್ದರೆ ಯವನರ ಆವನರ ಆಚಾರವನ್ನು ಕಲಿತುಕೊಳ್ಳಲಾರನು! ಅಕಬರನು ರಾಜಪೂತರಿಗೆ ಪಕ್ಷಪಾತದವನೆಂದು ಪ್ರಪಂಚದಲ್ಲಿ ಯಾರು ತಾನೇ ಅರಿತಿಲ್ಲ? ನಾನು ಪ್ರತಾಪಸಿಂಹನ ವೀರನಾದಕುವರನು ಕ್ಷತ್ರಧರ್ಮ

ಗಳನ್ನೆಲ್ಲಾ ಪೂರ್ಣ ಗೌರವದಿಂದ ಕಾಪಾಡಿಕೊಂಡಿರಲು ಸರ್ವಸಾಹಸದಿಂದ ಯತ್ನ ಶೀಲನಾಗಿರುವೆನು'' ಎಂದನು.

ಹಿಂದಲಿಂದ ಯಾರೋ ಒಬ್ಬರು, "ಮೇವಾರದ ರಾಜನೆ! ದಿಲ್ಲೀಶ್ವರನು ಯಥಾರ್ಥವನ್ನು ಹೇಳಿದನು! ಸಮಯದಲ್ಲಿ ಕೋಗಿಲೆಯೂ ಕಾಗೆಯ ಗೂಡಿನಲ್ಲಿ ತಿಳುವಳಿಕೆಯನ್ನು ಕಲಿತುಕೊಳ್ಳಬೇಕಾಗುವುದು!'' ಎಂದು ಹೇಳಿದುದುಕೇಳಿಸಿತು.

ಪ್ರತಾಪಸಿಂಹನು ಆಗಂತುಕನ ಕಡೆ ತಿರಿಗಿ ರೋಷದಿಂದ ರಕ್ತವೇರಿದ ಕಣ್ಣು ಗಳಿಂದ ನೋಡುತ್ತ "ನೀನಾರು!'' ಎಂದು ಕೇಳಿದನು.

ಬ್ರಹ್ಮಚಾರಿಯ ವೇಷವನ್ನು ತಾಳಿದ್ದ ಆಗಂತುಕನು ಪ್ರತಾಪಸಿಂಹನಿಗೆ ಆಶೀ ರ್ವದಿಸಿ, ಅವನಿಗೆದುರಾಗಿ ನಿಂತು. "ರಾಜನೆ! ನಿಮಿಷಮಾತ್ರ ಈ ಸಂಸಾರತ್ಯಾಗಿ ಯಾಗಿರುವ ಸನ್ಯಾಸಿಯ ಅರಿಕೆಯನ್ನಾಲೈಸಿ ಕೇಳು! ಈದಿನ ಸಾಯಂಕಾಲ ಉದಯ ಸಾಗರಕ್ಕೆ ಪಾರ್ಶ್ವದಲ್ಲಿರುವ ಉಪಾಸನಾ ಮಂದಿರದಲ್ಲಿ ಭವಾನಿಪತಿಯಾದ ದೇವಾದಿ ದೇವನ ಧ್ಯಾನದಲ್ಲಿ ಮಗ್ನನಾಗಿದ್ದೆನು. ಆ ಸಮಯದಲ್ಲಿ ಇದ್ದಿದ್ದಹಾಗೆ ಗಗನಪಟದಲ್ಲಿ ತ್ರಿಶೂಲಧಾರಿಯಾದ ದಿಗಂಬರಮೂರ್ತಿಯ ಛಾಯೆಯು ಚಿತ್ರಿತವಾಗಿ, ಗಂಭೀರ ಸ್ವರದಿಂದ, "ವೀರವೃಂದದಿಂದ ಲೀಲೆಗೆ ನೆಲೆಯಾಗಿರುವ ಈ ಪುಣ್ಯಭೂಮಿಯು ಸ್ಮಶಾನ ವಾಗಿ ಪರಿಣಮಿಸುವ ಹಾಗೆ ತೋರುತ್ತದೆ. ವೃದ್ಧನಾದ ಪ್ರತಾಪಸಿಂಹನು ಗ್ವಾಲಿಯ ರದ ರಾಜನ ಮಗಳಾದ ಹಿರಣ್ಮಯಿಯನ್ನು ತಂದುಕೊಂಡು ತನ್ನ ಮಗನಿಗೆ ಮದುವೆ ಮಾಡಬೇಕೆಂದಿದ್ದಾನೆ. ಈ ನಿಮಿಷವೇ ಹೋಗಿ ಆ ಸಂಬಂಧವನ್ನು ಮಾಡಕೂಡದೆಂದು ಅವನಿಗೆ ತಿಳಿಸು'' ಎಂದು ಅಪ್ಪಣೆಮಾಡಿದ ಆಕಾಶವಾಣಿಯಾಯಿತೆಂದು ಹೇಳಿದನು.

ಪ್ರತಾಪಸಿಂಹ:—ನೀನು ಹುಚ್ಚ ಅಥವಾ ಕಪಟವೇಷದ ತುಸಿಗನಾಗಿರಬೇಕು. ವೀರಶ್ರೇಷ್ಠನಾಗಿದ್ದ ನನ್ನ ಸ್ನೇಹಿತನ ಮಗಳಾದ ಅಪ್ಸರಿಯ ಹಾಗಿರುವ ಹಿರಣ್ಮಯಿ ಯನ್ನು ನನ್ನ ಸೊಸೆಯಾಗಿ ಮಾಡಿಕೊಳ್ಳುವುದರಿಂದ ಭವಾನಿಪತಿಯು ಅಪ್ರಸನ್ನನಾಗಿ ರುವನೆಂದು ಹೇಳುವುದು ಅಸಂಭವ.

ಬ್ರಹ್ಮಚಾರಿ:—(ಎಳ್ಳಷ್ಟು ವಿಚಲಿತನಾಗದೆ)—ದೇವಾದಿದೇವನ ಅಪ್ಪಣೆಯ ಪ್ರಕಾರ ಅವನ ನಿಷೇಧದ ನುಡಿಗಳನ್ನು ಉತ್ತರಕ್ಷಣದಲ್ಲಿ ಬಂದು ತಮಗೆ ತಿಳಿಸಿದ್ದೇನೆ. ತಮ್ಮ ಇಷ್ಟವಿದ್ದಂತೆ ನಡಿಸಬಹುದು. ಆದರೆ, ಜೋಪಾನ! ಭವಾನಿಪತಿಯ ಅಪ್ಪಣೆ ಯನ್ನು ಮೀರಿ ಮೇವಾರದ ದೇಶಕ್ಕೆ ಕೇಡನ್ನು ತರದಿರಬೇಕು!

ಹೀಗೆಂದು ಹೇಳಿ ಬ್ರಹ್ಮಚಾರಿಯು ಪ್ರತ್ಯುತ್ತರವನ್ನು ನಿರೀಕ್ಷಿಸದೆ ಅಲ್ಲಿಂದ ಹೊರಟುಹೋದನು. ಪ್ರತಾಪಸಿಂಹನು ಸ್ವಲ್ಪ ಹೊತ್ತು ಮೌನವಾಗಿ ಯೋಚಿಸುತಿದ್ದು ಬಳಿಕ, "ದಿಲ್ಲೀಶ್ವರ! ಈ ಅಪರಿಚಿತನಾದ ಸನ್ಯಾಸಿವೇಷದ ಪಾಷಂಡನು ಹೇಳಿದುದ ರಲ್ಲೊಂದು ಮಾತನ್ನೂ ನಂಬಕೂಡದು. ನೀವು ಹೇಳಿದುದಕ್ಕೆ ನಾನು ಸಮ್ಮತಿಸು ವೆನು. ಈಗ ನನ್ನ ಪರ್ಣಶಾಲೆಗೆ ಹೋಗಿ ವಿಶ್ರಮವನ್ನು ತೆಗೆದುಕೊಳ್ಳೋಣವಾಗಲಿ; ನಾಳೆ ಬೆಳಗ್ಗೆ ತಮ್ಮ ಸಂಗಡ ದಿಲ್ಲಿಗೆ ಹೊರಡಬೇಕಾದ ಸಮಾಚಾರವನ್ನು ಅಜಯನಿಗೆ ತಿಳಿಸಿಲ್ಲ. ಅವನಿಗೆ ಅದನ್ನೆಲ್ಲಾ ಹೇಳಬೇಕಾಗಿದೆ" ಎಂದನು.

ಪ್ರತಾಪಸಿಂಹನು ಸಮ್ರಾಜನ ಸಂಗಡ ವಿಶ್ರಾಮಭವನಕ್ಕೆ ಹೋಗಿ ಅಜಯ ಸಿಂಹನನ್ನು ಕರೆಯಿಸಿದನು. ಅಜಯಸಿಂಹನು ಬಂದು ತಂದೆಗೆ ಅಭಿವಂದಿಸಿ ನಿಂತನು.

ಪ್ರತಾಪಸಿಂಹ:—ವತ್ಸ! ದಿಲ್ಲೀಶ್ವರನು ಇಂದು ನಿನ್ನ ವೀರತ್ವವನ್ನು ನೋಡಿ ಪ್ರೀತನಾಗಿದ್ದಾನೆ. ಆತನು ಕೇಳಿಕೊಳ್ಳುವ ಪ್ರಕಾರ ನೀನು ಆತನ ಸಮೀಪದಲ್ಲಿದ್ದು ಭಾರತವರ್ಷದ ಭವಿಷ್ಯ ಮಂಗಳಕ್ಕೆ ಸಲವಾಗಿ ಸಹಾಯವನ್ನು ಮಾಡುತ್ತಿರಬೇಕು.

ಅಕಬರ:—ಈ ದಿನ ನೀನು ನನ್ನ ಪ್ರಾಣವನ್ನುಳಿಸಿರುತ್ತಿ. ನೀನು ಯಾವಾಗ ಏನುಬೇಕೆಂದು ಅಪೇಕ್ಷಿಸಿದರೂ ಅದನ್ನು ಸಿದ್ಧಪಡಿಸುವುದು ನನಗೆ ಕರ್ತವ್ಯವಾಗಿರುವುದು.

ಅಜಯಸಿಂಹನು ಆಶ್ಚರ್ಯಗೊಂಡು ರಾಣಾನನ್ನು ನೋಡಿ, ಬಳಿಕ ಅಕಬರನನ್ನು ಕುರಿತು, "ಯವನರಾಜ! ತಮ್ಮ ಪ್ರಾಣವನ್ನು ಕಾಪಾಡಲು ಕಾಡುಮೃಗವನ್ನು ಸಂಹರಿಸಲಿಲ್ಲ. ಇಷ್ಟುಎಲ್ಲದಿದ್ದರೂ ತಂದೆಯ ಅಪ್ಪಣೆಯನ್ನು ಮೀರಲಾರದೆ ಇಂದು ಪಶುಯುದ್ಧಕ್ಕೆ ಹೋಗಿದ್ದೆನು" ಎಂದು ಹೇಳಿ ಬಳಿಕ ತಂದೆಯನ್ನು ಕುರಿತು "ತಂದೆಯೆ! ನಾನು ಇದುವರೆಗೂ ತಮ್ಮಲ್ಲಿದ್ದುಕೊಂಡು ಕ್ಷತ್ರಿಯನ ಶೌರ್ಯಾದಿ ಗುಣಗಳನ್ನು ಕಲಿತುಕೊಂಡೆನು. ಅದರ ಪರಿಣಾಮವು ಕಡೆಗೆ ಹೀಗಾಗಬೇಕಾಯಿತೆ?" ಎಂದನು.

ರಾಣಾ:—ವತ್ಸ! ನಿನ್ನ ಮನದ ಭಾವವನ್ನು ನಾನು ಚನ್ನಾಗಿ ತಿಳಿದೆನು. ಆದರೆ ಬ್ರಹ್ಮನ ಸಂಕಲ್ಪಕ್ಕೆ ಅನ್ಯಥಾ ನಡೆಯಲಾರದು. ಅಕಬರಷಹನು ಉದಾರ ಹೃದಯನು. ಅವನು ಕ್ಷತ್ರಿಯಕಳಂಕನಾದ ಮಾನಸಿಂಹನನ್ನು ದಾಸತ್ವದಲ್ಲಿ ಇಟ್ಟು ಕೊಳ್ಳುವುದಿಲ್ಲ. ಅವನು ಸಿಂಹದ ಮರಿಯನ್ನು ಬಂಗಾರದ ಸಂಕೋಲೆಯಿಂದ ಕಟ್ಟಿ ಡಲಾರನು. ಆದುದರಿಂದ ನಾನೂ ಬಹಳವಾಗಿ ಭಾರತವರ್ಷದ ಮುಂದಿನ ಶುಭಾಶುಭ ವನ್ನು ಕುರಿತು ಆಲೋಚಿಸಿ ದಿಲ್ಲೀಶ್ವರನ ಇಷ್ಟಪ್ರಕಾರ ನಿನ್ನನ್ನು ಆತನೊಂದಿಗೆ ಕಳುಹಿ ಸಲೊಪ್ಪಿಕೊಂಡೆನು.

ಅಜಯಸಿಂಹನು ತಲೆ ತಗ್ಗಿಸಿ ತಂದೆಯ ಅಪ್ಪಣೆಯ ಪ್ರಕಾರ ನಡಿಯುವುದಾಗಿ ಒಪ್ಪಿತವನ್ನು ಸೂಚಿಸಿದನು. ಪ್ರತಾಪಸಿಂಹನು ಪುನಃ “ ಮತ್ತು ನಿನ್ನ ತಾಯಿಯ ಇಷ್ಟಪ್ರಕಾರ ನಿನಗೆ ಗ್ವಾಲಿಯರದ ರಾಜಕನ್ಯೆಯನ್ನು ಕೊಟ್ಟು ಮದುವೆ ಮಾಡ ಬೇಕೆಂದು ಸಿದ್ಧಮಾಡುತ್ತಿದ್ದೆನು. ಪ್ರಕೃತ ಕೆಲವು ದಿನಗಳಮಟ್ಟಿಗೆ ವಿವಾಹಮಹೋತ್ಸವವನ್ನು ನಿಲ್ಲಿಸಿರುವೆನು. ಮತ್ತಾವುದೂ ವ್ಯಾಘಾತವುಂಟಾಗದಿದ್ದರೆ ಲಗ್ನಕ್ಕೆ ನಿನ್ನನ್ನು ಕರೆತರಲು ದೂತನನ್ನು ಜಾಗ್ರತೆಯಾಗಿ ಕಳುಹಿಸುವೆನು ” ಎಂದು ಹೇಳಿದನು.

ಅಜಯಸಿಂಹನ ಮುಖಮಂಡಲವು ಹರ್ಷದಿಂದರಳಿದ್ದುದು ಅಕಸ್ಮಾತ್ತಾಗಿ ಪುನಃ ಕನಂಗಿ ಕಂದಿದ ಹಾಗಾಯಿತು. ಅವನು ಹೊರಗೆ ಹೋಗುತ್ತಿದ್ದನು. ರಾಣಾ ಪುನಃ ಅವನನ್ನು ಕರೆದು, ‘ ವತ್ಸ ! ನಾಳೆ ಬೆಳಿಗ್ಗೆ ನೀನು ದಿಲ್ಲೀಶ್ವರನೊಂದಿಗೆ ಹೊರಟು ಹೋಗುವೆ. ಪುನಃ ಮತ್ತೆಷ್ಟುದಿನಕ್ಕೆ ನೋಡುವೆನು. ಅವನ್ನು ಯಾವಾಗಲೂ ಮರೆಯಬೇಡ. ಮೊದಲನೆಯದು—ಯವನನ ಸಹಾಯದಿಂದ ಹಿಂದೂಗಳ ಸಂಗಡ ಯಾವಾಗಲೂ ಯುದ್ಧವನ್ನು ಮಾಡಬೇಡ. ಎರಡನೆಯದು—ಕತ್ತಿಯಿಲ್ಲದೆ ಯಾವ ಯವನನ ಅಂಗಸ್ಪರ್ಶವನ್ನು ಯಾವಾಗಲೂ ಮಾಡಬೇಡ—ಇವೆರಡೂ ಚನ್ನಾಗಿ ನೆನಪಿರಲಿ.

ಅಜಯಸಿಂಹನು ಸಮ್ಮತನಾಗಿ, ಮ್ಲಾನವದನವುಳ್ಳವನಾಗಿ ತನ್ನ ಮಲಗುವ ಕೊಠಡಿಗೆ ಹೊರಟು ಹೋದನು.

---

## ನಾಲ್ಕನೆಯ ಪರಿಚ್ಛೇದ.

ಅಜಯಸಿಂಹನು ನಡುರಾತ್ರಿಯಲ್ಲಿ ತನ್ನ ಕೊಠಡಿಯ ಗವಾಕ್ಷವನ್ನು ತೆರೆದು ಆಕಾಶವನ್ನು ನೋಡುತ್ತಿದ್ದನು. ಆಕಾಶವು ಮೋಡವಿಲ್ಲದಿದ್ದರೂ ಬಹಳ ಕತ್ತಲೆಯಾಗಿತ್ತು. ಭೂಮಿಯು ನಿಶ್ಶಬ್ದ ! ಶಬ್ದವೆಂಬುದರಲ್ಲಿ ಕೇವಲ ಕತ್ತಲೆಯ ನಿಶ್ವಾಸ ಪ್ರಶ್ವಾಸಗಳ ಶಬ್ದವು ಮಾತ್ರ ಕೇಳುತ್ತಿತ್ತು. ಮಧ್ಯೆಮಧ್ಯೆ ಅಮಂಗಳಸೂಚಕವಾಗಿ ಭಯವುಂಟುಮಾಡುವ ಪೇಚಕಪಕ್ಷಿಯ (ಗೂಬೆ) ಚೀತ್ಕಾರಧ್ವನಿ. ಅಜಯನು ಅಂಥಾ ತಮೋಮಯವಾದ ನಡುರಾತ್ರಿಯಲ್ಲಿ ಅದೇ ಗವಾಕ್ಷದಲ್ಲಿ ಅಂಥಾ ನೈಶಾಕಾಶವನ್ನು ಅನೇಕತಡವೆ ನೋಡಿದ್ದನು. ಆದರೆ ಮೋಡವಿಲ್ಲದೆ ಆಕಾಶದಲ್ಲಿ ಅಷ್ಟು ಭಯಂಕರವಾದ ಕತ್ತಲೆಯನ್ನು ಯಾವಾಗಲೂ ನೋಡಲಿಲ್ಲ. ಭಯವೋ ಅಥವಾ ವಿಷಾದವೋ

ಎರಡರಲ್ಲೊಂದು ಅವನ ಹೃದಯವನ್ನಾವರಿಸಿಕೊಂಡಿದ್ದಿತು. ನೋಡಿದರೆ, ಅವನ ಹೃದಯದಂತರದ ಅಂತಸ್ಥಲದಲ್ಲಿ ಕಾಲಿಮಾಮಯವಾದ ಪ್ರಕೃತಿಯ ಪೂರ್ಣ ಪ್ರತಿಬಿಂಬವು ಬಿದ್ದಿದ್ದ ಹಾಗೆ ತೋರುತ್ತಿತ್ತು. ಅವನು ನಿಟ್ಟುಸಿರನ್ನು ಬಿಟ್ಟು ತನ್ನೊಳು ತಾನೇ "ನಾನು ಕ್ಷತ್ರಿಯ ವೀರನು! ಕ್ಷತ್ರಿಯ ಕುಲಕ್ಕೆ ಗೌರವಸ್ವರೂಪನಾದ ಪ್ರತಾಪಸಿಂಹನಿಗೆ ಮಗನಾಗಬೇಕು! ಹೀಗಿದ್ದು ಇಂದು ಹುಡುಗನ ಹಾಗೆ ಕಲ್ಪಿತವಾದ ಪ್ರಕೃತಿಯ ಭ್ರೂಭಂಗಿಯನ್ನು ಕಂಡು ಎದೆ ಕದಲಿದವನಾಗಬಹುದೆ! "ಎಂದೆಂದುಕೊಂಡು ತನ್ನನ್ನು ತಾನೇ ಧಿಕ್ಕರಿಸಿಕೊಂಡು, ಗವಾಕ್ಷವನ್ನು ಮುಚ್ಚಿ ಹಾಸಿಗೆಯಮೇಲೆ ಮಲಗಿಕೊಂಡನು. ಮಲಗಿದ್ದರೂ ತಮೋಮಯವಾದ ಆಕಾಶವು ಕಣ್ಣೆದುರಿಗೆ ಕಾಣಿಸುತ್ತಿತ್ತು. ಜಗತ್ತಿನಲ್ಲಿ ಮತ್ತಾವುದೂ ಇಲ್ಲದೆ ಅನಂತವ್ಯಾಪಿಯಾದ ಅಂಧಕಾರದಿಂದ ಆವರಿಸಲ್ಪಟ್ಟಿದ್ದ ಆಕಾಶವೊಂದೇ ಇದ್ದಹಾಗೆ ತೋರುತ್ತಿತ್ತು. ಕೆಳಗೆ, ಮೇಲೆ, ಪಾರ್ಶ್ವ—ಎಲ್ಲಾ ಕಡೆಯೂ ಕರಾಳ ಕಾಲಿಮಯವಾದ ಕಾಳಾಕಾಶ! ಕಣ್ಣು ಮುಚ್ಚಿಕೊಂಡನು. ಅಂಧಕಾರವು ಮತ್ತಷ್ಟು ಹೆಚ್ಚು ಭಯಂಕರವಾಗುತ್ತಾ ಬಂದಿತು. ಕಾಳ ಅಂಬರದ ಕರಾಳ ಕಾಲಿಮೆಯು ಗಾಢತರವಾದ ವರ್ಣವನ್ನು ತಾಳುತ್ತ ಬಂದಿತು. ಇದ್ದಹಾಗೆ ಆಕಾಶಪಟದಲ್ಲಿ ಸೌಂದರ್ಯಮಯವಾದ ಮೂರ್ತಿಯೊಂದು ಚಿತ್ರಿತವಾದ ಹಾಗೆ ಕಂಡಿತು. ಆ ಮೂರ್ತಿಯು ತನ್ನ ಬಾಲ್ಯ ಸಹಚರಿಯಾದ ಹಿರಣ್ಮಯಿಯ ಮೂರ್ತಿಯಾಗಿದ್ದಿತು! ಹಿರಣ್ಮಯಿಯ ಬಂಗಾರದಂಥಾ ಕಾಂತಿಯು ಕತ್ತಲೆಯಲ್ಲಿ ಅಳಿಸಿಹೋಗುತ್ತ ಬಂತು. ಕತ್ತಲೆಯೇ ಬಾಯಿತೆರೆದು ಆ ಸೌಂದರ್ಯರಾಶಿಯನ್ನು ನುಂಗುತ್ತಿದ್ದ ಹಾಗೆ ಕಂಡಿತು. ನೋಡುತ್ತಿದ್ದಹಾಗೆ ತೇಜಃಪುಂಜವಾಗಿದ್ದ ಆ ಹಿರಣ್ಮಯಿಯ ಸೌಂದರ್ಯಮಯವಾದ ಶರೀರವು ಭೀಷಣವಾದ ಅಂಧಕಾರದೊಂದಿಗೆ ಸೇರಿಹೋಯಿತು! ಅಜಯನು ಚಮಕಿತನಾಗಿ ಎದ್ದು ನಿಂತುಕೊಂಡನು. ಚಂಚಲ ಚರಣಗಳಿಂದ ಕೊಠಡಿಯೊಳಗೆ ಗೋಡೆಯಿಂದ ಗೋಡೆಯವರೆಗೆ ಬೇಗಬೇಗನೆ ಕಾಲು ಹಾಕುತ್ತ ನಡೆದಾಡುತ್ತ, ಆಕಸ್ಮಿಕವಾಗಿ ಚಿತ್ತವಿಕಾರಕ್ಕೆ ಕಾರಣವೇನು? ಇದು ಮುಂದಣ ಅಮಂಗಳದ ಸೂಚನೆಗೆ ಚಿಹ್ನೆಯೊ? ತಾನಾವಾಗಲೂ ಭವಿಷ್ಯದ ಅನಿಷ್ಟವನ್ನು ಭಾವಿಸಿಕೊಂಡು ಭೀತನಾಗುತ್ತಿರಲಿಲ್ಲ. ವೀರನಹಾಗೆ ಅಮಂಗಳವನೆದುರು ಹಾಕಿಕೊಂಡು ಪಾರಾಗುತ್ತಿದ್ದನು. ತಾನು ಹೊರಟುಹೋದ ಬಳಿಕ ಹಿರಣ್ಮಯಿಗೆ ಒಂದುವೇಳೆ ಅಮಂಗಳವೇನಾದರೂ ಸಂಭವಿಸಬಹುದೋ? ತಾನು ಸಮೀಪದಲ್ಲಿದ್ದರೆ ಅಂಥಾ ಅಮಂಗಳದಿಂದವಳನ್ನು ರಕ್ಷಿಸಬಹುದಲ್ಲವೆ? ಹಾಗಾದರೆ ಸಮ್ರಾಜನೊಂದಿಗೆ ಹೋಗಲು ಸಮ್ಮತಿಪಟ್ಟನೇಕೆ? ಅದು ಸರಿಯಲ್ಲ. ಹಾಗೆ ಹೇಳಕೂಡದು! ಕ್ಷತ್ರಿಯ

ನಾಗಿ ತಂದೆಯಾಜ್ಞೆಯನ್ನುಲ್ಲಂಘಿಸಬಹುದೆ ? ಒಪ್ಪಿಕೊಂಡ ಬಳಿಕ ಹೋಗದಿರುವುದೇ ? ಎಂದು ಮುಂತಾಗಿ ಹೇಳಿಕೊಂಡು ಪುನಃ ಹೋಗಿ ಹಾಸಿಗೆಯಮೇಲೆ ಮಲಗಿಕೊಂಡನು. ಕನಸನಲ್ಲಿ ಹತ್ತುವರ್ಷಕ್ಕೆ ಹಿಂದೆ ನೋಡಿದ್ದ ಹುಚ್ಚಿಯೊಬ್ಬಳು ತನ್ನ ಎದುರಿಗೆ ಬಂದು ನಗುತ್ತ ನಿಂತಹಾಗೂ ' ಈಗೇನು ಹೇಳುವೆ ? ಹಿರಣ್ಮಯಿಯನ್ನು ಹುಚ್ಚಿಯ ಕೈಯಿಂದುದ್ಧಾರ ಮಾಡಲು ನೀನೆಲ್ಲಿರುವೆ, ವೀರ ? ಎಂದು ಹೇಳಿ ಆಕಾಶದ ಕಡೆ ಬೆರಳನ್ನು ತೋರಿಸುತ್ತ ' ಅಲ್ಲಿನೋಡು, ನಿನ್ನ ಹಿರಣ್ಮಯಿಯು ಅಂಧಕಾರದ ಕರಾಳಗ್ರಾಸಕ್ಕೆ ಬಿದ್ದುಹೋದಳು ' ಎಂದು ಹೇಳಿದ ಹಾಗೂ ಕೇಳಿದನು. ಆಗವನಿಗೆ ನಿದ್ರಾಭಂಗವಾಗಿ ಎದ್ದು ನಾಲ್ಕುಕಡೆಯೂ ನೋಡಿದನು. ಕೊಠಡಿಯಲ್ಲಾರೂ ಕಾಣಿಸಲಿಲ್ಲ. ಹಾಗಾದರೆ ಇದು ಬರೆ ಕನಸು—ಪುನಃ ಮಲಗಿಕೊಂಡನು. ಇದ್ದಹಾಗೆ ಅವನು ಮಲಗಿದ್ದ ಕೊಠಡಿಗೆ ದಕ್ಷಿಣಭಾಗದಲ್ಲಿದ್ದ ಕೊಠಡಿಯಲ್ಲಿ ಹೆಂಗಸು ಕೂಗಿಕೊಂಡ ಶಬ್ದವು ಕೇಳಿತು. ಆ ಕೊಠಡಿಯಲ್ಲಿ ಹಿರಣ್ಮಯಿಯೂ ಅವನ ತಂಗಿ ಕಮಲಾವತಿಯೂ ಮಲಗಿದ್ದರು. ಹಿರಣ್ಮಯಿಯು ಕೂಗಿಕೊಂಡಳು. ಅದರೊಂದಿಗೆ ಮತ್ತೊಬ್ಬ ಹೆಂಗಸು ನಕ್ಕು ಕೂಗುಮಾಡಿದ ಗದ್ದಲವೂ ಕೇಳಿತು. ಆಶ್ಚರ್ಯದಮೇಲೆ ಆಶ್ಚರ್ಯ ! ನಕ್ಕವಳು ಹುಚ್ಚಿ !

ಅಜಯನು ಆ ಕೊಠಡಿಯ ಬಾಗಲ ಹತ್ತಿರ ಹೋಗಿ ನಿಂತು, ಕಮಲಾವತಿ ! ಭಯವಾಯಿತೇನು ? ಎಂದು ಕೇಳಿದನು. ಕಮಲಾವತಿಯು, " ಅಣ್ಣಾ ! ಬೇಗನೆ ಬಾ- ಹಿರಣ್ಮಯಿಯು ಕನಸು ಕಂಡು ಹೆದರುತ್ತಾಳೆ, " ಎಂದಳು.

ಅಜಯನು ಕೊಠಡಿಯೊಳಗೆ ಹೋಗಿ ನೋಡಿದನು. ಹಿರಣ್ಮಯಿಯು ಕಮಲಾವತಿಯ ಕುತ್ತಿಗೆಯನ್ನು ಕಟ್ಟಿಕೊಂಡು ಅವಳ ವಕ್ಷದಮೇಲೆ ತಲೆಯನಿಟ್ಟುಕೊಂಡು ಅಳುತ್ತಿದ್ದಳು. ಅವಳ ಸುಂದರವಾದ ದೀರ್ಘದೇಹವು ಮಾಧವೀಲತೆಯು ತಂಗಾಳಿಗೆ ತೂಗಾಡುತ್ತಿದ್ದಹಾಗೆ ಸ್ವಲ್ಪಸ್ವಲ್ಪ ಕುಪಿತವಾಗುತ್ತಿತ್ತು. ಅಜಯನು, ' ಹಿರಣೆ ! ಏನಾಯಿತು ? ' ಎಂದು ಕೇಳಿದನು. ಹಿರಣ್ಮಯಿಯು ಶಿಶಿರದಿಂದ ತೋಯಿದ ಏಕಜ ಕಮಲದ ಹಾಗೆ ಪೂರ್ಣವಾಗಿ ತೆರೆದ ವಿಶಾಲವಾದ ಕಣ್ಣುಗಳಿಂದ ಹವಣು ದಣಿಯುವ ಹಾಗೆ ನೋಡಿ, ಅದರಿಂದಲೇ ಪೂರ್ಣ ಸುಖಿಯಾದವಳ ಹಾಗಾಗಿ, ಅಜಯ ! ನಿಜವಾಗಿಯೂ ನೀನು ಬಾದಷಹನ ಸಂಗಡ ಆಗ್ರಾಕ್ಕೆ ಹೋಗಲೊಪ್ಪಿರುವಿಯಾ ? ಎಂದು ಕೇಳಿದಳು.

ಅಜಯನು, ವಿಷಾದದಲ್ಲಿ ಮಧುರವಾಗಿಯೂ ನೈರಾಶ್ಯದಲ್ಲಿ ಕೋಮಲವಾಗಿಯೂ ಇದ್ದ ಆ ಹಿರಣ್ಮಯಿಯ ಕಂಠಸ್ವರವನ್ನು ಮತ್ತಾವಾಗಲೂ ಕೇಳಿರಲಿಲ್ಲ.

ಭಾವನಾಮಯವಾಗಿದ್ದರೂ ಪ್ರೇಮದಿಂದ ಸ್ನಿಗ್ಧವಾಗಿಯೂ ವಿಷಾದಪೂರ್ಣವಾಗಿದ್ದರೂ ಸುಧಾಮಯವಾಗಿಯೂ ಇದ್ದ ಕಟಾಕ್ಷವನ್ನು ಮತ್ತಾವಾಗಲೂ ನೋಡಿರಲಿಲ್ಲ. ಅವಳು ಕೇಳಿದುದಕ್ಕೆ ಪ್ರತ್ಯುತ್ತರವಾಗಿ, " ಹಿರಣ್ ! ನಿನಗೆ ಹೇಳಿದವರಾರು? " ಎಂದು ಕೇಳಿದನು.

ಹಿರಣ್ಮಯಿಯು ಅದೇ ಕಟಾಕ್ಷದಿಂದ ಅದೇ ಸ್ವರದಿಂದ, " ನಾವಿಬ್ಬರೂ ಈಗ್ಗೆ ಹತ್ತುವರ್ಷಕ್ಕೆ ಹಿಂದೆ ಒಂದು ದಿನ ಸಾಯಂಕಾಲ ನದಿಯತೀರದಲ್ಲೊಬ್ಬ ಹುಚ್ಚಿಯನ್ನು ನೋಡಿದ್ದೆವಲ್ಲವೆ? ನಾನು ಮಲಗಿ ನಿದ್ದೆಹೋಗುತ್ತಿದ್ದಾಗ ಅವಳು ಕೊಠಡಿಯೊಳಗೆ ಬಂದು, ನನ್ನ ಕಿವಿಯಲ್ಲಿ ' ನಿನ್ನನ್ನು ರಕ್ಷಿಸುವರಾರು ? ನೀನೆಲ್ಲಿರುವೆ ? ನಾಳೆ ಬೆಳಿಗ್ಗೆ ನಿನ್ನ ಅಜಯನು ಬಾದಷಹನೊಂದಿಗೆ ಉದಯಪುರವನ್ನು ಬಿಟ್ಟುಹೊರಟು ಹೋಗುವನು, ಪುನಃ ಬರುವುದಿಲ್ಲ. ನಿನ್ನನ್ನು ಈಗ ನೋಡಿಕೊಳ್ಳುವವರಾರು ?' ಎಂದು ಹೇಳಿದಳು. ನಾನು ಭಯದಿಂದ ಕೂಗಿಕೊಂಡೆನು. ಹುಚ್ಚಿಯು ನಗುತ್ತ ಕತ್ತಲೆಯಲ್ಲಿ ಎಲ್ಲಿಯೋ ಹೋಗಿಬಿಟ್ಟಳು " ಎಂದು ಹೇಳಿದಳು.

ಅಜಯನು ಸ್ವಲ್ಪ ನಡುಗಿದನು. ಹಿರಣ್ಮಯಿಯನ್ನು ಸಮಾಧಾನಪಡಿಸುವುದಕ್ಕೆ ಗೊತ್ತಾಗದೆ ಒಂದು ತಡವೆ ಕಣ್ಣುಮುಚ್ಚಿಕೊಂಡು ಬಳಿಕ ಕಣ್ದೆರೆದು ಬಾಲ್ಯದ ಸಖಿಯಾಗಿದ್ದ ಹಿರಣ್ಮಯಿಯನ್ನು ಪೂರ್ಣ ದೃಷ್ಟಿಯಿಂದ ನೋಡಿದನು. ಕಣ್ಣೀರು ತುಂಬಿ ದೃಷ್ಟಿಯು ಮಂದವಾಯಿತು. ಅವನು ಅಲ್ಲಿಂದ ಎದ್ದು ಮುಖವನ್ನು ತಿರುಗಿಸಿಕೊಂಡು, " ಕಮಲಾವತಿ ! ಹಿರಣ್ಮಯಿಯನ್ನು ಸಮಾಧಾನಪಡಿಸು. ಭಯವೇನೂ ಇಲ್ಲ. ನಾನು ಆಗ್ರಾದಿಂದ ಜಾಗ್ರತೆ ಹಿಂದಿರುಗಿ ಬರುವೆನು," ಎಂದನು.

ಹೀಗೆಂದು ಹೇಳಿ, ಅಜಯನು ಅಲ್ಲಿಂದ ಹೊರಟು ಹೋಗಿ ತನ್ನ ಶಯನಗೃಹಕ್ಕೆ ಬಂದು ತನ್ನೊಳುತಾನೇ " ಇದೇನು, ಬರೀ ಸ್ವಪ್ನವಲ್ಲವೆ ? ದೇವರೆ ಮನುಷ್ಯಜೀವನವೇ ಸ್ವಪ್ನಮಯವೇನು ? ಎಂದೆಂದುಕೊಂಡನು.

---

## ಐದನೆಯ ಪರಿಚ್ಛೇದ.

ದಿಲ್ಲಿಯಲ್ಲಿ ಯುವರಾಜ ಸೆಲಿಮನು ಪ್ರಮೋದದ ಉದ್ಯಾನದಲ್ಲೊಂದು ಏಕಾಂತವಾದ ಕೊಠಡಿಯಲ್ಲಿ ಅಬುಲಫಜಲನ ಜಾರಜ ಮಗನಾದ ಸಖಾಯತ ಅಲಿ ಎಂಬ ತನ್ನ ಸ್ನೇಹಿತನ ಜತೆಯಲ್ಲಿ ಕುಳಿತು ಸುರಾಪಾನ ಮಾಡುತ್ತಿದ್ದನು. ಸುರೆ

ಯನ್ನು ತುಂಬಿದ್ದ ಪಾತ್ರವನ್ನು ಬರೆದು ಮಾಡಿ, ' ಸಖಾಯತ! ಪುನಃ ಕಾಲವಿಳಂಬ ಮಾಡುವುದು ಸರಿಯಲ್ಲ. ತಂದೆಯ ಅವಿವೇಚನೆಯಿಂದ ದಿಲ್ಲಿಯ ಸಿಂಹಾಸನವು ಸ್ವಲ್ಪ ಕಾಲದಲ್ಲೇ ಹಿಂದೂಗಳ ಅಧಿಕಾರಕ್ಕೊಳಗಾಗುವುದು " ಎಂದನು.

ಸುರಾಪಾನವು ಸಖಾಯತನಿಗೆ ಹೆಚ್ಚು ಅಭ್ಯಾಸವಿರಲಿಲ್ಲ. ಇಂದು ಮಾಡಿದ ಪಾಪದಿಂದಲೇ ಅವನಿಗೆ ಅಮಲೇರಿದ್ದಿತು. ಅವನು, ' ಜಹಾಪಾನಾ! ಅದೇನು, ಸಂಭವವೆ? ದಿಲ್ಲಿಯ ಸಿಂಹಾಸನದಮೇಲೆ ಕಾಫರನೊಬ್ಬನು ಕೂಡುವುದನ್ನು ನೋಡಿ ಈ ಪ್ರಾಣವಿರುವಾಗ ಸಹಿಸಲಾದೀತೆ ? " ಎಂದನು.

ಸಲಿಮ :—ಅಸಂಭವವು ಹೇಗೆ? ಕಾಫರ ಮಾನಸಿಂಹನ ಸ್ಪರ್ಧೆಯು ಬಹಳ ಹೆಚ್ಚಿಹೋಗಿರುವುದು ಗೊತ್ತಾಗಲಿಲ್ಲವೆ? ಅವನು ತನ್ನ ತಂಗಿಯ ಮಗನಾದ ನಿರ್ಬೋಧ ಖುಸ್ರುವನ್ನು ಸಿಂಹಾಸನದ ಮೇಲೆ ಕುಳ್ಳಿರಿಸುವುದಕ್ಕೆ ಬಹಳ ತಂತ್ರದಿಂದ ಅನೇಕ ಒಳಸಂಚು ನಡಿಸುತ್ತಿದ್ದಾನೆ.

ಸಖಾಯತ:—ತಾವು ಅಪ್ಪಣೆಯನ್ನು ಕೊಟ್ಟರೆ ಆ ಪಾಪಾತ್ಮನ ಶಿರವನ್ನು ತಂದು ತಮ್ಮ ಪಾದದಲ್ಲೊಪ್ಪಿಸುವೆನು.

ಸಲಿಮ:—ಮತ್ತೂ ಕೇಳು ಏನಾಶ್ಚರ್ಯ! ಅಮೇದನಗರದ (ಅಹಮದ ನಗರದ) ಯುದ್ಧದಲ್ಲಿ ಏನೂ ಅರಿಯದ ಮೀಸೆಯೂ ಹುಟ್ಟದೆ ಇರುವ ಒಬ್ಬ ರಾಜಪೂತ ಹುಡುಗನನ್ನು ಸೇನಾಪತಿಯನ್ನಾಗಿ ಮಾಡಿ ಕಳುಹಿಸಿದ್ದಾರೆ! ನಾನು ಆ ಯುದ್ಧಕ್ಕೆ ಹೋಗಲು ಇಷ್ಟವುಳ್ಳವನಾಗಿದ್ದೆನು. ಆದರೆ ಬಾದಷಹರಿಗೆ ಅದು ಒಪ್ಪಿತವಾಗಲಿಲ್ಲ.

ಸಖಾಯತ:—ಅದೇನೋ ಒಳ್ಳೆಯದೇ ಆದಹಾಗಾಯಿತು. ಅಡವಿಯ ಮೃಗದೊಂದಿಗೆ ಯುದ್ಧಮಾಡುವುದಕ್ಕೂ ಮನುಷ್ಯರೊಂದಿಗೆ ಯುದ್ಧಮಾಡುವುದಕ್ಕೂ ಬಹಳ ಭೇದವುಂಟೆಂಬುದು ಕಾಫರ ಹುಡುಗನಿಗೆ ಗೊತ್ತಾಗುವುದು.

ಸಲಿಮ :—ನಿನ್ನ ಮಾತಿಗೆ ಅರ್ಥವಾಗಲಿಲ್ಲ. ಎರಡು ಬಟ್ಲು ಕುಡಿಯುತ್ತಲೇ ಉನ್ಮತ್ತನಾಗಿ ಹೋಗಿರುವ ಹಾಗಿದೆ.

ಸಖಾಯತ:—ತಾವು ಕೇಳಲಿಲ್ಲವೇನು! ಆ ಹುಡುಗನು ಪ್ರತಾಪಸಿಂಹನ ಮಗ. ಅವನೊಂದು ಕಾಡುಕೋಣದ ಸಂಗಡ ಹೆಣಗಾಡಿದುದನ್ನು ನೋಡಿ ಸಮ್ರಾಜರು ಅವನಮೇಲೆ ಪ್ರೀತಿಯುಳ್ಳವರಾಗಿದ್ದಾರೆ.

ಸಲಿಮ:—ಏನು ಅವಿವೇಚನೆ! ಪ್ರತಾಪಸಿಂಹನೊಂದಿಗೆ ಸಂಧಿಸ್ಥಾಪನೆ ಮಾಡಿಕೊಂಡುದುದು ಪ್ರಯೋಜನವೇನಾದ ಹಾಗಾಯಿತು? ಅದು ವಿವೇಕವಾದುದೆಂದು ಹೇಳುವವರಾರು? ಕಟ್ಟಕಡೆಗೆ ಗರ್ವವುಳ್ಳ ರಾಣಾನ ಹೇಳಿಕೆಗೆ ಒಪ್ಪಿಕೊಳ್ಳುವುದಾಗಿ

ದ್ದರೆ, ಇಷ್ಟು ಹಣದ ವೆಚ್ಚವೂ ಇಷ್ಟು ರಕ್ತಪಾತವೂ ಇಷ್ಟುಕಾಲ ಪರ್ವತಪ್ರದೇಶಗಳಲ್ಲಿ ಅನ್ನಾಹಾರವಿಲ್ಲದೆ ದೇಹಶ್ರಮವೂ ಏನಾದ ಹಾಗಾಯಿತು ? ಪ್ರಯೋಜನವೇನು ?

ಸಖಾಯತ:—ಅದಕ್ಕೆ ಸಂದೇಹವೇನು ? ತಾವು ಕಾಲವಿಳಂಬವಿಲ್ಲದೆ, ಪುನಃ ಮಿವಾರದ ದೇಶದ ಸಂಗಡ ಯುದ್ಧಾರಂಭವಾಗುವಹಾಗೆ ಮಾಡಬೇಕು. ನಾನು ಕೈಲಾದಮಟ್ಟಿಗೂ ತಮಗೆ ಸಹಾಯವನ್ನು ಮಾಡುವೆನು. ಅದಕ್ಕೆ ಸಲವಾಗಿ ಈ ಸೇವಕನು ಮತ್ತೇನೂ ಕೇಳುವುದಿಲ್ಲ. ಒಂದೇ ಪ್ರಾರ್ಥನೆ !

ಸ್ವಭಾವದಿಂದಲೇ ನೀಚನಾದವನು; ಅದರಮೇಲೆ ಸುರಾಪಾನದಿಂದ ವಿಕೃತವಾದ ಮೆದಳು. ಸಖಾಯತ ಅಲಿಖಾನನು ಸೆಲಿಮನ ಕಾಲಿನಲ್ಲಿ ಬಿದ್ದು ಎರಡು ಕಾಲುಗಳನ್ನೂ ಹಿಡಿದುಕೊಂಡು, " ಜಹಾಪಾನಾ ! ತಾವು ಮನಸ್ಸುಮಾಡಿದರೆ ಮಿವಾರದ ಯುದ್ಧದಲ್ಲಿ ಅನಾಯಸವಾಗಿ ಜಯವನ್ನು ಹೊಂದುವಿರಿ. ನಾನು ಪ್ರಾಣದಮೇಲೆ ಆಶೆಯನ್ನಿಡದೆ ನನ್ನ ಕೈಲಾದಮಟ್ಟಿಗೂ ಸಹಾಯವನ್ನು ಮಾಡುವೆನು. ತಾವು ಅದಕ್ಕೆ ಪ್ರತೀಕಾರವಾಗಿ ಒಂದು ಉಪಕಾರವನ್ನು ಮಾಡಬೇಕು. ಅಪ್ಪಣೆಯಾದರೆ ಅರಿಕೆಮಾಡಿಕೊಳ್ಳುವೆನು " ಎಂದನು.

ಸೆಲಿಮ :—ವಿಚಾರವೇನೋ ? ಹೇಳಕೂಡದೇಕೆ ? ಅದಕ್ಕೆ ಇಷ್ಟು ಪೀಠಿಕೆಯ ಆಡಂಬರವೇಕೆ ?

ಸಖಾಯತ:—ಈಗ ಪರಾಮರಿಕೆ ಮಾಡೋಣಾಗಲಿ ! ತಮ್ಮ ಭೃತ್ಯನಿಗೆ ಮೊದಲಿನ ಆರೋಗ್ಯವಿಲ್ಲ ! ಆ ಬಲವಿಲ್ಲ ! ಆ ಸ್ಫೂರ್ತಿಯಿಲ್ಲ ! ಶರೀರವು ದಿನೇದಿನೇ ಕೃಶವಾಗುತ್ತ ಬಂದಿದೆ ! ಜೀವನವೇ ನಿರುತ್ಸಾಹವಾಗಿದೆ ! ಕಾರಣವನ್ನು ಕೇಳೋಣಾಗುತ್ತದೋ ? ಚಿಂತೆ ! ಅಗಾದವಾದ ಚಿಂತೆ !

ಸೆಲಿಮ :—ಯಾತರ ಚಿಂತೆ ?

ಸಖಾಯತ:—ಯಾತರ ಚಿಂತೆಯೆ ? ಹಾ ! ಪ್ರೇಮದ ಚಿಂತೆ ! ಆ ಶಶಿಮುಖಿ ಸುಂದರಿಯ ಚಿಂತೆ ! ಹಾಗಾದರೆ, ಹೇಳುತ್ತೇನೆ, ಕೇಳೋಣಾಗಲಿ, ನನ್ನ ಹೃದಯವನ್ನು ಬಿಚ್ಚಿ ಹೇಳುವೆನು. ಈಗ್ಗೆ ಎರಡು ತಿಂಗಳಾಯಿತು. ಸಮ್ರಾಜನ ಸಂಗಡ ಉದಯಪುರಕ್ಕೆ ಹೋಗಿದ್ದೆನು. ಬೇಟೆಯಿಂದ ರಾತ್ರಿ ಹಿಂದಿರುಗಿ ಬಂದೆವು. ರಾಜಪ್ರಾಸಾದದ ಕೆಳಗೆ ಬಂದಕೂಡಲೇ-ಹಾ ! ಅದನ್ನು ಹೇಗೆ ಹೇಳಲಿ ! ಆ ಸುಂದರಿಯು ಮಹಡಿಯ ಮೇಲಿಂದ ನನ್ನ ಕುತ್ತಿಗೆಗೆ ಹೂವಿನ ಹಾರವನ್ನು ಹಾಕಿದಳು ! ಆಗ ನನ್ನ ಹೃದಯದಲ್ಲೊಂದು ತಾಪವು ಹುಟ್ಟಿತು. ಆ ತಾಪವು ಎರಡು ತಿಂಗಳಿಂದ ನನ್ನ ಮೈಯನ್ನು ಸುಡುತ್ತಿದೆ ! ಅಂಥಾ ಸುಂದರಿಯು ಈ ಪೃಥ್ವಿಯಲ್ಲಿರುವುದು ನನ್ನ

ಸ್ವಪ್ನದಲ್ಲಿಯೂ ನೋಡಿಲ್ಲ ! ನಾನು ಅತ್ಯಂತ ಅಧಮ–ಅಪದಾರ್ಥ–ಹಾಗಿಲ್ಲದಿದ್ದರೆ, ಅಮೂಲ್ಯವಾದ ರತ್ನವನ್ನು ಇಷ್ಟು ದಿನಕ್ಕೆ ಹೊಂದುತ್ತಿದ್ದೆನು, ಹಾಗೆ ಹೊಂದಲಸಮರ್ಥನಾಗಿದ್ದರೆ ಅದಕ್ಕೆ ಸಲವಾಗಿ ಪ್ರಾಣವನ್ನು ಬಿಡುತ್ತಿದ್ದೆನು ! ಈ ಎರಡು ತಿಂಗಳಿಂದ ಯಾವ ಕೆಲಸವನ್ನೂ ಮಾಡಲಾರದವನಾಗಿದ್ದೇನೆ. ನನ್ನ ಬಾಳನ್ನು ಸುಡುಬೇಕು ! ನನ್ನ ಮನುಷ್ಯ ಜನ್ಮವು ವ್ಯರ್ಥ !

ಈ ತೆರ ಹೇಳುತ್ತಿದ್ದ ಹಾಗೆ ಸುರಾಪಾನದಿಂದ ಪ್ರಮತ್ತನಾಗಿದ್ದ ಸಖಾಯತನು ಸೆಲಿಮನ ಪಾದವನ್ನು ಹಿಡಿದಿದ್ದ ಹಾಗೆ ಅಳುವುದಕ್ಕೆ ತೊಡಗಿದನು. ಸೆಲಿಮನು ಘಟ್ಟಿಯಾಗಿ ನಕ್ಕು, “ಆ ಸುಂದರಿ ಯಾರು ?” ಎಂದು ಕೇಳಿದನು.

ಸಖಾಯತ :—ಆಹಾ ! ಏನೆಂದು ಹೇಳಲಿ ! ತಾವು ಪ್ರತಾಪಸಿಂಹನೊಂದಿಗೆ ಯುದ್ಧಕ್ಕೆ ಪ್ರಾರಂಭ ಮಾಡಿದರೆ ಸಮಸ್ತವೂ ವ್ಯಕ್ತವಾಗಬಹುದು. ನಾನು ಆ ಶಶಿಮುಖಿಯನ್ನು ಒಂದು ತಡವೆ ಮಾತ್ರ ನೋಡಿದುದರಿಂದ ಗೊತ್ತಾಗಿ ಹೋಯಿತು. ಯುವರಾಜ ! ತಾವು ಯುದ್ಧವನ್ನು ಮಾಡಿದರೆ ನನ್ನ ಪ್ರಾಣದ ಮೇಲಣ ಆಶೆಯನ್ನು ತೊರೆದು ಸಹಾಯವನ್ನು ಮಾಡುವೆನು. ತಾವು ಜಯವನ್ನು ಹೊಂದುವುದಕ್ಕೆ ಸಂದೇಹವಿಲ್ಲ. ಬಳಿಕ ತಮ್ಮಲ್ಲಿ ಬಹುಮಾನವನ್ನು ಬೇಡುವೆನು. ಹಣವನ್ನು ಬೇಡುವುದಿಲ್ಲ. ಆ ಸುಂದರಿಯನ್ನು ಪಾಣಿಗ್ರಹಣ ಮಾಡಿಸಬೇಕು. ಅಪ್ಪಣೆಯಾದರೆ ಮತ್ತೊಂದು ಬಟ್ಲು ಸುರೆಯನ್ನು ತೆಗೆದುಕೊಳ್ಳುತ್ತೇನೆ.

ಪ್ರದೋಷದ ಮಸಕಾದ ಮುಂಗತ್ತಲಲ್ಲಿ ಹೊರಗೆ ಗವಾಕ್ಷದ ಪಾರ್ಶ್ವದಲ್ಲಿ ಹರಕು ಬಟ್ಟೆಯನ್ನುಟ್ಟು ತಲೆ ಬಾಚಿಕೊಳ್ಳದೆ ಮೈಗೆಲ್ಲಾ ಬೂದಿಯನ್ನು ಬಡಿದುಕೊಂಡಿದ್ದ ಹುಚ್ಚಿಯೊಬ್ಬಳು ಅವರಿಬ್ಬರು ಮಾತಾಡುತ್ತಿದ್ದುದನ್ನು ಕಿವಿಕೊಟ್ಟು ಕೇಳುತ್ತಿದ್ದಳು. ಸೆಲಿಮನು, “ಸಖಾಯತ ! ನೀನು ಅತಿ ಮೂರ್ಖ, ದುರ್ಬಲ ಹೃದಯನು, ನೀಚ–ಹಾಗಿಲ್ಲದಿದ್ದರೆ ಒಬ್ಬ ಕಾಫರ ಹೆಂಗಸಿಗೆ ಸಲವಾಗಿ ಒಂದು ದೊಡ್ಡ ಯುದ್ಧವನ್ನು ಮಾಡುವುದಕ್ಕೆ ಪ್ರವೃತ್ತನಾಗಲು ಪ್ರೇರೇಗಿಸುತ್ತಿದ್ದೆಯಾ ?” ಎಂದನು. ಸಖಾಯತನು ಬಟ್ಲನ್ನು ನೆಲದಮೇಲಿಟ್ಟು ಅಳುತಳುತ, “ಯುವರಾಜ ! ಏನು ಹೇಳೋಣಾಯಿತು ? ಸಾಮಾನ್ಯ ಕಾಫರ ಹೆಂಗಸೆ ? ಅಯ್ಯೋ, ನನ್ನ ಅದೃಷ್ಟವೆ ! ಆ ಸ್ವರ್ಗದ ರಮಣಿಯನ್ನು, ಆ ದೇವಲೋಕದ ದೇವ ಕನ್ಯೆಯನ್ನು, ರಕ್ಕೆಯಿಲ್ಲದ ಗಂಧರ್ವ ಕನ್ನಿಕೆಯನ್ನು ಸಾಮಾನ್ಯ ಕಾಫರ ಹೆಂಗಸೆಂದು ಹೇಳೋಣಾಯಿತಲ್ಲವೆ ? ಈ ಎರಡು ತಿಂಗಳಕಾಲ ಮನಸ್ಸಿನ ತಾಪದಿಂದ ಕಂಗೆಟ್ಟು ಕಡೆಗೆ ನಿಷ್ಕಪಟವಾಗಿ ತಮಗೆ ಹೇಳಿದುದಕ್ಕೆ ಅನುತಾಪ ಪಡದೆ ಸಾಮಾನ್ಯ–ಕಾಫರ ಹೆಂಗಸು–ಎಂದು ಹೇಳೋ

ಣಾಯಿತೆ ? ಹಾಗಾದರೆ ಈ ಗುಲಾಮನಿಗೆ ಬೀಳ್ಕೊಟ್ಟು ಕಳುಹಿಬಿಡೋಣಾಗಲಿ. ಈ ಪ್ರಾಣದಿಂದ ಬದುಕಿರುವುದು ವ್ಯರ್ಥ ! ಹೊರಟೆ. ತಮ್ಮ ಸುರೆಯ ಪಾತ್ರ, ತಮ್ಮ ಬಂಗಾರದ ಬಟ್ಟಲು ತಮ್ಮಲ್ಲಿಯೇ ಇರಲಿ ! ಇಂದಿನಿಂದ ನಾನೊಬ್ಬನೇ ಒಬ್ಬೊಂಟಿಗ ನಾಗಿ ಕುಳಿತು ನನ್ನ ಆಶೆಯು ಇಂಗುವ ಹಾಗೆ ಪಾನಮಾಡಿಕೊಳ್ಳುವೆನು ! ತಮ್ಮ ಗುಲಾಮನು ತಮ್ಮನ್ನು ನೋಡುವುದು ಇಂದಿಗೆ ಕೊನೆಯಾಯಿತು ! ಎಂದು ಹೇಳಿದನು. ಸುರಾಪಾನದಿಂದ ಮತ್ತನಾಗಿ ನಿರಾಶಯನಾದ ಸಖಾಯತನು ಕಳವಳಗೊಂಡು ಅಲ್ಲಿಂದೆದ್ದು ಬೇಗಬೇಗನೆ ಹೊರಟುಹೋದನು. ಹೋಗುತ್ತ ಕಿಟಿಕೆಯಲ್ಲಿ ಕಾಣಿಸುತಿದ್ದ ಉನ್ಮಾದಿನಿಯ ಮೇಲೆ ಅವನ ದೃಷ್ಟಿಯು ಬಿದ್ದು ಕೂಡಲೇ ಭಯದಿಂದ ಚೀರಿಟ್ಟು ಕೂಗುತ್ತ, "ಇದೇನು, ಯುವರಾಜ ! ಇಲ್ಲಿ ನೋಡೋಣಾಗಲಿ ! ಇದೋ ನೋ, ಪಿಶಾಚಿಯೋ, ಪ್ರೇತವೋ ನಿಂತಿದೆ !" ಎಂದನು.

ಹುಚ್ಚಿಯು ಮೆಲ್ಲಮೆಲ್ಲನೆ ಮುಂದರಿದು ಬರುತಿದ್ದುದನ್ನು ಕಂಡು ಸಖಾಯತನು ಮತ್ತಷ್ಟು ಭಯದಿಂದ ಕುಂದಿ ಸೆಲಿಮನ ಬಳಿಗೆ ಓಡಿಬಂದು, "ಯುವರಾಜ ! ನನ್ನನ್ನು ಬದುಕಿಸಿಕೊಳ್ಳಬೇಕು. ನನ್ನನ್ನು ಹಿಡಿದುಕೊಳ್ಳುತ್ತಿದೆ !" ಎಂದನು.

ಸೆಲಿಮ :—ಭಯವಿಲ್ಲ–ಮುಠ್ಠಾಳ ! ಅದು ಪಿಶಾಚಿಯಲ್ಲ–ಪ್ರೇತವೂ ಅಲ್ಲ.

ಉನ್ಮಾದಿನೀ :—ಪ್ರೇತವೂ ಅಲ್ಲ. ಪಿಶಾಚಿಯೂ ಅಲ್ಲ. ಹುಚ್ಚಿ, ಪ್ರೇತವು ಕತ್ತಲೆಯಲ್ಲಿ ಮರೆಯಲ್ಲಿ ನಿಂತು ಪ್ರೇಮದ ಮಾತುಗಳನ್ನು ಕೇಳುವುದೆ ? ಪ್ರೇತವು ಸಮ್ರಾಜನ ಉದ್ಯಾನದಲ್ಲೊಂದೇ ಬಂದು ತಿರುಗಾಡಬಲ್ಲದೆ ! ಪ್ರೇತವು ಇಂಥಾ ದೇವಕನ್ನಿಕೆಯ ಪಟವನ್ನು ಉಡಿಯಲ್ಲಿಟ್ಟುಕೊಂಡು ದೇಶದೇಶವನ್ನೆಲ್ಲಾ ಅಲಿಯಬಲ್ಲದೆ ? ಇದನ್ನು ನೋಡು, ಮೂರ್ಖ ! ಪ್ರೇತವು ಸುಂದರಿಯ ಚಿತ್ರವನ್ನು ಇಷ್ಟು ಸುಂದರವಾಗಿ ಚಿತ್ರಿಸುವುದೆ ? ಈ ಚಿತ್ರವು ಯಾರದು ? ನೋಡು.

ಹೀಗೆಂದು ಹೇಳಿ ಉನ್ಮಾದಿನಿಯು ತನ್ನುಡಿಯಿಂದ ಒಂದು ಚಿತ್ರಪಟವನ್ನು ತೆಗೆದು ಸೆಲಿಮನೆದುರಿಗೆ ಇಟ್ಟಳು. ಸೆಲಿಮನು ಚಿತ್ರಪಟವನ್ನು ಕೈಯಲ್ಲಿ ತೆಗೆದುಕೊಂಡು ವಿಸ್ಮಿತ ನೇತ್ರಗಳಿಂದ ನೋಡಿದನು. ಅದೊಂದು ಅಪೂರ್ವ ಸೌಂದರ್ಯವಾದ ಕಿಶೋರಿಯ ಪ್ರತಿಮೂರ್ತಿಯಾಗಿದ್ದಿತು ! ಸಖಾಯತನು ಅದನ್ನು ಸೆಲಿಮನ ಕೈಯಿಂದ ಕಿತ್ತುಕೊಂಡು ನೋಡಿ, "ಇದೇನು ! ಯುವರಾಜ ! ಇದೇ ಅವಳು ! ಯಾವ ರೂಪದ ಅಗ್ನಿಯಲ್ಲಿ ನನ್ನ ಹೃದಯವು ಸುಡುತ್ತಿದೆಯೋ ಇದು ಅದೇ ರೂಪ ರಾಶಿ ! ಅದೇ ಅಧರ ! ಅದೇ ಕಣ್ಣುಗಳು ! ಪ್ರೇತನಿ ! ಉನ್ಮಾದಿನಿ ! ನಿನಗೆ ಈ

ಮೂರ್ತಿಯು ಎಲ್ಲಿ ಸಿಕ್ಕಿತು ?" ಎಂದನು. ಯುವರಾಜನು ಗಂಭೀರಸ್ವರದಿಂದ, "ನನಗೆ ಸತ್ಯವಾಗಿ ಹೇಳು. ಇದು ಯಾರ ಪಟ"? ಎಂದನು.

ಉನ್ಮಾದಿನೀ :—ಅದೇ ಪಿಶಾಚಿಯ ಪಟ. ಆ ಪಿಶಾಚಿ; ರಾಕ್ಷಸಿ, ತಾರಾ ಬಾಯಿಯ ಮಗಳು ಹಿರಣ್ಮಯಿಯ ಪಟ! ಆ ಪಾಷಾಣಿಯ ಪಾರ್ಶ್ವದಲ್ಲಿ ಚಿತ್ರಿತ ವಾಗಿರುವ ಯುವಕನು ಪ್ರತಾಪಸಿಂಹನ ಮಗ ಅಜಯಸಿಂಹ. ಅವಳು ಅವನಿಗೆ ವರ ಮಾಲೆಯನ್ನು ಹಾಕುವಳು! ಹಾ! ಯೋಚಿಸಿಕೊಂಡರೆ ಎದೆಯು ಸೀಳಿಹೋಗುತ್ತದೆ! ಅವಳೇನೋ ಅವನಿಗೆ ಮಾಲೆಯನ್ನು ಹಾಕಬೇಕೆಂತಲೇ ಇದ್ದಾಳೆ. ಅವಳ ಆಶೆಯು ಕೈಗೂಡುವುದೆ ?

ಸೆಲಿಮ :—ಎಂದಿಗೂ ಕೈಗೂಡದು. ನೀನು ಆ ವಿಷಯದಲ್ಲಿ ನಿಶ್ಚಿಂತೆಯಾಗಿರು. ಈ ಚಿತ್ರಪಟದಲ್ಲಿ ಅಂಕಿತವಾಗಿರುವ ಹಾಗಿದ್ದರೆ ಭುವನಮೋಹಿನಿಯಾದ ಆ ಸುಂದರಿಯು ಕ್ಷತ್ರಿಯ ಬಾಲಕನನ್ನು ಎಂದಿಗೂ ವರಿಸಲಾರಳು. ಸುಂದರಿಯು ಒಂದು ದಿನ ಸೆಲಿಮನ ತೊಡೆಯನ್ನಲಂಕರಿಸುವಳು.

ಉನ್ಮಾದಿನೀ :—ನೋಡಬೇಕು. ಅವಳ ಇಷ್ಟವು ಕೈಗೂಡುವುದೋ, ನಿನ್ನ ಪ್ರತಿಜ್ಞೆಯು ನೆರವೇರುವುದೋ, ಮುಂದೆ ಗೊತ್ತಾಗುತ್ತದೆ. ಪುನಃ ಬಂದು ನೋಡುವೆನು.

ಹೀಗೆಂದು ಹೇಳಿ ಉನ್ಮಾದಿನಿಯು ಹೊರಟುಹೋದಳು. ಸೆಲಿಮನು ಪರಿಚಾರಕನೊಬ್ಬನನ್ನು ಕರೆದು, "ನೀನು ಈ ಹುಚ್ಚಿಯ ಬೆನ್ನಟ್ಟಿ ಹೋಗು. ಅವಳು ಹೋಗುವ ಸ್ಥಳವನ್ನೂ ಅವಳಿರುವ ಸ್ಥಳವನ್ನೂ ಗೊತ್ತುಮಾಡಿಕೊಳ್ಳಬೇಕು. ನಾಳೆ ನೀನು ಅವಳನ್ನು ಇದೇ ಹೊತ್ತಿಗೆ ಇಲ್ಲಿಗೆ ಕರೆತರಬೇಕು. ಬಹಳ ಜಾಗರೂಕನಾಗಿರು" ಎಂದು ಹೇಳಿ ಬಳಿಕ ಸಖಾಯತನನ್ನು ಕುರಿತು, "ಸಖಾಯತ! ಮತ್ತೊಂದು ಬಟ್ಟಲು ಸುರೆಯನ್ನು ತುಂಬಿಕೊಡು" ಎಂದನು.

ಉನ್ಮಾದಿನಿಯು ಮೆಲ್ಲಮೆಲ್ಲಗೆ ಹಾಡುತ್ತ ದಿಲ್ಲಿಗೆ ದಕ್ಷಿಣಪಾರ್ಶ್ವ ಹರಿಯುವ ಯಮುನಾ ನದಿಯ ತೀರದಲ್ಲಿರುವ ವಿಜನವಾದ ಕಾನನದೊಳಗೆ ಪ್ರವೇಶಮಾಡಿದಳು. ಆ ಕಾನನದಲ್ಲಿ ನೂರು ಮಂದಿ ರಮಣಿಯರು ಗುಂಪಾಗಿ ಒಟ್ಟಿಗೆ ಕುಳಿತಿದ್ದರು. ಅವರೆಲ್ಲರೂ ಸುಂದರಿಯರಾಗಿಯೂ ಯುವತಿಯರಾಗಿಯೂ ಇದ್ದರು. ಉನ್ಮಾದಿನಿಯನ್ನು ಕಂಡ ಕೂಡಲೇ ಆ ನೂರು ಮಂದಿ ಹೆಂಗಸರೂ ತಟ್ಟನೆದ್ದು ನಿಂತುಕೊಂಡರು.

ಜನಶೂನ್ಯವಾಗಿದ್ದ ಆ ಕಾನನದಲ್ಲಿ ಬಹು ಮೂಲ್ಯವುಳ್ಳ ರತ್ನಗಳಿಂದ ಶೋಭಿತವಾದ ವಿಚಿತ್ರ ಸಿಂಹಾಸನವೊಂದು ಇಡಲ್ಪಟ್ಟಿದ್ದಿತು. ಅದಕ್ಕೆ ಮೇಲುಗಡೆ ಮರದ

ಕೊಂಬೆಗಳಿಗೆ ಚಂದ್ರಾತಪಗಳು ಕಟ್ಟಲ್ಪಟ್ಟಿದ್ದವು. ರಮಣಿಯರು ಉನ್ಮಾದಿನಿಯ ವೇಷಧಾರಿಯಾಗಿದ್ದ ಯುವತಿಯ ಲಾವಣ್ಯಮಯವಾಗಿದ್ದ ದೇಹಕ್ಕೆ ಬೇರೆ ಉಡುಪನ್ನುಡಿಸಿ ಬಹು ಬೆಲೆಯುಳ್ಳ ಅಲಂಕಾರಗಳನ್ನು ತೊಡಿಸಿ ಸಿಂಗರಿಸಿದರು. ಇಬ್ಬರು ಸುವರ್ಣ ನಿರ್ಮಿತವಾದ ಚಾಮರಗಳನ್ನು ಹಿಡಿದು ಬೀಸಿದರು. ಉನ್ಮಾದಿನಿಯು ಸಿಂಹಾಸನದಲ್ಲಿ ಸ್ವಲ್ಪಹೊತ್ತು ಕುಳಿತು ವಿಶ್ರಮಿಸಿಕೊಂಡು, ಬಳಿಕ ಪಾರ್ಶ್ವದಲ್ಲಿದ್ದ ಹೆಂಗಸನ್ನು ಕುರಿತು, "ಸಖಿ! ಆ ರಾಕ್ಷಸಿಯ ಮಗಳ ಭುವನಮೋಹನ ರೂಪದಲ್ಲಿ ಸುರಾಪಾನದಿಂದ ಪ್ರಮತ್ತನಾಗಿದ್ದ ಸೆಲಿಮನ ಹೃದಯವು ಉರಿಯುವ ಹಾಗೆ ಮಾಡಿ ಬಂದೆನು. ನೀವು ಇಂದು ಪುನಃ ಈ ಉಡುಪನ್ನುಡಿಸಿದರೇಕೆ? ನನ್ನ ಹೃದಯದ ಜ್ವಾಲೆಯು ಆರಿಸಿಹೋಗುವವರೆಗೂ ಈ ಉಡುಪು ಬೇಕಾಗಿರುವುದಿಲ್ಲ. ಪುನಃ ನನಗೆ ಆವಶ್ಯಕವಾಗಿರುವ ನನ್ನ ಮೊದಲಿನ ಉನ್ಮಾದಿನಿಯ ವೇಷವೇ ನನಗಿರಲಿ" ಎಂದಳು.

## ಆರನೆಯ ಪರಿಚ್ಛೇದ.

ಆಗ್ರಾದಲ್ಲಿ ಹೊಸ ದುರ್ಗದಲ್ಲಿ ಮಂತ್ರಾಲೋಚನೆಯ ಭವನದಲ್ಲಿ ಭಾರತ ಸಮ್ರಾಜನೆದುರಿಗೆ ಅಜಯಸಿಂಹನೊಬ್ಬನೇ ಕುಳಿತಿದ್ದಾನೆ. ಸಮ್ರಾಜನು ಸ್ವಲ್ಪ ಹೊತ್ತು ಚಿಂತಿತನಾಗಿದ್ದು ಬಳಿಕ, "ಅದು ಹೇಗಾದರೂ ಆಗಲಿ, ಅಜಯ! ಈ ಸುದ್ದಿಯು ನಿಜವೆಂದು ನಂಬುವುದಕ್ಕಾದೀತೆ? ದಕ್ಷಿಣದಲ್ಲಿ ಅಷ್ಟು ಸೈನ್ಯವಿದ್ದು ನೂರಾರು ನಿಪುಣರಾದ ಯೋದ್ಧರಿದ್ದುಕೊಂಡು ಕಡೆಗೆ ಯುದ್ಧಭಾರವನ್ನೆಲ್ಲಾ ಒಬ್ಬ ಅಂತಃಪುರ ನಿವಾಸಿನಿಯಾದ ಹೆಂಗಸಿನಮೇಲೆ ವಹಿಸಿರುವ ಸಂಭವವುಂಟೆ?" ಎಂದನು.

ಅಜಯ:—ತಾವು ಅದು ಅಸಂಭವವೆಂದೂ ಸ್ವಭಾವಕ್ಕೆ ವಿರುದ್ಧವೆಂದೂ ತಿಳಿದುದು ನೋಡಿದರೆ ಆಶ್ಚರ್ಯವಾಗುತ್ತದೆ. ತಾವು ಭಾರತ ಲಲನೆಯರ ಅತ್ಯಂತ ದೇಶ ವಾತ್ಸಲ್ಯವನ್ನೂ ಸಮಸಲ್ಲದ ವೀರತ್ವವನ್ನೂ ತಮ್ಮ ಕಣ್ಣಾರೆ ನೋಡಿಲ್ಲವೆ? ರಾಜಸ್ಥಾನದಲ್ಲಿ ಪ್ರತಿಯೊಂದು ಅಂತಃಪುರದಲ್ಲೂ ಹಿಂದೂ ರಮಣಿಯರ ಮುಖದಲ್ಲಿ ವೀರಜನನಿಯಾದ ಭಾರತಮಾತೆಯ ಜೀವದಿಂದಿರುವ ಪ್ರತಿ ಮೂರ್ತಿಯು ಅಂಕಿತವಾಗಿರುವುದನ್ನು ನೋಡಿಲ್ಲವೆ? ಹಿಂದೂ ನಾರಿಯರ ವಿಸ್ಮಯಕರವಾದ ವೀರತ್ವವು ಭಾರತವರ್ಷದ ಚರಿತ್ರೆಗಳಲ್ಲಿ ಬಂಗಾರದ ಅಕ್ಷರದಲ್ಲಿ ಬರೆದಿರುವುದನ್ನು ನೋಡಿಲ್ಲವೆ?

ಅಕಬರ:—(ನಕ್ಕು)-ಆದರೆ ಈ ಯುದ್ಧದ ಭಾರವನ್ನು ವಹಿಸಿರುವವಳು ಮುಸಲಮಾನಿ ರಮಣಿಯೆಂದು ತಿಳಿಯಬರುತ್ತದೆ. ಹಿಂದೂ ರಮಣಿಯಲ್ಲ!

ಅಜಯ:—ಯವನ ರಮಣಿಯೇ ಆಕುದು. ಆದರೂ ಅವಳು ಭಾರತವರ್ಷದ ರಮಣಿ. ಚಂದನದ ಕಾನನದಲ್ಲಿ ದೇವದಾರು ಮರವು ಹುಟ್ಟಿದ್ದರೂ ಅದು ಚಂದನದ ವಾಸನೆಯನ್ನು ಳ್ಳುದುದಾಗುವುದು.

ಅಕಬರ:—ಹಾಗಾದರೆ, ನಿನ್ನ ಅಭಿಪ್ರಾಯದಲ್ಲಿ ಯವನ ರಮಣಿಯರೂ ರೂಪದಲ್ಲಿಯೂ ಗುಣಗಳಲ್ಲಿಯೂ ಹಿಂದೂನಾರಿಯರಿಗೆ ಸಮನೆಂದು ತಿಳಿದಿರುವಿಯಾ? ಇದನ್ನು ನಿನ್ನ ಬಾಯಿಯಿಂದ ಕೇಳುವುದಕ್ಕೆ ಸಲವಾಗಿಯೇ ಈ ಪ್ರಸ್ತಾಪವನೆತ್ತಿದೆನು. ಹಿಂದೂಗಳೂ ಮುಸಲಮಾನರೂ ಎಷ್ಟು ದಿನದ ತನಕ ಹೆಣ್ಣು ಕೊಟ್ಟು ತೆಗೆದುಕೊಂಡು ಸಂಬಂಧಗಳಿಂದ ಕಲಬೆರಿಯುವುದಿಲ್ಲವೋ ಅದುವರೆಗೂ ಎರಡುಜಾತಿಯೂ ಏಕೀಭೂತವಾಗಲಾರದೆಂದು ಭಾರತ ಮಂಗಳಾಕಾಂಕ್ಷಿಯಾದವನು ಒಪ್ಪದಿರನು. ಹಿಂದೂ ಮುಸಲಮಾನರು ಈ ತೆರದಲ್ಲಿ ಕಲಬೆರಿಯದಿದ್ದರೆ ಭಾರತರಾಜ್ಯದ ಭಿತ್ತಿಯು ಎಂದಿಗೂ ದೃಢವಾಗಿ ಸ್ಥಾಪಿತವಾಗುವುದಿಲ್ಲ.

ಅಜಯ:—ಆದರೆ ಎಷ್ಟು ದಿನದವರೆಗೆ ಭಾರತ ಸಾಮ್ರಾಜ್ಯದ ಸಿಂಹಾಸನದಲ್ಲಿ ಯವನ ಸಮ್ರಾಜನು ಮಾತ್ರ ಕುಳಿತು ವಿಸ್ತಾರವಾದ ಸಾಮ್ರಾಜ್ಯವನ್ನು ಏಕಾಧಿಪತ್ಯದಿಂದಾಳುತ್ತಿರುವನೋ ಅದುವರೆಗೂ ಮುಸಲಮಾನರನ್ನು ಪರದ್ರವ್ಯಾಪಹಾರಿಗಳೆಂದು ಹಿಂದೂಗಳು ಮೂದಲಿಸಿ ಹಂಗಿಸದಿರರು.

ಅಕಬರ:—ಭಾರತಸಾಮ್ರಾಜ್ಯದಲ್ಲಿ ಮುಸಲಮಾನರು ಮಾತ್ರವೇ ಏಕಾಧಿಪತ್ಯವನ್ನು ಮಾಡಬೇಕೆಂಬುದು ನನ್ನ ಇಷ್ಟವಲ್ಲ. ಹಾಗೆ ಯೋಚಿಸಿಕೊಂಡು ನಮ್ಮ ತಂದೆಯು ಅನುಮತಿಯ ಪ್ರಕಾರ ಮೊಗಲ ಸಮ್ರಾಜನ ಮಗಳನ್ನು ಕ್ಷತ್ರಿಯ ವೀರನಾದ ಅಜಯಸಿಂಹನಿಗೆ ಕೊಟ್ಟು ಮದುವೆಮಾಡಿ ಹಿಂದೂಗಳಿಗೂ ಮುಸಲಮಾನರಿಗೂ ಪಕ್ಷಪಾತಮಾಡತಕ್ಕವನಲ್ಲವೆಂದು ತೋರಿಸಬೇಕೆಂದಿದ್ದೇನೆ.

ಅಜಯ:—ಭಾರತೇಶ್ವರ! ತಂದೆಯು ಸಮ್ಮತಿಯನ್ನು ಕೊಟ್ಟಿದ್ದರೂ ತಮ್ಮ ಅಭಿಲಾಷೆಯು ಪೂರ್ಣವಾಗುವ ಸಂಭವವಿಲ್ಲ.

ಅಕಬರ:—ನೀನು ಪಿತನ್ಮಾಯಿಯನ್ನು ಮದುವೆಯಾಗುವುದಕ್ಕೆ ರಾಣಾ ಪ್ರತಾಪಸಿಂಹನೊಪ್ಪದಿದ್ದರೆ?

ಭಾರತ ಸಮ್ರಾಜನು ನೋಡುತ್ತಿದ್ದ ಹಾಗೆ, ಅಜಯಸಿಂಹನ ಮುಖವು ಕೆಂಪೇರಿ ಪುನಃ ಬಿಳಿದಾದ ಬಣ್ಣವನ್ನು ತಳೆದು, ಮೈಯೆಲ್ಲಾ ಕಂಟಕಿತವಾದ ಹಾಗಾಗಿ ನಡುಗಿತು. ಅಜಯನು ಅಕಬರನನ್ನು ವಿದ್ಯುದ್ದೃಷ್ಟಿಯಿಂದ ನೋಡಿ ಬಳಿಕ ಎರಡು ಕೈಗಳಿಂದಲೂ ಮುಖವನ್ನು ಮುಚ್ಚಿಕೊಂಡನು. ಅಕಬರಷಹನ ಗಂಭೀರವಾದ ಮುಖಮಂಡಲವು

ಹೆಚ್ಚು ಗಾಂಭೀರ್ಯವನ್ನು ತಾಳಿತು. ಆವನು “ ಅಜಯ ! ನಾನು ನಿನ್ನನ್ನು ನನ್ನ ಮಗನ ಹಾಗೆ ಭಾವಿಸುತ್ತಿರುವುದನ್ನು ನೀನು ಮರೆತ ಹಾಗಿದೆ. ನಾನು ಕೇವಲ ಸ್ವಾರ್ಥಪರನಾಗಿ ನನ್ನ ಅಭಿಸಂಧಿಯ ಸಾಧನಕ್ಕೋಸ್ಕರ ನಿನ್ನ ಮುಂದಣ ಸುಖವನ್ನು ಹಾಳು ಮಾಡತಕ್ಕವನೆಂದು ತಿಳಿಯಬೇಡ. ನಾನು ನಿನ್ನಹಾಗೆ ಒಂದು ಕಾಲದಲ್ಲಿ ಯೌವನ ಪುರುಷನಾಗಿದ್ದೆನು. ಅಕಬರನ ಪಾಷಾಣಮಯವಾದ ಹೃದಯದಲ್ಲೂ ಪ್ರೇಮವು ದುರ್ದಮನೀಯವಾಗಿ ಹರಿಯುತ್ತಿತ್ತು. ನಿನ್ನ ಮನಸ್ಸಿನ ಅಭಿಪ್ರಾಯವನ್ನು ಚೆನ್ನಾಗಿ ತಿಳಿದೆನು. ನೀನು ತಿಳಿಯಬೇಡ, ನಾನು—ಇದೇನು ? ದಿಲ್ಲಿಯಿಂದ ದೂತನು ಬರುತ್ತಿದ್ದಾನೆ ! ” ಎಂದು ಹೇಳಿ ಎದ್ದುನಿಂತು, ಸ್ವಲ್ಪ ದೂರದಲ್ಲಿ ಕುದುರೆ ಸವಾರನೊಬ್ಬನು ಬರುತ್ತಿದ್ದುದನ್ನು ಕಂಡು ಮುಂದೆ ಹೇಳತೊಡಗಿದನು. :—“ ನಿರ್ಭೋಧನಾದ ಸೆಲಿಮನು ದಿಲ್ಲಿಯ ದುರ್ಗವನ್ನು ಬೆಂಕಿಯಿಂದ ಸುಟ್ಟು ಬೂದಿ ಮಾಡಿರಬೇಕೆಂದು ತೋರುತ್ತದೆ; ಅಥವಾ ಮಾನಸಿಂಹನ ಶುಭ್ರವಾದ ದಾಡಿ—” ಮುಂದೆ ಮಾತು ಪೂರೈಸುವುದರೊಳಗೆ ಕುದುರೆ ಸವಾರನು ಆವನ ಸಮೀಪ ಬಂದು ನೆಲವನ್ನು ಮುಟ್ಟಿ ಸಲಾಮನ್ನು ಮಾಡಿ ಎದುರಿಗೆ ನಿಂತನು. ಸಮ್ರಾಜನು ಗಂಭೀರಸ್ವರದಿಂದ “ ಸಮಾಚಾರವೇನು ? ಬೇಗನೆ ಹೇಳು ” ಎಂದನು.

ದೂತನು ಪುನಃ ನೆಲವನ್ನು ಚುಂಬನ ಮಾಡಿ ಸಲಾಮನ್ನು ಹಾಕಿ ಸಮ್ರಾಜನ ಪಾದಕ್ಕೆ ಸಮೀಪ ಒಂದು ಕಾಗದವನ್ನಿಟ್ಟು ಅಪ್ಪಣೆಯನ್ನೆದುರು ನೋಡುತ್ತ ನಿಂತುಕೊಂಡನು. ಅಕಬರನು ಮನಸ್ಸಿಟ್ಟು ಕಾಗದವನ್ನೋದಿ ಸ್ವಲ್ಪ ಚಿಂತಿಸಿ ಪುನಃ ಕಾಗದವನ್ನು ಬಿಚ್ಚಿ ಓದಿದನು. ಅಜಯನು ನೋಡುತ್ತಿದ್ದ ಹಾಗೆ ಅಕಬರನ ವಿಶಾಲವಾದ ಲಲಾಟವು ವಿಷಾದದ ರೇಖೆಯಿಂದ ಕುಂಚಿತವಾಗಿ ಕಣ್ಣುಗಳನ್ನು ಮುಚ್ಚಿಕೊಂಡು ತನ್ನೊಳು ತಾನೇ “ ರಾಜಪೂತ ಹೆಂಗಸು, ಸಖಾಯತ ಅಲ್ಲಿ, ಉದಯಪುರದ ಸಂಧಿ ” ಎಂದು ಹೇಳಿಕೊಂಡು, ತಟ್ಟನೆದ್ದು ಒಂದು ತಡವೆ ತೀವ್ರದೃಷ್ಟಿಯಿಂದ ಅಜಯಸಿಂಹನನ್ನು ನೋಡಿ, ಕೈಯಲ್ಲಿದ್ದ ಕಾಗದವನ್ನು ಚೂರುಚೂರಾಗಿ ಹರಿದುಹಾಕಿ ಉಚ್ಚಸ್ವರದಿಂದ “ ಆಲಮುಷೇರ್ ! ” ಎಂದು ಕೂಗಿ ಕರೆದನು. ಅಶ್ವರಕ್ಷಕನಾಗಿದ್ದ ಆಲಮುಷೇರನು ಓಡಿಬಂದು ಎದುರಿಗೆ ನಿಂತನು. ಬಾದಷಹನು, “ ಎಲ್ಲದಕ್ಕಿಂತ ವೇಗವಾಗಿ ಹೋಗುವ ಕುದುರೆಯನ್ನು ತಂದು ಸಿದ್ಧಪಡಿಸು ” ಎಂದು ಹೇಳಿ ಕಾಗದ ತಂದವನನ್ನು ಕುರಿತು, “ ನಿನ್ನ ಕೆಲಸದ ಮೇಲೆ ಹೋಗು ” ಎಂದು ಅಪ್ಪಣೆಮಾಡಿದನು.

ಆಲಮುಷೇರನೂ ದೂತನೂ ಹೊರಟುಹೋದರು. ಬಳಿಕ ಅಕಬರನು ಅಜಯಸಿಂಹನ ಕೈಯನ್ನು ಹಿಡಿದುಕೊಂಡು, “ ವತ್ಸ, ಅಜಯ ! ಅತ್ಯಮ್ಮದನಗರದ

ಯುದ್ಧದ ಭಾರವು ನಿನ್ನ ಮೇಲಿದೆ. ಜೋಕೆ! ರಾಜಪೂತ ವೀರನ ಹಾಗೆ, ಪ್ರತಾಪ ಸಿಂಹನ ಮಗನ ಹಾಗೆ, ಅಕಬರನ ಪ್ರಿಯತಮನಾದ ಸೇನಾಪತಿಯ ಹಾಗೆ ಈ ಗುರುತರವಾದ ಕಾರ್ಯವನ್ನು ನೆರವೇರಿಸಿಕೊಂಡು ಬರಬೇಕು. ಯಾವಾಗ ನಾನು ಹಿಂದಿರಿಗಿ ಬರುವೆನೋ ಅದು ನಿರ್ಧರವಿಲ್ಲ. ನೀನು ನಾಳೆಯ ಬೆಳಿಗ್ಗೆ ಸೈನ್ಯವನ್ನು ತೆಗೆದುಕೊಂಡು ಹೊರಡು. ಜೋಪಾನವಾಗಿ ನೋಡಿಕೊ! ನಾರೀ ಸೇನಾಪತಿಯ ಭ್ರೂಭಂಗಿಯನ್ನು ಕಂಡು ಭಯಪಡಬೇಡ! ಅವಳ ಉಜ್ವಲವಾದ ಕಣ್ಣುಗಳ ನೋಗನೋಟದಿಂದ ಮುಗ್ಧನಾಗಬೇಡ! ಇದಕ್ಕೆ ನಿನಗೆ ಬಹುಮಾನಸ್ವರೂಪವಾಗಿ, ನಾನು ಮೊದಲು ಹೇಳಿರುವ ಹಾಗೆ, ಮಿವಾರದ ಸುಂದರಿ ಹಿರಣ್ಮಯಿ!" ಎಂದು ಹೇಳಿ ಬಳಿಕ ಸಿದ್ಧವಾಗಿ ನಿಂತಿದ್ದ ಕುದುರೆಯಮೇಲೆ ಹಾರಿ ಹತ್ತಿಕೊಂಡು ಹೊರಟನು. ಹಿಂದೆ ಕುದುರೆ ಸವಾರರು ಹೊರಟರು. ಅವರಿಗೆ ಹಿಂದಕ್ಕೆ ಹೋಗಲು ಅಪ್ಪಣೆಯನ್ನು ಕೊಟ್ಟು, ಒಬ್ಬೊಂಟಿಗನಾಗಿ ಪವನ ವೇಗದಿಂದ ಉದಯ ಪುರಾಭಿಮುಖವಾಗಿ ಹೊರಟನು.

## ಏಳನೆಯ ಪರಿಚ್ಛೇದ.

ಬೇಸಿಗೆಯ ನಿಶಿಯು ಕಳೆಯುತ್ತ ಬಂದಿತು. ನಿಶಾನಾಥನ ಪ್ರೇಮದ ನಾಟಕದ ಕಡೆಯ ಅಂಕವು ಅಭಿನೀತವಾಗಿ ಮುಗಿಯುತ್ತ ಬಂತು. ಪ್ರೀತಿಮಯವಾಗಿಯೂ ಪ್ರಕಾಶಮಯವಾಗಿಯೂ ಇದ್ದ ರಂಗಭೂಮಿಯಲ್ಲಿದ್ದ ದೀಪಮಾಲೆಗಳು ಒಂದೊಂದಾಗಿ ಅಳಿಸಿಹೋಗುತ್ತಿದ್ದಿತು. ಹಿರಣ್ಮಯಿಯು ಏಕಾಕಿನಿಯಾಗಿ ಮೆಲ್ಲಮೆಲ್ಲಗೆ ಉದಯಪುರದ ರಾಜಪ್ರಾಸಾದಕ್ಕೆ ಪಾರ್ಶ್ವದಲ್ಲಿದ್ದ ಪುಷ್ಪೋದ್ಯಾನಕ್ಕೆ ಬಂದು ನಿಂತಳು. ಅವಳು ಪ್ರತಿದಿನವೂ ಅದೇ ಹೊತ್ತಿನಲ್ಲಿ ಪುಷ್ಪೋದ್ಯಾನಕ್ಕೆ ಹೋಗಿ ಹೂವನ್ನೆತ್ತುತ್ತಿರುವಳು. ಆಗಿನ ಅವಳ ಮುಖಮಂಡಲವು ಬಹಳ ಮಲಿನವಾಗಿತ್ತು. ಅಲ್ಲೀ ಬಹಳ ಹೊತ್ತು ಕುಳಿತು ಕಣ್ಣೀರು ಸುರಿಸುತ್ತಿದ್ದಳು. ಅನಂತರ ಸೆರಗಿನಿಂದ ಕಣ್ಣೀರೊರಸಿಕೊಂಡು ತಲೆಯನ್ನು ಮೇಲಕ್ಕೆತ್ತಿ ಕಣ್ಣುಮುಚ್ಚಿಕೊಂಡು, "ದೇವ, ಭವಾನಿಪತಿಯೆ! ನನ್ನ ಸ್ವಪ್ನವು ನಿಜವಾಗುವುದಾದರೆ ನಾನಾವವ್ರತವನ್ನಾಚರಿಸಿದರೆ ಅಜಯನು ಆ ವಿಪತ್ತಿನಿಂದ ಬಿಡುಗಡೆಯಾಗುವನು? ಅದನ್ನು ದಯವಿಟ್ಟು ತಿಳಿಯ ಹೇಳಿಕೊಡು" ಎಂದು ಪ್ರಾರ್ಥಿಸಿದಳು.

ಅಕಸ್ಮಾತ್ತಾಗಿ ಅಂಬರವು "ಹರ! ಹರ!" ಎಂಬ ಶಬ್ದದಿಂದ ಪ್ರತಿಧ್ವನಿತವಾಯಿತು. ಹಿರಣ್ಮಯಿಯು ಕಣ್ದೆರೆದು ನೋಡಲಾಗಿ ಎದುರಿಗೆ ಜಟಾಜೂಟದಿಂದ ಭೂಷಿತನಾಗಿಯೂ ವಿಭೂತಿಯಿಂದ ಮಂಡಿತನಾಗಿಯೂ ಇದ್ದ ಬ್ರಹ್ಮಚಾರಿಯೊಬ್ಬನು ನಿಂತಿದ್ದನು. ಬ್ರಹ್ಮಚಾರಿಯ ಕಮನೀಯವಾದ ಕಾಂತಿಯು ಬೆಳದಿಂಗಳಿಂದ ಬೆರೆತ ಉಷೆಯ ಬೆಳಕಿನಲ್ಲಿ ಲಾವಣ್ಯಮಯವಾಗಿತ್ತು. ಸ್ಮಶ್ರುದಾಮದಿಂದಲೂ ಜಟೆಗಳಿಂದಲೂ ಶೋಭಿತವಾಗಿದ್ದ ಅವನ ಆ ವದನಮಂಡಲದಿಂದ ಅನುಪಮವಾದ ಸೌಂದರ್ಯರಾಶಿಯು ಉಕ್ಕಿ ಹರಿಯುತ್ತಿತ್ತು. ಜಟೆಯೊಳಗಿನಿಂದ ಅವನ ಆ ಮೀನಾಕೃತಿಯುಳ್ಳ ವಿಶಾಲವಾದ ಕಣ್ಣುಗಳು ಪಾಶೆಯಲ್ಲರಳಿದ ಕಮಲಗಳ ಹಾಗೆ ಪ್ರಕಾಶಿಸುತ್ತಿದ್ದವು. ಅವನು ಕರುಣಕಂಠದಿಂದ, ವತ್ಸೆ! ನಿನ್ನ ಭವಿಷ್ಯಪತಿಯಾದ ಅಜಯಸಿಂಹನಿಗೆ ಅಮಂಗಳವುಂಟಾಗುವ ಆಶಂಕೆಯಿಂದ ಭೀತಿಗೊಂಡ ಹಾಗಿದೆಯಲ್ಲವೆ? ಭಯಪಡಬೇಡ— ದೇವಾದಿದೇವನಾದ ಭವಾನಿಪತಿಯು ಅಮಂಗಳಗಳನ್ನೆಲ್ಲಾ ನಿವಾರಣೆಮಾಡುವನು" ಎಂದು ಹೇಳಿದನು.

ಹಿರಣ್ಮಯಿಯು ಪ್ರಣಾಮವನ್ನು ಮಾಡಿ ಕೈಮುಗಿದುಕೊಂಡು "ದೇವ! ಅಜಯಸಿಂಹನಿಗೆ ಅಮಂಗಳವುಂಟಾಗುವುದೆಂದು ನನಗೊಂದು ಸ್ವಪ್ನವಾಯಿತು. ಸ್ವಪ್ನವು ನಿಜವಾಗುವುದಾದರೆ, ನಾನಾವವ್ರತವನ್ನಾಚರಿಸಿದರೆ ಅವನು ಆ ವಿಪತ್ತಿನಿಂದ ಮುಕ್ತನಾಗುವನೋ ಅದನ್ನು ದಯವಿಟ್ಟು ಹೇಳಬೇಕು" ಎಂದಳು.

ಬ್ರಹ್ಮಚಾರಿಯು ಕಣ್ಣುಮುಚ್ಚಿಕೊಂಡು ಕ್ಷಣಮಾತ್ರ ಧ್ಯಾನಮಾಡಿ, ಬಳಿಕ "ಕಲ್ಯಾಣಿ! ನಿನ್ನ ಸ್ವಪ್ನವು ನಿಜವಾದುದು, ಆದರೆ ನೀನು ಕಾತರೆಯಾಗಲು ಕಾರಣವಿಲ್ಲ. ಇಲ್ಲಿಗೆ ಸಮೀಪದಲ್ಲಿರುವ ಭವಾನಿಪತಿಯ ನೂತನ ಮಂದಿರಕ್ಕೆ ನನ್ನ ಜತೆಯಲ್ಲಿ ಹೋಗಿ, ದೇವನ ಪೂಜೆಯನ್ನುಮಾಡು. ದೇವಾದಿದೇವನ ಪ್ರಸಾದದಿಂದ ಅಜಯಸಿಂಹನು ಎಲ್ಲಾ ವಿಪತ್ತುಗಳಿಂದಲೂ ಮುಕ್ತನಾಗುವನು" ಎಂದನು.

ಹಿರಣ್ಮಯಿಯು ಬ್ರಹ್ಮಚಾರಿಯ ಮುಖವನ್ನು ದೃಷ್ಟಿಸಿ ನೋಡಿದಳು. ಬ್ರಹ್ಮಚಾರಿಯು ದಯಾರ್ದ್ರಸ್ವರದಿಂದ ಮಧುರವಾಗಿ, "ವತ್ಸೆ! ನೀನು ನನ್ನ ಜತೆಯಲ್ಲಿ ಬರುವುದಕ್ಕೆ ಸಂಕೋಚಪಡುವೆಯಾ? ಆ ಮಂದಿರವು ಇಲ್ಲೇ ಸಮೀಪದಲ್ಲಿರುವುದು. ನೀನು ಹೋಗಿ ದೇವನಲ್ಲಿ ನಿನ್ನಭೀಷ್ಟವನ್ನು ಬೇಡಿಕೊಂಡು ಈಗಲೇ ಹಿಂದಿರಿಗಿ ಬರಬಹುದು" ಎಂದನು.

ಹಿರಣ್ಮಯಿಯು ಬ್ರಹ್ಮಚಾರಿಯ ಜತೆಯಲ್ಲಿ ಹೋದಳು. ಇಬ್ಬರೂ ಸ್ವಲ್ಪ ದೂರ ಹೋಗಿ ಒಂದು ಸಣ್ಣದಾದ ಮಂದಿರದ ಎದುರಿಗೆ ನಿಂತರು. ಬ್ರಹ್ಮಚಾರಿಯು,

"ಎದುರಿಗಿರುವುದು ಮಹಾದೇವನ ಮಂದಿರ. ಒಳಗೆ ಹೋಗಿ ಭವಾನಿಪತಿಯಲ್ಲಿ ನಿನ್ನ ಭೀಷ್ಟವನ್ನು ಬೇಡು" ಎಂದು ಹೇಳಿದನು.

ಹಿರಣ್ಮಯಿಯು ಬ್ರಹ್ಮಚಾರಿಯ ಸಂಗಡ ಮಂದಿರದೊಳಗೆ ಹೋದಳು. ಕೂಡಲೇ ಹೊರಗಿನಿಂದ ಯಾರೋ ಬಾಗಿಲನ್ನು ಹಾಕಿಕೊಂಡರು. ಹಿರಣ್ಮಯಿಯು ಮಹಾದೇವನ ಮೂರ್ತಿಯನ್ನು ದರ್ಶನಮಾಡಲು ನಾಲ್ಕು ಕಡೆಯೂ ನೋಡಿದಳು. ಮಂದಿರವಾಗಿ ಕಾಣಿಸಲಿಲ್ಲ! ಮುಸಲಮಾನರ ಮಸಜೀದಾಗಿದ್ದಿತು! ಅವಳು ಭಯದಿಂದ ಕುಂದಿದಳು. ಕಟ್ಟಡದಲ್ಲೊತ್ತಟ್ಟು ಶಿಲೆಯಿಂದ ಮಾಡಲ್ಪಟ್ಟದ್ದೊಂದು ಮೇಜು. ಅದರ ಮೇಲೆ ಕೆಂಪು ಒಟ್ಟೆಯು ಹಾಸಿ ಕೆಲವು ಪುಷ್ಪಾಧಾರಗಳೂ ಒಂದು ಸಣ್ಣ ಪುಸ್ತಕವೂ ಇಡಲ್ಪಟ್ಟಿದ್ದವು. ಉದ್ದವಾದ ದೇಹವುಳ್ಳ ಮುಸಲಮಾನ ಮುದಕನೊಬ್ಬನು ಅದರ ಪಾರ್ಶ್ವದಲ್ಲಿ ಕುಳಿತಿದ್ದನು. ಅವನಿಗೆ ಸಮೀಪ ಇಬ್ಬರು ಯುವಕರು ನಿಂತಿದ್ದರು. ಅವರಲ್ಲೊಬ್ಬನು ಬಹು ಮೂಲ್ಯದ ಬಟ್ಟೆಗಳನುಟ್ಟು ಶಿರದಲ್ಲಿ ರಾಜ ಉಷ್ಣೀಷವನ್ನು ಧರಿಸಿದ್ದನು. ಸುಂದರ ಪುರುಷನಾಗಿದ್ದನು. ಮತ್ತೊಬ್ಬನು, ಇವನಾರು? ಹಿರಣ್ಮಯಿಯು ನಡುಗಿದಳು! ಅವಳು ಅವನನ್ನು ಮೊದಲು ನೋಡಿದ್ದಳು! ವಿಜಯ ದಶಮೀ ದಿನ ಬೇಟೆಯಿಂದ ಹಿಂದಿರಿಗಿ ಜಯಮಾಲೆಯನ್ನು ಹಾಕಿಕೊಂಡು ಎಲ್ಲರಿಗಿಂತ ಮುಂವಾಗಿ ಬಂದ ಅಜಯನಿಗೆ ಸಲವಾಗಿ ಮಾಲೆಯನ್ನು ಹಾಕಿದಾಗ ಗಿಡ್ಡನಾಗಿ ಏಕಲೋಚನನಾಗಿ ಉದ್ದ ದಾಡಿಯನ್ನುಳ್ಳ ಮುಸಲಮಾನನನ್ನು ನೋಡಿದ್ದಳು! ಅವಳು ಹಾಕಿದ ಹಾರವು ಅಜಯನ ಭುಜಕ್ಕೆ ತಗಲಿ ಇದೇ ಮುಸಲಮಾನನ ತಲೆಯ ಮೇಲೆ ಬಿದ್ದಿತ್ತು! ಹಿರಣ್ಮಯಿಯು ಭಯದಿಂದ ನೋಡುತ್ತಿದ್ದ ಹಾಗೆ ಯವನನು ನಗುತ್ತ ಅವಳಿದ್ದ ಸ್ಥಳಕ್ಕೆ ಮುಂದರಿದು ಬಂದನು. ಹಿರಣ್ಮಯಿಯು ಕಳವಳಗೊಂಡ ಪ್ರಾಣಗಳಿಂದಲೂ ವಿಹ್ವಲ ಹೃದಯದಿಂದಲೂ ವಿಸ್ಮಿತ ನೇತ್ರಗಳಿಂದಲೂ ಬ್ರಹ್ಮಚಾರಿಯ ಕಡೆ ನೋಡಿದಳು! ಇದೇನು ಆಪತ್ತು! ಬ್ರಹ್ಮಚಾರಿ ಏನಾದನು! ಜಟೆಯನ್ನು ಧರಿಸಿ ವಿಭೂತಿಯನ್ನು ಬಳಿದುಕೊಂಡಿದ್ದ ಸನ್ಯಾಸಿಗೆ ಬದಲಾಗಿ ರಣಕೂದಲುಳ್ಳ ಹುಚ್ಚಿಯೊಬ್ಬಳು ನಿಂತಿದ್ದಳು! ಹಿರಣ್ಮಯಿಯು ಚಿಕ್ಕಂದಿನಲ್ಲಿ ಅಜಯನೊಂದಿಗೆ ನವಿಲನ್ನು ಹಿಡಿಯುವುದಕ್ಕೆ ಹೋಗಿದ್ದಾಗ ಅರಾವಳಿ ಬೆಟ್ಟದ ಸಮೀಪ ನೋಡಿದ್ದ ಹುಚ್ಚಿಯಾಗಿದ್ದಳು. ಅಜಯನು ಅಕಬರನೊಂದಿಗೆ ಉದಯಪುರವನ್ನು ಬಿಟ್ಟು ಹೊರಟುಹೋದ ಹಿಂದಿನ ರಾತ್ರಿ ಮಲಗಿದ್ದ ಹಿರಣ್ಮಯಿಯನ್ನು ಯಾರು ಕೈಚಪ್ಪಳಿಯಿಂದಲೂ ವಿಕೃತಕಂಠದಿಂದಲೂ ಭೀತಿಗೊಳಿಸಿ ಅಂತರ್ಧಾನವಾಗಿ ಹೋಗಿದ್ದಳೋ, ಹಿರಣ್ಮಯಿಯ ಚಿಕ್ಕಂದಿನಲ್ಲಿ ಪ್ರಥಮ ಸಂದರ್ಶನದಿಂದ

ಯಾರು ಭಯಂಕರವಾದ ಭ್ರುಕುಟೀ ಕುಟಿಲ ಕಟಾಕ್ಷದಿಂದಲೂ ಭೀತಿ ಪೂರ್ಣವಾದ ಕಂಠಸ್ವರದಿಂದಲೂ ವಿಕಟವಾದ ಉಚ್ಚಹಾಸದಿಂದಲೂ ಅವಳನ್ನು ಭಯಪಡಿಸಿದಳೋ ಅದೇ ಉನ್ಮಾದಿನಿಯು ಇವಳಾಗಿದ್ದಳು! ಹಿರಣ್ಮಯಿಯು ಅವಳ ಕಡೆ ನೋಡುತ್ತಲೇ ಮೊದಲಿನ ಹಾಗೆ ಅವಳು ಕೈಚಪ್ಪಳಿ ಹೊಡಿಯುತ್ತ ಘಟ್ಟಿಯಾಗಿ ನಕ್ಕಳು. ಹಿರಣ್ಮಯಿಯ ತಲೆಯು ತಿರಗಲಾರಂಭಿಸಿ ಅವಳ ಚೇತನವು ಲೋಪವಾಗುತ್ತ ಬಂದಿತು. ನಾಲ್ಕು ದಿಕ್ಕುಗಳಲ್ಲಿಯೂ ಕತ್ತಲೆಯು ಕವಿತುಕೊಂಡ ಹಾಗಾಯಿತು. ಕುಡಿಕನಾದ ಸಖಾಯತ ಅಲಿಯು ಮುಂದರಿದು ಬಂದು ಹಿರಣ್ಮಯಿಯ ಕೈಯನ್ನು ಹಿಡಿದು ಕೊಂಡು ಚುಂಬನಮಾಡಿ, ಪಾರ್ಶ್ವದಲ್ಲಿದ್ದ ಯುವರಾಜ ಸೆಲಿಮನನ್ನು ಕುರಿತು, "ಯುವರಾಜ! ಇನ್ನು ಕಾಜಿಸಾಹೆಬರು ಈ ಸುಖಕರವಾದ ಮದುವೆಯನ್ನು ಸಾಂಗಮಾಡಿಸಲಿಕ್ಕೆ ಸಾವಕಾಶ ಮಾಡಲೇಕೆ? ಜಹಾಪನಾ! ತಾವು ಮಾತಾಡುವುದಿಲ್ಲವೇಕೆ?" ಎಂದನು.

ಯುವರಾಜ ಸೆಲಿಮನು ಮಂತ್ರದಿಂದ ಮುಗ್ಧನಾದವನ ಹಾಗೆ ಮಾತಿಲ್ಲದವನ ಹಾಗಾಗಿ ಹಿರಣ್ಮಯಿಯ ಅತುಲರೂಪರಾಶಿಯನ್ನು ನೋಡುತ್ತಿದ್ದನು. ಸಖಾಯತನು "ಇಜಬು ಮತ್ತು ಕಬೂಲ" (ಮದುವೆಗೆ ಮುಖ್ಯ ಅಂಗಗಳಾದ, 'ಕೇಳುವುದು, ಸಮ್ಮತಿಸುವುದು') ಎರಡೂ ಸಂಪೂರ್ಣವಾಯಿತು! ಈ ಮದುವೆಗೆ ಪ್ರಾಣಕಾಂತೆಯ ಆಕ್ಷೇಪವೇನೂ ಇಲ್ಲ! ಕಾಜಿಸಾಹೆಬರೆ! ತಾವು ವಿಳಂಬಮಾಡಲೇಕೆ?" ಎಂದನು.

ಕಾಜಿಸಾಹೆಬನು ಎದ್ದು ನಿಂತು ಬಿಳಿದಾದ ದಾಡಿಯನ್ನು ನೀವಿಕೊಂಡು, "ಇಜಬಿಗೂ ಕಬೂಲಿಗೂ ಸಾಕ್ಷಿಗಳಾರು?" ಎಂದನು.

ಸಖಾಯತ—ಸಾಕ್ಷಿಗಳು, ಸಾಕ್ಷಾತ್ತು ಯುವರಾಜ ಮತ್ತು ಈ ಉನ್ಮಾದಿನಿಯಾದ ಹೆಂಗಸು.

ಕಾಜಿಯು ಕೊರಾನ ಪುಸ್ತಕವನ್ನು ತೆರೆದು ಗಂಭೀರಸ್ವರದಿಂದ ಮದುವೆಯ ಪ್ರಕರಣದ ಭಾಗವನ್ನೋದುವುದಕ್ಕೆ ಪ್ರಾರಂಭಿಸಿದನು. ಇದ್ದ ಹಾಗೆ ಯಾರೋ ಹೊರಗೆ ಮಸಜೀದ ಬಾಗಲನ್ನು ಕೈಯಿಂದ ಘಟ್ಟಿಯಾಗಿ ತಟ್ಟುತ್ತ ಮೇಘಗಂಭೀರ ಸ್ವರದಿಂದ, "ಒಳಗೆ ಯಾರು? ಬೇಗನೆ ಬಾಗಿಲ ತೆಗೆ—ಇಲ್ಲವಾದರೆ ಕಾಲಿಂದೊದ್ದು ಮುಸಲಮಾನ ಮಸಜೀದಿಗೆ ಅವಮಾನ ಮಾಡಲಿಕ್ಕೆ ಹಿಂಜರಿಯುವುದಿಲ್ಲ!" ವೆಂದು ಕೂಗಿದ ಶಬ್ದವಾಯಿತು.

ಕೊರಾನ ಪುಸ್ತಕವು ಕಾಜಿಯ ಕೈಯಿಂದ ಜಾರಿ ಬಿದ್ದುಹೋಯಿತು. ಯುವ ರಾಜನ ಉಷ್ಣೀಷವು ತಲೆಯಿಂದ ಕಳಚಿ ನೆಲದ ಮೇಲೆ ಬಿದ್ದಿತು! ಸಖಾಯತನು ಮೈಬೆವರಿ ನಡುಗುತ್ತ ಹಿರಣ್ಮಯಿಯ ಕೈಯನ್ನು ಬಿಟ್ಟು ನೆಲದ ಮೇಲೆ ಬಿದ್ದನು! ಉನ್ಮಾದಿನಿಯ ಸೆರಗು ಚಿಕುರನಿಟಿಲದಿಂದ ಸರಿದು ನೆಲದ ಮೇಲೆ ಬಿದ್ದುಹೋಯಿತು! ಹಿರಣ್ಮಯಿಯು ಚೇತನ ಹೋಗಿ ಮರದ ಬೊಂಬೆಯ ಹಾಗೆ ನಿಂತಿದ್ದವಳು ಆಕಾಶ ವಾಣಿಯಹಾಗಿದ್ದ ಮಧುರ ಗಂಭೀರ ಸ್ವರವನ್ನು ಕೇಳಿ ಇದ್ದಹಾಗೆ ಸಂಜ್ಞಾಲಾಭ ವನ್ನು ಹೊಂದಿ ನಾಲ್ಕುಕಡೆಯೂ ನೋಡಿದಳು! ಒಳಗಣಿಂದ ಯಾರೂ ಬಾಗಿಲ ತೆರಿಯಲಿಲ್ಲವಾದಕಾರಣ ಹೊರಗಿದ್ದವನು ಕದವನ್ನು ಕಾಲಿಂದೊದ್ದನು. ಮರದ ಕದವು ಒದೆಗೆ ನಿಲ್ಲಲಾರದೆ ಮುರಿದು ಶಬ್ದದಿಂದ ಕೆಳಗೆ ಬಿದ್ದಿತು. ಆಗಂತುಕನು ಒಳಗೆ ಬಂದನು. ಹಿರಣ್ಮಯಿಯು ನೋಡಲಾಗಿ ಆಗಂತುಕನು ಭಾರತ ಸಮ್ರಾಜ ಆಕಬರನಾಗಿದ್ದನು!

## ಎಂಟನೆಯ ಪರಿಚ್ಛೇದ.

ದಿಲ್ಲೀಶ್ವರನು ಒಳಗೆ ಪ್ರವೇಶಮಾಡಿ ಕನಲ್ದು ಕೆಂಡವಾಗಿದ್ದ ಕಣ್ಣುಗಳಿಂದ ಸೆಲಿಮನನ್ನು ನೋಡಿದನು. ಭಯಂಕರವಾದ ಆ ದೃಷ್ಟಿಯಿಂದ ಭಾರತಕ್ಕೆ ಭವಿಷ್ಯ ಅಧೀಶ್ವರನಾಗಿದ್ದ ಸೆಲಿಮನ ಹೃದಯವು ಅದುರಿತು! ಅವನು ಕೈಯಲ್ಲಿದ್ದ ಕತ್ತಿಯ ನ್ನು ನೆಲಕ್ಕೆ ಊರಿಕೊಂಡು ಅದರಮೇಲೆ ಭಾರವನ್ನು ಬಿಟ್ಟು ನತಶಿರನಾಗಿ ನಿಂತನು. ಸಮ್ರಾಜನು ಹುಬ್ಬುಗಂಟು ಹಾಕಿಕೊಂಡು ಕಾಜಿಯನ್ನೂ ಸಖಾಯತನನ್ನೂ ನೋಡಿ, ಬಳಿಕ ಸಕರುಣ ಕಟಾಕ್ಷದಿಂದ ಹಿರಣ್ಮಯಿಯನ್ನೀಕ್ಷಿಸಿ ತದನಂತರ ಉನ್ಮಾದಿನಿಯ ಕಡೆ ತಿರಿಗಿ, “ನೀನಾರು?” ಎಂದು ಕೇಳಿದನು. ಉನ್ಮಾದಿನಿಯು ಇಂಬಾದ ಕಣ್ಣುಗಳನ್ನು ತಿರುಗಿಸುತ್ತ, ಕೈಯಿಂದ ಮುಂಗುರುಳನ್ನು ಹಿಕ್ಕುತ್ತ ತುಟಿಯನ್ನು ಕಡಿದುಕೊಳ್ಳುತ್ತ ಉಬ್ಬಿದ ಎದೆಯನ್ನು ಮುಂದೆಸೆದು ಕೈಯಿಂದ ಹೊಡಿದುಕೊಳ್ಳುತ್ತ ಘಟ್ಟಿಯಾಗಿ ನಗುತ್ತ ನಿಂತುಕೊಂಡಳು. ಆಕಬರನು ಪುನಃ, “ನೀನು ಹುಚ್ಚಿಯೆ?” ಎಂದು ಕೇಳಿದನು.

ಉನ್ಮಾದಿನಿ—(ನಕ್ಕು)—ನಾನಾರೆ? ದಿಲ್ಲೀಶ್ವರ! ನನ್ನ ಪರಿಚಯವನ್ನು ಜಾಗ್ರತೆಯಾಗಿ ತಿಳಿದುಕೊಳ್ಳುವೆ. ನನ್ನ ಪರಿಚಯವನ್ನು ಕೇಳುವುದಕ್ಕಿದು ಸರಿಯಾದ ಸಮಯವಲ್ಲ. ಅದು ಹೋಗಲಿ—ಬಹಳ ದಿನದ ನನ್ನಾಶೆಯು ಇಂದಿಗೆ ಕೈಗೂಡಿತು,

ಇಲ್ಲಿ ನೋಡೋಣಾಗಲಿ! ನಿಷ್ಠುರನಾಗಿದ್ದ ಗ್ವಾಲಿಯರದ ರಾಜನಿಗೂ ಪಾಪಿಯಾದ ರಾಕ್ಷಸಿ ತಾರಾಬಾಯಿಗೂ ಮಗಳಾದವಳು ಈ ದಿನ ನೀಚಕುಲದಲ್ಲಿ ಜನಿಸಿದ ಒಬ್ಬ ಮುಸಲಮಾನನಿಗೆ ಧರ್ಮಪತ್ನಿಯಾದಳು! ಅದಕ್ಕೆ ದಿಲ್ಲೀಶ್ವರನ ಮಗನಾದ ಯುವ ರಾಜ ಸಲೀಮನೂ ಈ ಕಾಜಿಯೂ ನಾನೂ ಸಾಕ್ಷಿಗಳಾಗಿದ್ದೇವೆ!

ಹೀಗೆಂದು ಹೇಳಿ ಉನ್ಮಾದಿನಿಯು ಹಿರಣ್ಮಯಿಯೆದುರಿಗೆ ಬಂದು ಕೈತಟ್ಟುತ್ತ ಘಟ್ಟಿಯಾಗಿ ನಕ್ಕು ಅಲ್ಲಿಂದ ಬೇಗ ಬೇಗನೆ ಹೊರಗೆ ಹೊರಟು ಹೋದಳು. ಹಿರಣ್ಮಯಿಯು ಅದುವರೆಗೆ ಮಾತಿಲ್ಲದೆ ಆಶ್ಚರ್ಯದಿಂದ ಮುಗ್ಧೆಯಾಗಿ ನಿಂತಿದ್ದವಳ ಹೃದಯಪಟದಲ್ಲಿ ಆಗ ನಡೆದಿದ್ದ ವಿದ್ಯಮಾನಗಳೆಲ್ಲಾ ಏಕಕಾಲದಲ್ಲಿ ಉಜ್ವಲವಾದ ವರ್ಣದಿಂದ ಚಿತ್ರಿತವಾದವು! ಬ್ರಹ್ಮಚಾರಿಯ ವೇಷಧಾರಿಯಾಗಿದ್ದ ಉನ್ಮಾದಿನಿಯ ವಂಚನೆಯೂ ಕಲ್ಪಿತವಾದ ಮಹಾದೇವನ ಮೂರ್ತಿಯೂ ಕಾಜಿಯು ಕುರಾನನ್ನೋದಲು ಉಪಕ್ರಮಿಸಿದುದೂ ಮುಸಲಮಾನ ಸೈನಿಕ ಸಹಾಯತನು ತನ್ನ ಕೈಯನ್ನು ಹಿಡಿದುಕೊಂಡದುದೂ ಚಿತ್ತಪಟದಲ್ಲಿ ಅಂಕಿತವಾದವು! ಹಿರಣ್ಮಯಿಯು ಚೇತನ ಹೋಗಿ ಮೂರ್ಛಿತೆಯಾಗಿ ನೆಲದ ಮೇಲೆ ಬಿದ್ದಳು. ಸಹಾಯತನು ಸಾಹಸವುಳ್ಳವನಾದ ಹಾಗಾಗಿ ಎದ್ದುನಿಂತು ಹಿರಣ್ಮಯಿಯನ್ನು ಹಿಡಿದುಕೊಳ್ಳುವುದಕ್ಕೆ ಕೈಚಾಚಿಕೊಂಡು ಮುಂದರಿದು ಬಂದನು! ಸಮ್ರಾಜನು ವಜ್ರಗಂಭೀರ ಸ್ವರದಿಂದ, "ಜೋಕೆ, ಗುಲಾಮ! ರಮಣಿಯನ್ನು ಮುಟ್ಟಬೇಡ" ಎಂದನು.

ಸಹಾಯತನು ಭಯದಿಂದ ಕುಂದಿ ಹಿಂದಕ್ಕೆ ಸರಿದು, ಕೈಮುಗಿದುಕೊಂಡು, "ಜಹಾಪನಾ! ಈ ರಮಣಿಯು ನನಗೆ ಮದುವೆಯಾದ ಹೆಂಡತಿಯೆಂಬುವುದು ಗೋಚರವಿಲ್ಲವೆಂದು ತೋರುತ್ತದೆ. ತಾವು ಯುವರಾಜರನ್ನು ವಿಚಾರಿಸಬಹುದು" ಎಂದನು.

ಸಹಾಯತನ ಮಾತನ್ನು ಕಿವಿಯ ಮೇಲೆ ಹಾಕಿಕೊಳ್ಳದೆ ಸಮ್ರಾಜನು ಸಲಿಮನ ಕಡೆ ತಿರುಗಿಕೊಂಡು, "ಸಲಿಮ! ಮೊಗಲಕುಲಕ್ಕೆ ಕಳಂಕನೆ! ನಾನು ಅನೇಕ ತಡವೆ ನಿನ್ನ ದುರ್ನಡತೆಯನ್ನು ಕ್ಷಮಿಸಿದ್ದೇನೆ! ಆದರೆ ಇಂದು ನೀನು ನಡಿಸಿರುವ ಘೋರವಾದ ಅಪರಾಧಕ್ಕೆ ಕಠೋರವಾದ ದಂಡನೆಯಾಗಬೇಕಾಗಿದೆ. ಆ ಶಿಕ್ಷೆ ಯಾವದೆಂಬುದನ್ನು ನಾನಿನ್ನೂ ನಿಶ್ಚಯಿಸಿಲ್ಲ" ಎಂದನು.

ಸಲಿಮನು ಉಚ್ಚಸ್ವರದಿಂದ, "ದಿಲ್ಲೀಶ್ವರ! ಅಪರಾಧಿಯು ಯಾರೋ ಅವನನ್ನು ದಂಡಿಸುವುದು ನ್ಯಾಯಸಂಗತ. ಇಂದು ನಡಿದಿರುವ ಅಪರಾಧಕ್ಕೆ ಗುರಿಯಾಗಿ

ರುವವನು ಪಾಪಾತ್ಮನಾದ ಸಖಾಯತನು. ನಾನದಕ್ಕೆ ಸಾಕ್ಷಿ. ತಮ್ಮ ಅಪ್ಪಣೆ ಯಿಲ್ಲದೆಲೇ ನಾನೇ ಅವನಿಗೆ ದಂಡಿಸುವೆನು" ಎಂದನು.

ಹೀಗೆಂದು ಹೇಳುತ್ತ ಮಿಂಚಿನ ವೇಗದಿಂದ ಕ್ಷಿಪ್ರಹಸ್ತನಾಗಿ ಕೈಕೂರಿತವನ್ನು ಝಳಪಿಸಿ ತಿರುಗಿಸುತ್ತ ಪ್ರಚಂಡವಾದ ಬಲದಿಂದ ಸಖಾಯತನ ಎದೆಗೆ ಇರಿದನು. ಸಖಾ ಯತನು ಭಯಂಕರವಾಗಿ ಅರಚುತ್ತ ನೆಲದಮೇಲೆ ಬಿದ್ದು ಪ್ರಾಣವನ್ನು ಬಿಟ್ಟನು.

ಸಮ್ರಾಜನ ಮುಖಮಂಡಲವು ಕೆದರುವ ಕೋಪದಿಂದ ಕೆರಳ್ದು ಕೆಂಡಗೊಂ ಡಿತು. ಅವನು ಕತ್ತಿಯನ್ನೊರೆಯಿಂದೆಳೆದು ಸೆಲಿಮನಿದ್ದ ಕಡೆ ಮುಂದರಿದನು. ಆದರೆ ಕೂಡಲೇ ಆ ಭಾವವನ್ನು ಅಡಗಿಸಿಕೊಂಡು ಮೆಲ್ಲಮೆಲ್ಲಗೆ ಗಂಭೀರಸ್ವರದಿಂದ, "ಪಾಪಕೃತ್ಯದ ಮೇಲೆ ಪಾಪಕೃತ್ಯ! ಮೂರ್ಖತೆಯ ಮೇಲೆ ಮೂರ್ಖತೆ! ನಿನ್ನ ಪಾಪಮಯವಾದ ದುರಭಿಸಂಧಿಯನ್ನು ನಾನು ತಿಳಿಯಲಾರೆನೆಂದು ತಿಳಿದಿರುವೆಯಾ? ಅದಿರಲಿ—ನಾನು ಈಗ ಮಾಡುವ ಅಪ್ಪಣೆಯನ್ನು ಎಚ್ಚರದಿಂದ ಕೇಳು. ಅದರಂತೆ ನಡೆದುಕೊಂಡರೆ ನಿನ್ನ ಶತಾಪರಾಧದೊಂದಿಗೆ ಈ ದಿನ ನೀನು ನಡಿಸಿರುವ ಈ ಪೈಶಾಚಿಕ ಆಚರಣೆಯನ್ನೂ ಕ್ಷಮಿಸುವೆನು ಕೇಳು. ನಾನು ಈ ರಾಜಪೂತ ಹೆಂಗಸನ್ನು ಅರ ಮನೆಗೆ ಕರೆದುಕೊಂಡು ಹೋಗಿ ನನ್ನ ಮಗಳ ಹಾಗೆ ಪ್ರತಿಪಾಲನೆ ಮಾಡಬೇಕೆಂದಿ ದ್ದೇನೆ. ಇವಳೀಗ ಲೌಕಿಕ ಆಚಾರ ಅನುಸಾರವಾಗಿ ಮುಸಲಮಾನನಿಗೆ ಹೆಂಡತಿಯಾಗಿ ರುವಳು. ಅದುಕಾರಣ ಹಿಂದೂ ರಾಜಧಾನಿಯಲ್ಲಿ ಅವಳಿಗೆ ಸ್ಥಾನವು ಸಿಕ್ಕದು. ನೀನು ಪ್ರೇಮಚಕ್ಷುಗಳಿಂದ ಅವಳನ್ನು ನೋಡಿದರೆ, ನಿನ್ನ ಶತಾಪರಾಧಗಳಿಗೂ ಒಂದೇ ಕಾಲದಲ್ಲಿ ದಂಡ ವಿಧಾನ ಮಾಡುವೆನೆಂದು ಖಂಡಿತವಾಗಿ ತಿಳಿದಿರು. ಈಗ ನೀನು ಇಲ್ಲಿಂದ ತೊಲೆದು ಹೋಗು" ಎಂದು ಅಪ್ಪಣೆಮಾಡಿದನು.

ಸೆಲಿಮನು ಮೂರ್ಛಿತೆಯಾಗಿ ಬಿದ್ದಿದ್ದ ಹಿರಣ್ಮಯಿಯ ಸಮನಿಲ್ಲದ ರೂಪ ರಾಶಿಯನ್ನು ಬಾರಿಬಾರಿಗೂ ನೋಡುತ್ತ ಹೊರಗೆ ಹೋಗಿ ಕುದುರೆಯನ್ನೇರಿ ಒಬ್ಬೊಂ ಟಿಗನಾಗಿ ಆಗ್ರಾಭಿಮುಖವಾಗಿ ಹೊರಟು ಹೋದನು.

## ಒಂಭತ್ತನೆಯ ಪರಿಚ್ಛೇದ.

ಯಾವ ಸಮಯದಲ್ಲಿ ಭಾರತಸಿಂಹಾಸನದಲ್ಲಿ ರಾಜಕುಲಕ್ಕೆ ಗುರುವಾಗಿದ್ದ ಅಕಬರಷಹನು ಪೂರ್ಣಗೌರವದಿಂದ ವಿರಾಜಿಸುತ್ತಿದ್ದನೋ ಅದೇ ಸಮಯದಲ್ಲಿ ರಾಜ್ಞಿಯಾದ ಚಾಂದಸುಲತಾನೆಯು ದಕ್ಷಿಣದೇಶದ ಸಿಂಹಾಸನವನ್ನಲಂಕರಿಸಿದ್ದಳು.

ಆ ಅಸಾಮಾನ್ಯ ರಮಣಿಯು ಎಲ್ಲಾ ಅಂಶಗಳಲ್ಲಿಯೂ ಅಕಬರಷಹನಿಗೆ ಸಮಕಕ್ಷಿಯಾಗಿದ್ದಳೆಂದು ಚರಿತ್ರ ಲೇಖಕರು ಸಂದೇಹವಿಲ್ಲದೆ ಒಪ್ಪಿಕೊಂಡಿದ್ದಾರೆ. ಒಂದು ನೂರೈವತ್ತು ವರ್ಷಕಾಲ ನಡೆದ ಭೀಷಣವಾದ ರಾಷ್ಟ್ರವಿಪ್ಲವದ ಸಮಯದಲ್ಲಿ ಅಂಧಕಾರದಲ್ಲಿ ರತ್ನದ ದೀಪದ ಹಾಗೆ, ಮರುಭೂಮಿಯಲ್ಲಿ ಮಂದಾಕಿನಿ ನದಿಯ ಹಾಗೆ, ಅಶೇಷಗುಣ ಸಂಪನ್ನೆಯಾದ ಆ ವೀರಾಂಗನೆಯ ಆವಿರ್ಭಾವದಿಂದ ದಾಕ್ಷಿಣಾತ್ಯದಲ್ಲಿ ಸ್ವಲ್ಪ ಕಾಲದವರೆಗೆ ದೇಶಕ್ಕೆ ಶಾಂತಿಯೂ ಸುಖವೂ ಉಂಟಾಗಿದ್ದವು. ಆದರೆ ಚಾಂದಸುಲತಾನೆಯು ಹೆಚ್ಚುಕಾಲ ಶಾಂತಿ ಸುಖಗಳನ್ನು ಅನುಭವಿಸಲಿಕ್ಕಾಗಲಿಲ್ಲ. ಅವಳು ಅಹಮದನಗರದ ಸಿಂಹಾಸನವನ್ನೇರಿದ ಸ್ವಲ್ಪಕಾಲದಲ್ಲೇ ಅಮಿತ ವಿಕ್ರಮವುಳ್ಳ ಮೊಗಲಬಾದಷಹನ ಸೈನ್ಯಪ್ರವಾಹವು ಪ್ರಬಲವೇಗದಿಂದ ದಕ್ಷಿಣದೇಶಾಭಿಮುಖವಾಗಿ ಬರುತ್ತಿದ್ದಿತು. ಚಾಂದಸುಲತಾನೆಗೆ ವಿರಾಮವಿರಲಿಲ್ಲ. ಆಹಾರ ನಿದ್ರೆಗಳಿಗೆ ಅವಕಾಶವಿರಲಿಲ್ಲ. ಅವಳು ಅದಮ್ಯವಾದ ಉತ್ಸಾಹದಿಂದ, ಅಸಾಮಾನ್ಯವಾದ ಅಧ್ಯವಸಾಯದಿಂದ, ಸೇನಾಪತಿಗಳಿಗೂ ಸೈನ್ಯದವರಿಗೂ ತಿಳುವಿಕೆಯ ಹೇಳುವುದಕ್ಕಾರಂಭಿಸಿದಳಲ್ಲದೆ ಅಹಮದನಗರದ ದೊಡ್ಡದಾದ ದುರ್ಗದಲ್ಲಿ ಒಂದೊಂದು ಸ್ಥಳವನ್ನೂ ನೋಡಿ ಸ್ವಂತವಾಗಿ ಅಸ್ತ್ರಗಳನೆಲ್ಲಾ ಪರೀಕ್ಷಿಸುತ್ತ ಸೈನಿಕರಿಗೆ ಮಧುರವಾದ ನುಡಿಗಳಿಂದ ಉತ್ಸಾಹವನ್ನುಂಟುಮಾಡುತ್ತಿದ್ದಳು.

ಒಂದು ದಿನ ಹಗಲೆಲ್ಲಾ ಶ್ರಮಿಸಿದ ಬಳಿಕ ಪ್ರದೋಷಕಾಲದಲ್ಲಿ ಆಯಾಸ ಪರಿಹಾರಮಾಡಿಕೊಳ್ಳುವುದಕ್ಕೆ ಸಲವಾಗಿ ಪ್ರಾಸಾದಕ್ಕೆ ಪಾರ್ಶ್ವ ನದಿಯ ತೀರದಲ್ಲಿ ಕೆಲವು ಮಂದಿ ಗೆಳತಿಯರೊಂದಿಗೆ ಕುಳಿತಿದ್ದಳು. ಅವಳು ಅವರಲ್ಲೊಬ್ಬಳನ್ನು ಕುರಿತು, “ಜುಲೇಕೆ! ಈ ದಿನ ಬಹಳ ತಾಪ—ಸೂರ್ಯನು ಅಸ್ತನಾಗಿದ್ದರೂ ತಾಪವನ್ನು ಸಹಿಸುವುದು ಕಷ್ಟವಾಗಿದೆ. ಮೈಯೆಲ್ಲಾ ಉರಿ. ಮಲ್ಲಾರರಾಗದಿಂದ ಮಳೆಯು ಬರುವುದೆಂದು ಕೇಳುತ್ತೇನೆ. ಈ ಸಮಯದಲ್ಲಿ ಮಲ್ಲಾರರಾಗದಲ್ಲೊಂದು ಕೃತಿಯನ್ನು ಹಾಡು. ನಿನ್ನ ಮಧುರ ಕಂಠದಿಂದ ಆಕಾಶದಿಂದ ಸ್ವಲ್ಪ ಮಳೆಯಾದರೂ ಬರಲಿ” ಎಂದಳು.

ಜುಲೇಕೆ:—ತಮ್ಮ ಅಪ್ಪಣೆಯ ಪ್ರಕಾರ ನಡಿಯುವುದಕ್ಕೆ ನಾನು ಯಾವಾಗ ಇಷ್ಟವಿಲ್ಲದವಳಾಗಿದ್ದೆನು? ಈ ದಿನ ದಾಸಿಯಲ್ಲಿ ಉಪಹಾಸವೇತಕ್ಕೆ!

ಜುಲೇಕೆಯು ಕೈಯಲ್ಲಿ ತಂಬೂರಿಯನ್ನು ತೆಗೆದುಕೊಂಡು ಹಾಡುವುದಕ್ಕೆ ತೊಡಗಿದಳು: ಚಾಂದಸುಲತಾನೆಯು ಫುಲ್ಲನಯನೆಯಾಗಿ ಸಂಗೀತ ವಿದ್ಯೆಯಲ್ಲಿ ಸುಶಿ

ಕ್ಷಿತೆಯಾಗಿಯೂ ಯುವತಿಯಾಗಿಯೂ ಇದ್ದ ಸುಂದರಿಯಾದ ಆ ಗೆಳತಿಯ ಮಧುರ ಸಂಗೀತವನ್ನು ಕೇಳುವುದಕ್ಕೆ ಪ್ರಾರಂಭಿಸಿದಳು. ಕೃತಿಯು ಪೂರೈಸುತ್ತಲೇ ರಾಜ್ಞಿಯು ಆಕಾಶವನ್ನು ನೋಡಿ ಮೆಲ್ಲಗೆ ನಕ್ಕು "ಸಖಿ! ನೀನು ಹಾಡಿದ ಕೃತಿಯು ಅತ್ಯಂತ ಮಧುರವಾಗಿಯೂ ತಾನಲಯ ವಿಶುದ್ಧವಾಗಿಯೂ ಇದ್ದುದರಿಂದ ಆಕಾಶದಲ್ಲಿ ನಿಜವಾಗಿಯೂ ಮೇಘ ಖಂಡವೊಂದು ತಲೆದೋರಿತು. ಇದೇ ರೀತಿಯಾಗಿ ಮತ್ತೊಂದು ಕೃತಿಯನ್ನು ಹಾಡಿದರೆ ಸಂದೇಹವಿಲ್ಲದೆ ಮಳೆಯು ಬರುವದು" ಎಂದಳು.

"ತಾವು ಅಪ್ಪಣೆ ಮಾಡಿದರೆ ಒಂದಲ್ಲದೆ ನೂರು ಕೃತಿಯನ್ನಾದರೂ ಹಾಡುವೆನು. ಆದರೆ ಹೀಗೆ ಹಾಸ್ಯ ಮಾಡದಿರಬೇಕೆಂದು ಬೇಡುತ್ತೇನೆ. ಅತ್ಯಂತ ಶಕೆಯಾದರೆ ಆಕಾಶದಲ್ಲಿ ಮೇಘವೆದ್ದು ಮಳೆಯಾಗುವುದು ಎಲ್ಲರಿಗೂ ಗೊತ್ತಿದೆ. ಇದು ಪ್ರಕೃತಿಯ ನಿಯಮವಾಗಿದೆ. ನನ್ನ ಮಾತು ಹಾಗಿರಲಿ. ನನಗೆ ಸಂಗೀತವು ಏನೇನೂ ಬಾರದು. ಜಡಜಗತ್ತನ್ನು ಕಂಠಸ್ವರದಿಂದ ಮುಗ್ಧ ಮಾಡಲು ಮನುಷ್ಯನಿಗೆ ಸಾಧ್ಯವೆ?"

ಜುಲೇಕೆಯು ಪುನಃ ತಂಬೂರಿಯನ್ನು ತೆಗೆದುಕೊಂಡು ಮೊದಲಿನ ಹಾಗೆ ತಾರಸ್ವರದಲ್ಲಿ ಮಧುರ ಕಂಠದಿಂದ ಹಾಡುವುದಕ್ಕೆ ತೊಡಗಿದಳು. ಅಕಸ್ಮಾತ್ತಾಗಿ ರಮಣಿಯರ ಮಂಡಲಿಯು ಚಮಕಿತವಾಗಿ ಎಲ್ಲರೂ ಎದ್ದು ನಿಂತುಕೊಂಡರು! ತಟಕ್ಕನೆ ತಂತಿಯು ಕಿತ್ತುಹೋದ ಸಿತಾರದ ಹಾಗೆ ಜುಲೇಕೆಯ ಕಲಕಂಠವು ನಿಂತುಹೋಯಿತು. ಅವಳ ಕೈಯಲ್ಲಿದ್ದ ತಂಬೂರಿಯು ನದಿಯ ನೀರಲ್ಲಿ ಬಿದ್ದುಹೋಯಿತು! ನದಿಯ ಕಲಕಲ ಧ್ವನಿಯೂ ಮರದೆಲೆಗಳ "ಶರ ಶರ" ಶಬ್ದವೂ ಗಾಳಿಯು ಜುವ್ವಜುವ್ವನೆ ಬೀಸುವ ಶಬ್ದವೂ ನಿಂತವು. ದೂರದಲ್ಲಿ ನದಿಯ ದಡದಲ್ಲಿದ್ದ ಕಾನನದ ಮಧ್ಯದಲ್ಲಿ ವೀಣೆಯನಾದದೊಂದಿಗೆ ಸೇರಿದ್ದ ಮಲ್ಹಾರ ರಾಗವು ದಶ ದಿಕ್ಕುಗಳನ್ನೂ ಶಬ್ದಗೊಳಿಸಿತು. ಪ್ರಕೃತಿಯು ಸೊಲ್ಲಿಲ್ಲದೆ ನಿಸ್ತಬ್ಧವಾಗಿ ಚಿತ್ರಾರ್ಪಿತವಾಯಿತು! ಚಾಂದಸುಲತಾನೆಯು ಜುಲೇಕೆಯನ್ನು ಪರಿಹಾಸ್ಯಮಾಡಿದಾಗ ಪೂರ್ವ ಆಕಾಶದ ದಿಕ್ಕಿನಲ್ಲಿ ಮೋದಂಡವಾಗಿ ಚುಕ್ಕಿಯಹಾಗಿದ್ದ ಚಿಕ್ಕ ಮೋಡದ ತುಣಕೆಯು ನೋಡುತ್ತಿದ್ದ ಹಾಗೆ ಮದಿಸಿದ ಸಾವಿರಾರು ಆನೆಗಳ ರೂಪಗಳನ್ನು ತಾಳಿ ಸಹಸ್ರ ಸೊಂಡಿಲಗಳ ಆಸ್ಫಾಲನದಿಂದ ಹೊಡಿದಹಾಗೆ ಸಿಡಿಲ ಗರ್ಜನೆ ಮಾಡಿ ಆಕಾಶ ಮಾರ್ಗದಲ್ಲೋಡುತ್ತ ಸಹಸ್ರ ಧಾರೆಯಾಗಿ ಮಳೆಯನ್ನು ಕರೆಯಿತು. ಆ ಮೋಹಮಯವಾದ ಗೀತದ ಧ್ವನಿಯು ಉಚ್ಚರವದಿಂದ ಉಚ್ಚತರ ರವದಲ್ಲಿಯೂ ಮಾಧುರ ನಿನಾದದಿಂದ ಮಧುರತರ

ನಿನಾದದಲ್ಲಿಯೂ ಭೀಷಣಲಯದಿಂದ ಭೀಷಣತರ ಲಯದಲ್ಲಿಯೂ ಏರಿ, ವಾರಿಧಾರೆಯ ಶ್ರುತಿ ಮಧುರ ನಿನಾದವು ವೀಣೆಯ ಝುಂಕಾರದೊಂದಿಗೆ ಸೇರಿ ಹೋಗಿ ಮೇಘರಾಶಿಯ ಸ್ನಿಗ್ಧವಾದ ಗಂಭೀರ ಮೃದಂಗ ಧ್ವನಿಯು ಮಲ್ಲಾರದ ಮೋಹನ ಲಯದಲ್ಲಿ ವಿಲೀನವಾಗಿ ಪ್ರತಿಧ್ವನಿತವಾಗಲಾರಂಭವಾಯಿತು. ಪ್ರಕೃತಿಯೇ ಮೋಹದಿಂದ ಮುಗ್ಧೆಯಾಗಿ ಚೇತನವನ್ನು ಹೊಂದಿ ವೃಷ್ಟಿ ಪತನದ ಗೆಜ್ಜೆಗಳು ಘುಲ್ಲನ ಶಬ್ದದಿಂದಲೂ ಮೇಘಮಂದ್ರದ ವಾದ್ಯ ತಾಳದಿಂದಲೂ ಅಮೃತಮಯವಾದ ಮಲ್ಲಾರ ತಾನದೊಂದಿಗೆ ತಾಳಲಯ ಸಮನ್ವಯವಾಗಿ ಕೊರಳನ್ನು ಕೂಡಿಸಿದ ಹಾಗಿದ್ದಿತು! ರಮಣಿಯರೆಲ್ಲರೂ ಸಂಜ್ಞಾಹೀನರಾಗಿ ಜಲ ಪ್ರವಾಹದ ಮಧ್ಯದಲ್ಲೇ ನಿಂತಿದ್ದರು. ಕ್ರಮ ಕ್ರಮವಾಗಿ ಸಂಗೀತದ ಶಬ್ದವು ಹತ್ತಿರ ಹತ್ತಿರ ಬಂದಿತು. ಬಹಳ ಹೊತ್ತಾದ ಬಳಿಕ ಹೆಂಗಸೊಬ್ಬಳು ಕೈಯಲ್ಲಿ ವೀಣೆಯನ್ನು ಹಿಡಿದು ಹಾಡುತ್ತ ಮೆಲ್ಲ ಮೆಲ್ಲಗೆ ಚಾಂದಸುಲತಾನೆಯು ಕುಳಿತಿದ್ದ ಸ್ಥಳಕ್ಕೆ ಬಂದು ಎಲ್ಲರೆದುರಿಗೆ ನಿಂತಳು. ಹೆಂಗಸರೆಲ್ಲರೂ ಆಗಲೂ ಮೊದಲಿನ ಹಾಗೆ ನಿಶ್ಚಲವಾಗಿ ನೀರವವಾಗಿ ನಿಂತಿದ್ದರು. ಕಡೆಗೆ ಹೆಂಗಸು ಸಂಗೀತವನ್ನು ನಿಲ್ಲಿಸಿ ಕೈಯಲ್ಲಿದ್ದ ವೀಣೆಯನ್ನು ಮುದ್ದಿಟ್ಟು ವಕ್ಷದಲ್ಲಿ ಧಾರಣಮಾಡಿಕೊಂಡಳು. ಹೆಂಗಸರಿಗಿದ್ದ ಮೋಹವು ಭಂಗವಾಗಿ ಚೇತರಿಸಿಕೊಂಡು, ಅವರಲ್ಲೊಬ್ಬಳು, "ರಾಜ್ಞಿ! ಮನ್ನಿಸಬೇಕು. ನಾನು ಜ್ಞಾನಶೂನ್ಯೆಯಾಗಿದ್ದೆನು. ತಾವು ಗೌಗತ್ತಲೆಯಲ್ಲಿ ನೀರಿನ ಪ್ರವಾಹದ ಮಧ್ಯದಲ್ಲಿ ನಿಂತಿದ್ದುದು ನೆನವಿಗೆ ಬರಲಿಲ್ಲ. ಮನೆಗೆ ದಯಮಾಡಿಸಬೇಕು" ಎಂದಳು.

ಜುಲೇಕಿಯು ಗಾಯಕಿಯನ್ನು ಸಂಬೋಧಿಸಿ, "ನೀನು ಮಾನವಿಯೋ ಅಥವಾ ಕಿನರಿಯೋ?" ಎಂದು ಕೇಳಿದಳು. ಗಾಯಕಿಯು ಜುಲೇಕಿಯ ಕಡೆ ಮುಂದರಿದು ಹೋದಳು. ಆ ಸಮಯದಲ್ಲಿ ಥಳ ಥಳ ಮಿಂಚಿತು. ಆ ಬೆಳಕಿನಲ್ಲಿ ಗಾಯಕಿಯು ಹರಕು ಬಟ್ಟೆಯನ್ನುಟ್ಟಿದ್ದ ಭಿಖಾರಿಣಿಯಾಗಿದ್ದಳೆಂದು ಕಂಡಿತು. "ಎಲ್ಲಿಂದ ಬಂದೆ? ಭಿಖಾರಿಣಿ!" ಎಂದು ಕೇಳಿದುದಕ್ಕೆ ಗಾಯಕಿಯು ಅಸ್ಫುಟವಾಗಿ ಮೃದುವಾದ ಸ್ವರದಿಂದ, "ಭಿಖಾರಿಣಿಯಲ್ಲ. ಉನ್ಮಾದಿನಿ" ಎಂದಳು.

ಚಾಂದಸುಲತಾನೆ:—ಇವಳನ್ನು ಏನೂ ಕೇಳಬೇಡಿರಿ. ಸಮಾದರದಿಂದ ಅಂತಃಪುರಕ್ಕೆ ಕರೆದುಕೊಂಡು ಹೋಗಿರಿ.

ಚಾಂದಸುಲತಾನೆಯು ಒದ್ದೆ ಬಟ್ಟೆಗಳ [illegible] ಉಡುಪನ್ನು ಧರಿಸಿ, ಬಳಿಕ, ಪರಿಚಾರಿಕೆಯನ್ನು ಕರೆದು "ಈ [illegible] ಖಚಿತವಾದ ಉಡುಪನ್ನು ತಂದು ಕೊಡು" ಎಂದು [illegible]

ಅದೇಪ್ರಕಾರ ಪರಿಚಾರಿಕೆಯು ತಂದು ಕೊಟ್ಟಳು. ಭಿಖಾರಿಣಿಯು ನಕ್ಕು, " ಈಮಹಾ ಮೌಲ್ಯದ ಉಡುಪು ನನಗೆ ಯೋಗ್ಯವಾದುದು " ಎಂದಳು.

ಚಾಂದಸುಲತಾನೆಯು ಸ್ನೇಹಿತರನ್ನು ಕುರಿತು, ಗಾಯಕಿಯ ಸಂಗಡ ಮಾತಾಡುವುದು ಬಹಳವಿದೆ. ನೀವು ಯಾರೂ ನನ್ನ ಬಳಿ ಬರಕೂಡದೆಂದು ಹೇಳಿದಳು.

ಗಾಯಕಿಯನ್ನು ಸಂಗಡ ಕರೆದುಕೊಂಡು ಸುಲತಾನೆಯು ತನ್ನ ಶಯನ ಗೃಹದೊಳಗೆ ಹೋಗಿ ಬಾಗಿಲನ್ನು ಹಾಕಿಕೊಂಡಳು.

## ಹತ್ತನೆಯ ಪರಿಚ್ಛೇದ.

ದೀಪಮಾಲೆಯಿಂದ ಶೋಭಿತವಾಗಿಯೂ ಸುಸಜ್ಜಿತವಾಗಿಯೂ ಸುವಾಸಿತವಾಗಿಯೂ ಇದ್ದ ಕೊಠಡಿಯಲ್ಲಿ ಚಾಂದಸುಲತಾನೆಯೂ ಉನ್ಮಾದಿನಿಯೂ ಸ್ವಲ್ಪ ಹೊತ್ತು ಮೌನವಾಗಿ ನಿಂತಿದ್ದರು. ಕಡೆಗೆ ಉನ್ಮಾದಿನಿಯು, " ತಾವು ರಾಜೇಶ್ವರಿ; ತಮಗೆ ಭಿಖಾರಿಣಿಯ ಸಂಗಡ ಏಕಾಂತವೇನು ಇದ್ದಿತು? ಏನೂ ಹೇಳುವುದಿಲ್ಲವೇಕೆ ?" ಎಂದು ಹೇಳಿದಳು.

ಸುಲತಾನೆ :—(ಬಿಸಸುಯ್ದು)—ಮುಮತಾಜ : ನಾನು ನಿನ್ನನ್ನು ಗುರುತಿಸಲಾರೆನೆಂದು ತಿಳಿದಿರುವಿಯಾ ? ಇಂದು ನಿನ್ನನ್ನು ನೋಡಿ ವ್ಯಸನದಿಂದಲೂ, ಆನಂದದಿಂದಲೂ, ಆಶ್ಚರ್ಯದಿಂದಲೂ, ಕುತೂಹಲದಿಂದಲೂ ಮನಸ್ಸು ಅಸ್ಥಿರವಾಗಿದೆ. ಯಾವ ಮಾತು ಆಡುವುದಕ್ಕೂ ತೋಚುವುದಿಲ್ಲ.

ಭಿಖಾರಿಣಿ :—ನೀನೇನೂ ಹೇಳಬೇಡ. ನಾನೇ ಎಲ್ಲಾ ಹೇಳುವೆನು. ಕೇಳು. ಈ ಮಂಚದ ಮೇಲೆ ಕೂಡು. ನಾನು ಇಲ್ಲೇ ನಿಂತು ಎಲ್ಲವನ್ನೂ ಹೇಳುವೆನು. ಈಗ್ಗೆ ಇಪ್ಪತ್ತು ವರ್ಷಗಳಾದವು; ಬಾಲ್ಯ ಕಾಲದಲ್ಲಿ ನಾನು ಚರಿತ್ರೆ ಸಂಬಂಧವಾದ ಕಥೆಗಳನ್ನು ಹೇಳಿದರೆ ಮನವಿಟ್ಟು ಕೇಳುತ್ತಿದ್ದೆಯಲ್ಲವೆ ? ಒಂದುದಿನ ಇದೇ ಮಾದರಿ ದೀಪಮಾಲೆಯಿಂದ ಶೋಭಿತವಾಗಿದ್ದ ಕೊಠಡಿಯಲ್ಲಿ ಹೀಗೆ ಮಂಚದ ಮೇಲೆ ಕುಳಿತುಕೊಂಡು, ನಾನು ಹೇಳಿದ ಬಹಮನೀ ವಂಶದ ಕ್ರೂರ ಮುಸಲಮಾನರು ರಾಮರಾಜನನ್ನು ಅನ್ಯಾಯವಾಗಿ ಕೊಂದ ವೃತ್ತಾಂತವನ್ನು ಕೇಳಿ ಕಣ್ಣೀರು ಸುರಿಸಿದೆಯಲ್ಲವೆ ? ಅದು ಸ್ಮರಣೆಯಲ್ಲಿದೆಯೆ ? ಈ ದಿನವೂ ಹಾಗೆಯೇ ಕುಳಿತು ಹಾಗೆಯೇ ನನ್ನ ಮುಖವನ್ನು ನೋಡಿಕೊಂಡು ಕಣ್ಣೀರನ್ನು ಸುರಿಸುತ್ತ ಮಂದ ಭಾಗಿನಿಯೂ ಆದ ಮುಮ

ತಾಜೆಯೂ ಆದ ನನ್ನ ವೃತ್ತಾಂತವನ್ನು ಕೇಳು, ಹೇಳುತ್ತೇನೆ. ನಾನು ಈ ಪೃಥ್ವಿಯಲ್ಲಿಲ್ಲವೆಂದು ನೀನು ತಿಳಿದಿದ್ದೆಯಲ್ಲವೆ? ಆದುದರಿಂದ ಕತ್ತಲೆಯಲ್ಲಿ ನದಿಯ ತೀರದಲ್ಲಿ ಹಾಡುತ್ತ ಬಂದವಳನ್ನು ನೋಡಿ ಪ್ರೇತನೆಂದು ಭಯಪಡಲಿಲ್ಲವೆ? ಆದುದರಿಂದಲೇ ಇದುವರೆಗೂ ಮಾತಿಲ್ಲದೆ ನನ್ನನ್ನು ನೋಡುತ್ತಿಯೆಂದು ಕಾಣುತ್ತದೆ.

"ಮಾತಿಲ್ಲದೆ ನಿಂತಿದ್ದುದು ನಿಜ. ಭಯದಿಂದ ಅಲ್ಲ. ವ್ಯಸನದಿಂದ ಹಾಗಿದ್ದೆನು. ಜನರು, ನೀನು ಭೂಮಿಯಲ್ಲಿಲ್ಲವೆಂತಲೇ ತಿಳಿದಿದ್ದಾರೆ. ನಾನಾದರೋ ನೀನು ಸತ್ತಿಲ್ಲವೆಂದು ಬಲ್ಲೆನು. ಇಷ್ಟು ಕಾಲದ ಬಳಿಕ ನಿನ್ನನ್ನು ಈ ಅವಸ್ಥೆಯಲ್ಲಿ ನೋಡಿ ವ್ಯಸನವುಂಟಾಗಿ ಮಾತಿಲ್ಲದವಳಾಗಿದ್ದೆನು."

"ಹಾಗಾದರೆ, ಕೇಳು, ಹೇಳುತ್ತೇನೆ. ನಿನಗೆ ಮದುವೆಯಾದ ಬಳಿಕ ನೀನು ಅಹಮದನಗರಕ್ಕೆ ಬಂದು ಬಿಟ್ಟೆ. ನಿನಗೆ ಸಂಗಾತಿಯಾದ ನಿನ್ನ ಚಿಕ್ಕಪ್ಪನ ಮಗಳು ಮುಮತಾಜೆಯು ತಂದೆಯ ಕಾಲವಾದ ಬಳಿಕ ಚಿಕ್ಕ ವಯಸ್ಸಿನಲ್ಲೇ ವಿಪುಲೈಶ್ವರ್ಯಕ್ಕೆ ಅಧಿಕಾರಿಣಿಯಾಗಿ ತಂದೆಯ ರಾಜ್ಯದಲ್ಲಿರುತ್ತಿದ್ದಳು. ಸ್ವಲ್ಪಕಾಲವಾದ ತರುವಾಯ ಪರಮ ಸುಂದರನಾದ ಹಿಂದೂ ಯುವಕನೊಬ್ಬನು ನಿನ್ನ ತಂಗಿಯಾದ ಪಾಪೀಯಸಿ ಮುಮತಾಜೆಯ ಕಣ್ಣಿಗೆ ಬಿದ್ದನು. ಆ ಹಿಂದೂ ಯುವಕನು ಗ್ವಾಲೀಯರದ ಕ್ಷತ್ರಿಯ ರಾಜಕುಮಾರ. ತಂದೆಯ ಅಪ್ಪಣೆಯ ಪ್ರಕಾರ ದೇಶಭ್ರಷ್ಟನಾಗಿದ್ದನು. ಅವನು ಆ ವೀರತ್ವದ ಕಾಂತಿಯನ್ನೂ ಸುಂದರವಾದ ಆ ಮುಖಮಂಡಲವನ್ನೂ ನೋಡಿ ಹದಿನೈದು ವರ್ಷದ ಕುಮಾರಿಯ ಹೃದಯವು ಉನ್ಮತ್ತವಾಯಿತು. ಅವಳು ಏಕಾಂತವಾಗಿ ಆ ಕ್ಷತ್ರಿಯ ರಾಜಕುಮಾರನ ಸಂಗಡ ಮದುವೆಯ ಪ್ರಸ್ತಾಪವನ್ನು ಮಾಡಿದಳು. ಯವನ ದ್ವೇಷಿಯಾದ ಹಿಂದೂ ರಾಜನು ಯವನಿಯನ್ನು ಏಕಾಂತವಾಗಿ ಮದುವೆ ಮಾಡಿಕೊಳ್ಳಲು ಒಪ್ಪಿಕೊಂಡನು. ಆ ಸಮಯದಲ್ಲಿ ಅವನ ಮೊದಲನೆಯ ಹೆಂಡತಿಯೂ ಎರಡು ವರ್ಷದ ಒಂದು ಹೆಣ್ಣು ಮಗುವೂ ಮಿವಾರದ ರಾಜಧಾನಿಯಲ್ಲಿ ರಾಣಾ ಪ್ರತಾಪಸಿಂಹನ ಆಶ್ರಯದಲ್ಲಿ ಇರುತ್ತಿದ್ದರು. ಇದು ಹೋಗಲಿ. ಕಡೆಗೆ ಯವನ ಕುಮಾರಿಯ ಪಾಪ ತೃಷ್ಣೆಯು ಚರಿತಾರ್ಥವನ್ನು ಹೊಂದಿತು. ಸ್ವಲ್ಪಕಾಲದಲ್ಲೇ ಮುಸಲಮಾನ ಕುಮಾರಿಯ ಗರ್ಭದಲ್ಲಿ ಹಿಂದೂ ರಾಜಕುಮಾರನಿಗೆ ಅಪೂರ್ವ ರೂಪಶಾಲಿಯಾದ ಔರಸ ಮಗಳು ಒಬ್ಬಳು ಹುಟ್ಟಿದಳು. ಯವನ ಕುಮಾರಿಯು ಉಪಾಯಾಂತರ ತೋರದೆ ಕ್ಷತ್ರಿಯ ರಾಜನ ಚರಣದಲ್ಲಿ ಬಿದ್ದು ರೋದನ ಮಾಡಿದಳು. ವೀರನು ಆದ ಆ ಕ್ಷತ್ರಿಯನ ಉದಾರವಾದ ಹೃದಯವು ಮರುಗಿತು. ಆದರೆ ಅವನ ಮೊದಲ ಸಂಬಂ

ಧದ ಸಹಧರ್ಮಿಣಿಯು ಸಂಗತಿಯನ್ನೆಲ್ಲಾ ತಿಳಿದವಳಾಗಿ ನಮ್ಮಿಬ್ಬರಿಗೂ ಪ್ರತಿಕೂಲ ಆಚರಣೆಯಲ್ಲಿ ಪ್ರವೃತ್ತೆಯಾದಳು. ಅವಳ ಒಳಸಂಚಿನಿಂದಲೂ ಅವಳ ಕೌಶಲ್ಯದಿಂದಲೂ ಯವನ ಕುಮಾರಿಗೆ ಪ್ರಾಣಧನವಾಗಿದ್ದ ಧನವು ಅವಳಿಂದ ಅಪಹರಿಸಲ್ಪಟ್ಟು ದೂರದಲ್ಲೆಲ್ಲೋ ಅಜ್ಞಾತವಾಸಕ್ಕೆ ಕಳುಹಿಸಲ್ಪಟ್ಟನು. ಬಳಿಕ ಈ ಅಭಾಗಿನಿಯು ಚಿತೋರದ ರಾಜವಂಶಕ್ಕೆ ಮದುವೆಯಾದ ವಿದ್ಯಮಾನಗಳನೆಲ್ಲಾ ನೀನೇಬಲ್ಲೆ. ಸ್ವಲ್ಪಕಾಲದ ಬಳಿಕ ಪಾಪಿಷ್ಠೆಯಾದ ನಿನ್ನ ತಂಗಿಯ ಗಂಡನು ಪ್ರಾಣತ್ಯಾಗ—"

ಮಾತು ಪೂರೈಸುವುದರೊಳಗೆ, ಚಾಂದಸುಲತಾನೆಯು ಎದ್ದು ನಿಂತು ರೋಷದಿಂದ ಕಂಪಿತ ಸ್ವರವುಳ್ಳವಳಾಗಿ, "ಸುಮ್ಮನಾಗು, ಪಾಪೀಯಸಿ! ನಿನ್ನ ಪಾಪಿಷ್ಠವಾದ ಬಾಯಿಯಿಂದ ಪಾಪಕರವಾದ ಆ ವೃತ್ತಾಂತವನ್ನು ಎತ್ತಿ ಹೇಳಬೇಡ" ಎಂದಳು.

ಉನ್ಮಾದಿನಿಯು ಹೇಳತೊಡಗಿದಳು :—"ಜನರು ಹೇಳಿಕೊಳ್ಳುವುದನ್ನು ನೀನು ಕೇಳಿ ಅದನ್ನು ನಿಜವೆಂದು ನಂಬಿರುವ ಹಾಗೆ ಕಾಣುತ್ತದೆ. ಅದು ತಪ್ಪು. ಜನರು ಆಡಿಕೊಳ್ಳುವುದು ಸುಳ್ಳೆಂದು ನಾನು ಬಲ್ಲೆನು. ಅವರು ಹೇಳಿಕೊಳ್ಳುವುದರಲ್ಲಿ, ನಾನೇ ನನ್ನ ಸ್ವಾಮಿಯನ್ನು ವಿಷವನ್ನು ಕೊಟ್ಟು ಕೊಂದು ಹೊರಟು ಹೋದನೆಂದು ಹೇಳಿಕೊಳ್ಳುತ್ತಾರೆ! ಅದು ಸಂಪೂರ್ಣವಾಗಿ ಸುಳ್ಳು! ನನ್ನ ದೋಷದಿಂದಲೇ, ನನ್ನ ಘೋರ ಪಾಪದಿಂದಲೇ, ನನ್ನ ಸ್ವಾಮಿಗೆ ಮರಣವುಂಟಾಗಿರುವುದೇನೋ ನಿಜ. ಆದರೆ ನನ್ನ ಕೈಯಿಂದ ಆತನ ಪ್ರಾಣವು ಹೋಗಲಿಲ್ಲ. ಯಾವ ದಿನ ನನ್ನ ಪ್ರಾಣಕಾಂತನು ನನ್ನಿಂದ ಅಪಹರಿಸಲ್ಪಟ್ಟು ಅಜ್ಞಾತವಾಸಕ್ಕೆ ಕಳುಹಿಸಲ್ಪಟ್ಟನೋ ಅದು ಮೊದಲ್ಗೊಂಡು ಪ್ರಚಂಡವಾದ ಬೆಂಕಿಯಿಂದ ಈ ಹೃದಯವು ಸುಡುತ್ತಿದೆ. ಪ್ರಾಣದೊಳಗಣ ಯಾತನೆಯನ್ನು ಪ್ರಾಣದೊಳಗೆ ಮರೆಮಾಚಿಟ್ಟುಕೊಂಡೆನು. ಬಾಯಿಬಿಟ್ಟು ಯಾರಿಗೂ ಹೇಳಿಲ್ಲ. ರಾತ್ರಿಹಗಲು ವ್ಯಸನಾಕ್ರಾಂತೆಯಾಗಿ ಕಾಲಯಾಪನೆ ಮಾಡುತ್ತಿದ್ದುದನ್ನು ನೋಡಿ ನನ್ನ ನೂತನ ಸ್ವಾಮಿಯು ಅದಕ್ಕೆ ಕಾರಣವನ್ನು ಆಗಿಂದಾಗ ಕೇಳುತ್ತಿದ್ದನು. ಅವನಿಗೆ ಉತ್ತರವನ್ನು ಹೇಳಲು ನನಗೇನೂ ತೋಚದೆ ಹೋಯಿತು. ರೂಪ ಮೋಹದಿಂದ ಮುಗ್ಧನಾದ ಸ್ವಾಮಿಯು ಸಮಾಧಾನೋಕ್ತಿಗಳಿಂದಲೂ ಸವಿ ನುಡಿಗಳಿಂದಲೂ ಬಹಳವಾಗಿ ಬೇಡಿಕೊಂಡನಾದಕಾರಣ ಆದ್ಯಂತವಾಗಿ ಎಲ್ಲವನ್ನೂ ವಿವರಿಸಿ ಹೇಳಿದೆನು. ಅವನು ಮೌನವಾಗಿ ಎಲ್ಲವನ್ನೂ ಕೇಳಿದನು. ಆದಿನ ರಾತ್ರಿಯೇ ಆತನು ನನಗೆ ತಿಳಿಯದ ಹಾಗೆ ವಿಷಪಾನದಿಂದ ಪ್ರಾಣತ್ಯಾಗಮಾಡಿದನು. ಹೃದಯದಲ್ಲಿನ ಬೆಂಕಿಯು ಇಪ್ಪಾಲು ಹೆಚ್ಚಿತು. ಅಸಂಖ್ಯ ಮಣಿಮಾಣಿಕ್ಯಗಳನ್ನೂ ಅಮೂಲ್ಯ ರತ್ನರಾಜಿಯನ್ನೂ

ಸಂಗ್ರಹಿಸಿಕೊಂಡು ನೂರುಮಂದಿ ಯುವತಿಯರನ್ನು ಸಂಗಡ ಕರೆದುಕೊಂಡು, ಒಂದೊಂದು ವೇಳೆ ಕುದುರೆಯಮೇಲೂ ಒಂದೊಂದುವೇಳೆ ಪಾದಚಾರಿಯಾಗಿಯೂ ದೇಶದೇಶ ತಿರುಗುವುದಕ್ಕೆ ಪ್ರಾರಂಭಿಸಿದೆನು. ಸಿಂಧು ತೀರದಲ್ಲಿಯೂ ಅರಾವಳಿ ಪರ್ವತಗಳಲ್ಲಿಯೂ ಬಿಕಿನೀರದ ಮರುಭೂಮಿಯಲ್ಲಿಯೂ ಹುಡುಕುತ್ತ ನೋಡಿಕೊಂಡು ಹೋದೆನು. ವೇಷವನ್ನು ಮರೆಮಾಡಿಕೊಂಡು ಮಿವಾರದ ರಾಜಧಾನಿಗೆ ಹೋದೆನು. ಅಲ್ಲಿ ಗ್ವಾಲಿಯರದ ರಾಜನು ಯವನರ ಯುದ್ಧದಲ್ಲಿ ಮೃತಪಟ್ಟನೆಂದೂ ಅವನ ಪಾಪಿಯಾದ ಹೆಂಡತಿಯೂ ಅವನೊಂದಿಗೆ ಅನುಮೃತೆಯಾದಳೆಂದೂ ಕೇಳಿದೆನು. ಆ ರಾಕ್ಷಸಿಯಮೇಲೆ ಮುಯ್ಯಿ ತೀರಿಸಿಕೊಳ್ಳಬೇಕೆಂದಿದ್ದೆನು. ಆ ಆಶೆಯೂ ನಿಮೂರ್ಲವಾಗಿ ಹೋಯಿತು. ಮನಸ್ಸಿನ ಆ ವಿಕೃತಾವಸ್ಥೆಯಲ್ಲಿ ಉನ್ಮಾದಿನಿಯಾಗಿ ಸಂಗೀತವನ್ನೂ ಚಿತ್ರವಿದ್ಯೆಯನ್ನೂ ಅಭ್ಯಾಸಮಾಡಿದೆನು. ಮನುಷ್ಯನು ಪರರ ಮನದ ವೇದನೆಯನ್ನು ತಿಳಿಯಲಾರನು. ಆದರೆ ಪ್ರೇಮಮಯಿಯಾದ ಪ್ರಕೃತಿಯ ಹೃದಯವು ಪರಕ್ಲೇಶದಿಂದ ಕರಗುವುದು. ಆದುದರಿಂದ ನಿರ್ಜನ ಕಾನನದಲ್ಲಿಯೂ ಪ್ರಾಣಿಶೂನ್ಯವಾದ ಗಿರಿಗುಹೆಗಳಲ್ಲಿಯೂ ಅನಂತ ಪ್ರವಾಹಿನಿಯಾದ ನದಿಗಳ ತೀರದಲ್ಲಿಯೂ ವೀಣೆಯ ಧ್ವನಿಯೊಂದಿಗೆ ಕೊರಳನ್ನು ಸೇರಿಸಿ ಅಕಪಟಪ್ರಾಣದಿಂದ ತಾರಸ್ವರದಲ್ಲಿ ಸಂಗೀತವನ್ನು ಹಾಡುತ್ತ ಮನದ ವ್ಯಥೆಯನೆಲ್ಲಾ ಸಂಕೋಚವಿಲ್ಲದೆ ಬಿಚ್ಚಿ ಹೇಳಿಕೊಳ್ಳುತ್ತಿದ್ದೆನು. ಸಮದುಃಖಭಾಗಿಗಳಾದ ತರುಲತಾದಿಗಳು ದೀರ್ಘನಿಶ್ವಾಸವನ್ನು ಬಿಟ್ಟು ಕರುಣಾಸ್ವರದಿಂದ ಮರ್ಮಭೇದಿಯಾದ ನನ್ನ ಕೊರಳೊಂದಿಗೆ ತಮ್ಮ ಸ್ವರವನ್ನು ಸೇರಿಸುವುವು. ಗಿರಿಗುಹೆಗಳು ವ್ಯಾಕುಲ ಹೃದಯವುಳ್ಳವುಗಳಾಗಿ ಹಾಹಾಕಾರ ಶಬ್ದದಿಂದ ನನ್ನ ಸಂಗೀತಧ್ವನಿಗೆ ಪ್ರತ್ಯುತ್ತರವನ್ನು ಕೊಡುತ್ತಿದ್ದವು. ಸ್ರೋತಸ್ವತಿಯಾದ ನದಿಗಳು ವಿಗಳಿತ ಪ್ರಾಣವುಳ್ಳವುಗಳಾಗಿ ನನ್ನ ವೀಣೆಯ ಝುಂಕಾರದಲ್ಲಿ ಕಲಕಲ ನಿನಾದದಿಂದ ಪ್ರೇಮಧಾರೆಯನ್ನು ಹೊಯ್ದು ಗಳಗಳ ದುಃಖಿಸುವುವು! ಈ ದಿನ ನೀನು ನನ್ನ ಸಂಗೀತದ ಸಾಮಾನ್ಯ ಪರಿಚಯವನ್ನು ಹೊಂದಿರುತ್ತಿ. ಆದರೆ ನನ್ನ ಸ್ವಕಪೋಲ ಕಲ್ಪಿತವಾದ ಚಿತ್ರಪಟವನ್ನು ನೋಡಿದರೆ ಸ್ತಬ್ಧರಾಗುವೆ. ಈಗ್ಗೆ ಹದಿನಾರು ವರ್ಷಕ್ಕೆ ಹಿಂದೆ ನನ್ನ ಮಡಿಲಲ್ಲಿ ಮಲಗಿ ಸ್ತನ್ಯ ಪಾನವನ್ನು ಮಾಡುತ್ತಿದ್ದ ಚಿಕ್ಕ ಹುಡುಗಿಯು ಶೈಶವಾವಸ್ಥೆಯನ್ನು ಅತಿಕ್ರಮಿಸಿ ಈಗ ನವಯೌವನದಲ್ಲಿರುವವಳ ಅವಿಕಲವಾದ ಪ್ರತಿಮೂರ್ತಿಯನ್ನು ಚಿತ್ರಪಟದಲ್ಲಿ ಅಂಕಿತಮಾಡಬಲ್ಲೆನು. ಈ ಹದಿನಾರುವರ್ಷ ಕಾಲ ಪ್ರತಿದಿನವೂ ಪ್ರತಿಮುಹೂರ್ತದಲ್ಲೂ ಅವಳನ್ನು ನನ್ನ ಮನಸ್ಸಿನ ಕಣ್ಣುಗಳಿಂದ ನೋಡುತ್ತಿದ್ದೇನೆ. ಇದುವರೆಗೂ ಅವನ್ನೆಲ್ಲಾ ನಿನಗೆ ತೋರ್ಪು ಮತ್ತಾರಿಗೂ ಹೇಳಿದವಳಲ್ಲ. ಈಗ

ನೀನು ರಾಜರಾಜೇಶ್ವರಿ ನಿನ್ನ ವಿಸ್ತರವಾದ ರಾಜ್ಯದಲ್ಲೆಲ್ಲೋ ಒಂದು ಏಕಾಂತ ಸ್ಥಳದಲ್ಲಿ ನನ್ನ ಆ ಪ್ರಾಣಪುತ್ತಲಿಕೆಯು ಔತುಕೊಂಡಿರ ಬಹುದು. ಹೇಗಾದರೂ ಅವಳನ್ನು ಒಂದು ನಿಮಿಷದ ಮಟ್ಟಿಗೆ ನನಗೆ ತೋರಿಸಕೂಡದೆ? ಅವಳನ್ನು ನಿಮಿಷ ಮಾತ್ರ ಮುದ್ದಿಟ್ಟು ಎತ್ತಿಕೊಂಡು ಸುಡುವ ಈ ಉನ್ಮತ್ತ ಹೃದಯವನ್ನು ತನುವುಮಾಡಿ ಕೊಳ್ಳುವೆನು.'' ಹೀಗೆಂದು ಹೇಳುತ್ತ ಮುಮತಾಜೆಯು ಸುಲತಾನೆಯ ಸೆರಗಿನಲ್ಲಿ ಕಣ್ಣು ಒರಸಿಕೊಂಡು ಪುನಃ ಹುಚ್ಚಿಯಹಾಗೆ ನಕ್ಕು ಹೇಳತೊಡಗಿದಳು:—"ಹಾ! ಹಾ! ಇದುವರೆಗೂ ನಿನಗೆ ಹೇಳುವುದಕ್ಕೆ ಮರೆತಿದ್ದೆನು ರಾಕ್ಷಸಿಯಾದ ಆ ತಾರಾಬಾಯಿಯ ಮೇಲಣ ಮುಯ್ಯಿ ಆಗಲೇ ತಿರಿಸಿಕೊಂಡೆನು. ಅವಳ ಮಗಳು ಹಿರಣ್ಮಯಿಯನ್ನು ನೀಚಕುಲದಲ್ಲಿ ಹುಟ್ಟಿದ ಒಬ್ಬ ಮುಸಲಮಾನನಿಗೆ ಮದುವೆ ಮಾಡಿಸಿದೆನು! ಆದರೆ ಮತ್ತೊಂದು ಮುಯ್ಯಿ ತೀರಿಸಿಕೊಳ್ಳುವುದು ಉಳಿದಿದೆ ಅದಕ್ಕೆ ಸಲುವಾಗಿ ಈ ದಿನ ಬಂದು ನಿನ್ನನ್ನು ನೋಡಿದೆನು. ಆದಾದರೆ ಈ ಪ್ರಾಣವಿರುವವರೆಗೂ ಪುನಃ ಬರಲಾರೆನು. ಆಗ್ರಾದಲ್ಲಿದ್ದಾಗ, ಮೊಗಲಸಾಮ್ರಾಜನು ನಿನ್ನ ಸಂಗಡ ಯುದ್ಧಮಾಡಲು ಹಿರಣ್ಮಯಿಯ ಭವಿಷ್ಯ ಗಂಡನನ್ನು ಸೇನಾಪತಿಯಾಗಿ ಮಾಡಿ ದಂಡನ್ನು ಕಳುಹಿಸಿರುವುದಾಗಿ ವರ್ತಮಾನವನ್ನು ಕೇಳಿದೆನು. ನೀನು ದಯವಿಟ್ಟು, ನಾನು ಹೋಗಿ ಅವನನ್ನು ಎದುರಿಸುವುದಕ್ಕೆ ಅವಕಾಶವನ್ನು ಕೊಡಬೇಕು.''

ಚಾಂದಸುಲತಾನೆಯು ಉನ್ಮಾದಿನಿಯ ಕೈಯನ್ನು ಹಿಡಿದುಕೊಂಡು ದಯಾರ್ದ್ರಹೃದಯದಿಂದ "ತಂಗಿ! ಸಮಾಧಾನವನ್ನು ತೆಗೆದುಕೊ. ಪ್ರತಿಹಿಂಸೆ ಮಾಡುವುದನ್ನು ಬಿಡು. ಮನುಷ್ಯನಿಗೆ ಸಾಧ್ಯವಿದ್ದರೆ, ಕಳೆದು ಹೋಗಿರುವ ನಿನ್ನ ಮಗಳು ಬಂದು ನಿನ್ನ ಮಡಲಲ್ಲಿ ಕೂಡುವಳು. ನೂರಾರು ಜನರನ್ನು ದೇಶದೇಶಕ್ಕೂ ಕಳುಹಿಸಿ ಹುಡುಕಿಸುವೆನು. ಇಲ್ಲಿಯೇ ಈಗ ವಿಶ್ರಮಿಸಿಕೊಂಡಿರು. ನಿನ್ನ ನಾರಿಯರ ಸೇನೆಯೂ ನನ್ನ ದುರ್ಗದಲ್ಲಿದ್ದುಕೊಂಡಿರಲಿ'' ಎಂದು ಹೇಳಿದಳು.

## ಹನ್ನೊಂದನೆಯ ಪರಿಚ್ಛೇದ

ಅಹಮದನಗರದಲ್ಲಿ ಸಮರಾತ್ರಿಯಲ್ಲಿ ಮೊಗಲರ ಶಿಬಿರದಲ್ಲಿ ಹೊಸ ಸೇನಾಪತಿ ಅಜಯಸಿಂಹನು ಏಕಾಕಿಯಾಗಿ ತನ್ನ ಕೊಠಡಿಯಲ್ಲಿ ಮಲಗಿದ್ದನು. ರಜನಿಯು ಅಂಧಕಾರಮಯವಾಗಿದ್ದಿತು. ದಿಗಂತವ್ಯಾಪಿಯಾಗಿದ್ದ ಆ ಅಂಧತಮಸ್ಸಿನಲ್ಲಿ ಆಕಾಶವೂ

ಭೂಮಿಯೂ ಚಲನವಿಲ್ಲದೆ ನೀರವವಾಗಿದ್ದವು. ಮೊಗಲರ ಶಿಬಿರವೂ ನಿಶ್ಶಬ್ದವಾಗಿ ನಿದ್ರಾವಸ್ಥೆಯಲ್ಲಿತ್ತು. ಅಜಯಸಿಂಹನು ನಿದ್ರಿತನಾಗಿರಲಿಲ್ಲ. ಅವನು ತೆರೆದಿದ್ದ ಗವಾಕ್ಷದಲ್ಲಿ ಕತ್ತಲೆ ಕವಿತಿದ್ದ ಗಗನವನ್ನು ನೋಡುತ್ತ ಚಿಂತಿಸುತ್ತಿದ್ದನು. ಅವನು ಉದಯಪುರವನ್ನು ಬಿಟ್ಟು ಸಮ್ರಾಜನೊಂದಿಗೆ ಬರುವುದಕ್ಕೆ ಮೊದಲು ಬಾಲ್ಯಸ್ನೇಹಿತೆಯಾದ ಹಿರಣ್ಮಯಿಯಿಂದ ಬೀಳ್ಕೊಂಡು ಕಣ್ಣೀರು ತುಂಬಿದವನಾಗಿ ವ್ಯಾಕುಲ ಹೃದಯದಿಂದ ಹೊರಟುಬಂದ ದಿನವೂ ಗಗನವು ಹೀಗೆ ಅಂಧಕಾರದಿಂದ ತುಂಬಿತ್ತು. ಅವನಿಗೆ ಒಮ್ಮೊಂದೊಮ್ಮೆ ತಾನು ಹೊರಟು ಬಂದ ಬಳಿಕ ಹಿರಣ್ಮಯಿಗೆ ಏನೋ ವಿಪತ್ತುಂಟಾಗಿರಬೇಕೆಂದು ತೋರಿತು. ತಾನು ಉದಯಪುರವನ್ನು ಬಿಟ್ಟು ಬಂದುದು ಕೆಟ್ಟ ಕೆಲಸವಾಯಿತೆಂದೂ ಕಂಡು ಕೇಳಿ ತಾನಾಗಿಯೇ ತನ್ನ ಪ್ರಾಣಸಖಿಗೆ ವೇದನೆಯನ್ನು ಉಂಟು ಮಾಡಿದನೆಂದೂ ಅದರಿಂದ ಅವಳಿಗೆ ಹೆಚ್ಚು ವಿಪತ್ತುಂಟಾಗಿದೆಯೆಂದೂ ಭಾವಿಸಿಕೊಂಡನು. ಆದರೆ ಅವನ್ನೆಲ್ಲಾ ಯೋಚಿಸಿಕೊಂಡು ಪ್ರಯೋಜನವೇನು? ಯುದ್ಧವು ಪೂರೈಸುವುದಕ್ಕೆ ಮುಂಚಿತವಾಗಿ ಹೊರಟುಹೋದರೆ ಸಮ್ರಾಜನಲ್ಲಿ ವಿಶ್ವಾಸಘಾತಕತೆ ಮಾಡಿದ ಹಾಗೆ ಆಗುತ್ತದೆ. ಕ್ಷತ್ರಿಯಧರ್ಮದಿಂದ ಭ್ರಷ್ಟನಾದ ಹಾಗೆ ಆಗುತ್ತದೆ. ಜನರು ಕಾಪುರುಷನೆಂದು ಹೇಳುವರು. ಹೊರಟು ಬರುವಾಗ ತಾನು ನೋಡಿದ್ದ ಹಿರಣ್ಮಯಿಯ ಪ್ರೇಮಭರಿತವಾದ ಕಟಾಕ್ಷವೂ ಸ್ನೇಹಪೂರ್ಣವಾಗಿಯೂ ಆವೇಗಮಯವಾಗಿಯೂ ಇದ್ದ ಕಂಠಸ್ವರವೂ ಸ್ಮೇರಹಾಸ್ಯಮಯವಾಗಿಯೂ ಸುಧಾಮಯವಾಗಿಯೂ ಇದ್ದ ಅಧರವೂ ಬಾರಿಬಾರಿಗೂ ನೆನಪಿಗೆ ಬರುತ್ತಿದ್ದವು. ವ್ಯಸನದಿಂದ ನಿಟ್ಟುಸುರನ್ನು ಬಿಟ್ಟು ಕಣ್ಣು ಒರಸಿಕೊಂಡನು. ಆ ಸಮಯದಲ್ಲಿ ಇದ್ದ ಹಾಗೆ ಆಗ್ನೇಯಪರ್ವತವೊಡೆದು ಅಗ್ನಿಜ್ವಾಲೆಯನ್ನು ಉಗಿದ ಹಾಗೆ ಘೋರಶಬ್ದದಿಂದ ನಿಶೀಥ ಆಕಾಶವೆಲ್ಲಾ ಶಲೆಗೊಂಡಿತು. ಸಿಡಿಲಮೇಲೆ ಸಿಡಿಲು ಬಿದ್ದಹಾಗೆ ಭೀಷಣವಾದ ಆ ನಿನಾದದಿಂದ ಮೊಗಲರ ಶಿಬಿರವು ನಡುಗಿ ಹೋಯಿತು. ಆಗಲೇ ಇದ್ದಿದ್ದ ಹಾಗೆ ಯುದ್ಧಕ್ಕೆ ಪ್ರಾರಂಭವಾಗಲಾರದೆಂದು ಮೊಗಲ ಸೈನ್ಯವು ನಿಶ್ಚಿಂತವಾಗಿ ನಿದ್ದೆಗೈಯ್ಯುತ್ತಿತ್ತು. ಸೈನ್ಯದವರು ಆಶ್ಚರ್ಯಗೊಂಡು ವಿಹ್ವಲಚಿತ್ತರಾಗಿ ಎದ್ದು ಹೊರಗೆ ಬಂದು ದುರ್ಗದ ಕಡೆ ನೋಡಿದರು. ಹನ್ನೆರಡು ಸೂರ್ಯರ ರಶ್ಮಿಜಾಲದಿಂದ ಗಗನವೆಲ್ಲಾ ಬೆಳಕಾದ ಹಾಗಾಗಿ ಅದರೊಂದಿಗೆ ಘೋರವಾದ ಆ ಶಬ್ದದಿಂದ ನಾಲ್ಕು ದಿಕ್ಕುಗಳೂ ಕಂಪಿತವಾದವು. ಮೊಗಲರು ಅಹಮದನಗರವನ್ನು ಒಂದೇ ತಡವೆಗೆ ಸುಟ್ಟು ನೆಲಸಮನಾಗಿ ಮಾಡಬೇಕೆಂದು ದುರ್ಗಕ್ಕೆ ಸಮೀಪಹಳ್ಳಗಳನ್ನು ತೆಗೆದು ರಾಶಿ ರಾಶಿ ಮದ್ದನ್ನು ಹುಗಿದಿಟ್ಟಿದ್ದರು. ಅಜಯಸಿಂಹನು ಮುಂದರಿದು ನೋಡಲಾಗಿ ಅವನ ಕೌಶಲವೆಲ್ಲಾ ವ್ಯರ್ಥ

ವಾದ ಹಾಗೆ ಕಂಡಿತು. ಶತ್ರುಪಕ್ಷದವರು ಪ್ರತಿಕೂಲವಾಗಿ ಖನಿಗಳನ್ನು ತೋಡಿ ಮದ್ದು ತುಂಬಿ ಎರಡು ಪಾರ್ಶ್ವಗಳಲ್ಲೂ ಬೆಂಕಿಯನ್ನು ಹಚ್ಚಿದ್ದರು. ಶತ್ರು ಪಕ್ಷದವರು ಜಯೋಲ್ಲಾಸದಿಂದ ಮೊಗಲ ಸೇನೆಯ ಮೇಲೆ ಗುಂಡುಗಳನ್ನು ಹಾರಿಸುತ್ತಿದ್ದರು. ನೋಡಲಾಗಿ ಯುದ್ಧದಲ್ಲಿ ಪರಾಜಯವೇ ನಿಶ್ಚಯವೆಂದು ಅಜಯನು ತಿಳಿದನು. ಆದರೂ ಮನಸ್ಸಿನಲ್ಲೊಂದು ಆಶೆಯು ಹುಟ್ಟಿ ದುರ್ಗದ ಪಾರ್ಶ್ವದಲ್ಲಿ ಮಾಡಿದ್ದ ಮೂರನೆಯ ಖನಿಗೆ ಬೆಂಕಿಯನ್ನು ಹಾಕಿದರೆ ದುರ್ಗದ ಒಂದು ಭಾಗವಾದರೂ ಬಿದ್ದು ಹೋಗುವುದೆಂದು ತಿಳಿದವನಾಗಿ ಸೈನ್ಯದವರನ್ನು ಕುರಿತು, ಘಟ್ಟಿಯಾಗಿ "ಈ ಇಪ್ಪತ್ತು ಸಾವಿರದ ಸೇನೆಯಲ್ಲಿ ಯಾರಾದರೂ ಕೆಲವರು ಶತ್ರುಗಳು ಕರೆಯುವ ಗುಂಡಿನ ಮಳೆಗೆ ಹೆದರದೆ ಬೆಂಕಿಯ ಜ್ವಾಲೆಯನ್ನು ದಾಟಿಕೊಂಡು ಹೋಗಿ ದುರ್ಗಕ್ಕೆ ಪೂರ್ವ ದಿಕ್ಕಿನಲ್ಲಿರುವ ಖನಿಗೆ ಬೆಂಕಿಯನ್ನು ಹಚ್ಚಿ ಪ್ರಾಣವನ್ನು ಬಿಡುವುದಕ್ಕೆ ಸಿದ್ಧರಾದರೆ ಇಪ್ಪತ್ತು ಸಾವಿರ ವೀರರು ಯುದ್ಧದಲ್ಲಿ ಸೋತರೆಂಬ ಅಪವಾದವು ದೂರವಾಗುವುದು. ನಿಮ್ಮಲ್ಲಿ ಅಂಥಾ ಶೂರರಿದ್ದರೆ, ಕಡೆಗೆ ಇಪ್ಪತ್ತು ಮಂದಿಯಾದರೂ, ಮುಂದಾಗಿ ಬಂದು ಓಡಿ ಹೋಗಿ ಆ ರೀತಿ ಮಾಡಿರಿ" ಎಂದು ಕೂಗಿ ಹೇಳಿದನು.

ಯಾರೂ ಮುಂದಾಗದಿರುವುದನ್ನೂ ಪ್ರತ್ಯುತ್ತರವನ್ನು ಕೊಡದಿರುವುದನ್ನೂ ನೋಡಿ ಅಜಯಸಿಂಹನು ಪಾರ್ಶ್ವದಲ್ಲಿದ್ದ ಯುವರಾಜ ಮೊರಾದನನ್ನು ಸಂಭೋಧಿಸಿ, "ಯುವರಾಜ! ದಿಲ್ಲಿಯ ಸಮ್ರಾಜನು ಕಾಪುರುಷರನ್ನು ಇಟ್ಟುಕೊಂಡು ಯುದ್ಧವನ್ನು ಮಾಡುತ್ತಾನೆ. ತಾವು ಸೇನಾಪತಿಯ ಭಾರವನ್ನು ವಹಿಸೋಣಾಗಲಿ. ನಾನೇ ಸ್ವಂತವಾಗಿ ಹೋಗಿ ಆ ಖನಿಗೆ ಬೆಂಕಿಯನ್ನಿಟ್ಟು ಆ ಬೆಂಕಿಯಲ್ಲಿ ಆತ್ಮವಿಸರ್ಜನೆ ಮಾಡಿಕೊಳ್ಳುವೆನು. ಇಲ್ಲವಾದರೆ ಈ ದಿನ ಜಯವನ್ನು ಹೊಂದುವ ಸಂಭವವಿಲ್ಲ" ಎಂದು ಹೇಳಿದನು.

ಹೀಗೆಂದು ಹೇಳಿ ಅಜಯಸಿಂಹನು ಕುದುರೆಯನ್ನೇರಿ ವೇಗವಾಗಿ ಹೋದನು. ಆದರೆ ಅವನು ಅಗ್ನಿಯಲ್ಲಿ ಆತ್ಮಸಮರ್ಪಣೆ ಮಾಡಿಕೊಳ್ಳಬೇಕಾದ ಸಂಭವವಿರಲಿಲ್ಲ. ಅವನು ಹೊರಟ ಸಮಯಕ್ಕೆ ಸರಿಯಾಗಿ ಬೆಂಕಿಯ ಕಿಡಿಗಳು ಹಾರಿ ಮೂರನೆಯ ಮದ್ದಿನ ಖನಿಯು ಹತ್ತಿಕೊಂಡಿದ್ದಿತು. ನೋಡುತ್ತಿದ್ದ ಹಾಗೆ ದುರ್ಗದ ಅತ್ತಕಡೆಯ ಭಾಗವು ಪ್ರಚಂಡವಾದ ಶಬ್ದದಿಂದ ನೆಲಕ್ಕೆ ಬಿದ್ದು ಅದರೊಂದಿಗೆ ಸಹಸ್ರಾಧಿಕ ಶತ್ರು ಸೈನ್ಯವು ಬೆಂಕಿಯಿಂದ ಸುಟ್ಟು ಹೋಯಿತು. ಮೊಗಲ ಸೈನ್ಯದವರು ಹೊಸ ಉತ್ಸಾಹ

ದಿಂದ ಪೂರ್ಣ ಉದ್ಯಮರಾಗಿ ಶತ್ರುಗಳ ದುರ್ಗವನ್ನು ಆಕ್ರಮಣಮಾಡಿದರು. ಶತ್ರು ದಳದವರು ಅಕಸ್ಮಾತ್ತಾಗಿ ಕೋಟೆಯ ಗೋಡೆಯು ಭಗ್ನವಾಗಿ ಬಿದ್ದು ಹೋದುದರಿಂದ ಭಗ್ನೋದ್ಯಮರಾದರು. ಸಮುದ್ರದ ಅಲೆಗಳ ಹಾಗೆ ಮೊಗಲ ಸೇನೆಯವರು ಏಕ ಕಾಲದಲ್ಲಿ ದುರ್ಗವನ್ನು ಆಕ್ರಮಣ ಮಾಡಿದುದರಿಂದ ಅವರನ್ನೆದುರಿಸಲು ಶತ್ರುಗಳು ಅಸಮರ್ಥರಾದರು. ಕೆಲವರು ಅಸ್ತ್ರಗಳನ್ನು ಬಿಟ್ಟು ಓಡಿ ಹೋದರು. ಬಹು ಭಾಗದ ಸೇನೆಯವರು ಬಹಳ ಹೊತ್ತು ಹೋರಾಡಿ ಯುದ್ಧದಲ್ಲಿ ಹತ ಆಹತರಾದರು. ಕೆಲವು ಮಂದಿ ಯುದ್ಧ ಮಾಡದೆ ಶತ್ರುಗಳಿಗೆ ಅಡಿಯಾದರು. ಮೊಗಲ ಸೈನ್ಯದ ಜಯೋಲ್ಲಾಸವು ಗಗನವನ್ನು ಮುಟ್ಟಿತು. ಒಮ್ಮಿಂದೊಮ್ಮೆ ಶ್ರವಣ ಭೇದಿಯಾದ ರಣ ಕೋಲಾಹಲವನ್ನು ಅತಿಕ್ರಮಿಸಿಕೊಂಡು ವೀಣೆಯ ಧ್ವನಿಯೊಂದು ಎದ್ದಿತು! ಮೊದಲು ಮೃದು ಮಧುರ ಅಸ್ಪಷ್ಟಸ್ವರ–ಬಳಿಕ ತಾಳಲಯ ಪೂರ್ಣ ಮೋಹ ಮಯವಾದ ಲಲಿತತಾನ–ಕ್ರಮವಾಗಿ ದಿಗಂತವ್ಯಾಪಿಯಾಗಿಯೂ ಘೋರ ಗರ್ಜನ ಶೀಲವಾಗಿಯೂ ಗಗನ ವಿಹಾರಿಯಾಗಿಯೂ ಇದ್ದ ಮೋಹನ ಝಂಕಾರವು ಆಕಾಶ ತಲದಲ್ಲಿಯೂ ಶೂರರ ವಕ್ಷದಲ್ಲಿಯೂ ಪ್ರಾಣಿಗಳ ಹೃದಯದಲ್ಲಿಯೂ ಪ್ರತಿಧ್ವನಿತವಾಗಲು ಆರಂಭಿಸಿತು. ಫಿರಂಗಿಗಳ ಗರ್ಜನೆಯೂ ಕತ್ತಿಗಳ ಝಣಝಣವೂ ಮೊಗಲ ಸೇನೆಯ ವಿಜಯ ನಿನಾದವೂ ಆಹತರಾದವರ ಆರ್ತ ನಾದವೂ ಮೃತಪ್ರಾಯರಾಗಿದ್ದವರ ಹಾಹಾಕಾರವೂ ಒಂದೇ ಕಾಲದಲ್ಲಿ ನಿಂತುಹೋಯಿತು! ಶಬ್ದಗಳೆಲ್ಲವೂ ಮನೋಮೋಹನವಾಗಿದ್ದದೊಂದು ಶಬ್ದದಲ್ಲಿ ವಿಲೀನವಾದ ಹಾಗೆ ತೋರಿತು! ಆ ವೀಣೆಯ ತಂತ್ರಿಗಳಲ್ಲಿ ಯಾವ ಮೋಹನ ಮಂತ್ರವಿದ್ದಿತೋ ನಾವು ಅದನ್ನರಿಯಲಾರೆವು! ಉಭಯ ಪಕ್ಷದವರೂ ಕದಲದೆ ನಿಶ್ಚೇಷ್ಟರಾಗಿ ಅವರವರು ನಿಂತಿದ್ದ ಸ್ಥಳಗಳಲ್ಲಿ ನಿಂತಿದ್ದರು. ಮೊಗಲ ಸೇನೆಯವರು ಎತ್ತಿದ್ದ ಕತ್ತಿಗಳು ಶತ್ರುಗಳ ಕುತ್ತಿಗೆಯ ಮೇಲೆ ಬೀಳದೆ ಎತ್ತಿದ್ದ ಹಾಗೆ ನಿಂತಿದ್ದವು. ಓಡಿ ಹೋಗುತ್ತಿದ್ದವರ ಕಾಲು ಮುಂದರಿದು ಹೋಗಲಿಲ್ಲ. ಎಲ್ಲರೂ ಸ್ವೈರಗಾಗಿ ಸ್ತಂಭಿತರಾಗಿ ನೋಡುತ್ತಿದ್ದ ಹಾಗೆ ರಾಣಿ ಚಾಂದ ಸುಲತಾನೆಯು ಕುದುರೆಯ ಮೇಲೆ ಏರಿಕೊಂಡು ಪ್ರಳಯಕಾಲದ ಮೇಘರಾಶಿಯ ಮಧ್ಯದಲ್ಲಿ ಮಿಂಚು ಬಂದ ಹಾಗೆ ಬಂದು ಲಲಿತವಾದ ಕೈ ಬೆರಳುಗಳ ತರ್ಜನದಿಂದ ಸೈನಿಕರನ್ನು ಓಡಿ ಹೋಗಕೂಡದೆಂದು ನಿಷೇಧಿಸಿದಳು. ಮತ್ತಾರು ಇವಳು? ಹೃದಯೋನ್ಮಾದಕರವಾದ ವೀಣೆಯ ಝಂಕಾರವನ್ನು ಮಾಡುತ್ತ ಭುವನ ಮೋಹನವೀಣೆಯ ಧ್ವನಿಯೊಂದಿಗೆ ಭುವನ ಮೋಹನ ಕಂಠಸ್ವರವನ್ನು ಸೇರಿಸಿ ಹಾಡುತ್ತ ಚಾಂದ ಸುಲತಾನೆಯ ಪಾರ್ಶ್ವದಲ್ಲಿ ಕುದುರೆಯಮೇಲೆ ಕುಳಿತು ರಮಣಿಯೊಬ್ಬಳು ರಣಕ್ಷೇತ್ರದಲ್ಲಿ

ದಲ್ಲಿ ಬರುತ್ತಿದ್ದಳು! ಅವಳ ತಲೆಯಿಂದ ಕಾಲಿನವರೆಗೂ ವಜ್ರ ಖಚಿತವಾದ ಉಡುಪುಗಳು ಮುಚ್ಚಿಕೊಂಡಿದ್ದವು. ಕಾಳಭುಜಂಗದ ಹಾಗಿದ್ದ ದೀರ್ಘವಾದ ವೇಣಿಯೊಂದು ಮಾತ್ರ ಕಾಣುತ್ತಿತ್ತು. ಕಟಿಬಂಧದಿಂದ ಕತ್ತಿಯೊಂದು ತೂಗಾಡುತ್ತಿತ್ತು. ಸಂಗೀತವು ಪೂರೈಸುವುದಕ್ಕೆ ಮುಂಚೆ ಓಡಿ ಹೋಗುತ್ತಿದ್ದ ಸೈನ್ಯದವರು ತಂಡತಂಡವಾಗಿ ಕೂಗುತ್ತ ಹಿಂದಿರುಗಿ ರಣಕ್ಷೇತ್ರಕ್ಕೆ ಓಡಿಬಂದರು. ಅಜಯಸಿಂಹನು ತನ್ನ ಸೈನ್ಯದವರನ್ನು ಉತ್ಸಾಹಗೊಳಿಸಿ ಮುಂದೆ ಬಂದು ನಿಂತನು. ಆಗ ರಮಣಿಯು ವೀಣೆಯನ್ನು ನೆಲದಮೇಲಿಟ್ಟು ಅಜಯಸಿಂಹನ ಎದುರಿಗೆ ಬಂದು ಕತ್ತಿಯನ್ನು ಹಿಡಿದೆತ್ತಿಕೊಂಡು, "ಅಜಯಸಿಂಹ!" ಎಂದಳು. ಅಜಯಸಿಂಹನ ಶರೀರವು ಮುಳ್ಳು ಚುಚ್ಚಿದಹಾಗೆ ನಡುಗಿತು. ಆಗ ದಿಲ್ಲೀಶ್ವರನು, "ನೋಡಿಕೊ, ನಾರೀ ಸೇನಾಪತಿಯ ಭ್ರೂಭಂಗಿಯಿಂದ ಭೀತನಾಗದಿರು. ಅವಳ ಉಜ್ವಲವಾದ ಕಟಾಕ್ಷಕ್ಕೆ ಬೆರಗಾಗಬೇಡ" ಎಂದು ಹೇಳಿದ್ದ ಕಡೆಯ ಮಾತುಗಳು ಸ್ಮರಣೆಗೆ ಬಂದವು. ಅವನು ತನ್ನ ಚಿತ್ತವಿಕಾರವನ್ನು ತಡೆದುಕೊಂಡು ಕತ್ತಿಯನ್ನು ಎತ್ತಿ ಹಿಡಿದುಕೊಂಡನು. ರಮಣಿಯು "ಇನ್ನು ಅಬಲೆಯಾದ ರಮಣಿಯ ಮೇಲೆ ವ್ಯರ್ಥವಾಗಿ ಶೌರ್ಯವನ್ನು ತೋರಿಸಿ ಪ್ರಯೋಜನವೇನು? ನಿನ್ನ ಸೈನ್ಯದವರು ಯುದ್ಧರಂಗವನ್ನು ಬಿಟ್ಟು ಓಡಿಹೋಗುವುದನ್ನು ನೋಡು!" ಎಂದಳು.

ಹೀಗೆಂದು ಹೇಳಿ ನಕ್ಕಳು. ಅವಳ ಆ ವಿಕಟವಾದ ನಗುವು ವಿಜಯಸಿಂಹನ ಹೃದಯವನ್ನು ತಟ್ಟಿತು. ಅವನು ಮಂತ್ರದಿಂದ ಮುಗ್ಧನಾದವನ ಹಾಗಾಗಿ ಹೆಂಗಸನ್ನು ನೋಡುತ್ತಿದ್ದನು. ಹೆಂಗಸು ಪುನಃ ನಕ್ಕು ಮುಖವನ್ನು ಮರೆಮಾಡಿದ್ದ ಅವಕುಂಠನವನ್ನು ತೆಗೆದುಬಿಟ್ಟಳು. ಅಜಯನು ನಡುಗಿ, "ಇದೇನು? ಇವಳು ಆ ಉನ್ಮಾದಿನಿ!" ಎಂದನು.

ಹನ್ನೆರಡನೆಯ ಪರಿಚ್ಛೇದ.

ಯುದ್ಧವು ಕೆಲವು ಕಾಲ ನಡೆದು ಬಳಿಕ ಚಾಂದಸುಲತಾನೆಯು ಮೊಗಲರ ಸಂಗಡ ಸಂಧಿಯನ್ನು ಮಾಡಿಕೊಂಡಳು. ಮೊಗಲರು ರಣಕ್ಷೇತ್ರದಲ್ಲಿ ನಾರೀಸೇನಾಪತಿಯ ವೀರತ್ವವನ್ನು ನೋಡಿ ಆಶ್ಚರ್ಯಗೊಂಡು ಭಗ್ನೋತ್ಸಾಹಿಗಳಾಗಿದ್ದರು. ಚಾಂದಸುಲತಾನೆಯು ವೀರಾಂಗನೆಯಾಗಿದ್ದಳಲ್ಲದೆ ಯಾವದೋ ದೇವತಾ ಉಪಾಸನದ ಬಲದಿಂದ ಅಸಾಧ್ಯ ಸಾಧನ ಮಾಡಬಲ್ಲವಳಾಗಿದ್ದಳೆಂದೂ, ಮಂತ್ರ ಬಲ

ದಿಂದ ನಿರ್ಜೀವವಾಗಿದ್ದ ಸೇನೆಯನ್ನು ಸಜೀವವಾಗಿ ಮಾಡಬಲ್ಲವಳಾಗಿದ್ದಳೆಂದೂ, ವೀಣೆಯ ಝೇಂಕಾರದಿಂದ ಶತ್ರುಗಳನ್ನು ಮಂತ್ರಮುಗ್ಧರನ್ನಾಗಿ ಮಾಡಬಲ್ಲವಳಾಗಿದ್ದಳೆಂದೂ ತಿಳಿದುಕೊಂಡಿದ್ದರು. ಚಾಂದಸುಲತಾನೆಯು, ತನ್ನ ಮಿತ್ರರಲ್ಲಿ ಐಕಮತ್ಯವಿಲ್ಲವೆಂದೂ ದೃಢಮನಸ್ಸು ಇಲ್ಲವೆಂದೂ ತನಗೆ ಹೆಚ್ಚು ಕಾಲ ಸಮ್ರಾಜನನ್ನ ಎದುರಿಸಿ ನಿಲ್ಲುವುದಕ್ಕೆ ಸೈನ್ಯದ ಬಲವು ಸಾಲದೆಂದೂ ಅದುಕಾರಣ ಸಂಧಿಮಾಡಿಕೊಳ್ಳುವುದು ಉಚಿತವೆಂದೂ ತಿಳಿದುಕೊಂಡಳು. ಸಂಧಿಯಾದುದರ ವಿವರವನ್ನು ಚರಿತ್ರೆಯ ಪಾಠಕರು ಚೆನ್ನಾಗಿ ತಿಳಿದಿರುವರು. ಅಜಯಸಿಂಹನು ಸಂಧಿಯ ಪ್ರಸ್ತಾಪಕ್ಕೆ ಒಪ್ಪಿಕೊಂಡನು.

ಬೇಸಿಗೆಯ ಕಾಲದಲ್ಲಿ ಒಂದುದಿನ ಮಧ್ಯಾಹ್ನದ ಮೇಲೆ ಅಜಯಸಿಂಹನು ಒಬ್ಬೊಂಟಿಗನಾಗಿ ಉದಯಪುರದ ಪ್ರಾಸಾದದ ಎದುರಿಗೆ ತನ್ನ "ದಾನವದಮನ"ವೆಂಬ ಕುದುರೆಯಿಂದಿಳಿದನು. ವಿಪುಳ ಶರೀರವುಳ್ಳದಾಗಿದ್ದ ಉದಯಪುರದ ಪ್ರಾಸಾದವು ಬಿಸಿಲ ತಾಪದಿಂದ ನಿಶ್ಚಲವಾಗಿ ಮೃತಪ್ರಾಯವಾಗಿದ್ದ ಹಾಗೆ ತೋರಿತು. ಕಾವಲಗಾರರಲ್ಲಿ ಕೆಲವರು ನೆಲದಮೇಲೆ ಮಲಗಿ ನಿದ್ರೆಗೈಯುತ್ತಿದ್ದರು. ಕೆಲವರು ಗೋಡೆಯನ್ನೊರಗಿ ಎದೆಗೆ ಬಂದೂಕವನ್ನು ಆನಿಸಿಕೊಂಡು ಕಣ್ಣು ಮುಚ್ಚಿದವರಾಗಿ ಅಫೀಮಿನ ಪೂರ್ಣಮಾತ್ರೆಯ ಸೇವನೆಯ ಪೂರ್ಣಸುಖವನ್ನು ಉಪಭೋಗಮಾಡುತ್ತಿದ್ದರು. ಕುದುರೆಯ ಗೊರಸಿನ ಶಬ್ದವನ್ನು ಕೇಳಿ ಅವರೆಲ್ಲರೂ ಎದ್ದುನಿಂತು ಅಜಯಸಿಂಹನಿಗೆ ಅಭಿವಾದನಮಾಡಿದರು. ಅಜಯನು, "ತಂದೆಗಳೆಲ್ಲಿ?" ಎಂದು ಕೇಳಿದನು.

ಪಹರೆಯವರಲ್ಲಿ ಮುದುಕನೊಬ್ಬನು, "ಅವರು ಎರಡು ದಿವಸಕ್ಕೆ ಮೊದಲು ಬಾದಷಹರ ಸಂದರ್ಶನಕ್ಕೆ ಹೋದರು. ಬಾದಷಹರ ಸಂಗಡ ಪುನಃ ಯುದ್ಧವಾಗುವ ಸಂಭವವಿದೆ" ಎಂದನು.

"ಏತಕ್ಕೆ?"

"ಅಂತಃಪುರಕ್ಕೆ ಹೋದರೆ ವಿಷಯವೆಲ್ಲಾ ಗೊತ್ತಾಗಬಹುದು"

ಅಜಯಸಿಂಹನ ಹೃದಯದಲ್ಲಿ ರಕ್ತಪ್ರವಾಹದ ವೇಗವು ಪ್ರಬಲವಾಗುತ್ತ ಬಂತು! ಅಂತಃಪುರದೊಳಗೆ ಹೋದರೆ ಹಿರಣ್ಮಯಿಯನ್ನು ಕಾಣಬಾರದೆ? ಅವನು ಮತ್ತಾವ ಪ್ರಶ್ನೆಯನ್ನೂ ಮಾಡದೆ ಮೆಲ್ಲಮೆಲ್ಲಗೆ ಅಂತಃಪುರದೊಳಗೆ ಹೋದನು. ಅಂತಃಪುರವು ನಿಶ್ಶಬ್ದವಾಗಿ ಕೋಲಾಹಲಶೂನ್ಯವಾಗಿದ್ದಿತು! ಬೀಸಣಿಗೆಯವರು ಕೈಯಲ್ಲಿ ಬೀಸಣಿಗೆಯನ್ನು ಹಿಡಿದಿದ್ದಹಾಗೆ ನೆಲದಮೇಲೆ ಬಿದ್ದಿದ್ದಾರೆ. ಒಬ್ಬನು ಸುಮ್ಮನೆ ಕುಳಿತು ಯೋಚನೆಯಲ್ಲಿ ಮಗ್ನನಾಗಿದ್ದಾನೆ. ಕೆಲವರು ಅರ್ಧ ಶಾಯಿತರಾಗಿ ಕುಳಿತು ಪಾರ್ಶ್ವದಲ್ಲಿದ್ದ ಸಂಗಾತಿಯೊಂದಿಗೆ ಮೆಲ್ಲಮೆಲ್ಲಗೆ ಮಾತಾಡುತ್ತಾರೆ. ಸಾಕಿದ ಹರಿಣ ಶಿಶುವು

ಗೋಡೆಯಬಳಿ ಮಲಗಿ ಶೂನ್ಯದೃಷ್ಟಿಯಿಂದ ಆಕಾಶವನ್ನು ನೋಡುತ್ತಿದೆ. ನವಿಲಿಗೆ ಕಟ್ಟಿದ ಬೆಳ್ಳಿಯ ಸರಪಣಿಯು ನವಿಲಿಲ್ಲದೆ ನೆಲದಮೇಲೆ ಬಿದ್ದಿದೆ. ಕೋಲಾಹಲಮಯ ವಾಗಿ ಪ್ರಮೋದಮಯವಾಗಿದ್ದ ಉದಯಪುರದರಾಜನ ಅಂತಃಪುರವು ಹೀಗೆ ಶೂನ್ಯ ವಾಗಿ ಮೃತಪ್ರಾಯವಾಗಿದ್ದುದನ್ನು ಎಂದಿಗೂ ನೋಡಿರಲಿಲ್ಲ. ಅಜಯನು ಶೂನ್ಯಹೃದ ಯನಾಗಿ ಮೆಲ್ಲಮೆಲ್ಲಗೆ ಹೆಜ್ಜೆಯಿಡುತ್ತ ಹಿರಣ್ಮಯಿಯ ಶಯನದ ಕೊಠಡಿಯಬಳಿ ಹೋಗಿ ಕಂಪಿತಕಂಠದಿಂದ "ಹಿರಣೆ!" ಎಂದು ಕೂಗಿದನು. ನಿಸ್ತಬ್ಧವಾಗಿದ್ದ ಕೊಠ ಡಿಯ ಪ್ರಾಂಗಣದಲ್ಲಿ ವಿಕಟವಾಗಿ 'ಹಿರಣೆ' ಎಂದು ಮಾರ್ದನಿಯಾಯಿತು!

ಅಲ್ಲಿಂದ ಹಿಂದಿರುಗಿ ಬರುತ್ತಿದ್ದನು. ಆಗ ಕಮಲಾವತಿಯು ಬೇಗನೆ ಅವನ ಬಳಿ ಓಡಿ ಬಂದಳು. ಅಜಯನು ಒಣಗಿ ಹೋಗಿದ್ದ ಕಂಠದಿಂದ "ಕಮಲೆ! ಹಿರಣ್ಮಯಿ ಎಲ್ಲಿ?" ಎಂದು ಕೇಳಿದನು.

ಕಮಲಾವತಿಯು ಸೆರಗಿನಿಂದ ಕಣ್ಣು ಒರಸಿಕೊಳ್ಳುತ್ತ "ಅಣ್ಣಾ!" ಎಂದಳು.

ಅಜಯನು ಪುನಃ, "ಕಮಲೆ! ಹಿರಣ್ಮಯಿಯು ಭೂಮಿಯಮೇಲೆ ಇಲ್ಲ ವೇನು?" ಎಂದು ಕೇಳಿದನು.

ಕಮಲಾವತಿ:—(ಅಳುತ)—ಅಣ್ಣಾ! ಹಿರಣ್ಮಯಿಯು ಸತ್ತು ಹೋಗಲಿಲ್ಲ. ಸತ್ತಿದ್ದರೂ ಇಷ್ಟು ದುಃಖಕ್ಕೆ ಕಾರಣವಾಗುತ್ತಿರಲಿಲ್ಲ.

ಅಜಯಸಿಂಹನು ಕೋಪಗೊಂಡು, "ಹಾಗಾದರೆ ಬೇಗನೆ ಹೇಳು—ಹಿರಣ್ಮಯಿ ಎಲ್ಲಿ?" ಎಂದನು.

ಕಮಲಾವತಿ:—ಹಿರಣ್ಮಯಿಯು ಈಗ ದಿಲ್ಲಿಯ ಬಾದಷಹನ ಅಂತಃಪುರದಲ್ಲಿ! ಅವಳನ್ನು ಬಲಾತ್ಕಾರದಿಂದ ಮುಸಲ್ಮಾನನೊಬ್ಬನು ಮದುವೆ ಮಾಡಿಕೊಂಡನೆಂದು ಎಲ್ಲರೂ ಹೇಳುತ್ತಾರೆ.

ಅಜಯಸಿಂಹನ ಮುಖಮಂಡಲವು ಪಾಂಡುವರ್ಣವನ್ನು ತಾಳಿ ಪುನಃ ರಕ್ತ ವೇರಿ ಕೆಂಪಾಯಿತು! ಅವನು ಅಲ್ಲಿಂದ ಮೆಲ್ಲಮೆಲ್ಲಗೆ ಹೊರಟುಹೋದನು. ಕಮಲಾ ವತಿಯು ಕಣ್ಣೀರು ಸುರಿಸುತ್ತ ಶ್ರಮಪರಿಹಾರ ಮಾಡಿಕೊಳ್ಳಬೇಕೆಂದು ಅನೇಕತಡವೆ ಬೇಡಿದಳು. ಅವನು ಯಾವಹೊಂದು ಉತ್ತರವನ್ನೂ ಹೇಳದೆ ಕೈಸನ್ನೆಯಿಂದ ನಿಷೇಧ ಮಾಡಿ ಹೊರಗೆಹೋಗಿ ಯಾರಿಗೂ ಏನೂ ಹೇಳದೆ ಆಹಾರಪಾತನ್ನೂ ಕೈಯಮೇಲೆ ಹಾಕಿಕೊಳ್ಳದೆ ಹಾರಿ ಕುದುರೆಯ ಮೇಲೆ ಹತ್ತಿಕೊಂಡನು. ದಾನವದಮನವು ಅವನ ಇಂಗಿತವನ್ನರಿತು ವಾಯುವೇಗದಿಂದ ಹೊರಟುಹೋಯಿತು.

## ಹದಿಮೂರನೆಯ ಪರಿಚ್ಛೇದ

ಸಮ್ರಾಜ ಅಕಬರಷಹನು ಆಗ್ರಾ ದುರ್ಗದ ಒಂದು ಏಕಾಂತವಾದ ಕೊಠಡಿಯಲ್ಲಿ ಒಬ್ಬನೇ ಕುಳಿತುಕೊಂಡು ಒಂದು ಕಾಗದವನ್ನೋದುತ್ತಿದ್ದನು. ಅಹಮ್ಮದನಗರದಿಂದ ದೂತಿಯೊಬ್ಬಳು ಕಾಗದವನ್ನು ತಂದು ಕೊಟ್ಟಿದ್ದಳು. ಕಾಗದವನ್ನು ಪಾರಸಿ ಭಾಷೆಯಲ್ಲಿ ಬರೆದಿತ್ತು. ವಾಚಕರ ಸೌಕರ್ಯಕ್ಕೆ ಸಲವಾಗಿ ಕಾಗದವನ್ನು ಕನ್ನಡಿಸಿ ಕೆಳಗೆ ಬರೆದಿದ್ದೇವೆ:—

"ಭಾರತೇಶ್ವರ! ಜನರು ನಿನ್ನನ್ನು ಔದಾರ್ಯಕ್ಕೆ ಪ್ರತ್ಯಕ್ಷ ಜೀವಿತ ಪ್ರತಿಮೂರ್ತಿಯೆಂದು ಹೇಳುತ್ತಾರೆ. ಅದುಕಾರಣ, ಯಾವಸಂಗತಿಯನ್ನು ಮನದಲ್ಲಿ ಯೋಚಿಸಿಕೊಂಡರೂ ಲಜ್ಜೆಯುಂಟಾಗಿ ಅಭಿಮಾನದಿಂದ ಸಂಕೋಚ ಪಡಬೇಕಾಗುವುದೋ, ಯಾವದನ್ನು ಹೃದಯದಲ್ಲಿ ಭಾವಿಸಿಕೊಂಡರೂ ಈ ಜೀವನಕ್ಕೆ ಜಲಾಂಜಲಿ ಕೊಡಬೇಕೆಂದೆನಿಸುತ್ತೇನೋ ಅಥವಾ ರಹಸ್ಯವಾದ ಸಂಗತಿಯನ್ನು—ನಾರಿಯಾಗಿ ನಾರಿಯ ಗೂಢವಾದ ಆ ರಹಸ್ಯವನ್ನು—ನಿನ್ನಲ್ಲಿ ವ್ಯಕ್ತಪಡಿಸಬೇಕೆಂದು ಇಂದು ಸ್ಥಿರಮಾಡಿಕೊಂಡಿದ್ದೇನೆ! ಲಲನೆಯರ ಕುಲಕ್ಕೆ ಗೌರವಸ್ವರೂಪವಾಗಿರುವ ಚಾಂದಸುಲತಾನೆಯ ಬಾಯಿಯಿಂದ, ನೀನು ಶತ್ರುಗಳನ್ನೂ ತಿರಸ್ಕರಿಸತಕ್ಕವನಲ್ಲವೆಂದು ಕೇಳಿದೆನು. ಇದು ನಿಜವೋ ಸುಳ್ಳೋ ನಾನರಿಯೆ—ಆದರೆ ನಾನು ನಿನಗೆ ಶತ್ರುವಲ್ಲ—ಏತಕ್ಕೆಂದರೆ, ಮಹಾರಾಜ್ಞಿ ಚಾಂದಸುಲತಾನೆಯು ನಿನ್ನೊಂದಿಗೆ ಸಂಧಿಮಾಡಿಕೊಂಡಿದ್ದಾಳೆ—ಸಂಧಿಯಪ್ರಸ್ತಾಪಕ್ಕನುಸಾರವಾಗಿ ಅವಳು ನಿನಗೆ ಬಿರಾರು ಪ್ರದೇಶವನ್ನು ಬಿಟ್ಟುಕೊಟ್ಟಿದ್ದಾಳೆ—ಅಹಾ! ಸಂಧಿಯ ವಿಚಾರವನ್ನು ಏನೆಂದು ಹೇಳಲಿ? ಅವಳು ಪ್ರಾಣಭಯದಿಂದ ಸಂಧಿಗೆ ಒಪ್ಪಿಕೊಂಡಳೆಂದು ನೀನು ತಿಳಿದಿರಬಹುದು. ಅವಳು ಈ ಯುದ್ಧದಲ್ಲಿ ಅನೇಕ ಸೈನ್ಯವನ್ನು ಕಳೆದುಕೊಂಡಿರುವುದು ನಿಜ—ಅವಳ ಧನಾಗಾರವು ಬರಿದಾಗಿರುವುದೂ ನಿಜ—ಅವಳು ಈ ಯುದ್ಧದಲ್ಲಿ ಫಿರಂಗಿಗುಂಡುಗಳು ಮುಗಿದುಹೋಗಿ ಸ್ವರ್ಣಮುದ್ರೆಗಳನ್ನೂ ರತ್ನಮಾಣಿಕ್ಯಗಳನ್ನೂ ಮಳೆಯಹಾಗೆ ಕರೆದು ಶತ್ರುಗಳನ್ನು ಸ್ತಂಭಿತಮಾಡಿದ್ದಾಳೆ—ಆದರೂ ಅವಳ ಬಳಿ ಲೆಕ್ಕವಿಲ್ಲದಷ್ಟು ಸ್ವರ್ಣಾಲಂಕಾರಗಳುಂಟು—ವಜ್ರ ಮುಂತಾದ ರತ್ನಗಳುಂಟು—ಅವು ಇನ್ನೂ ಪೂರೈಸಿಲ್ಲ—ಅವುಗಳನ್ನು ಮುಟ್ಟಿಲ್ಲ—ಬಹಳ ಸೇನೆಯನ್ನು ಹೊಗಳರು ಜೋಗಳಾಡಿಸಿದರು—ಆದರೆ ನನಗೆ ಪ್ರಿಯತಮವಾದ ಸ್ವಂತ ಸೈನ್ಯ ಬಲವು ನಿನ್ನ ಸೈನ್ಯವನ್ನೆದುರಿಸುವುದಕ್ಕೆ ಸಲವಾಗಿ ರಣಕ್ಷೇತ್ರಕ್ಕೆ ಬಂದಿರಲಿಲ್ಲ—ದಿಲ್ಲೀಶ್ವರ! ನನ್ನಲ್ಲಿ ನೂರು ಕಾಲಾಳು ಬಲವುಳ್ಳ

ನಾರಿಯರ ಸೈನ್ಯವಿದೆ—ನಾನೇ ಸ್ವಂತವಾಗಿ ರಣಕ್ಷೇತ್ರದಲ್ಲಿ ರಣಕೌಶಲವನ್ನೂ ವೀಣಾಝೇಂಕಾರವನ್ನೂ ಅಸಿಸಂಚಾಲನವನ್ನೂ ಅವರಿಗೆ ಕಲಿಸಿದ್ದೇನೆ—ನಿನ್ನ ಏದುಸಾವಿರ ಮೊಗಲಸೈನ್ಯವೂ ನನ್ನ ಈ ನೂರು ನಾರಿಯರ ಸೈನ್ಯಕ್ಕೆ ಸಮನಾಗದು—ಅದಲ್ಲದೆ, ನನ್ನ ಸ್ವಂತ ಸಂಜೀವಿನೀ ವೀಣೆ—ಶತ್ರುಸಂಹಾರಿಯಾದ ಕತ್ತಿ. ಇವಕ್ಕೆಲ್ಲಾ ಹೆಚ್ಚಾದ ಯಾರಿಗೂ ಹೆದರದ ವಜ್ರದಹಾಗೆ ಕಠಿಣವಾದ ನನ್ನ ಪ್ರಾಣ! ನಿನ್ನ ಹೊಸ ಸೇನಾಪತಿಯನ್ನು ಕೇಳಿದರೆ ಮುಮತಾಜಬೇಗಂ ಗಂಟುಮಾತು ಹೇಳಿ ಜಲ್ಲಿಕೊಡುವವಳಲ್ಲವೆಂದು ಗೊತ್ತಾಗುವುದು—ಹಾಗಾದರೆ ಚಾಂದಸುಲತಾನೆಯು ಈರೀತಿ ಸಂಧಿಯನ್ನು ಮಾಡಿಕೊಂಡಳೇಕೆ? ನನ್ನ ಹೇಳಿಕೆಯ ಮೇರೆಗೆ ಮಾಡಿಕೊಂಡಳು—ಈ ಅಭಾಗಿನಿಯಾದ ಮುಮತಾಜಳು ಹೃದಯವೇದನೆಯಿಂದ ಕಾತರಳಾಗಿ ಅವಳ ಅಭೀಷ್ಟಸಾಧನೆಗೋಸ್ಕರ ಈ ಕಟ್ಟಡಕ್ಕೆ ಒಪ್ಪಿಕೊಂಡಳು—ನಿನ್ನಲ್ಲಿ ನಾನು ಹೇಳಿಕೇಳುವುದೊಂದು ಪ್ರಸ್ತಾಪವುಂಟು-ಅದನ್ನು ಹೇಗೆ ಹೇಳಿಕೊಳ್ಳಲಿ? ಹೇಳಬೇಕೆಂದರೆ ಹೃದಯವು ಒಪ್ಪುವುದಿಲ್ಲ—ಬರೆಯುವದಕ್ಕೆ ಲೇಖನಿಯು ನಡಿಯುವದಿಲ್ಲ—ಭಾರತೇಶ್ವರ! ಕ್ಷಮಿಸಬೇಕು—ವಿದ್ಯಮಾನಗಳೆಲ್ಲಾ ಒಂದೇತಡವೆ ಹೇಳಲಾರೆನು—ಎಲ್ಲಾ ಸಂಗತಿಗಳನ್ನೂ ಕೇಳಬೇಕಾದ ಅವಶ್ಯಕವಿಲ್ಲ—ಅದೊಂದು ದೊಡ್ಡ ಕಥೆ—ಮತ್ತೊಂದು ತಡವೆ ಅದನ್ನೆಲ್ಲಾ ಹೇಳುವೆನು-ಪಾಪಿಷ್ಟನಾದ ಗ್ವಾಲಿಯರದ ರಾಜನಿಗೂ ಪಿಶಾಚಿಯಾದ ತಾರಾಬಾಯಿಗೂ ಮಗಳಾದ ಹಿರಣ್ಮಯಿಯನ್ನು ನೀಚಕುಲದ ಮುಸಲಮಾನನೊಬ್ಬನು ಮದುವೆ ಮಾಡಿಕೊಂಡದಿನ (ಆಹಾ! ಆದು ಎಂಥಾ ಸುದಿನ!) ಉನ್ಮಾದಿನಿಯೊಬ್ಬಳು ತನ್ನ ಪರಿಚಯವನ್ನು ತಮಗೆ ತಿಳಿಸುವದಾಗಿ ಹೇಳಿದ್ದುದು ನೆನಪಾಗದಿಯೆ? ಉನ್ಮಾದಿನಿ ಯಾರೆಂಬುದು ಈಗ ತಿಳಿಕೆಗೆ ಬಂದಿತೆ? ಮತ್ತೊಂದು ತಡವೆ ನನ್ನ ವೃತ್ತಾಂತವನ್ನೆಲ್ಲಾ ಸಂಪೂರ್ಣವಾಗಿ ಹೇಳುವೆನು—ಒಂದೇ ತಡವೆ ಎಲ್ಲವನ್ನೂ ಹೇಳಲಾರೆನಾದುದರಿಂದ ಪ್ರಸ್ತುತ ಈ ಕಾಗದದಲ್ಲಿ ಒಂದು ಚಿತ್ರಪಟವನ್ನು ಗರ್ಭೀಕರಿಸಿದ್ದೇನೆ—ತಮ್ಮ ಇಷ್ಟಪ್ರಕಾರ ತಮಗೆ ಬಿರಾರಪ್ರದೇಶವನ್ನು ಬಿಟ್ಟು ಕೊಟ್ಟು ಯುದ್ಧವನ್ನು ನಿಲ್ಲಿಸಿ ಸಂಧಿಯನ್ನು ಮಾಡಿಕೊಂಡಿದ್ದೇನೆ. ನನ್ನ ಕತ್ತಿಗೆ ಇದ್ದ ತಮ್ಮ ಹೊಸ ಸೇನಾಪತಿಯ ರಕ್ತದ ತೃಷೆಯಿಂದ ಅವನನ್ನು ಬಿಡುಗಡೆ ಮಾಡಿದ್ದೇನೆ—ಅದಕ್ಕೆ ಪ್ರತಿಯಾಗಿ ನಿನ್ನಲ್ಲಿ ನನ್ನದೊಂದು ಭಿಕ್ಷೆ—ಏನೆಂದರೆ, ಈ ಚಿತ್ರಪಟದಲ್ಲಿ ಅಂಕಿತವಾಗಿರುವ ಹುಡುಗಿಯನ್ನು ನನಗೆ ತಂದು ಕೊಡಬೇಕು—ಅವಳಲ್ಲಿ ನಿನ್ನದೇನೆಂದು ನೀನು ಕೇಳಬಹುದು. ಅದನ್ನು ಕುರಿತು ನಾನೇನೂ ಹೇಳಲಾರೆನು. ಆದರೆ ನನ್ನ ಪ್ರಾಣವು ಯಾವ ಸಮಾಧಾನಕ್ಕೂ ಒಪ್ಪುವದಾಗಿಲ್ಲ. ನಾನು ನಿನ್ನಲ್ಲಿ ನನ್ನ ಹೃದಯವನ್ನು ಬಿಚ್ಚಿ ಹೇಳಿಕೊಂಡರೆ ನನ್ನಾಶೆಯು ಕೈಗೂ

ಹುವುದೆಂದು ಕಿವಿಯಲ್ಲಿ ಯಾರೋ ಹೇಳಿದಹಾಗೆ ತೋರುತ್ತದೆ. ಸಮಸ್ತವಾದ ಆರ್ಯಾವರ್ತವೂ ನಿನ್ನ ನಖದರ್ಪಣದಲ್ಲಿ ಅಂಕಿತವಾಗಿದೆ. ಹಿಮಾಲಯಶಿಖರದಿಂದ ವಂಗೋಪಸಾಗರದ ತೀರದವರೆಗೂ ಇರುವ ಪ್ರತಿಯೊಂದು ಪರ್ಣಕುಟೀರವೂ ಪ್ರತಿಯೊಂದು ರಾಜಪ್ರಾಸಾದವೂ ಕರತಲಾಮಲಕವಾಗಿದೆ. ದಿಲ್ಲಿಯ ಸಾಮ್ರಾಜನು ಇಂದು ರತ್ನಸಿಂಹಾಸನದಲ್ಲಿ ಕುಳಿತಿರುವನು. ನಾಳೆ ಅಕಬರಷಹನು ಗೋದಾವರಿ ಪುಳಿನದಲ್ಲಿರುವ ಸನ್ಯಾಸಿಯ ತಪೋವನದಲ್ಲಿ ಛದ್ಮವೇಷದಲ್ಲಿ ನಿಂತಿರುವನು. ಆದುದರಿಂದ ನಾಳೆ ಆ ಹುಡುಗಿಯು ನಿನ್ನ ದೃಷ್ಟಿಗೆ ಸಂಬಂಧವುಂಟಾದರೂ ಆಗಬಹುದು. ನಾನು ಹನ್ನೆರಡುವರ್ಷಕಾಲದಿಂದ ಹುಡುಗಿಗೆ ಸಲುವಾಗಿ ಉನ್ಮಾದಿನಿಯ ವೇಷದಲ್ಲಿ ಗಿರಿ ಗುಹೆಗಳಲ್ಲಿಯೂ ಗಹನಕಾನನಗಳಲ್ಲಿಯೂ ಅಲೆಯುತ್ತಿದ್ದೆನು. ಸನ್ಯಾಸಿಯವೇಷವನ್ನು ತಾಳಿ ವಿಂಧ್ಯಗಿರಿಯ ತುಷಾರಮಯವಾದ ಪಾಷಾಣಗಳ ಮೇಲೆ ಅನೇಕ ರಾತ್ರಿಗಳನ್ನು ಕಳೆದಿರುವೆನು. ಆದರೂ ನನ್ನ ಆಶೆಯು ಕೈಗೂಡಲಿಲ್ಲ. ಭಾರತೇಶ್ವರ! ನೀನು ನನ್ನ ಆಶೆಯನ್ನು ಕೈಗೂಡಿಸಬಲ್ಲೆಯಾ? ಈ ಅಭಾಗಿನಿಯಾಗಿ ಕಾತರಪ್ರಾಣವುಳ್ಳ ಹುಚ್ಚು ಹೆಂಗಸಿನ ದುಃಖವೃತ್ತಾಂತವನ್ನು ಕೇಳಿ ನಗುವಿಯೋ ಅಥವಾ ಕೋಪಗೊಳ್ಳುವಿಯೋ ಅದನ್ನು ನೀನೇ ಬಲ್ಲೆ.

ಮುಮತಾಜಬೇಗಂ"

ಅಕಬರಷಹನು ಕಾಗದವನ್ನೋದಿ ಅದರಲ್ಲಿದ್ದ ಚಿತ್ರಪಟವನ್ನು ನೋಡಿ, "ಮುಮತಾಜಬೇಗಂ! ಆಶ್ಚರ್ಯಪ್ರಸ್ತಾಪ!" ಎಂದೆಂದು ಕೊಂಡನು. ಆ ಸಮಯದಲ್ಲಿ ದ್ವಾರಪಾಲಕನು ಬಂದು "ಸೇನಾಪತಿ ಅಜಯಸಿಂಹನು ಪ್ರಭುಗಳ ಅಪ್ಪಣೆಯನ್ನೆದುರುನೋಡುತ್ತ ಬಾಗಿಲಲ್ಲಿ ನಿಂತಿದ್ದಾನೆ" ಎಂದು ಅರುಹಿದನು. ದ್ವಾರಪಾಲಕನ ಬಿನ್ನಹ ಪೂರೈಸುವದರೊಳಗೆ ಅಜಯಸಿಂಹನು ಕೊಠಡಿಯೊಳಗೆ ಪ್ರವೇಶ ಮಾಡಿದ್ದನು. ಅವನ ಮುಖಮಂಡಲವು ಹೆಚ್ಚು ಪಾಂಡುವರ್ಣವುಳ್ಳದುದಾಗಿ ಮೈಯೆಲ್ಲಾ ಹೆಚ್ಚು ಬೆವತು ನಡುಗುತ್ತಿತ್ತು. ಅಕಬರನು ನೋಡಿ, "ವತ್ಸ, ಅಜಯ! ಮಾರ್ಗಾಯಾಸದಿಂದ ಬಹಳ ಬಳಲಿರುವ ಹಾಗಿದೆ. ಈಗ ವಿಶ್ರಮಿಸಿಕೊಂಡಿರು. ನಿನ್ನ ಸಂಗಡ ಮಾತಾಡುವುದು ಬಹಳ ಉಂಟು. ಕಡೆಗೆ ಎಲ್ಲವನ್ನೂ ಹೇಳುವೆನು. ನೀನು ಅಹಮದ್‌ನಗರದ ಯುದ್ಧದಲ್ಲಿ ವೀರಸೇನಾಪತಿಯ ಹಾಗೆ ಕಾರ್ಯವನ್ನು ನಿರ್ವಹಿಸಿರುತ್ತಿ. ಅದಕ್ಕೆ ಪುರಸ್ಕಾರವಾಗಿ"—

ಮಾತುಪೂರೈಸುವದರೊಳಗೆ ಅಜಯಸಿಂಹನು ಕಂಪಿತ ಕಂಠದಿಂದ, "ಅದಕ್ಕೆ ಪುರಸ್ಕಾರವಾಗಿ ಸುರಸುಂದರಿಯಾದ ಹಿರಣ್ಮಯಿಯು ನೊಗಲ[illegible]ಯು ಅಂಕದಲ್ಲಿ

ಪ್ರಕಾಶಿಸುತ್ತಿರುವಳು. ಕ್ಷತ್ರಿಯಕುಲಾಂಗಾರನಾದ ಅಜಯಸಿಂಹನ ಈಸ್ವರ್ಗೀಯವಾದ ಕತ್ತಿಗೆಇರುವ ಯವನ ರಕ್ತದ ತೃಷೆಯು ಇನ್ನೂ ತೃಪ್ತಿಯಾಗದಿರುತ್ತದೆ. ” ಎಂದನು.

ಹೀಗೆಂದು ಹೇಳುತ್ತ ಅಜಯಸಿಂಹನು ಮೂರ್ಛೆಗೊಂಡು ಅಕಬರಷಹನ ಸುವರ್ಣಮಯವಾದ ಆಸನದ ಕೆಳಗೆ ಕಲ್ಲು ಹರಡಿದ್ದ ನೆಲದಮೇಲೆ ಬಿದ್ದುಬಿಟ್ಟನು,

## ಹದಿನಾಲ್ಕನೆಯ ಪರಿಚ್ಛೇದ.

ಹಿರಣ್ಮಯಿಯು ಆಗ್ರಾ ದುರ್ಗದಲ್ಲಿ ಬಾದಷಹನ ಅಂತಃಪುರದಲ್ಲಿರುತ್ತಿದ್ದಳು. ಬಾದಷಹನು ಹಿರಣ್ಮಯಿಯನ್ನು ತನ್ನ ಮಗಳಹಾಗೆ ರಕ್ಷಿಸುತ್ತ ನೋಡಿಕೊಂಡಿದ್ದನೆಂದೂ ಅವಳಿಗೆ ಸಲುವಾಗಿ ಪ್ರತ್ಯೇಕ ಮಹಲನ್ನು ಬಿಟ್ಟುಕೊಟ್ಟಿದ್ದನೆಂದೂ ಅವಳ ಶುಶ್ರೂಷೆಗೋಸ್ಕರ ಹಿಂದೂ ಪರಿಚಾರಕರು ಗೊತ್ತಾಗಿದ್ದರೆಂದೂ ಅವಳ ಪರಿಚಾರಕರ ಹೊರ್ತು ಬೇರೆಜನರು ಅಲ್ಲಿಗೆ ಹೋಗುತ್ತಿರಲಿಲ್ಲವೆಂದೂ ಊರಲ್ಲೆಲ್ಲಾ ಸುದ್ದಿಯು ಹರಡಿಕೊಂಡಿದ್ದಿತು.

ಒಂದು ದಿನ ಸಾಯಂಕಾಲ ಹಿರಣ್ಮಯಿ ಒಬ್ಬಳೇ ಕುಳಿತುಕೊಂಡು ಯೋಚಿಸುತ್ತಿದ್ದಳು. ಆ ಸಮಯದಲ್ಲಿ ಗವಾಕ್ಷದ ಹೊರಗಡೆ ಆಭರಣಗಳ ಸಿಂಜನ ಶಬ್ದವು ಕೇಳಿಸಿತು. ಅದರೊಂದಿಗೆ ರಮಣಿಯ ಮಧುರವಾದ ಕಂಠದಲ್ಲಿ “ಹಿರಣ್ಮಯಿ ! ಎಂದು ಕೂಗಿದ ಹಾಗೆ ಕೇಳಿಸಿತು. ಹಿರಣ್ಮಯಿಯು ಆತ್ತಕಡೆ ನೋಡಿದಳು. ಅವಳು ದುರ್ಗಕ್ಕೆ ಬಂದಾರಭ್ಯ ಯಾರೂ ಅವಳನ್ನು ಹಿರಣ್ಮಯಿ ಎಂದು ಕರೆದಿರಲಿಲ್ಲ. ಹೊರಗಿನಿಂದ ಆ ರಮಣಿಯು ಶುದ್ಧವಾದ ರಾಜಪೂತಭಾಷೆಯಲ್ಲಿ, “ಹಿರಣ್ಮಯಿ! ಅಕ್ಕ! ನಿನ್ನ ಕಾಲಿಗೆ ಬೀಳುತ್ತೇನೆ. ನಿನ್ನ ಮನೆಯೊಳಗೆ ಬರುವುದಕ್ಕೆ ಅಪ್ಪಣೆಕೊಡು. ನೀನು ಬಂದು ತಿಂಗಳಾಯಿತು. ನಿನ್ನನ್ನು ನೋಡಿ ಒಂದೆರಡು ಮಾತಾಡುವುದಕ್ಕೂ ನನಗೆ ಅದೃಷ್ಟವಿಲ್ಲ. ನಿತ್ಯ ಬಂದರೂ ದ್ವಾರಪಾಲಕರು ಬಾದಷಹನ ಅಪ್ಪಣೆಯಿಲ್ಲವೆಂದು ಒಳಕ್ಕೆ ಬಿಡರು. ನೀನು ಅಪ್ಪಣೆಯನ್ನು ಕೊಟ್ಟರೆ ಬಾದಷಹನು ನನ್ನ ಮೇಲೆ ಕೋಪಮಾಡಲಾರನು. ಮುಸಲಮಾನಿಯೊಂದಿಗೆ ಮಾತಾಡಿದರೆ ಜಾತಿಯು ಹೋಗದು. ನಾನು ಒಳಗೆ ಬರಬಹುದೆ ?” ಎಂದು ಕೇಳಿದಳು.

ಹಿರಣ್ಮಯಿ :—ನೀನಾರು ? ಒಳಗೆ ಬಾ.

ರಮಣಿಯು ಒಳಗೆ ಬಂದಳು. ಅವಳು ಸುಂದರಿ; ತೆರೆಹಾಯ್ದು ಸೂಸಿ ಹರಿಯುವ ಹಾಗೆ, ಪೂರ್ಣಪ್ರವಾಹವುಳ್ಳ ನದಿಯ ವಕ್ಷದಲ್ಲಿ ತೆರೆಗಳು ಸರಸವಾಡುವ

ಹಾಗೆ, ರಮಣಿಯ ಪೂರ್ಣವಿಕಸಿತವಾದ ದೇಹದಲ್ಲಿ ಚಂಚಲವಾಗಿ ತಿಳಿಯಲ್ಲದೆ ಲೀಲಾ ಮಯವಾಗಿದ್ದ ಸೌಂದರ್ಯರಾಶಿಯು ಉಕ್ಕುತ್ತಿತ್ತು. ಮುಖವನ್ನು ನೋಡಿದರೆ ಬಾಲೆ ಎಂದು ಭ್ರಮೆಯುಂಟಾಗುವುದು. ಬಾಲೆಯ ದೃಷ್ಟಿಯ ಹಾಗೆ ಸರಳವಾದ ಚಂಚಲ ವಾದ ದೃಷ್ಟಿ. ಆ ದೃಷ್ಟಿಯು ಯಾವಾಗಲೂ ಪುರುಷರ ಕುಟಿಲವಾದ ಕಟಾಕ್ಷದಿಂದ ಪ್ರತಿಹತವಾಗಿದ್ದಹಾಗೆ ಕಾಣಲಿಲ್ಲ. ಬಾಲೆಯ ತುಟಿಯಹಾಗೆ ನಸುನಗೆ ಪೂಸಿದುದಾ ಗಿಯೂ ಸರಳತಾಮಯವಾಗಿಯೂ ಅನಾಘ್ರಾತವಾದುದಾಗಿಯೂ ಕುಂದದ ಪರಿಮಳ ವುಳ್ಳದುದಾಗಿಯೂ ಇದ್ದ ಗುಲಾಬಿ ಹೂವಿನಹಾಗಿದ್ದ ತುಟಿ. ಬಾಲೆಯ ಕಂಠದ ಹಾಗೆ ಸರಳವಾದ ಸುಧಾಮಯವಾದ ಕಂಠಸ್ವರ. ಉಡುಪಿನಿಂದ ಯವನರಬಾಲೆಯೆಂದು ತೋರುವುದು. ಮೇಲುಮುಸುಕೂ ಮೇಲುದೂ ರತ್ನರಾಜಿಯಿಂದ ಬೆಳಗುತ್ತಿದ್ದವು. ಕಂಠಹಾರದಲ್ಲಿಯೂ ಕನಕವಲಯದಲ್ಲಿಯೂ, ಕಾಲುಗೆಜ್ಜೆಗಳಲ್ಲಿಯೂ ಮುತ್ತು ಮುಂತಾದ ರತ್ನಗಳು ಪ್ರಕಾಶಿಸುತ್ತಿದ್ದವು. ಬೆರಳುಗಳಲ್ಲಿ ವಜ್ರದಉಂಗುರಗಳು. ಹೆಂಗಸು ಮುಖದ ಮೇಲೆ ಬಿದ್ದಿದ್ದ ಮುಂಗುರುಳನ್ನು ಸರಿಮಾಡಿಕೊಂಡು “ ನನ್ನ ಉಡುಪನ್ನು ನೋಡಿ ಆಶ್ಚರ್ಯಪಡುವಾಗಿದೆಯಲ್ಲವೆ! ಅಕ್ಕ ! ಆದರೆ ನನಗೆ ಈ ಮುಸಲ್ಮಾನಿ ಉಡು ಪಿನಮೇಲೆ ಬಹಳ ಆಶೆ. ನಿನ್ನ ಹಾಗೆ ನನಗೂ ಇದರಮೇಲೆ ಆಶೆಯಿರಲಿಲ್ಲ. ನಿಜವಾ ಗಿಯೂ ಈ ಮೇಲುದನ್ನೂ ಮೇಲುಮುಸಕನ್ನೂ ಕಂಡರೆ ನಗೆ ಬರುತ್ತಿತ್ತು. ಈಚೀಚೆಗೆ, ರಾಜಪುತಾನೆಯ ಉಡುಪಿಗಿಂತ ಯವನರ ಉಡುಪು ಹೆಚ್ಚು ಸುಂದರವೆಂದು ಬೋಧೆ ಯಾಯಿತು !” ಎಂದಳು. ಹಿರಣ್ಮಯಿಯು ಆಶ್ಚರ್ಯದಿಂದ ಹೆಂಗಸಿನ ಮುಖವನ್ನು ನೋಡಿ, “ ರಾಜಪೂತ ನಾರಿ! ಹಾಗಾದರೆ ನೀವು ಯುವರಾಜ ಸಲೀಮನ ಪತ್ನಿ ಅಂಬರ ಕುಮಾರಿಯೆ ? ಎಂದಳು.

ಹೆಂಗಸು ಮೆಲ್ಲಗೆ ನಕ್ಕು, “ ಅಕ್ಕ ! ನೀನು ಸರಿಯಾಗಿ ಹೇಳಿದೆ ! ನಾನೇ ಆ ನಿರ್ಭಾಗ್ಯೆ ! ಆಹಾ ! ನಿನ್ನ ಮುಖವು ಎಷ್ಟು ಸುಂದರವಾಗಿದೆಯೆ ! ಒಂದು ತಡವೆ ಮುದ್ದಿಟ್ಟುಕೊಳ್ಳಬೇಕೆಂದು ಆಶೆಯಾಗುತ್ತದೆ ! ಎಲ್ಲರೂ ಬಾದಷಹನ ಅಂತಃಪುರದಲ್ಲಿ ರುವ ಸುಂದರಿಯರ ಹಾಗೆ ರೂಪವತಿಯರು ಪ್ರಪಂಚದಲ್ಲಿಲ್ಲವೆಂದು ಹೆಮ್ಮೆ ಹೇಳಿ ಕೊಳ್ಳುತ್ತಾರೆ ! ಅವರ ರೂಪದ ಅಹಂಕಾರಕ್ಕೆ ಬೆಂಕಿ ಹಾಕಿ ಸುಟ್ಟರು ! ಅಕ್ಕಾ ! ನಿನ್ನನ್ನು ಅವರ ಮಧ್ಯದಲ್ಲಿ ಕುಳ್ಳಿರಿಸಿ ಎಲ್ಲರಿಗೂ ತೋರಿಸಬೇಕೆಂದು ಆಶೆಯಾಗುತ್ತದೆ! ತಲೆಬಾಚಿ ಹೆರಳು ಹಾಕಿಕೊಳ್ಳಲಿಲ್ಲವೇಕೆ ? ಅಕ್ಕ ! ಬಾರೆ, ತಲೆಬಾಚಿ ಹೆರಳುಹಾಕು ತ್ತೇನೆ.” ಎಂದಳು.

ಹಿರಣ್ಮಯಿಯು ವಿರಕ್ತಿಯಿಂದ “ತಲೆಬಾಚಿ ಹೆರಳುಹಾಕಿಸಿಕೊಳ್ಳುವುದಕ್ಕೆ ಇದೀಗ ಒಳ್ಳೆಯಸಮಯ! ನೀನೇನೋ ಸುಖವಾಗಿದ್ದೀಯೆ. ಆದುದರಿಂದ ನಿನಗೆ ತಲೆ ಬಾಚಿಕೊಳ್ಳುವಯೋಚನೆ, ಸೌಂದರ್ಯದಯೋಚನೆ, ಅಂಥಾದುದಾವುದನ್ನು ಹೇಳಿದರೂ ನಿನಗೊಪ್ಪುವುದು!” ಎಂದು ಹೇಳಿದಳು.

ಅಂಬರಕುಮಾರಿಯು:—ಹಾಗೇ ಆಗಲಿ, ಅಕ್ಕ! ಕಾಳಮೇಘದ ಹಾಗಿರುವ ನಿನ್ನ ಕೂದಲು ರಾಶಿಯು ಧೂಳಿಯಲ್ಲಿ ಬಿದ್ದು ಹಾರಾಡುವುದನ್ನು ನೋಡಿ ಮನಸ್ಸಿಗೆ ಹೇಗೋ ಆಗುತ್ತದೆಯಲ್ಲಾ! ಮುಸಲಮಾನಿಯು ಮುಟ್ಟಿದ ಮಾತ್ರಕ್ಕೆ ಜಾತಿಯು ಹೋಗುವುದಿಲ್ಲ! ಬಾರೆ, ಅಕ್ಕ! ನನ್ನದೊಂದು ಮಾತು ಕೇಳು!

ಹೀಗೆಂದು ಹೇಳುತ್ತ ಅಂಬರಕುಮಾರಿಯು ನಗುತ ನಗುತ ಎರಡು ಕೈಗಳಿಂದಲೂ ಹಿರಣ್ಮಯಿಯ ಚಿಕುರದಾಮವನ್ನು ಹಿಡಿದು ಹೆರಳು ಹಾಕುವುದಕ್ಕೆ ತೊಡಗಿದಳು. ಹೆರಳು ಹಾಕಿ ಪೂರೈಸಿದ ಬಳಿಕ ಅಂಬರಕುಮಾರಿಯು ಹಿರಣ್ಮಯಿಯ ಕೈಯನ್ನು ಹಿಡಿದುಕೊಂಡು, ಅಕ್ಕ! ನಾನೊಂದು ಮಾತನ್ನು ಹೇಳುತ್ತೇನೆ, ಕೇಳುವಿಯಾ? ನಾನು ನಿನಗೆ ತಂಗಿ, ನನ್ನಲ್ಲಿ ಕಪಟವಿಲ್ಲದೆ ಮಾತನಾಡಕೂಡದೇಕೆ? ನನ್ನ ಸ್ವಾಮಿ ಯುವರಾಜ ಸಲಿಮನು ನಿನಗೋಸ್ಕರ ಹುಚ್ಚನಾಗಿದ್ದಾನೆ! ಅವನೊಂದಿಗೆ ದಿಲ್ಲಿಯ ಸಿಂಹಾಸನದ ಮೇಲೆ ಕುಳಿತುಕೊಳ್ಳುವುದಕ್ಕೆ ನೀನು ಸಮ್ಮತಿಸಲಿಲ್ಲವೆಂದು ಕೇಳಿದೆನು; ಅದು ನಿಜವೆ? ಎಂದಳು.

ಅಂಬರಕುಮಾರಿಯು ಪುನಃ ಹೇಳತೊಡಗಿದಳು:—‘ವಿಚಾರವನ್ನು ಸ್ವಲ್ಪ ಚೆನ್ನಾಗಿ ಯೋಚಿಸಿ ನೋಡು, ಅಕ್ಕ! ನಾನು ಒಂದು ಕಾಲದಲ್ಲಿ ಹೀಗೆ ತಿಳಿದಿದ್ದೆನು. ಮದುವೆಯಾಗುವುದಕ್ಕೆ ಮೊದಲು, ಎಷ್ಟೋ ಅತ್ತು ಗೋಳಾಡಿದೆನು. ಎಷ್ಟೋ ಚಿಂತೆ! ಯವನನ ಸಂಗಡ ಚಿರಕಾಲವೂ ಸಹವಾಸ ಮಾಡುವುದು ಹೇಗೆ? ಯವನನ ಹಾಸಿಗೆಯಲ್ಲಿ ಮಲಗುವುದು ಹೇಗೆ? ಯವನನ ಉಚ್ಛಿಷ್ಟವನ್ನು ತಿನ್ನುವುದು ಹೇಗೆ? ಈರುಳ್ಳಿ ಬೆಳ್ಳುಳ್ಳಿಯ ವಾಸನೆಯನ್ನು ಸಹಿಸಿಕೊಳ್ಳುವುದು ಹೇಗೆ? ಹೀಗೆಲ್ಲಾ ಯೋಚಿಸಿಕೊಂಡಿದ್ದೆನು. ಈಗ ಅದೆಲ್ಲಾ ಹೋಯಿತು! ಈಗ ಮುಸಲಮಾನ ಮತಕ್ಕಿಂತ ಹೆಚ್ಚು ಪವಿತ್ರವಾದ ಬೇರೆ ಮತವು ಪ್ರಪಂಚದಲ್ಲಿಲ್ಲವೆಂದು ಬೋಧೆಯಾಗುತ್ತದೆ. ಯುವರಾಜ ಸಲಿಮನಿಗಿಂತ ಸುಂದರ ಪುರುಷನು ಮತ್ತಾರೂ ಇಲ್ಲ. ಅವನಲ್ಲಿ ಸಾವಿರ ದೋಷವಿದ್ದರೂ ಅಂಥಾ ಗಂಡನು ಯಾರಿಗೂ ಸಿಕ್ಕನು. ಅದಲ್ಲದೆ ಈಗ ಯೋಚಿಸಿ ನೋಡು! ಬಾದಷಹನು ಮುದುಕನಾಗಿದ್ದಾನೆ. ಭಾರತ ಸಿಂಹಾಸನವು ಶೀಘ್ರದಲ್ಲೇ

ನೆಲಿಮನ ಕೈಸೇರುವುದಕ್ಕೆ ಸಂದೇಹವಿಲ್ಲ. ಭಾರತೇಶ್ವರಿಯಾಗುವುದಕ್ಕೆ ಯಾರಿಗೆ ತಾನೇ ಇಷ್ಟವಿಲ್ಲವೆ! ಅಕ್ಕ?"

ಹಿರಣ್ಮಯಿಯು ಮುಕ್ತಾಕಾರವಾಗಿದ್ದ ಹಲ್ಲುಗಳಿಂದ ತುಟಿಯನ್ನು ಕಡಿದುಕೊಂಡು, ಛೀ! ಅಂಬರಕುಮಾರಿ! ಅಂಥಾ ಮಾತುಗಳನ್ನು ನನಗೆ ಹೇಳುವುದಕ್ಕೆ ನಿನಗೆ ನಾಚಿಕೆಯಿಲ್ಲವೆ? ನಿನಗೆ ಸವತಿಯು ಬೇಕೆಂದು ಅಷ್ಟು ಆಶೆ ಇದ್ದರೆ ನಿನ್ನ ಹಾಗೆ ನೀಚಪ್ರವೃತ್ತಿಯನುಳ್ಳ ಬೇರೆ ರಾಜಪೂತ ನಾರಿಗೆ ಹೀಗೆಲ್ಲಾ ಹೇಳಬಹುದು! ಎಂದಳು.

ಅಂಬರಕುಮಾರಿ— (ನಕ್ಕು)—ಅಕ್ಕ! ಅಯ್ಯೋ! ಇಲ್ಲಿ ಅಂಥಾ ಸವತಿಯ ದುಃಖವುಂಟೆ? ಇಲ್ಲಿ ಸುಂದರಿಯರೆಂದರೆ, ಬುಟ್ಟಿಗೆ ಹಾಕಿದ ಹೂವಿನ ಹಾಗೆ; ತೊಟ್ಟಿನಿಂದ ಕಿತ್ತು ಹೂವನ್ನು ಒಂದು ತಡವೆ ಬುಟ್ಟಿಗೆ ಹಾಕಿಬಿಟ್ಟರೆ ಅದನ್ನು ಪುನಃ ಮುಟ್ಟಿ ನೋಡುವರಾರು? ನೀನು ಇಲ್ಲಿದ್ದರೆ ನಾವು ಸೋದರಿಗಳಿಬ್ಬರೂ ಸುಖವಾಗಿರುವೆವು. ಒಂದು ವೇಳೆ ನೀನಿಲ್ಲಿರುವ ಪಕ್ಷದಲ್ಲಿ, ಯುವರಾಜನು ಕಣ್ಣುಗಳಿದ್ದು ಕುರುಡನಾಗದಿದ್ದರೆ, ಹೃದಯವಿದ್ದು ಪಾಷಾಣನಾಗದಿದ್ದರೆ, ದಿಲ್ಲಿಯ ಸಿಂಹಾಸನದಲ್ಲಿ, ನಿನಗೆ ಬಿಟ್ಟು ಮತ್ತಾವ ಹೆಂಗಸಿಗೆ ಸ್ಥಾನವು ಸಿಕ್ಕುವುದು? ಯುವತಿಯೊಬ್ಬಳು ಭಾರತೇಶ್ವರಿಯಾಗದೆ ನೀನು ಸಿಂಹಾಸನದಲ್ಲಿ ಕುಳಿತರೆ ನನಗೆ ಅದಕ್ಕಿಂತ ಹೆಚ್ಚು ಸುಖವುಂಟೆ?

ಹಿರಣ್ಮಯಿಯು ಕಣ್ಣೊರಸಿಕೊಂಡು, "ಈ ಸುಡುವ ಹೃದಯಕ್ಕೆ ಮತ್ತಿಷ್ಟು ಹೆಚ್ಚು ಯಾತನೆಯುಂಟುಮಾಡಬೇಡವೆಂದು ಬೇಡಿಕೊಳ್ಳುತ್ತೇನೆ" ಎಂದಳು.

ಅಂಬರಕುಮಾರಿ—ಹಾಗಾದರೆ ಮತ್ತೇನಾಗುವುದೊ? ನಿನಗೆ ಪ್ರತಿ ನಿಮಿಷದಲ್ಲಿಯೂ ವಿಪತ್ತಿನ ಭಯವೆಂದು ತೋರುತ್ತದೆ! ಏನುಮಾಡುವೆ?

ಹಿರಣ್ಮಯಿ—ನನ್ನ ಪ್ರಾಣವು ನನ್ನ ಕೈಯಲ್ಲಿಯೇ ಇದೆ.

ಅಂಬರಕುಮಾರಿಯು ಎದ್ದುನಿಂತಳು. ಹಿರಣ್ಮಯಿಯು ನೋಡುತ್ತಿದ್ದ ಹಾಗೆ ಬಾಲೆಯ ಹಾಗೆ ಚಪಲೆಯಾಗಿದ್ದ ಅಂಬರಕುಮಾರಿಯು ಭಾರತೇಶ್ವರಿಯ ಹಾಗೆ ಗಾಂಭೀರ್ಯಮಯವಾದ ಭುವನಮೋಹನ ರೂಪವನ್ನು ತಾಳಿ, "ಕೇಳು, ಹಿರಣ್ಮಯಿ! ಏನಾದರೆ ನಿನಗೆ ಸುಖವುಂಟಾಗುವುದೆಂಬುದನ್ನು ತಿಳಿಕೊಳ್ಳುವ ಸಲುವಾಗಿ ಇಷ್ಟು ಹೊತ್ತು ಈ ಮಾತುಗಳನ್ನೆಲ್ಲಾ ಹೇಳಿದೆನು! ನಿನ್ನ ನುಡಿಗಳನ್ನು ಕೇಳಿ ರಾಜಪುತನಾದ ಪೂರ್ವ ಗೌರವವು ಲೋಪವಾಗುವುದಕ್ಕಿನ್ನೂ ಹೆಚ್ಚು ವಿಳಂಬವಿದೆ ಎಂದು ತಿಳಿದೆನು ಯಾವ ದೇಶದಲ್ಲಿ ನಿನ್ನಂಥಾ ರಮಣಿಯು ಇರುವಳೋ ಅಂಥಾ ದೇಶವು ಪರಜಾತಿಯ ಪದಾನತವಾಗುವುದೆ? ನಿನ್ನ ಸುಖಕ್ಕೆ ಸಲುವಾಗಿ ನಾನು ದಿಲ್ಲಿಯ ಸಿಂಹಾಸನವನ್ನು ಬಿಟ್ಟುಕೊ

ದಲು ಸಿದ್ಧವಾಗಿದ್ದೇನು. ಆದರೂ ಈಗ ನಿನಗೆ ಮತ್ತೊಂದು ಪ್ರಕಾರ ಸಹಾಯವನ್ನು ಮಾಡಬಲ್ಲೆನು ! ಕೇಳು, ಅಕ್ಕ ! ನಾನು ನಿನಗೋಸ್ಕರ ಒಂದು ಅಲಂಕಾರವನ್ನು ತಂದಿರುವೆನು ! '' ಎಂದು ಹೇಳಿದಳು.

“ ಅಲಂಕಾರವೆ ! ''

“ ಅಹುದು, ಅಕ್ಕ ! ಇದೋ, ನೋಡು, ಅಲಂಕಾರವನ್ನು ! ರಾಜಪೂತನಾರಿಯರ ದೃಷ್ಟಿಯಲ್ಲಿ ವಿಪತ್ಕಾಲದಲ್ಲಿ ಇದಕ್ಕಿಂತ ಹೆಚ್ಚು ಪ್ರಿಯವಾದ ಅಲಂಕಾರವು ಮತ್ತಾವುದೂ ಇಲ್ಲ ''.

ಹೀಗೆಂದು ಹೇಳಿ, ಅಂಬರಕುಮಾರಿಯು ತನ್ನ ಉಡುಪಿನಿಂದ ಹರಿತವಾದ ಕತ್ತಿಯೊಂದನ್ನು ತೆಗೆದು ತೋರಿದಳು. ದೀಪದ ಬೆಳಕಿನಲ್ಲಿ ಅದರ ಹರಿತವಾದ ಅಲಗು ಥಳಥಳಗುಟ್ಟಿತು. ಅಂಬರಕುಮಾರಿಯು, “ ಅಕ್ಕ ! ಇದನ್ನು ನೋಡು. ನಿನಗೊಪ್ಪುವ ಅಲಂಕಾರವು ಇದಲ್ಲವೆ ? ಅಥವಾ ಅಲ್ಲವೆ ! ಎಲ್ಲಾ ಆಶೆಯೂ ಎಲ್ಲಾ ಭರವಸೆಯೂ ನಿರ್ಮೂಲವಾದಾಗ ಈ ಅಲಂಕಾರದ ಬೆಲೆಯು ಗೊತ್ತಾಗುವುದು ! ಆದರೆ ನನ್ನದೊಂದು ಪ್ರಾರ್ಥನೆಯನ್ನು ಲಾಲಿಸು. ಈ ಅಲಂಕಾರವು ನನ್ನ ಸ್ವಾಮಿಗೆ ಸೇರಿದುದು. ಇದು ನನ್ನ ಪ್ರಾಣೇಶ್ವರನ ಅಂಗವನ್ನು ನೋಡುವ ಹಾಗೆ ನೋಡಿಕೊ ! ಎಂದಳು.

ಪುನಃ, “ ಮತ್ತಾವಾಗ ನಿನು ಸಹಾಯ ಬೇಕಾದರೂ ಹೇಳಿ ಕಳುಹಿಸು. ನನ್ನ ಶಕ್ತಿಯನ್ನು ಮೀರಿದು ಸಹಾಯ ಮಾಡಲೆತ್ನಿಸುವೆನು. '' ಹೀಗೆಂದು ಹೇಳಿ ಕತ್ತಿಯನ್ನು ಕೊಟ್ಟು ಅಂಬರಕುಮಾರಿಯು ಹೊರಟುಹೋದಳು. ಹಿರಣ್ಮಯಿಯು ಕತ್ತಿಯನ್ನು ಮುದ್ದಿಟ್ಟು ವಕ್ಷದಲ್ಲಿಟ್ಟುಕೊಂಡಳು.

ಮತ್ತೊಬ್ಬ ವ್ಯಕ್ತಿಯು ಗೋಡೆಯ ಪಾರ್ಶ್ವ ಕತ್ತಲಲ್ಲಿ ನಿಂತು ಎಲ್ಲವನ್ನೂ ನೋಡುತ್ತ ಕೇಳುತ್ತಿದ್ದನು. ಅವನನ್ನು ಅಂಬರಕುಮಾರಿಯಾಗಲೀ ಹಿರಣ್ಮಯಿಯಾಗಲೀ ನೋಡಲಿಲ್ಲ. ಆ ವ್ಯಕ್ತಿಯು ಯುವರಾಜ ಸಲಿಮನಾಗಿದ್ದನು !

## ಹದಿನೈದನೆಯ ಪರಿಚ್ಛೇದ.

ಪೂರ್ಣಿಮೆಯ ರಾತ್ರಿ—ಹಿರಣ್ಮಯಿಯು ಪರಿಚಾರಿಕೆಯೊಬ್ಬಳನ್ನು ಸಂಗಡ ಕರೆದುಕೊಂಡು ಸಮೀಪದಲ್ಲಿದ್ದ ಪುಷ್ಪೋದ್ಯಾನಕ್ಕೆ ಬಂದಳು. ಪೂರ್ಣಚಂದ್ರನ ಪೂರ್ಣಪ್ರೇಮದ ಉತ್ಸಾಹದಿಂದ ಭೂಮಿಯು ಪೂರ್ಣಸುಖದಿಂದ ನಗುತ್ತಿದ್ದಿತು.

ನಿಶಿಯ ಮಲಿನ ಮುಖವನ್ನು ಉಜ್ವಲಮಾಡಿ, ತಾರಾದಳವನ್ನು ಅಮೃತ ಪ್ರವಾಹ ದಲ್ಲಿ ತೇಲಿಸಿ, ಚಕೋರಿಗಳ ಚಂಚಲ ಪ್ರಾಣಗಳಲ್ಲಿ ಸೊದೆಯನ್ನು ಹೊಯ್ದು ಕುಸುಮ ಪರಿಮಳದಲ್ಲಿ ಅಮೃತವನ್ನು ಸೇರಿಸಿ, ಹಾಲಹಕ್ಕಿಯ ಲಲಿತತಾನದಲ್ಲಿ ಅಮೃತವನ್ನು ತಳೆದುತೋಯಿಸಿ, ಕುಸುಮೋದ್ಯಾನವನ್ನು ಪ್ರೇಮದಿಂದ ತುಂಬಿ ಶೀತಲಮಾಡಿ, ಪೂರ್ಣಶಶಿಯು ಪೂರ್ಣಸುಖದಿಂದ ನಗುತ್ತಿದ್ದನು. ಪರಿಮಳಮಯವಾಗಿ ವಾಯು ಸೇವಿತವಾದ ಆ ಉದ್ಯಾನಕ್ಕೆ ಬಂದು ಅಮೃತದಿಂದ ನೆರೆದ ಗಗನತಲದಲ್ಲಿ ನಿಂತು, ಹಿರ ಣ್ಮಯಿಯ ಮಲಿನವಾಗಿದ್ದ ಮುಖವು ಮತ್ತಿಷ್ಟು ಹೆಚ್ಚು ಮಲಿನವಾಯಿತು. ಕಳೆದು ಹೋದ ಶೈಶವ ಕಾಲದ ನೆನಪು ಮನದ ಮಧ್ಯದಲ್ಲಿ ಒಮ್ಮೆಂದೊಮ್ಮೆ ಉದಯವಾ ಯಿತು! ಬಾಲ್ಯಸ್ನೇಹಿತನಾದ ಅಜಯನ ಪ್ರೀತಿಮಯವಾದ ಮುಖಮಂಡಲವು ಅತ್ಯಂತ ಉಜ್ವಲವರ್ಣದಲ್ಲಿ ಚಿತ್ತಪಟದಲ್ಲಿ ಚಿತ್ರಿತವಾಯಿತು! ಅವಳು ಆಗ ನಿಟ್ಟು ಸುರನ್ನು ಬಿಟ್ಟು ಪರಿಚಾರಿಕೆಯನ್ನು ನೋಡಿ, "ಎಲ್ಲಿ? ಅಂಬರಕುಮಾರಿಯು ಎಲ್ಲಿ? ಅವಳಿಲ್ಲಿದ್ದಳೆಂದು ಹೇಳಿದೆಯಲ್ಲ?" ಎಂದಳು.

ಪರಿಚಾರಿಕೆಯು ಉತ್ತರವನ್ನು ಕೊಡದೆ ಅಲ್ಲಿಂದ ಹೊರಟುಹೋದಳು. ಆ ಸಮಯದಲ್ಲಿ ಹಿಂದುಗಡೆ, ಯಾರೋ ಒಬ್ಬನು ಕಂಪಿತಸ್ವರದಿಂದ "ಹಿರಣೆ!" ಎಂದು ಕೂಗಿದನು.

ಹಿರಣ್ಮಯಿಯು ಚಮಕಿತೆಯಾಗಿ ನೋಡಿದಳು. "ಅಜಯಸಿಂಹ!" ಅಜ ಯನು ಹಿರಣ್ಮಯಿಯ ಮುಂದುಗಡೆ ಬಂದು ನಿಂತನು. ಇಬ್ಬರೂ ಪರಸ್ಪರ ಮುಖ ವನ್ನು ನೋಡುತ್ತ ಮೌನವಾಗಿ ನಿಂತಿದ್ದರು. ಕಡೆಗೆ ಹಿರಣ್ಮಯಿಯು ಸೆರಗಿನಿಂದ ಕಣ್ಣೊರಸಿಕೊಳ್ಳುತ್ತ, "ಅಜಯ! ನೀನು ಇಲ್ಲಿಗೆ ಏತಕ್ಕೆ ಬಂದೆ?" ಎಂದಳು.

ಅಜಯನು ಹಿರಣ್ಮಯಿಯ ಮಾತಿಗೆ ಅರ್ಥವನ್ನು ತಿಳಿಯಲಾರದೆ, "ಏನ ಹೇಳಿದೆ, ಹಿರಣೆ? ನಾನಿಲ್ಲಿಗೆ ಏತಕ್ಕೆ ಬಂದೆನೆಂದು ಕೇಳಿದಿಯಾ?" ಎಂದನು.

ಹಿರಣ್ಮಯಿ—ಇದು ಯವನ ಸಮ್ರಾಜನ ಅಂತಃಪುರ! ಇಲ್ಲಿ ಪ್ರತಿಮುಹೂ ರ್ತದಲ್ಲೂ ಪ್ರಾಣಭಯ!

ಅಜಯ—ಪ್ರಾಣಭಯವೆ? ಅಯ್ಯೋ, ಹಿರಣ್ಮಯಿ! ಕಡೆಗೆ ನಿನ್ನ ಬಾಯಿ ಯಿಂದ ಇಂಥಾ ಮಾತನ್ನು ಕೇಳಬೇಕಾಯಿತೆ? ಹಿರಣ್ಮಯಿಯು ಯವನನ ಅಂತಃ ಪುರದಲ್ಲಿ ಸೆರೆಯಲ್ಲಿರಲಿಕ್ಕಾಗಿ ಅಜಯಸಿಂಹನು ಪ್ರಾಣಭಯದಿಂದ ಬೆಕುಕೊಂಡಿರಬೇಕೆ?

ಹಿರಣ್ಮಯಿಯು ಅಳುತ ಅಳುತ, "ಹಣೆ" ಬರಹವನ್ನು ಅಡ್ಡಗಿಸುವವರಾರು ನನ್ನ ಸಲುವಾಗಿ ಅಕಾರಣವಾಗಿ ನೀನೇಕೆ ಪ್ರಾಣವನ್ನು ಬಿಡಬೇಕು ? ನನ್ನ ಅದೃಷ್ಟ ದಲ್ಲಿದ್ದ ಹಾಗಾಯಿತು !" ಎಂದಳು.

ಅಜಯಸಿಂಹನು ಮೆಲ್ಲಮೆಲ್ಲಗೆ ನೆಲದಮೇಲೆ ಕುಳಿತುಬಿಟ್ಟನು. ಅವನಿಗೆ ಬೆಳದಿಂಗಳಿಂದ ಬೆಳಗುತ್ತಿದ್ದ ಹಾಸ್ಯಮಯವಾದ ಭೂಮಿಯು ಇದ್ದ ಹಾಗೆ ಕಾಲಿಮಾ ಮಯವಾದ ಅಂಧತಾಮಸದಲ್ಲಿ ಮುಳುಗಿ ಹೋಗಿದ್ದ ಹಾಗೆ ತೋರಿ, ಎರಡು ಕೈಗ ಳಿಂದಲೂ ಕಣ್ಣುಗಳನ್ನು ಮುಚ್ಚಿಕೊಂಡು, ವಿಕೃತವಾದ ಕಂಠದಿಂದ "ಜಗದೀಶ್ವರ! ಅಕಬರಷಹನು ಮಿಥ್ಯಾವಾದೀ! ನನ್ನ ಪ್ರಾಣಸಂಗಿನಿಯಾದ ಹಿರಣ್ಮಯಿಯು ನಿಜ ವಾಗಿಯೂ ಯವನನ ಸ್ವತಿಣೀ !" ಎಂದೆಂದುಕೊಂಡನು.

ಹಿರಣ್ಮಯಿಯು, "ಅಜಯ ! ನೀನೇನು ಹುಚ್ಚನಾದೆಯೆ ? ಅಂಥಾ ಅಸಂಭವ ವಾದುದನ್ನೂ ನಿಜವೆಂದು ನಂಬಿದೆಯಾ ?" ಎಂದಳು.

ಅಜಯನು ಕಣ್ತೆರದು ಮೊಳಕಾಲೂರಿ ಎದ್ದುನಿಂತು ಕೈಮುಗಿದುಕೊಂಡು, "ಹಾಗಾದರೆ, ಆ ಕನಕ ಪಾರಿಜಾತವು ಯವನನ ಸ್ಪರ್ಶದಿಂದ ಕಳಂಕಿತವಾಗಿಲ್ಲ ವೆಂದು ಹೇಳು ! ನನ್ನ ಹೃದಯದಲ್ಲಿ ದಾವಾನಲವೆದ್ದು ಉರಿಯುತ್ತಿರುವುದು ! ಇನ್ನು ತಡೆಯಲಾರೆನು !" ಎಂದನು.

ಹಿರಣ್ಮಯಿ—ಹಿರಣ್ಮಯಿಯು ಯವನನ ಸ್ಪರ್ಶದಿಂದ ಕಳಂಕಿತೆಯಾಗಿದ್ದರೆ ದೇಹದಿಂದ ಪ್ರಾಣವನ್ನು ಅಗಲಿಸದಿರುವಂಥಾ ನಿರ್ಲಜ್ಜೆಯೆಂದು ತಿಳಿದುಕೊಂಡೆಯಾ ?

ಅಜಯನೆದ್ದು ನಿಂತನು. ಒಮ್ಮಿಂದೊಮ್ಮೆ ಅವನ ಮುಖಮಂಡಲವು ಆಶೆಯಿಂ ದಲೂ ಉತ್ಸಾಹದಿಂದಲೂ ಪ್ರಫುಲ್ಲವಾಗಿ, "ಹಾಗಾದರೆ, ನನ್ನ ಆ ಸುರ ಸುಂದರಿಯು ಈ ದಾನವನ ಭವನದಲ್ಲಿರಲೇಕೆ ? ಹೊರಡು, ಹಿರಣಿ! ನಾನು ನಿನ್ನನ್ನು ವಕ್ಷದಲ್ಲಿ ಧಾರಣಮಾಡಿಕೊಂಡು ಈ ಕೈಕೂರಿತದ ಸಹಾಯದಿಂದ ಸಹಸ್ರ ಯವನರ ಅಡ್ಡಿ ಯನ್ನೂ ಅತಿಕ್ರಮಿಸಿ ಉದಯಪುರಕ್ಕೆ ಕೊಂಡೊಯ್ಯುವೆನು !" ಎಂದು ಹೇಳಿದನು.

ಹಿರಣ್ಮಯಿಯು ಸ್ವಲ್ಪ ಹಿಂದಕ್ಕೆ ಸರಿದು, "ನಿನ್ನನ್ನು ಬೇಡುವೆನು, ಅಜಯ! ನೀನು ನನ್ನನ್ನು ಮುಟ್ಟಬೇಡ! ಪವಿತ್ರವಾದ ನಿನ್ನ ನಾಲಿಗೆಯಿಂದ ಈ ಅಭಾಗಿನಿಯ ಹೆಸರನ್ನು ಉಚ್ಚರಿಸಬೇಡ!" ಎಂದಳು. ಅವಳು ಬೆಳದಿಂಗಳ ಬೆಳಕಿನಲ್ಲಿ ಅಜಯನ ಕಣ್ಣುಗಳಲ್ಲಿ ವಾರಿಧಾರೆಯು ಸುರಿಯುತ್ತಿದ್ದುದನ್ನು ನೋಡಿದಳು. ಆದಕ್ಕೆ ಮೊದಲು

ಅವನ ಕಣ್ಣುಗಳಲ್ಲಿ ನೀರು ತುಂಬಿದುದನ್ನು ಯಾವಾಗಲೂ ಕಂಡಿರಲಿಲ್ಲ, ಅವಳು ಆಗ ಎದೆ ಕದಲಿದವಳ ಹಾಗಾಗಿ ಬೇಗನೆ ಮುಂದುವರಿದು ಹೋಗಿ ಎರಡು ಬಾಹುಗಳಿಂದಲೂ ಅಜಯನ ಕುತ್ತಿಗೆಯನ್ನು ಕಟ್ಟಿಕೊಂಡು, "ಯಾರಿಗೆ ಸಲುವಾಗಿ ಅಳುತ್ತಿ? ನನಗೆ ಸಲುವಾಗಿಯೆ? ನಿನಗೆ ನಾನು ತೃಣಕ್ಕಿಂತ ತುಚ್ಛವಾದ ಪದಾರ್ಥ! ನಿನ್ನ ಕಣ್ಣುಗಳಲ್ಲಿ ನೀರು ತುಂಬಿರುವುದನ್ನು ಕಂಡು ನನ್ನ ಎದೆಯು ಒಡೆಯುತ್ತದೆ!" ಎಂದಳು.

ಅಜಯ—ನಿನ್ನ ಮಾತು ಯಾವುದೂ ನನಗೆ ಗೊತ್ತಾಗುವುದಿಲ್ಲ.

ಹಿರಣ್ಮಯಿಯು ಪುನಃ ಹಿಂದಕ್ಕೆ ಸರಿದು, "ಕೇಳು, ಅಜಯ! ನೀನು ಕ್ಷತ್ರಿಯ ವೀರಗೌರವ ಸ್ವರೂಪನಾದ ಪ್ರತಾಪಸಿಂಹನಿಗೆ ಮಗ! ನೀನು ಒಬ್ಬ ನಿರ್ಭಾಗ್ಯ ಹೆಂಗಸಿಗೆ ಸಲುವಾಗಿ ಮೇವಾರದ ಪವಿತ್ರನಾದ ಹೆಸರಿಗೆ ಕಳಂಕವನ್ನು ಆರೋಪಿಸುವಿಯಾ! ನಿನ್ನ ವೃದ್ಧನಾದ ತಂದೆಯ ಆಶೆಯನ್ನು ನಿರ್ಮೂಲಮಾಡುವಿಯಾ? ಪ್ರಾಣವಿರುವವರೆಗೂ ಹಿರಣ್ಮಯಿಯನ್ನು ಯವನನು ಸ್ಪರ್ಶಮಾಡಲಾರನೆಂಬುದು ನಿಜ. ಆದರೆ ನಾನು ಈಗ ಬಾದಷಹನ ಅಂತಃಪುರದಲ್ಲಿ ವಾಸಮಾಡುತ್ತೇನೆ. ಲೌಕಿಕ ಆಚಾರಪ್ರಕಾರ ನಾನು ಈಗ ಯವನನಿಗೆ ಪರಿಣೀತೆಯಾದವಳು. ನಿನಗೆ ನಾನು ಮುಂದೆ ಮದುವೆಯಾಗುವುದು ಅಸಂಭವ. ಅದು ಕಾರಣ ನೀನು ನನ್ನನ್ನು ಮರೆತು ಬಿಡೆಂದು ಬೇಡಿಕೊಳ್ಳುತ್ತೇನೆ. ನಿನ್ನ ಹಿರಣೆಯು ಭೂಮಿಯಲ್ಲಿ ಇಲ್ಲವೇದು ತಿಳಿ! ನನ್ನ ಗತಿಯೇನೆಂದು ಕೇಳುವಿಯೊ? ಇದೊ, ನೋಡು!" ಹೀಗೆಂದು ಹೇಳಿ ಹಿರಣ್ಮಯಿಯು ತನ್ನ ಉಡಿಯಿಂದ ಕತ್ತಿಯನ್ನು ತೆಗೆದು, "ಭಾಗ್ಯವಶದಿಂದ ಈ ಘೋರ ವಿಪತ್ತಿನಲ್ಲಿ ದೇವರು ಒಂದು ಸಂಗಾತಿಯನ್ನು ಒದಗಿಸಿಕೊಟ್ಟನು" ಎಂದು ಹೇಳಿದಳು.

ಅಜಯ :—ಹಾ, ಹಿರಣ್ಮಯಿ! ನಿನ್ನನ್ನು ಮರೆತು ನಾನು ಬದುಕಿರುವೆನೆಂದು ತಿಳಿಕೊಂಡಿಯಾ? ಪ್ರಾಣವು ಪುಡಿಪೂರ್ಣವಾದರೂ, ಹೃದಯವು ಶತಧಾ ಸೀಳಿಹೋದರೂ ಪ್ರಾಣಸಂಗಿನಿಯಾದ ಹಿರಣ್ಮಯಿಯ ಸ್ಮರಣೆಯು ಪ್ರಾಣದ ಪ್ರಾಣದೊಳಗೆ ವಿರಾಜಿಸುತ್ತಿರುವುದು! ನೀನು ಬಾದಷಹನ ಅಂತಃಪುರದಲ್ಲಿ ಇರುತ್ತಿಯೆಂದು ಕೇಳಿದ ಮೊದಲ್ಗೊಂಡು ಸಹಿಸಲಸದಳವಾದ ಯಾತನೆಯನ್ನು ಸಹಿಸಿಕೊಂಡಿರುವುದನ್ನು ನೀನು ಹೇಗೆ ತಾನೇ ತಿಳಿಯಬಲ್ಲೆ? ಆತ್ಮರಕ್ತದಲ್ಲಿ ಅಂತರವೆಲ್ಲಾ ನೆರೆದುಹೋಗಿದೆ. ಹೃದಯವು ಕ್ಷತವಿಕ್ಷತವಾಗಿದೆ! ಹೃದಯವನ್ನು ಬಿಚ್ಚಿ ತೋರಿಸಬಹುದಾದರೆ, ಈ ಹೃದಯದಲ್ಲಿ ಎಂಥಾ ರಕ್ತದ ಪ್ರವಾಹವು ಹರಿಯುತ್ತಿದೆ ಎಂದು ತೋರುತ್ತಿದ್ದೆನು!

ಹಿರಣ್ಮಯಿಯು ಅಶ್ರುಜಲದಿಂದ ರುದ್ಧವಾದ ಕಂಠದಿಂದ, “ ಕೇಳು ಅಜಯ! ನೀನು ಮೇವಾರದ ರಾಜ್ಯಕ್ಕೆ ಭರವಸೆ ಸ್ವರೂಪನು! ರಾಜಪುತಾನಕ್ಕೆ ಅಧಿಷ್ಠಾತ್ರಿಯಾದ ಭಗವತೀಸಿಂಹವಾಹಿನಿಗೆ ಪ್ರಿಯತಮನಾದ ವೀರನು! ಅವಳ ಪ್ರಿಯತಮನಾದ ಮಗ ಅಜಯಸಿಂಹನಿಗೆ ನಿರ್ಭಾಗ್ಯ ಹಿರಣ್ಮಯಿಯು ಮದುವೆಯಾಗುವುದು ಅವಳಿಗೆ ಇಷ್ಟವಿಲ್ಲ. ನೀನು ಉದಯಪುರವನ್ನು ಬಿಟ್ಟು ಹೊರಡುವುದಕ್ಕೆ ಹಿಂದಿನ ದಿನ ರಾತ್ರಿ ಆ ಸಿಂಹವಾಹಿನಿಯು ನನ್ನ ಕನಸಿನಲ್ಲಿ ಬಂದು, “ ಜೋಕೆ! ಹಿರಣ್ಮಯಿ! ನೀನು ಅಜಯಸಿಂಹನಿಗೆ ಈಡೊಪ್ಪುವವಳಲ್ಲ ” ಎಂದು ಹೇಳಿದಳು. ಆಗ ಅದನ್ನು ಬರೀ ಸ್ವಪ್ನವೆಂದು ತಿಳಿದಿದ್ದೆನು. ಅದು ಬರೀ ಸ್ವಪ್ನವಲ್ಲ! ನಿಜವಾಗಿಯೂ, ನಾನು ನಿನ್ನನ್ನು ಸ್ಪರ್ಶಮಾಡಿದರೆ ನಿನಗೆ ಹೆಚ್ಚಾದ ಅಮಂಗಳ ಉಂಟಾಗುವುದೆಂದು ಭಗವತಿಯ ಅಪ್ಪಣೆಯಾಗಿದೆ! ” ಎಂದಳು.

ಅಜಯ :—ದೇವಿ! ಸುರಸುಂದರಿ! ಯವನನು ನಿನ್ನನ್ನು ಸ್ಪರ್ಶಮಾಡಲಾರದವನಾಗಿರುವಾಗ ನಿನ್ನನ್ನು ನಾನು ಮದುವೆ ಮಾಡಿಕೊಂಡರೆ ಯಾವ ರಾಜಪೂತ ವೀರನೂ ನನ್ನನ್ನು ಪತಿತನೆಂದು ತಿಳಿಯಲಾರನು. ಹೊರಡು, ಹಿರಣಿ! ನಿನ್ನನ್ನು ತಂದೆಯ ಬಳಿಗೆ ಕರೆದುಕೊಂಡು ಹೋಗಿ ಅವನ ಅಭಿಪ್ರಾಯವನ್ನು ಕೇಳುವೆನು.

ಅಜಯನು ಹಿರಣ್ಮಯಿಯನ್ನು ಆಲಿಂಗನಮಾಡಿಕೊಳ್ಳುವುದಕ್ಕೆ ಕೈ ನೀಡಿದನು. ಆ ಸಮಯದಲ್ಲಿ ಹಿಂದಿನಿಂದ, “ ಯಾವ ಕಳ್ಳನು ಭಾರತೇಶ್ವರನ ಅಂತಃಪುರದೊಳಗೆ ಪ್ರವೇಶಿಸಲು ಧೈರ್ಯಗೊಂಡಿರುವನೋ ಸೆಲಿಮನ ಕತ್ತಿಯು ಈ ತೆರ ಅಂಥವನ ಶಿರಚ್ಛೇದನ ಮಾಡುವುದು ” ಎಂದು ಕೂಗಿ ಹೇಳುವುದರೊಂದಿಗೆ ಅಜಯಸಿಂಹನ ತಲೆಯಮೇಲೆ ದೀರ್ಘವಾದ ಕತ್ತಿಯೊಂದು ಚಂದ್ರ ಕಿರಣದಲ್ಲಿ ಥಳಥಳಗುಟ್ಟಿತು! ಆದರೆ ಕತ್ತಿಯು ಅಜಯನ ಶಿರವನ್ನು ಸೋಂಕಲಿಲ್ಲ. ಮತ್ತಾರೋ ಆ ಸಮಯದಲ್ಲಿ ಎತ್ತಿದ್ದ ಆ ಕತ್ತಿಯನ್ನು ಮತ್ತೊಂದು ಕತ್ತಿಯಿಂದ ಪ್ರಚಂಡವಾದ ವೇಗದಿಂದ ಹೊಡಿದನು. ಸೆಲಿಮನ ಕತ್ತಿಯು ಝುನಝುನ ಎಂದು ನೆಲದ ಮೇಲೆ ಬಿದ್ದುಹೋಯಿತು. ಯುವರಾಜನಾದ ಸೆಲಿಮನು ಈ ತೆರದಿ ಭಗ್ನಮನೋರಥನಾಗಿ, “ ಯಾವ ರಾಜ್ಯದಲ್ಲಿ ರಾಜನೇ ಸ್ವಂತವಾಗಿ ಕಳ್ಳನಿಗೆ ಆಶ್ರಯವನ್ನು ಕೊಡುವನೋ ಅಂಥಾ ರಾಜ್ಯವು ಸ್ವಲ್ಪ ಕಾಲದಲ್ಲೇ ಸುಟ್ಟು ನಾಶವಾಗಿ ಹೋಗುವುದು ” ಎಂದು ಹೇಳಿಕೊಂಡು ಅಲ್ಲಿಂದ ಬೇಗನೆ ಹೊರಟು ಹೋದನು. ಅಜಯಸಿಂಹನು ನೋಡಲಾಗಿ ಸೆಲಿಮನ ಕತ್ತಿಯನ್ನು ಹೊಡಿದು ಕೆಡಹಿದವನು ಸಮ್ರಾಜ ಅಕಬರನಾಗಿದ್ದನು! ಸಮ್ರಾಜನು, “ ಅಜಯಸಿಂಹ! ನನ್ನ ಸಂಗಡ ಬಾ ” ಎಂದನು.

ಅಜಯಸಿಂಹನು ಮಂತ್ರದಿಂದ ಮುಗ್ಧನಾದವನ ಹಾಗೆ ಅಕಬರನ ಸಂಗಡ ಹೊರಟು ಹೋದನು. ಹೊರಗೆ ಬಂದು ಅಕಬರನು, “ನನ್ನ ಅಪ್ಪಣೆಯ ಪ್ರಕಾರವೇ ಪರಿಚಾರಿಕೆಯು ನಿನ್ನನ್ನು ಹಿರಣ್ಮಯಿಯ ಬಳಿಗೆ ಕರೆದುಕೊಂಡು ಹೋಗಿದ್ದಳು. ಹಿರಣ್ಮಯಿಯನ್ನು ಮುಸಲಮಾನನು ಮುಟ್ಟಿರಲಿಲ್ಲವೆಂದು ನಾನು ನಿನಗೆ ಹೇಳಿದ್ದೆನು. ಅವಳಿಂದ ಅದೇ ಮಾತನ್ನು ಕೇಳಿ ನಿನಗೆ ಸಂತೋಷವಾಯಿತೆ ?” ಎಂದು ಕೇಳಿದನು.

ಅಜಯಸಿಂಹನು ಯಾವದೊಂದು ಉತ್ತರವನ್ನು ಕೊಡಲಿಲ್ಲ. ಸಮ್ರಾಜನು ಹೇಳ ತೊಡಗಿದನು:—“ಈಗ್ಗೆ ಕೆಲವು ದಿನಗಳಿಂದ ರಾಣಾಪ್ರತಾಪಸಿಂಹನು ರಾಜ್ಯಕಾರ್ಯದ ಸಲುವಾಗಿ ಈ ನಗರಕ್ಕೆ ಬಂದಿದ್ದಾನೆ. ನಾಳೆ ದಿನ ಆತನು ನನ್ನನ್ನು ನೋಡುವನು. ಆತನ ಒಪ್ಪಿತವನ್ನು ಕೇಳಿ, ಹಿರಣ್ಮಯಿಯನ್ನು ನಿನಗೆ ಕೊಟ್ಟು ನಾಳೆ ಬಹಳ ಸಮಾರೋಹದಿಂದ ವಿವಾಹಮಹೋತ್ಸವವನ್ನು ಬೆಳೆಸುವೆವು” ಎಂದನು.

ಅಜಯನು ತಲೆ ಮೇಲೆ ಎತ್ತಿ ಆಕಾಶವನ್ನು ನೋಡಿ ಬೆವರಿದ್ದ ಮುಖವನ್ನು ಒರಸಿಕೊಳ್ಳುತ್ತ, “ಇಂದು ಚಂದ್ರಕಿರಣದಲ್ಲಿ ಇಷ್ಟು ಪ್ರಚಂಡವಾದ ತಾಪವು ಏಕೆ ?” ಎಂದೆಂದುಕೊಂಡನು.

## ಹದಿನಾರನೆಯ ಪರಿಚ್ಛೇದ.

ಅಕಬರಷಹನು ತನ್ನ ವಿಶ್ರಾಮ ಭವನದಲ್ಲಿ ಕುಳಿತಿದ್ದಾನೆ. ಅವನ ಪಾರ್ಶ್ವದಲ್ಲಿ ರತ್ನಮಂಡಿತವಾದ ಸುವರ್ಣದ ಆಸನದಲ್ಲಿ ವೃದ್ಧನಾದ ರಾಣಾಪ್ರತಾಪಸಿಂಹನೂ ಕುಳಿತಿದ್ದನು. ಇಬ್ಬರೂ ಮೌನವಾಗಿದ್ದರು. ಇಬ್ಬರ ಮುಖಮಂಡಲದಲ್ಲಿಯೂ ಗಂಭೀರವಾದ ಚಿಂತಾರೇಖೆಯು ಪ್ರಕಟಿತವಾಗಿದ್ದಿತು. ಕಡೆಗೆ ಅಕಬರಷಹನು ರಾಣಾನನ್ನು ಸಂಭೋಧಿಸಿ, “ನಾವು ಒಂದು ಹೆಚ್ಚಿನ ವಿಷಯವನ್ನು ಕುರಿತು ಆಲೋಚಿಸಬೇಕಾಗಿದೆ. ನಾನು ಹೇಳುವ ವಿಷಯವನ್ನು ಸಾಮಾನ್ಯ ವಿಷಯವೆಂದು ತಿಳಿದು ಉಪೇಕ್ಷೆ ಮಾಡಕೂಡದು” ಎಂದು ಹೇಳಿದನು.

ರಾಣಾನು ಕುತೂಹಲದಿಂದ, “ಹೇಳಬಹುದು” ಎಂದನು.

ಸಮ್ರಾಜನು ಏನು ಹೇಳಬೇಕೋ ಅದು ತೋಚದೆ ಸ್ವಲ್ಪ ಹೊತ್ತು ಗಂಭೀರ ಭಾವದಿಂದ ಪ್ರತಾಪಸಿಂಹನನ್ನು ನೋಡಿ, ಬಳಿಕ, “ಗ್ವಾಲಿಯರಿನ ರಾಜನ ಮಗಳು ಈಗ ನನ್ನ ಅಂತಃಪುರದಲ್ಲಿರುವುದು ತಮಗೆ ಗೊತ್ತುಂಟೆ ?” ಎಂದು ಹೇಳಿದನು.

ರಾಣಾನು ರೋಷದಿಂದ ತನ್ನ ಬಿಳಿದಾದಶ್ಮಶ್ರುವನ್ನು ಕೆರೆದುಕೊಂಡು, “ಅಹುದು, ಗೊತ್ತುಂಟು. ಶೃಗಾಲವು ಮಲಗಿದ್ದ ಸಿಂಹದ ಆಲಯದಲ್ಲಿ ಹೊಕ್ಕು ಪ್ರಿಯವಾದ ಶಿಶುವನ್ನು ಅಪಹರಿಸಿಕೊಂಡು ಹೋಯಿತು! ಮೃತಪ್ರಾಯನಾಗಿದ್ದ ಪ್ರತಾಪಸಿಂಹನು ಅದನ್ನು ಸಹಿಸಿಕೊಂಡಿದ್ದಾನೆ. ಅನಂತರ, ಮತ್ತೇನು ? ಅಪ್ಪಣೆ ಯಾಗಲಿ !” ಎಂದನು.

“ ಅಕಬರ :—ನಾನು ಹಿರಣ್ಮಯಿಯನ್ನು ನನ್ನ ಮಗಳ ಹಾಗೆ ಕಾಪಾಡುತ್ತಿದ್ದೇನೆಂಬುವುದೂ ಗೊತ್ತಿರಬಹುದು, ಅವಳೀಗ ನನ್ನ ಅಂತಃಪುರದಲ್ಲಿ ಕಳಂಕ ರಹಿತೆಯಾಗಿಯೂ, ಸರಳೆಯಾಗಿಯೂ, ಮದುವೆ ಇಲ್ಲದ ರಾಜಪೂತ ಲಲನೆಯಾಗಿಯೂ ಇದ್ದಾಳೆ.

ರಾಣಾನು ವಿಷಾದದಿಂದ “ ನಿಸ್ಸಹಾಯಕಳಾದ ರಾಜಪೂತ ಲಲನೆಯ ಮೇಲೆ ತಮ್ಮ ಕೃಪಾದೃಷ್ಟಿಯು ಇರುವುದಕ್ಕೆ ಸಲವಾಗಿ ನಾನು ಬಹಳ ಬಾಧ್ಯ ಪಡುತ್ತೇನೆ. ಮತ್ತೇನು ? ಅಪ್ಪಣೆಯಾಗಲಿ !” ಎಂದನು.

ಅಕಬರ :—ಈಗ ನನ್ನ ಇಷ್ಟವೇನೆಂದರೆ—ಹಿರಣ್ಮಯಿಯನ್ನು ಒಳ್ಳೆಯ ರಾಜಪೂತ ವಂಶದ ಯುವಕನಿಗೆ ಕೊಟ್ಟು ಜಾಗ್ರತೆಯಾಗಿ ಮದುವೆ ಮಾಡಬೇಕು.

ಪ್ರತಾಪ :—(ಮೆಲ್ಲಗೆ ನಕ್ಕು, ಕೌತುಕದಿಂದ)—ತಮ್ಮ ಸಭಾಮಂಡಲದಲ್ಲಿ ಒಳ್ಳೆಯ ದೊಡ್ಡ ರಾಜಪೂತ ವಂಶದವರಿಗೆ ಕಡಿಮೆಯಿಲ್ಲವಷ್ಟೆ ? ತಮ್ಮ ಪ್ರಿಯಪಾರಿಷದ ಮಾನಸಿಂಹ, ಮುಖ್ಯ ಮಂತ್ರಿಯಾದ ಭಗವಾನದಾಸ, ಹಾಸ್ಯಪ್ರವರನಾದ ಬೀರಬಲ ಮುಂತಾದ ಸಭಾಸದರು ತಮ್ಮಲ್ಲಿ ದೊಡ್ಡ ಸದ್ವಂಶದವರೆಂತಲೇ ಗಣ್ಯರಾಗಿದ್ದಾರೆ. ತಾವು ಇಷ್ಟಪಟ್ಟರೆ ಅವರಲ್ಲಿ ಯಾರಾದರೂ ಒಂದು ವಂಶಕ್ಕೆ ಗ್ವಾಲಿಯರದ ರಾಜನ ಮಗಳನ್ನು ಕೊಟ್ಟು ಮದುವೆಯಾಗಬಹುದು.

ಅಕಬರ :—ಹಿರಣ್ಮಯಿಯು ಸದ್ವಂಶದವಳೆಂಬುವುದಕ್ಕೆ ತಮಗೇನೂ ಸಂದೇಹವಿಲ್ಲ. ಅದುಕಾರಣ ಅವಳನ್ನು ಮಿವಾರದ ರಾಜವಂಶಕ್ಕೆ ಕೊಟ್ಟು ಮದುವೆಯಾಗುವುದರಿಂದ ಮಿವಾರದ ರಾಜವಂಶದ ಗೌರವಕ್ಕೆ ಲಾಘವವೇನೂ ಉಂಟಾಗುವ ಸಂಭವವಿಲ್ಲ.

ಪ್ರತಾಪಸಿಂಹ :—ಇನ್ನು ಸಾಕು, ದಿಲ್ಲೀಶ್ವರ! ನೀಚಾಶಯನಾದ ಯವನನು ಚೋರನಹಾಗೆ ನನ್ನ ಅಂತಃಪುರದೊಳಗೆ ಪ್ರವೇಶಿಸಿ, ಸ್ವರ್ಗಸ್ಥನಾದ ನನ್ನ ಪ್ರಿಯ ಸ್ನೇಹಿತನ ಮಗಳನ್ನು ಅಪಹರಿಸಿಕೊಂಡು ಹೋದನು. ನಂದನವನದ ಪವಿತ್ರವಾಗಿದ್ದ

ಪಾರಿಜಾತವು ನರಕದಲ್ಲಿ ಬಿದ್ದ ಬಳಿಕ, ದೇವರ ಆರಾಧನೆಗೆ ಅಯೋಗ್ಯವಾಗಿ ಹೋಗುವುದು. ಪ್ರತಾಪಸಿಂಹನ ಪಾಷಾಣಮಯವಾದ ಪ್ರಾಣವು ಅಂಥಾದುದನ್ನೂ ಸಹಿಸಿಕೊಂಡಿತು. ತಾವು ಶ್ಶಾಂತರಾಗಬೇಕು. ಮೃತವಾಗಿರುವ ದೇಹವನ್ನು ಖಡ್ಗದಿಂದ ಪುನಃ ಘಾತಮಾಡಲೇಕೆ?

ಅಕಬರ:—ತಾವು ತಾಳ್ಮೆಯನ್ನು ಬಿಡಕೂಡದು. ಸ್ಥಿರಚಿತ್ತದಿಂದ ವಿವೇಚನೆಯನ್ನು ಮಾಡಿ ನೋಡೋಣಾಗಲಿ. ಕೇವಲ ಆವಶ್ಯಕತೆಯಿಲ್ಲದಿದ್ದರೆ ತಮ್ಮಲ್ಲಿ ಬಾರಿಬಾರಿಗೂ ಈ ಪ್ರಸ್ತಾಪವನ್ನು ಮಾಡುತ್ತಿರಲಿಲ್ಲ. ದೃಷ್ಟಾಂತಕ್ಕೆ ಸಲವಾಗಿ ಹೇಳುತ್ತೇನೆ:—ಒಂದು ವೇಳೆ ಮೇವಾರದ ರಾಜವಂಶದ ಒಬ್ಬ ಯೌವನ ಪುರುಷನಿಗೂ ಆ ರಮಣಿಗೂ ಪರಸ್ಪರ ಪ್ರೀತಿ ಅನುರಾಗಗಳು ಅತಿಯಾಗಿದ್ದು ಅವರವರಿಗೆ ವಿವಾಹವಾಗದೆ ಹೋದರೆ ಅವರ ಭವಿಷ್ಯ ಸುಖಕ್ಕೆ ಹಾನಿಯುಂಟಾಗುವ ಸಂಭವದಲ್ಲಿ ತಾವು ಹೇಳುವ ಸಾಮಾನ್ಯವಾದ ಆಕ್ಷೇಪಣೆಯಿದ್ದರೂ ಅವರವರು ಮದುವೆಯಾಗುವುದು ಅಪೇಕ್ಷಣೀಯವಾದುದಲ್ಲವೆ?

ಪ್ರತಾಪ:—ಮೇವಾರದ ರಾಜವಂಶದಲ್ಲಿ ಅಂಥಾ ಭಾಗ್ಯಶಾಲಿಯಾದವನಾರು! ಹೇಳಬಹುದು. ಭಯವೇನೂ ಇಲ್ಲ—ಸಂಕೋಚವೇಕೆ?

ಅಕಬರ:—ಆ ಯುವಕನು ರಾಜಸ್ಥಾನದಲ್ಲಿ ಸರ್ವಶ್ರೇಷ್ಠವೀರನಾದ ಕುಮಾರ ಅಜಯಸಿಂಹ. ನಿರ್ಭಾಗ್ಯನಾದ ಆ ಹುಡುಗನು ಈ ವಿವಾಹದಲ್ಲಿ ನಿರಾಶನಾದರೆ ಉನ್ಮತ್ತನಾಗಿ ಹೋಗುವನು!

ಒಮ್ಮೆಂದೊಮ್ಮೆ ವೃದ್ಧ ರಾಣಾನ ಮುಖಮಂಡಲವು ರಣೋನ್ಮತ್ತನಾದ ಯೋದ್ಧೃಪತಿಯ ಹಾಗೆ ಕಾಲಾಂತಕ ಮೂರ್ತಿಯನ್ನು ತಾಳಿತು! ಅವನ ಇಂಬಾದ ಕಣ್ಣುಗಳೆರಡೂ ಜಪಾಕುಸುಮದ ಹಾಗೆ ರಕ್ತದ ಬಣ್ಣವಾಗಿ ತಿರುಗಲಾರಂಭಿಸಿದವು! ಕೆಂಡಗೊಂಡಿದ್ದ ಲಲಾಟದಲ್ಲಿ ನರಗಳು ಹುರಿಗೊಂಡ ಕರೀ ಹಂಬಿನಹಾಗೆ ಉಬ್ಬಿದವು! ಶಿರದಿಂದ ಉಷ್ಣೀಷವು ಕಳಚಿ ನೆಲದಮೇಲೆ ಬಿದ್ದಿತು! ಅವನೆದ್ದು ನಿಂತು ಒರೆಯಲ್ಲಿದ್ದ ಕತ್ತಿಯನ್ನು ಹಿಡಿದೆಳೆದು ವಜ್ರಮುಷ್ಟಿಯಿಂದ ಹಿಡಿದು ಸಮ್ರಾಜನನ್ನು ಗಂಟು ಹುಬ್ಬಿನಿಂದ ಕುಟಿಲವಾದ ಕಟಾಕ್ಷದಿಂದ ನೋಡುತ್ತ, "ಯವನರಾಜನೆ! ಮಲಗಿದ್ದ ಸಿಂಹನನ್ನು ಬಾರಿಬಾರಿಗೂ ಕಾಲೊದೆಯಿಂದ ಎಬ್ಬರಿಸೋಣಾಗುತ್ತದೆ. ಈಗ ಒಮ್ಮೆ ಅವನ ಪರಾಕ್ರಮವನ್ನು ಪರೀಕ್ಷೆ ಮಾಡೋಣಾಗಲಿ!" ಎಂದನು.

ಅಕಬರಶಹನು ಅಮಾನುಷಿಕ ಸಹಿಷ್ಣುತೆಗೆ ನೆಲವಾಗಿಯೂ ಅಳವಿಲ್ಲದ ಮಾನಸಿಕ ಶಕ್ತಿಗೆ ನೆಲವಾಗಿಯೂ ಇತಿಹಾಸದಲ್ಲಿ ಪ್ರಖ್ಯಾತಿಗೊಂಡು ರಾಜಕುಲಕ್ಕೆ ಗುರುವೆಂದು ಪೂಜಿತನಾಗಿದ್ದಾನೆ. ಆತನ ಆ ಗುಣಗಳ ದೃಷ್ಟಾಂತದಿಂದ ಸ್ಪಷ್ಟಪಡಿಸಿ, ಮೆವಾರದ ರಾಜನ ಕ್ರೋಧವು ಶಮನವಾಗುವತನಕ ಎದುರು ನೋಡಿಕೊಂಡು ಸುಮ್ಮನಿದ್ದನು. ಪ್ರತಾಪಸಿಂಹನು ಸಮ್ರಾಜನ ಕದಲದ ಮುಖಮಂಡಲವನ್ನು ನೋಡಿ ಪುನಃ ಆಸನವನ್ನು ಪರಿಗ್ರಹಿಸಿ ಹೇಳತೊಡಗಿದನು :—"ಏನು ಹೇಳೋಣಾಯಿತು ? ನನ್ನ ಪ್ರಿಯತಮನಾದ ಮಗನಾದವನು, ಮೆವಾರದ ರಾಜ್ಯಕ್ಕೆ ಭರವಸೆಯಾದವನು, ಆರ್ಯಾವರ್ತದಲ್ಲಿ ಉಳಿದಿರುವ ವೀರನಾದ ಅಜಯಸಿಂಹನು ಯವನನ ಹಸ್ತಸ್ಪರ್ಶವಾಗಿ ಕಳಂಕಿನಿಯಾಗಿ ಮೊಗಲರಾಜನ ಅಂತಃಪುರ ನಿವಾಸಿನಿಯಾಗಿರುವ ರಮಣಿಯ ಪಾಣಿಗ್ರಹಣವನ್ನು ಮಾಡಲು ಉನ್ಮತ್ತನಾಗಿದ್ದಾನೆಯೆ ? ಅಸಂಭವ ! ನಾನು ನಿಮ್ಮ ಹೋಕಮಾತನ್ನು ನಂಬಲಾರೆನು ! ನನಗೆ ಪ್ರಮಾಣವನ್ನು ತೋರಿಸೋಣಾಗಲಿ ; ಇಲ್ಲವಾದರೆ, ಭಾರತ ಸಮ್ರಾಜ ಅಕಬರಶಹನು ಮಿಥ್ಯಾವಾದಿಯೆಂದು ಅನುಮಾನವುಂಟಾಗುವುದು !"

ಅಕಬರಶಹನು ಸ್ಥಿರಭಾವದಿಂದ, "ನನ್ನ ಮಾತನ್ನು ನಂಬಲಾರದವನಾಗಿದ್ದರೆ ಅಜಯಸಿಂಹನನ್ನು ತಾವೇ ಕೇಳಬಹುದು" ಎಂದನು.

ಹೀಗೆಂದು ಹೇಳಿ ಅಕಬರಶಹನು ದ್ವಾರಪಾಲಕನನ್ನು ಕರೆದು, ಅಜಯಸಿಂಹನನ್ನು ಕರೆತರಲು ಅಪ್ಪಣೆಮಾಡಿದನು.

ಪ್ರತಾಪಸಿಂಹನು ತನ್ನೊಳಗೆ ತಾನೇ ಹೇಳಿಕೊಂಡನು :—"ಅಸಂಭವವೆ ? ಇಲ್ಲ ! ಇದ್ದರೂ ಇರಬಹುದು ! ಪ್ರತಾಪನಿಗೆ ಎಂಥಾ ದುರದೃಷ್ಟವು ತಾನೇ ಅಸಂಭವ ? ಪ್ರಪಂಚವೆಲ್ಲಾ ಪ್ರವಂಚನೆಯಿಂದಲೂ ವಿಶ್ವಾಸಘಾತಕತೆಯಿಂದಲೂ ತುಂಬಿದೆ ! ಆಹಾ ! ಅಕಬರಶಹನೆ ! ನಿನ್ನನ್ನು ಉದಾರಹೃದಯನೆಂದು ತಿಳಿದಿದ್ದೆನು. ನೀನು ಭಾರತೇಶ್ವರನಾಗಿದ್ದರೂ, ಜಾತಿಯಲ್ಲಿ ಯವನನೆಂದು ತಿಳಿದೂ ತಿಳಿದು ನನ್ನ ಪ್ರಿಯತಮ ಪುತ್ರನನ್ನು, ವೃದ್ಧಾಪ್ಯದಲ್ಲಿ ನನಗೆ ಏಕಮಾತ್ರ ಸಂಬಲವಾಗಿದ್ದವನನ್ನು ತಮ್ಮಲ್ಲಿ ಒಪ್ಪಿಸಿದೆನು. ಇಂದು ಅದಕ್ಕೆ ಪ್ರತಿಫಲವನ್ನು ಹೊಂದಿದೆನು !"

ಹೀಗೆಂದು ಹೇಳಿಕೊಳ್ಳುತ್ತಿದ್ದಾಗ ಅಜಯಸಿಂಹನು ಬಂದನು. ಪ್ರತಾಪಸಿಂಹನು ವ್ಯಸನದಿಂದ ಕಣ್ಣೀರು ತುಂಬಿದವನಾಗಿ ಮಗನ ಸುಕುಮಾರ ಮುಖವನ್ನು ನೋಡಿ, ಉಚ್ಚ ಸ್ವರದಿಂದ, "ಮಗು ! ಈ ದಿನ ಯವನ ಸಮ್ರಾಜನು ನಿನ್ನ ಮೇಲೆ ಘೋರವಾದ ಕಳಂಕವನ್ನು ಆರೋಪಿಸಿದ್ದಾನೆ ! ಈ ಕಳಂಕವು ನಿಜವಾದುದೆ ? ಹೇಳು, ಒಂದು ಸಲ ಹೇಳು ; ಸಮ್ರಾಜನು ಹೇಳುವುದು ನಿಜವಲ್ಲವೆಂದು ಹೇಳು" ಎಂದನು.

ಅಜಯನು ಕೈಮುಗಿದುಕೊಂಡು, “ಯಾವ ವಿಚಾರವೋ? ಅಪ್ಪಣೆಯಾಗಲಿ” ಎಂದನು.

ಪ್ರತಾಪ:—ಹಾ, ವತ್ಸ! ಇದರಲ್ಲಿ ನಿಜವೆಂಬುವುದು ಲೇಶವೂ ಇಲ್ಲವೆಂದು ನಾನು ಬಲ್ಲೆನು. ಹಾಗಿದ್ದರೆ ನಿನಗೆ ಗೊತ್ತಾಗುತ್ತಿತ್ತು. ಸಮ್ರಾಜನು ಹೇಳುವುವ ರಲ್ಲಿ, ಹಿರಣ್ಮಯಿಯು ಯವನನಿಗೆ ಲಗ್ನವಾದವಳೆಂದೂ ಯವನನ ಅಂತಃಪುರದಲ್ಲಿ ಇದುವರೆಗೂ ವಾಸವಾಗಿದ್ದಳೆಂದೂ ಅಂಥವಳನ್ನು ನೀನು ಪಾಣಿಗ್ರಹಣ ಮಾಡಿಕೊಳ್ಳು ವುದಕ್ಕೆ ಸಲವಾಗಿ ಉನ್ಮತ್ತನಾಗಿರುತ್ತಿಯೆಂದೂ ತಿಳಿಯಬರುತ್ತದೆ.

ಅಜಯಸಿಂಹನು ಕಣ್ಣೀರನ್ನು ಸುರಿಸುತ್ತ ವಿಕೃತಸ್ವರದಿಂದ, “ತಂದೆಗಳೆ! ದಿಲ್ಲೀಶ್ವರರು ತಮಗೆ ಹೇಳಿರುವದೆಲ್ಲಾ ಸತ್ಯವಾದುದು! ಹಿರಣ್ಮಯಿಯು ಯವನ ಸಮ್ರಾಜನ ಅಂತಃಪುರದಲ್ಲಿದ್ದಾಳೆಂದು ಕೇಳಿದ ದಿನದ ಮೊದಲ್ಗೊಂಡು ಮನಸ್ಸಿನ ಸಂಗಡ ಹೆಣಗಾಡಿದೆನು. ಆದರೆ ಪಾಪಮಯವಾದೀ ಹೃದಯವನ್ನು ವಶಮಾಡಿ ಕೊಳ್ಳಲಾರದವನಾಗಿದ್ದೇನೆ. ನಿಜವಾಗಿಯೂ ಹಿರಣ್ಮಯಿಗೆ ಸಲವಾಗಿ ಉನ್ಮತ್ತನಾಗಿ ದ್ದೇನೆ” ಎಂದನು.

ವೃದ್ಧನಾದ ಪ್ರತಾಪನ ಕೆಂಪಾಗಿದ್ದ ಮುಖವು ಬೆಳ್ಳಗಾಯಿತು. ಮುಖದಲ್ಲಿ ಬೆವರಿನ ಬಿಂದುಗಳು ಕೂಡಿದವು. ಕಣ್ಣುಗಳನ್ನು ಮುಚ್ಚಿಕೊಂಡನು. ಕ್ರಮವಾಗಿ ಬವಳಿ ಬಂದು ಕಳೆಯು ತಿರುಗಿ ಸುವರ್ಣದ ಪೀಠದಿಂದ ಕೆಳಗೆ ಬಿದ್ದನು. ಅಜಯನು ಆ ಸಂಜ್ಞಾಶೂನ್ಯವಾಗಿದ್ದ ದೇಹವನ್ನು ಎತ್ತಿ ಮಡಿಲಮೇಲೆ ಮಲಗಿಸಿಕೊಂಡು ನೀರನ್ನು ತಳಿದು ಉಪಚರಿಸಿದನು. ಸಮ್ರಾಜನು ಸ್ವಂತವಾಗಿ ಬೀಸಣಿಗೆಯಿಂದ ಗಾಳಿಯನ್ನು ಬೀಸಿ ದನು. ಪ್ರತಾಪನು ಅರುವಿಲ್ಲದವಸ್ಥೆಯಲ್ಲಿ ಹೀಗೆಂದು ಕನವರಿಸಿದನು:—“ದೇವಿ ಅಂಬಿಕೆ, ನೀನೆಲ್ಲಿ? ಹಾ, ಜನನಿ! ಇಷ್ಟು ಕಾಲದ ಮೇಲೆ ಈ ಅಧಮನ ಮೇಲೆ ನಿನ್ನ ದಯೆಯು ಹುಟ್ಟಿತೆ! ನಿನ್ನ ಆ ಭುವನಮೋಹನ ಮೂರ್ತಿಯೆಲ್ಲಿ? ಪ್ರತಾಪನು ಯಾವ ಮೂರ್ತಿಯನ್ನು ದರ್ಶನಮಾಡಲು ನಿನ್ನಾರಾಧನೆಯನ್ನು ಮಾಡುತ್ತಿದ್ದನೋ ಆ ಮೂರ್ತಿ ಎಲ್ಲಿ? ನಿನ್ನ ಕಂಠದಲ್ಲಿ ನರಮುಂಡಗಳ ಮಾಲೆ ಎಲ್ಲಿ? ರಕ್ತಧಾರೆಯು ಸುರಿ ಯುವ ನಾಲಿಗೆ ಎಲ್ಲಿ? ರಕ್ತಬೀಜ ಕುಲಧ್ವಂಸಿಯಾಗಿ ದಾನವ ರಕ್ತದಿಂದ ತೋಯ್ದು ಕೆಂಪಾದಾ ಕರಾಳ ಕೃಪಾಣವನ್ನೀ ದುರ್ದಿನದಲ್ಲೆಲ್ಲಿಟ್ಟು ಬಂದೆ, ತಾಯಿ! ಈ ವಿಪ ತ್ಕಾಲದಲ್ಲಿ, ಈ ಘೋರ ಸಂಕಟದಲ್ಲಿ, ಅಂಥಾ ಮೂರ್ತಿಯನ್ನು ಒಂದು ಸಲವೆ ತೋರು! ಈ ದಾನವ ಯುದ್ಧದಲ್ಲಿ, ಈ ಅಂಧಕಾರದಲ್ಲಿ, ಸುಧಾಮಯವಾದ ಆ ಹುಂಕಾರವನ್ನು

ಮಾಡಿ ಹಾದಿಯನ್ನು ತೋರು ! ಈ ವೃದ್ಧ ವಯಸ್ಸಿನಲ್ಲಿಯೂ ಪ್ರತಾಪನ ಬಾಹುಗಳಲ್ಲಿ ಬಲವಿರುವುದನ್ನು ನೋಡುವೆ ! ಇಲ್ಲವಾದರೆ ದಯಮಾಡಿ ಹೋಗು, ದೇವಿ ! ನಾನು ಈ ಅಂಧಕಾರದಲ್ಲಿ ಪ್ರಾಣತ್ಯಾಗವನ್ನು ಮಾಡುವೆನು. ಪ್ರತಾಪನು ನೀನು ಈಗ ತೋರುವ ಶಾಂತಿಮೂರ್ತಿಯ ಉಪಾಸಕನಲ್ಲ !”

ಸ್ವಲ್ಪ ಹೊತ್ತಾದ ಮೇಲೆ ರಾಣಾನಿಗೆ ಅರಿವು ಬಂದು, ಕೆಂಪಗೊಂಡಿದ್ದ ಕಣ್ಣುಗಳಿಂದ ಅಜಯನ ಕಡೆ ತಿರುಗಿನೋಡಿ, ಎದ್ದುನಿಂತು, ಕರುಣಸ್ವರದಿಂದ, “ಹಾ, ಮಿವಾರದ ಕಳಂಕ, ಅಜಯ ! ಮತ್ತೇನು ಮಾಡಿಬಿಟ್ಟೆ ? ನನ್ನ ವೃದ್ಧಾಪ್ಯದಲ್ಲಿ, ನನ್ನ ಈ ಅಂತಿಮಕಾಲದಲ್ಲಿ, ಪುನಃ ನನ್ನನ್ನು ಸ್ಪರ್ಶಮಾಡಿದೆಯಾ ? ನಿನ್ನ ಸ್ಪರ್ಶದಿಂದುಂಟಾಗಿರುವ ಪಾಪವು ದೇಹವನ್ನು ತುಷಾನಲದಲ್ಲಿ ಸುಟ್ಟರೂ ಹೋಗದು ! ಹಾಗಾದರೆ, ಅದೆಲ್ಲಾ ಸತ್ಯವಾದುದು ? ದಿಲ್ಲೀಶ್ವರ ! ಅಪರಾಧವನ್ನು ಕ್ಷಮಿಸಬೇಕು. ಅಕಾರಣವಾಗಿ ತಮ್ಮನ್ನು ಮಿಥ್ಯಾವಾದಿಗಳೆಂದು ಹೇಳಿದೆನು. ವತ್ಸ, ಅಜಯ ! ಏನು ಹೇಳಿದೆ ? ಯವನನ ಮನೆಯಲ್ಲಿದ್ದ ಹಿರಣ್ಮಯಿಗೆ ಸಲವಾಗಿ ಉನ್ಮತ್ತನಾದೆಯಾ ? ಅಯ್ಯೋ, ವತ್ಸ! ಮಿವಾರದ ಸರ್ವಸ್ವ ರತ್ನಸ್ವರೂಪನೆ ! ಪ್ರತಾಪನ ಪ್ರಾಣಧನ ! ಹತ್ತಿರ ಬಾ ! ಈ ಕತ್ತಿಯ ಪ್ರಹಾರದಿಂದ ಪಾಪಹೃದಯವನ್ನು ಎರಡು ತುಂಡಾಗಿ ಹೊಡೆದುಹಾಕುವೆನು !” ಎಂದು ಹೇಳಿದನು.

ಅಜಯಸಿಂಹನು ಮುಂದುವರಿದು ಇಂಬಾದ ಎದೆಯನ್ನು ಮುಂದಕ್ಕೆ ಚಾಚಿ ತಂದೆಯ ಅಸಿಪ್ರಹಾರಕ್ಕೆ ಸರಿಯಾಗಿ ನಿಂತನು. ಪ್ರತಾಪನು ಕಂಪಿತ ಕರದಿಂದ ಉದ್ಧವಾದ ಕತ್ತಿಯನ್ನೊರೆಯಿಂದ ಎಳದು ಎತ್ತಿಹಿಡಿದನು. ಅಕಬರನು ಮಿಂಚಿನ ವೇಗದಿಂದ ಓಡಿಬಂದು, ಪ್ರತಾಪಸಿಂಹನೆತ್ತಿದ್ದ ಕೈಯನ್ನು ಹಿಡಿದು, “ಪ್ರತಾಪಸಿಂಹ ! ನಾನು ಇದುವರೆಗೂ ತಮ್ಮನ್ನು ವೀರಪುರುಷರೆಂದು ತಿಳಿದಿದ್ದೆನು. ಆದರೆ ಇಂದಿನ ಈ ಆಚರಣೆಯು ವೀರತ್ವವಲ್ಲ, ಪೈಶಾಚವಾದ ನಿಷ್ಠುರತೆ !” ಎಂದನು.

ಪ್ರತಾಪಸಿಂಹನು ಕಡುಮುಕ್ಕಾಗಿ ತುಟಿಯನ್ನು ಕಡಿದುಕೊಂಡು ಕತ್ತಿಯನ್ನು ನೆಲದಮೇಲೆ ಒಗೆದು ಜ್ಞಾನಶೂನ್ಯವಾದವನ ಹಾಗಾಗಿ ತನ್ನ ಆಸನದಲ್ಲಿ ಕುಳಿತು, “ಹಾ, ಅಕಬರ ! ನೀನು ಪ್ರತಾಪನ ಜಾತಕದಲ್ಲಿ ನೀಚಗ್ರಹ ! ಹೆಜ್ಜೆಹೆಜ್ಜೆಗೂ ನಿನ್ನ ಅಡ್ಡಿ ! ಪ್ರತಿಕಾರ್ಯದಲ್ಲೂ ಸಮಸಪ್ತದಲ್ಲಿರುತ್ತಿ !” ಎಂದನು.

ಪ್ರತಾಪನು ಸ್ವಲ್ಪಹೊತ್ತು ಎರಡು ಕೈಗಳಿಂದಲೂ ಕಣ್ಣುಗಳನ್ನು ಮುಚ್ಚಿಕೊಂಡಿದ್ದು ಬಳಿಕ ಕಣ್ದೆರೆದು ಅಜಯಸಿಂಹನನ್ನು ಕುರಿತು, “ಇಂದು ನನ್ನ ಕತ್ತಿಯ

ಪ್ರಹಾರದಿಂದ ನಿನ್ನ ಪಾಪಭರಿತವಾದ ಹೃತ್ಪಿಂಡವು ಎರಡು ತುಂಡಾಗಿ ಕಡಿದು ಹೋಗಿದ್ದರೆ ಈ ಕಳಂಕವು ನೀಗಿ ಹೋಗುತ್ತಿತ್ತು! ಮೆವಾರದ ಗೌರವವು ಉಳಕೊಳ್ಳುತ್ತಿತ್ತು! ಆದರೆ ವಿಧಾತನ ಇಚ್ಛೆಯು ಹಾಗಿರಲಿಲ್ಲ! ಈಗ ನೀನು ನನ್ನ ಅಪ್ಪಣೆಯನ್ನು ಮನ ಒಡ್ಡಿ ಕೇಳು! ಹಿರಣ್ಮಯಿಯನ್ನು ಮರೆತು ಬಿಡು! ನಾನು ನಿನಗೆ ಮತ್ತೆರಡು ವರ್ಷ ಕಾಲ ಅವಕಾಶವನ್ನು ಕೊಟ್ಟಿರುವೆನು. ನೀನು ಮೆವಾರದ ರಾಜವಂಶದಲ್ಲಿ ಹುಟ್ಟಿರುತ್ತಿ. ದೇವನ್ನಾದ ಸಂಗ್ರಾಮಸಿಂಹನ ರಕ್ತವು ನಿನ್ನ ದಮನಿಗಳಲ್ಲಿ ಓಡುತ್ತಿರುವುದು. ನೀನು ಈ ಎರಡು ವರ್ಷಕಾಲದಲ್ಲಿ ನಿನ್ನ ಹೃದಯವನ್ನು ವಶಮಾಡಿಕೊಳ್ಳದಿದ್ದರೆ ಸೂರ್ಯವಂಶಕ್ಕೆ ಕುಲಾಂಗಾರನಾಗುವೆ. ಈ ಎರಡು ವರ್ಷಕಾಲದಲ್ಲಿ ನೀನು ಆ ಹೆಂಗಸನ್ನು ಮರೆಯಲಾರದೆ, ಎರಡು ವರ್ಷಕಾಲದ ಮೇಲೂ ಪ್ರೇಮದ ತೃಷೆಯು ಹೃದಯವನ್ನು ಕಳವಳಗೊಳಿಸಿದರೆ ಒರೆ ಕೂರಿಸಿರುವ ಪವಿತ್ರವಾದ ಈ ಕತ್ತಿಯ ಪ್ರಹಾರದಿಂದ ನಿನ್ನ ಹೃತ್ಪಿಂಡವನ್ನು ವಕ್ಷದಿಂದ ಕಿತ್ತು ತೆಗೆದು ಯಮುನಾ, ಜಾಹ್ನವಿ, ಗೋದಾವರಿ ಅಥವಾ ನರ್ಮದಾ ನದಿಯ ಪವಿತ್ರವಾದ ನೀರಿನಲ್ಲಿ ಹಾಕಿಬಿಡು! ನನ್ನ ಈ ಕಟ್ಟಳೆಯ ಪ್ರಕಾರ ನಡೆದುಕೊಳ್ಳುವೆನೆಂದು ಶಪಥವನ್ನು ಮಾಡು" ಎಂದನು.

ಅಜಯಸಿಂಹ :—(ಕಂಪಿತಸ್ವರದಿಂದ) ಈ ಕತ್ತಿಯನ್ನು ಮುಟ್ಟಿ ಶಪಥವನ್ನು ಮಾಡುತ್ತೇನೆ. ಹಿರಣ್ಮಯಿಯನ್ನು ಮರೆಯುವುದಕ್ಕೆ ಸಲುವಾಗಿ ಎರಡು ವರ್ಷಕಾಲ ಸರ್ವ ಪ್ರಯತ್ನಮಾಡುವೆನು. ಎರಡು ವರ್ಷಕಾಲದಲ್ಲಿ ಮಾಡುವ ಪ್ರಯತ್ನದಿಂದ ಹೃದಯವನ್ನು ವಶಮಾಡಿಕೊಳ್ಳಲು ಅಶಕ್ತನಾದರೆ ಈ ಕತ್ತಿಯ ಪ್ರಹಾರದಿಂದ ಈ ಅಕಿಂಚಿತ್ಕರವಾದ ಹೃದಯವನ್ನು ಇಪ್ಪಾಲಾಗಿ ಸೀಳಿ, ಯಮುನೆ, ಜಾಹ್ನವಿ ಗೋದಾವರಿ ಅಥವಾ ನರ್ಮದೆಯಲ್ಲಿ ಹಾಕಿಬಿಡುವೆನು.

## ಹದಿನೇಳನೆಯ ಪರಿಚ್ಛೇದ.

ಅರ್ಧರಾತ್ರಿಯಲ್ಲಿ ಯಮುನೆಯ ವಕ್ಷದಲ್ಲಿ ದೋಣಿಯೊಂದು ಅತಿವೇಗದಿಂದ ಹೋಗುತ್ತಿತ್ತು. ಅದರಲ್ಲಿ ಅಜಯಸಿಂಹನೊಬ್ಬನೇ ಕಣ್ಣು ಮುಚ್ಚಿಕೊಂಡು ಕುಳಿತ್ತಿದ್ದನು. ನದಿಯ ನೀಲವಾದ ಜಲದೊಂದಿಗೆ ತಾರೆಗಳ ಮಾಲೆಯಿಂದ ಅಲಂಕೃತವಾದ ನೀಲಾಕಾಶವು ಸೇರಿತ್ತು. ಅದರ ಮೇಲೆ ಚಂದ್ರಕಿರಣವು ಕ್ರೀಡಿಸುತ್ತಿತ್ತು. ಚಂಚಲ ಪ್ರಾಣಿಯಾಗಿ ನೀಲವಸನವನ್ನುಟ್ಟು ವಜ್ರದ ಹಾರವನ್ನು ಧರಿಸಿ ಸೌಂದರ್ಯ

ಮಯವಾಗಿದ್ದ ಯಮುನೆಯ ಪ್ರೇಮಲಹರಿಯು ತರಂಗ ಭಂಗದಿಂದ ಬಿದ್ದು ಏಳುತ್ತ ಹರಿಯುತ್ತಿದೆ. ಅಜಯಸಿಂಹನು ನಾವಿಕರನ್ನು ಕುರಿತು ಘಟ್ಟಿಯಾಗಿ ಕೂಗಿ, ದೋಣಿಯನ್ನು ಅತಿ ವೇಗದಿಂದ ನಡಿಸಿದರೆ ನಿಮಗೆ ಈ ರತ್ನಹಾರವನ್ನು ಕೊಡುವೆನೆಂದು ಹೇಳಿದನು.

ನಾವಿಕರು:—ದೋಣಿಯನ್ನು ಎಲ್ಲಿಗೆ ತೆಗೆದುಕೊಂಡು ಹೋಗಬೇಕು? ಅಪ್ಪಣೆಯಾಗಲಿ.

ಅಜಯಸಿಂಹ:—ಬಹಳ ದೂರ—ಅಂಧಕಾರವಿರುವ ಸ್ಥಳಕ್ಕೆ, ಎಲ್ಲಿ ನದಿಯು ತಾರೆಗಳ ಮಾಲೆಯನ್ನು ಧರಿಸಿರುವುದಿಲ್ಲವೋ, ಎಲ್ಲಿ ನದಿಯು ನೃತ್ಯಮಾಡುವುದಿಲ್ಲವೋ ಎಲ್ಲಿ ಚಂದ್ರನಿರುವುದಿಲ್ಲವೋ, ಎಲ್ಲಿ ಬೆಳಕು ಇರವುದಿಲ್ಲವೋ, ಅಂಥಾ ಪ್ರದೇಶಕ್ಕೆ ಹೋಗಲಿ, ತಳುಹು ಮಾಡಬೇಡಿರಿ.

ಹಾ, ಹುಡುಗ, ಅಜಯಸಿಂಹ! ಈ ಅದೃಷ್ಟಪೂರ್ಣವಾದ ನರಜೀವನದಲ್ಲಿ, ಧಮನಿಗಳಲ್ಲಿ ರಕ್ತವು ತುಂಬಿ ಓಡುತ್ತಿರುವಾಗ ಈ ಪರ್ಯಂತ ಯಾವ ವೀರನು ಹೃದಯದೊಂದಿಗೆ ಹೆಣಗಾಡಿ ಜಯವನ್ನು ಹೊಂದಿರುವನು? ನಾವಿಕರು ಅಜಯನ ಅಪ್ಪಣೆಗೆ ಏನೊಂದುತ್ತರವನ್ನು ಕೊಡದೆ, ದೋಣಿಯನ್ನು ವೇಗವಾಗಿ ನಡೆಸುತ್ತಿದ್ದರು. ಈ ಸಮಯದಲ್ಲಿ ಹತ್ತಿರ ನದಿಯ ಮರಳಲ್ಲಿ ಯಾರೋ ಘಟ್ಟಿಯಾಗಿ ಹಾಡುತ್ತಿದ್ದ ಸಂಗೀತವು ಕೇಳಿತು.

ರಾಗ—ನೀಲಾಂಬರಿ ತಾಳ, ರೂಪಕ.

ಮಾಯದಶ್ಯಾಮನೆ ನ್ಯಾಯವೆ ಕಾಮನೆ ||ಪಲ್ಲವಿ||
ವಿನತಿಯಿಂದ ಯುಲಿದೆ ನಿನ್ನ ನಿಜವ ಗಣಿಸಿ
ದಣಿಯ ಬೇಡಸೊಲ್ಲದೆನ್ನ ಬಿಡೆಲೊತೋಳ ||
ಸವತಿ ಮದಸಿ ನಿನ್ನ ಕಾಣೆ ತವೆಮುನಿಸುವಳು |
ಜವದಿ ಜರಗು ಮರಗು ಮಾಯ ಮನ್ನಿಸಳವಳು ||
ಬಂದ ಮಾತನಾಡದಿರು ಕಂಡೆ ಚಾತುರ |
ನೊಂದ ವನಮಾಲಿ ನಿನ್ನ ಪ್ರಾಣದಲ್ಲಿ ಆತುರೆ || (ಬಿ. ಸಿ. ಅ.)

ಇದೇನು? ಅಜಯನು ಕನಸು ಕಂಡನೆ? ಬಹಳ ದಿವಸಕ್ಕೆ ಹಿಂದೆ, ಕೇವಲ ಚಿಕ್ಕಂದಿನಲ್ಲಿ ಈ ಸಂಗೀತವು ಇದೇ ಮಧುರ ಸ್ವರದಲ್ಲಿ ಕಿವಿಗಿನಿದಾದ ಇದೇ ತಾನದಲ್ಲಿ ಅನೇಕ ತಡವೆ ಕೇಳಿದ್ದನು. ಚಿಕ್ಕಂದಿನಲ್ಲಿ ಹಿರಣ್ಮಯಿಯು ಈ ಗೀತವನ್ನು ಹಾಡುತ್ತ

ಅಜಯನ ಮೇಲೆ ಹೂವೆರಚಿ ಓಡಿಹೋಗುವಳು. ಹಿರಣ್ಮಯಿಯು ಇಲ್ಲಿಗೆ ಎಲ್ಲಿಂದ ಬಂದಳು ? ಅಜಯನು ಕನಸುಕಂಡನೆ ? ಅವನು ಕಣ್ದೆರೆದು ನಾಲ್ಕು ಕಡೆಯೂ ನೋಡಿದನು. ಯಮುನೆಯ ಚಂಚಲವಾದ ತರಳಹೃದಯದಲ್ಲಿ ಚಂದ್ರನು ಕೇಳಿ ಮಾಡುತ್ತಾನೆ. ವಜ್ರದ ಹಾರವು ಥುಳಪಿಸುತ್ತದೆ. ನದಿಯ ಮರಳಲ್ಲಿ ಪುನಃ ಅದೇ ಸಂಗೀತವು ಕೇಳಿತು. ಅಜಯನು ಎದ್ದುನಿಂತು ಹುಚ್ಚನ ಹಾಗೆ ಉಚ್ಚಕಂಠದಿಂದ " ಹಿರಣ್ಮಯಿ ! " ಎಂದು ಕೂಗಿದನು.

ನಾಲ್ಕು ದಿಕ್ಕಿನಿಂದಲೂ ಆ ಏಕಟಧ್ವನಿಯು ಪ್ರತಿಧ್ವನಿತವಾಯಿತು. ಯಮುನೆಯ ತರಂಗದಲ್ಲಿಯೂ ಅಂಬರದ ತಲದಲ್ಲಿಯೂ ಚಂದ್ರನ ವಕ್ಷದಲ್ಲಿಯೂ ಏಕಟವಾಗಿ " ಹಿರಣ್ಮಯಿ " ಎಂದು ಶಿಲೆಗೊಂಡಿತು. ಅಜಯನು ಒಂದು ಕೈಯಿಂದ ಎದೆಯನ್ನು ಅದಮಿಕೊಂಡು ಮತ್ತೊಂದು ಕೈಯಿಂದ ಕಣ್ಣುಗಳನ್ನು ಮುಚ್ಚಿಕೊಂಡು ಕುಳಿತುಬಿಟ್ಟನು ! ಯಮುನೆಯು ತರಂಗರಂಗದಲ್ಲಿ ಕುಣಿಯುತ್ತಿತ್ತು ! ತರಂಗದೊಂದಿಗೆ ದೋಣಿಯು ಸರಸವಾಡುತ್ತ ಓಡುತ್ತಿತ್ತು !

# ಎರಡನೆಯ ಭಾಗ.

## ಮೊದಲನೆಯ ಪರಿಚ್ಛೇದ.

ಅಜಯಸಿಂಹನು ತಂದೆಯ ಕಟ್ಟಾಜ್ಞೆಯನ್ನು ಕಟ್ಟೊಡೆಯದೆ ಕಡಂಗಿ ಕಾಪಾಡುವುದಕ್ಕೆ ಸಲವಾಗಿ ಉದಯಪುರಕ್ಕೂ ಆಗ್ರಾನಗರಕ್ಕೂ ಬಹುದೂರ ಹೊರಟು ಹೋದನು. ಪ್ರಶಾಂತ ಜಲರಾಶಿಯುಳ್ಳವಳಾಗಿಯೂ ನೃತ್ಯಗೀತಶೀಲೆಯಾಗಿಯೂ ತಟಗಳುಳ್ಳವಳಾಗಿಯೂ ಇರುವ ಯಮುನೆ! ವೇದಪಾಠ ಘೋಷದಿಂದ ಶಬ್ದಿತವಾಗಿಯೂ ಹೋಮಗಂಧದಿಂದ ಸುವಾಸಿತವಾಗಿಯೂ ಜಯಮಾಲೆಗಳಿಂದ ಅಲಂಕೃತೆಯಾಗಿಯೂ ಇದ್ದ ನಿನ್ನ ಲೀಲಾತಟದಲ್ಲಾಗಲೀ ಇಂದ್ರಿಯಗಳ ಜಯಿಸಿದ ಮಹರ್ಷಿಗಳು ನೆಲೆಗೊಂಡಿದ್ದ ಶಾಂತಿ ನಿಲಯದಲ್ಲಾಗಲೀ ಆರ್ಯವೀರವೃಂದದ ರಂಗಭೂಮಿಯಲ್ಲಾಗಲೀ; ಪುಷ್ಪಕುಂತಲಗಳಿಂದಲೂ ಪಲ್ಲವಗಳ ಹಾರಗಳಿಂದಲೂ ಸಹಸ್ರಧಾರೆಗಳುಳ್ಳ ನದಿಗಳಿಂದಲೂ ಶೋಭಿತೆಯಾಗಿಯೂ ಋತುರಾಜ ಸೇವಿತೆಯಾಗಿಯೂ ಇರುವ, ತಾಯಿ, ವಂಗಭೂಮಿ! ಶಾಂತಿಮಯವಾಗಿಯೂ ಶೀತಲವಾಗಿಯೂ ಇರುವ ನಿನ್ನ ಒಡಲಲ್ಲಾಗಲೀ ಅಜಯಸಿಂಹನು ಆಶ್ರಯವನ್ನು ಹೊಂದಲಿಲ್ಲ. ಅವನು ಜನಕೋಲಾಹಲ ಶೂನ್ಯ ಪ್ರದೇಶವಾದ ಗಂಭೀರಮೂರ್ತಿಯನ್ನು ತಾಳ್ದ ವಿಂಧ್ಯಗಿರಿಯ ಪಾಷಾಣಮಯವಾದ ವಕ್ಷದಲ್ಲಿ ಮರೆಹೊಕ್ಕು ಹೃದಯವನ್ನು ಪಾಷಾಣಮಂಗೈಯಲು ಪ್ರಯತ್ನಿಸಲು ನಿಶ್ಚಯಿಸಿಕೊಂಡಿದ್ದನು. ಅಜಯಸಿಂಹನು ದುರ್ಗಮವಾದ ವಿಂಧ್ಯಶೈಲವನ್ನು ಹತ್ತಿದನು. ಹತ್ತಿನೋಡಲಾಗಿ ವಿಂಧ್ಯಗಿರಿಯ ಪ್ರಸ್ತರಮಯವಾದ ಪಾಷಾಣವಕ್ಷದಲ್ಲೂ ಶ್ಯಾಮಲವರ್ಣವುಳ್ಳ ಪಲ್ಲವ ಪೂರ್ಣವಾದ ತರುಲತೆಗಳು ನಗುತ್ತಿದ್ದವು. ಪಲ್ಲವರಾಶಿಯೊಳಗನಿಂದ ಹಕ್ಕಿಗಳ ಲಲಿತವಾದ ಕಾಕಲಿ ಗೀತಧ್ವನಿಯು ಕೇಳುತ್ತಿತ್ತು. ಪಾಷಾಣವನ್ನು ಸೀಳಿಕೊಂಡು ಚಿಕ್ಕ ಚಿಕ್ಕ ಹೊಳೆಗಳು ಪ್ರೇಮ ಪುಲಕದಿಂದ ಹೊರಟು ಗಿರಿಯ ಹೃದಯವನ್ನು ತೊಳಿಯುತ್ತಿದ್ದವು. ಗಿರಿಯ ಚರಣದಲ್ಲಿ ಚಿರಯೌವನೆಯಾಗಿಯೂ ಬೆಳುವಣ್ಣ ಜಲದ ಪ್ರವಾಹವುಳ್ಳದುದಾಗಿಯೂ ಇದ್ದ ಜಾಹ್ನವೀ ನದಿಯು ಪ್ರೇಮದಿಂದ ನಕ್ಕು ಪುಲಕದಿಂದ ಕರಗಿ ನೃತ್ಯಮಾಡುತ್ತಿತ್ತು. ಅಜಯಸಿಂಹನು ನಿರಾಶನಾದನು. ಅಂಥಾ ಸ್ಥಳದಲ್ಲಿಯೂ ಪ್ರಲೋಭನಶೀಲವಾದ ವಸುಮತಿಯು (ಭೂಮಿಯು) ಮೋಹಮಯವಾಗಿ ನಾನಾ ವಿಧವಾಗಿ ಸರಸವಾಡುತ್ತ ಸೊಗಸಾದ

ವಿನೋದದಿಂದ ನಗುತ್ತಿತ್ತು. ವಿಧವಿಧವಾದ ನಾದದಿಂದ ಗಾನಮಾಡುತ್ತಿತ್ತು! ಅಂಥಾ ಸ್ಥಳದಲ್ಲಿಯೂ ಎಲ್ಲೆಲ್ಲಿ ನೋಡಿದರೂ ತನ್ನ ಬಾಲ್ಯಕಾಲದ ಗೆಳತಿ ಹಿರಣ್ಮಯಿಯ ರೂಪರಾಶಿಯು ಸ್ವರೂಪವನ್ನು ತೋರಿಸುವನು; ಕಣ್ಣು ಮುಚ್ಚಿಕೊಂಡರೆ ಶಬ್ದಮಯಿಯಾದ ವಸುಂಧರೆಯು ಮಧುರನಿನಾದದಿಂದ ಹಿರಣ್ಮಯಿಯ ಸುಧಾಮಯವಾದ ಆ ಕಂಠಸ್ವರವನ್ನು ಸ್ಮೃತಿಯಲ್ಲಿ ತಂದು ಕೇಳುವ ಹಾಗೆ ಮಾಡುವುದು. ಎಲ್ಲಿಗೆ ಹೋಗಲಾಪನು! ಎಲ್ಲಿಗೆ ಹೋದರೆ ಪ್ರಕೃತಿಯ ಪ್ರಲೋಭನದ ಕೈಯಿಂದ ತಪ್ಪಿಸಿಕೊಳ್ಳಲಾದೀತು? ವಿಶಾಲವಾದ ಆ ವಿಂಧ್ಯಶೈಲದಲ್ಲಿ ಎಲ್ಲಿ ಹೋದರೆ ಹೃದಯವು ಶಾಂತಿಯನ್ನು ಹೊಂದಿ ಪ್ರಕೃತಿಯ ಪ್ರಲೋಭನದಿಂದ ವಿಚಲಿತವಾಗದಿರುವುದು! ಅವನು ಚಂಚಲವಾದ ಚರಣಗಳಿಂದ ಕಾತರವಾದ ಪ್ರಾಣದಿಂದ ಹೊರಟು ಅಂಧಕಾರಮಯವಾದ ಗಿರಿ ಗುಹೆಗಳನ್ನು ಹುಡುಕುವುದರಲ್ಲಿ ಪ್ರವೃತ್ತನಾದನು. ಬಹಳ ದೂರ ಹೋಗಿ ಬಹಳವಾಗಿ ಹುಡುಕಿದ ಬಳಿಕ ಗಿಡಗಂಟೆಗಳಿಲ್ಲದೆ ನಿಶ್ಶಬ್ದವಾಗಿದ್ದ ಸ್ಥಳವೊಂದನ್ನು ಕಂಡನು. ಆ ಸ್ಥಳಕ್ಕೆ ನಾಲ್ಕು ಕಡೆಯಲ್ಲೂ ಕಲ್ಲುಗಳ ರಾಶಿ ಹೊಳೆಗಳ ಕುಲಕುಲ ಗದ್ದಲವಿಲ್ಲ! ಹಕ್ಕಿಗಳ ಕಾಕಲಿ ಕೂಗಿಲ್ಲ! ಅಜಯಸಿಂಹನು ಆ ಸ್ಥಳದಲ್ಲಿ ಏಕಾಂಗಿಯಾಗಿ ಕುಳಿತು ಹಿರಣ್ಮಯಿಯ ನೆನವನ್ನು ಹೃದಯದಿಂದ ಕಿತ್ತು ಹಾಕುವುದಕ್ಕೆ ಸಲವಾಗಿ ಕಠೋರವಾದ ಯೋಗ ಸಾಧನಮಾಲು ಎಸಗಿದನು!

ಹಗಲು ಕಳೆಯಿತು. ರಾತ್ರಿಯು ಬಂದಿತು. ನಿಸ್ತಬ್ಧವಾದ ಆ ಶೈಲತಲವು ಮತ್ತಷ್ಟು ನಿಸ್ತಬ್ಧವಾಯಿತು. ದಶದಿಕ್ಕುಗಳೂ ಭಯಂಕರವಾದ ಕತ್ತಲೆಯಲ್ಲಿ ಮುಳುಗಿ ಹೋಯಿತು. ನಾಲ್ಕು ಕಡೆಯಲ್ಲಿಯೂ ಎಲ್ಲೆ ಕಾಣಿಸದ ಕತ್ತಲು. ಮೇಲೆ ಕತ್ತಲೆ ಕವಿತಿದ್ದ ಎಲ್ಲೆ ಇಲ್ಲದ ಆಕಾಶ. ನೋಡುತ್ತಿದ್ದ ಹಾಗೆ ಅಂಧಕಾರಮಯವಾದ ಆಕಾಶದಲ್ಲಿ ಕಪ್ಪಾದ ಮೋಡವು ಕವಿತು ಘೋರ ಗರ್ಜನೆಯಿಂದ ತೆರಪಿಲ್ಲದೆ ವಾರಿಧಾರೆಯನ್ನು ಕರೆಯಿತು. ಪ್ರಾಣಿ ಸಮಾಗಮವಿಲ್ಲದ ಆ ಪ್ರದೇಶದಲ್ಲಿ ಆ ನೀರಿನ ಪ್ರವಾಹದ ಮಧ್ಯದಲ್ಲಿ ಆ ಕಪ್ಪಗಿರುವ ಕತ್ತಲೆಯಲ್ಲಿ ಅಜಯಸಿಂಹನ ದೇಹವು ಕ್ರಮವಾಗಿ ಉಡುಗುತ್ತ ಬಂದಿತು. ರಕ್ತ ಸಂಚಾಲನವು ನಿಸ್ತೇಜವಾಯಿತು. ಮನದಲ್ಲಿ ಒಂದು ಪ್ರಕಾರ ಭಯವು ಹುಟ್ಟಿತು! ಘೋರಾಂಧಕಾರದಲ್ಲಿ ಗಂಭೀರ ನಿಸ್ತಬ್ಧತೆಯಲ್ಲಿ ಹೃದಯದಲ್ಲಿ ಹಿರಣ್ಮಯಿಯ ಚಿತ್ರವು–ಅಳಿಸಿಹೋಗುವ ಮಾತು ಹಾಗಿರಲಿ–ಗಾಢತರವಾಗಿ ಉಜ್ವಲವಾದ ಬಣ್ಣದಿಂದ ಚಿತ್ರಿತವಾಯಿತು! ಅವನು ಕಾತರ ಸ್ವರದಲ್ಲಿ ತನ್ನೊಳು ತಾನೇ, "ಹಾ! ಅಜಯಸಿಂಹ! ಹಿರಣ್ಮಯಿಯನ್ನು ಈ ಜನ್ಮದಲ್ಲಿ ಮರೆತು ಹೋಗುವಿಯಾ!" ಎಂದು ಹೇಳಿಕೊಂಡನು.

ಪಾರ್ಶ್ವದಲ್ಲಿ “ ಇಲ್ಲಿಂದ ಹೊರಡು! ಬಹಳ ತೀವ್ರ ಧಾರೆಯುಳ್ಳ ವೃಷ್ಟಿಧಾರೆ; ಬಹಳ ಭಯಂಕರವಾದ ಅಂಧಕಾರ! ” ಎಂದು ಯಾರೋ ಹೇಳಿದಹಾಗಾಯಿತು.

ಇದೇನು ಮನುಷ್ಯ ಕಂಠದ ಶಬ್ದವೆ? ಪ್ರಾಣಿಮಾತ್ರವಿಲ್ಲದ ಈ ಶೈಲತಲದಲ್ಲಿ ಭಯಂಕರವಾದ ಈ ಸಮರಾತ್ರಿಯಲ್ಲಿ ಮನುಷ್ಯನು ಎಲ್ಲಿಂದ ಬರುವನು? ಹಾಗಾದರೆ ಇದು ಅಜಯನ ಮನದ ವೇದನೆಯನ್ನು ನೋಡಿ ಮರುಗಿ ಸಹಾಯಮಾಡುವುದಕ್ಕೆ ಬಂದನೆ? ಅಜಯಸಿಂಹನು ಎದ್ದುನಿಂತು “ ನೀನಾರು? ಮನುಷ್ಯನೆ ಅಥವಾ ದೇವತೆಯೋ” ಎಂದು ಕೇಳಿದನು.

ಪಾರ್ಶ್ವದಿಂದ ಉತ್ತರ:—ನಾನು ನಿನ್ನಹಾಗೆ ಭಗ್ನಹೃದಯನಾಗಿ ನಿರಾಶ ಪ್ರಾಣವುಳ್ಳ ಸನ್ಯಾಸಿ! ನಾನೂ ನಿನ್ನ ಹಾಗೆ ಹೃದಯವೇದನೆಯಿಂದ ಶಾಂತಿಹೋಗಿ ಅಂಧಕಾರದಲ್ಲಿ ಮರೆಹೊಕ್ಕಿದವನು!

ಅಜಯನ ಹೃದಯದಲ್ಲೊಂದುಪ್ರಕಾರ ಸಂತೋಷವುಂಟಾಗಿ, “ ಆಹಾ! ಈ ಜಗತ್ತಿನಲ್ಲಿ ನನ್ನ ಹಾಗೆ ಹತಭಾಗ್ಯನು ಮತ್ತೊಬ್ಬನಿರುವನೆ? ಬಾರೊ, ಅಣ್ಣಾ! ಹೃದಯದೊಂದಿಗೆ ಹೃದಯವನ್ನು ಬೆರಸಿ ಆಲಿಂಗನ ಮಾಡಿಕೊಳ್ಳೋಣ! ” ಎಂದು ಹೇಳಿದನು.

ಅಜಯನು ಆಗಂತುಕನನ್ನಾಲಿಂಗನಮಾಡಲು ಕೈಚಾಚಿದನು. ಆಗಂತುಕನು ಹಿಂದಕ್ಕೆ ಸರಿದು, “ ಇಂದಿನ ರಾತ್ರಿಯು ಬಹಳ ಭಯಂಕರವಾದುದು! ” ಎಂದನು.

ಅಜಯ:—ನಿಜವನ್ನು ಹೇಳಿದೆ. ಭಯಂಕರವಾದ ರಾತ್ರಿ, ಅಹುದು!

ಆಗಂತುಕ:—ಹಾಗಾದರೆ ಹೊರಡು ಇಲ್ಲಿಂದಿಬ್ಬರೂ ಹೋಗೋಣ.

ಅಜಯ:—ಎಲ್ಲಿಗೆ? ಹೇಳು.

ಆಗಂತುಕ:—ಜನರಿರುವ ಜನಾಂಗಕ್ಕೆ! ಮನುಷ್ಯ ಕೋಲಾಹಲಕ್ಕೆ! ಅಂಧಕಾರವು ಹೆಚ್ಚಿ, ನೆನವನ್ನು ಮತ್ತಷ್ಟು ಗಾಢತರಮಾಡುತ್ತದೆ! ನಿರ್ಜನದಲ್ಲಿ ಹೃದಯದ ಚಿಂತೆಯು ಹೆಚ್ಚಿ ಉರಿಯುವುದು.

ನಿರಾಶೆಯುಳ್ಳ ಹೃದಯವೂ ಕಾತರಪಡುವ ಪ್ರಾಣವೂ ಒಮ್ಮಿಂದೊಮ್ಮೆ ಪೂರ್ಣ ಸಹಾನುಭವವನ್ನು ಪಡೆದರೆ ಸ್ವಲ್ಪಕಾಲದ ಮಟ್ಟಿಗೆ ನೈರಾಶ್ಯದ ಯಾತನೆಯು ಹೋಗಿ ಕಾತರತೆಯು ಆಕಸ್ಮಿಕವಾಗಿ ಉಲ್ಲಾಸದಲ್ಲಿ ಪರಿಣಮಿಸುವುದು. ಅಜಯಸಿಂಹನು ಕೈತಟ್ಟಿಕೊಂಡು, “ ನಿರಾಶ ಪ್ರಾಣವುಳ್ಳ ಭಗ್ನಹೃದಯನಾದ ಸನ್ಯಾಸಿಯೆ! ನೀನು ನಿಜವನ್ನು ಹೇಳಿದೆ! ನಿರ್ಜನವಾದ ಅಂಧಕಾರದಲ್ಲಿ ಹೃದಯದ ಅಗ್ನಿಯು

ಹೆಚ್ಚು ಉರಿದು ಸ್ಮೃತಿಯು ಮತ್ತಷ್ಟು ಗಹತರವಾಗುತ್ತದೆ! ಹೊರಡು, ನಾವಿಬ್ಬರೂ ಭಗ್ನಹೃದಯರಾದ ಇಬ್ಬರು ಸನ್ಯಾಸಿಗಳು, ಜನರಿರುವ ಜನಾಂಗಕ್ಕೆ ಹೋಗಿ ಅಲ್ಲಿ ಮತ್ತೇನಾಗುವುದೋ ನೋಡೋಣ!" ಎಂದು ಹೇಳಿದನು.

ಅಜಯಸಿಂಹನು ಅಲ್ಲಿಂದ ಎದ್ದು ಮೆಲ್ಲಮೆಲ್ಲಗೆ ಹೊರಟನು. ಆಗಂತುಕನು ಅವನ ಹಿಂದೆ ಹೋದನು. ಅಂಧಕಾರದಲ್ಲಿ ಪರ್ವತ ಪ್ರದೇಶದಲ್ಲಿ ಹೋಗತಕ್ಕ ಹಾದಿಯನ್ನು ಕಂಡು ಹಿಡಿಯುವುದು ಕಷ್ಟ. ಬಹಳ ಹೊತ್ತಾದ ಬಳಿಕ ಕತ್ತಲೆಯು ಹೋಗಿ ಉಷೆಯ ಕಿರೀಟದ ಕಾಂತಿಯು ಹರಡಿಕೊಳ್ಳುತ್ತ ಬಂದಿತು. ಆ ಬೆಳಕಿನಲ್ಲಿ ಅನಾಯಾಸವಾಗಿ ಪರ್ವತದಿಂದಿಳಿಯ ಬಹುದೆಂದು ತಿಳಿದು ಅಜಯನು ಮುಂದುವರಿದು ಹೊರಟನು. ಆದರೆ ಹೋಗಬೇಕಾದ ಸ್ಥಳವೂ ಹಾದಿಯೂ ಗೊತ್ತಾಗದೆ ಆಗಂತುಕನನ್ನು, "ಎಲ್ಲಿಗೆ ಯಾವ ಮಾರ್ಗವಾಗಿ ಹೋಗಲು ಇಷ್ಟ!" ಎಂದು ಕೇಳಿದನು.

ಆಗಂತುಕನ ಉತ್ತರವು ಬಾರದುದರಿಂದ ಹಿಂದಿರುಗಿ ನೋಡಿದನು. ಆಗಂತುಕನು ಇರಲಿಲ್ಲ! ಆಯಾಸದಿಂದ ಅವನು ಹಿಂದುಳಿದಿರಬಹುದೆಂದು ತಿಳಿದನು. ಬಾರಿಬಾರಿಗೂ ಕೂಗಿದನು. ಉತ್ತರವಿಲ್ಲ. ಬಹುದೂರ ಹಿಂದಕ್ಕೆ ಹೋಗಿ ಹುಡುಕಿದನು. ಅವನು ಸಿಗಲಿಲ್ಲ. ಬಹಳ ಹೊತ್ತು ನಿಂತು ಕಾದಿದ್ದನು. ಭಗ್ನಹೃದಯವುಳ್ಳ ಸನ್ಯಾಸಿಯು ಹಿಂದಿರುಗಿ ಬರಲಿಲ್ಲ.

## ಎರಡನೆಯ ಪರಿಚ್ಛೇದ.

ಬಹಳ ದಿನಗಳಾದ ತರುವಾಯ ವರ್ಷಾಕಾಲದ ಮೋಡಗಳು ಕರಗಿಹೋಗಿ ಇಂದು ನೀಲವಾದ ಗಗನದಲ್ಲಿ ಬಿಳಿದಾದ ಮೋಡದ ತುಂಡು ಒಂದು ಸೂರ್ಯಕಿರಣದಲ್ಲಿ ತೇಲಿ ಹೋಗುತ್ತಿತ್ತು. ಬೆಳ್ಳೀ ತಗಡಿನ ಹಾಗೆ ಬೆಳಗುತ್ತಿದ್ದ ತೆಳುವಾಗಿದ್ದ ಬೆಳಿವಣ್ಣದ ಆ ಮೋಡದ ತುನಿಕೆಯ ಪೂರ್ಣವಾದ ಪ್ರತಿಬಿಂಬವು ಪೂರ್ಣಕಳೇಬರವುಳ್ಳ ನದಿಯ ವಕ್ಷದಲ್ಲಿ ತೇಲಿ ಓಡಿ ಹೋಗುತ್ತಿತ್ತು. ನದಿಯ ದಡಗಳನ್ನಲಂಕರಿಸಿದ್ದ ಮರಗಳ ಶಿರಗಳು ಸುವರ್ಣವರ್ಣದಿಂದ ರಂಜಿತವಾಗಿದ್ದವು. ಅದಕ್ಕೆ ಸ್ವಲ್ಪದೂರದಲ್ಲಿದ್ದ ದಿನ್ನೆಯ ಹಾಗಿದ್ದ ಒಂದು ಗುಡ್ಡದ ಮೇಲು ಭಾಗದಲ್ಲಿ ಚಿಕ್ಕದಾದ ಎತ್ತರವಿಲ್ಲದ ಪ್ರಾಸಾದವು ಗಿರಿಯ ಶೃಂಗದ ಹಾಗೆ ಕಣ್ಗೊಳಿಸುತ್ತಿತ್ತು. ಅಜಯಸಿಂಹನು ದಣಿದವನಾಗಿದ್ದುದರಿಂದ ನದಿಯ ತೀರದಲ್ಲಿ ಮರದ ಕೆಳಗೆ ಮಲಗಿದ್ದನು. ಸ್ವಲ್ಪ ಹೊತ್ತಿನಲ್ಲಿ ಇದ್ದಹಾ

ತಿ ಒಂದು ವೇಣುನಾದವು ಅವನ ನಿದ್ರೆಯನ್ನು ಭಂಗಮಾಡಿತು. ಎಚ್ಚರಗೊಂಡು ಕಣ್ಣು ತೆರೆದು ನೋಡಲಾಗಿ ಅತುಳ ಸೌಂದರ್ಯಮಯಿಯಾದ ಒಬ್ಬ ಕಿಶೋರಿಯು ಗೆಳತಿಯರಿಂದ ಒಡಗೂಡಿ ಮಧುರವಾದ ಉಚ್ಚ ವೇಣುನಾದದಿಂದ ನಿಶ್ಶಬ್ದವಾಗಿದ್ದ ಆ ಕಾನನ ಪ್ರದೇಶವನ್ನು ಕಿಲಿಗೊಳಿಸುತ್ತ ಪಾರ್ಶ್ವದಲ್ಲಿದ್ದ ಗುಡ್ಡದಿಂದಿಳಿದು ಅವನ ಹತ್ತಿರ ಬಂದು ನಿಂತಳು. ಕಿಶೋರಿಯ ಮಾಧುರೀಮಯವಾದ ದೇಹವು ಹೊಸದಾಗಿ ಅರಳಿ ಘಮಘಮಿಸುತ್ತಿದ್ದ ಕುಸುಮದಾಮಗಳ ಅಲಂಕಾರಗಳಿಂದ ಅತಿ ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದಿತ್ತು. ಕಂಠದಲ್ಲಿ ದುಂಡುಮಲ್ಲಿಗೆಯ ಹಾರ. ಕೈಯಲ್ಲಿ ಚಂಪಕದ ಬಳೆ. ಹಣೆಯಲ್ಲಿ ದಾಡಿಮವೃಕ್ಷದ ಬೊಟ್ಟು ಈರೀತಿ ಅಂಗಾಂಗಗಳೂ ಹೂವಿನಿಂದ ಅಲಂಕರಿಸಲ್ಪಟ್ಟಿದ್ದವು. ಸುಂದರಿಯ ಸಂಗಿನಿಯರೂ ಹೂವಿನ ಆಭರಣಗಳಿಂದ ಶೋಭಿಸುತ್ತಿದ್ದರು. ವೇಣುನಾದವು ಇದ್ದಹಾಗೆ ನಿಂತಿತು. ವನಸುಂದರಿಯು ಚಂಚಲವಿಲ್ಲದ ಮಿಂಚಿನ ಹಾಗೆ ಉಜ್ವಲವಾಗಿಯೂ ವಿಶಾಲವಾಗಿಯೂ ಇದ್ದ ಕಣ್ಣುಗಳಿಂದ ಪೂರ್ಣ ದೃಷ್ಟಿಯನ್ನಿಸೆದು ಅಜಯನನ್ನು ನೋಡಿದಳು. ಅವಳ ಆ ಸರಳವಾದ ಸುಂದರ ಮುಖಮಂಡಲದಲ್ಲಿ ಆಶ್ಚರ್ಯದ ಚಿಹ್ನೆಗಳು ತೋರಿದವು. ಚರಣವನ್ನು ಚುಂಬನಮಾಡುತ್ತಿದ್ದ ಅವಳ ಆ ದೀರ್ಘವೇಣಿಯು ಸ್ವಲ್ಪಕಂಪಿತವಾಯಿತು! ಗಂಡಸ್ಥಲವು ಉಷೆಯ ಕಮಲದ ಹಾಗೆ ಕೆಂಪಾಯಿತು! ಅಮೃತಕ್ಕೆ ನೆಲೆಯಾಗಿ ಚೆಂಗುಡಿಯ ಹಾಗಿದ್ದ ತುಟಿಯು ಸ್ವಲ್ಪ ಸುರುಗಿತು! ಪ್ರತಿಕೂಲ ಪ್ರವಾಹದಿಂದ ಹೊಡೆಯಲ್ಪಟ್ಟು ಧಾವತಿಪಟ್ಟ ಮೃಣಾಳದಲ್ಲಿದ್ದ ಯುಗಳ ಪದ್ಮಗಳಹಾಗೆ ಉಬ್ಬಿದುರುಳು ಸ್ವಲ್ಪಮಾತ್ರ ಉದ್ಭಿನ್ನವಾಯಿತು! ವಸಂತದ ತಂಗಾಳಿಯಿಂದ ಚಂಚಲವಾದ ಕೋಮಲವೃಕ್ಷದ ಹಾಗೆ ಬಾಹುಯುಗಳವು ಸ್ವಲ್ಪ ಬಳುಕಿದವು! ಬಾಲಿಕೆಯು ಪಾರ್ಶ್ವದಲ್ಲಿದ್ದ ಗೆಳತಿಯ ತೋಳನ್ನು ಹಿಡಿದುಕೊಂಡು ಮೃದುಸ್ವರದಿಂದ, ಸಖಿ! ಇವನಾರೆ? ಎಂದಳು.

ಸಖಿ—ಹಾದಿವಾಡಕನು ಹಾದಿತಪ್ಪಿ ನಿನ್ನ ಕಾನನದರಾಜ್ಯಕ್ಕೆ ಬಂದ ಹಾಗಿದೆ ಎಂದು ತೋರುತ್ತದೆ.

"ಅವನಾರು? ಕೇಳು, ನೋಡೋಣ!"

"ನೀನೇ ಕೇಳಕೂಡದೇಕೆ?"

"ನನಗೆ ನಾಚಿಗೆಯಾಗುತ್ತದೆ. ನೀನೇ ಕೇಳಿನೋಡು."

ಸಖಿಯು ಸ್ವಲ್ಪ ನಕ್ಕು ಮುಂದುವರಿದು ಹೋಗಿ ಅಜಯಸಿಂಹನನ್ನು ಕುರಿತು, "ನೀವಾರು? ನಮ್ಮ ಗಿರಿರಾಣಿಯು ನಿಮ್ಮ ಪರಿಚಯವನ್ನರಿಯಲಿಷ್ಟವುಳ್ಳವಳಾಗಿದ್ದಾಳೆ." ಎಂದಳು.

ಅಜಯಸಿಂಹ—ನಾನೊಬ್ಬ ಹಾದಿವಾಡಕನು. ಹಾದಿ ನಡೆದು ದಣಿದು ಇಲ್ಲಿ ವಿಶ್ರಮಿಸಿಕೊಂಡೆನು.

ಗಿರಿರಾಣಿ—ಸಖಿ! ಅವರು ದಣಿದಿರುವುದರಿಂದ ಬಂದು ನಮ್ಮ ಅತಿಥಿಶಾಲೆಯಲ್ಲಿ ವಿಶ್ರಮಿಸಿಕೊಳ್ಳಬಹುದೆಂದು ಅವರಿಗೆ ಹೇಳು.

ಅಜಯಸಿಂಹನು ಮನದಲ್ಲಿ ಮೊದಲುಮೊದಲು ಒಪ್ಪಲಾಗದೆಂದು ಹೇಳಿಕೊಂಡು ಗಿರಿರಾಣಿಯನ್ನು ಮತ್ತೊಂದುಸಲ ನೋಡಿದನು. ಲಾವಣ್ಯಮಯಿಯಾದ ರಾಜರಾಜೇಶ್ವರಿಯಹಾಗೆ ಸೌಂದರ್ಯ ಪೂರ್ಣವಾಗಿ ಉನ್ನತವಾದ ಸುಕುಮಾರದೇಹವನ್ನು ನೋಡಿದನು. ಆ ವಿಶಾಲವಾಗಿದ್ದ ಸ್ನಿಗ್ಧೋಜ್ವಲನಯನಗಳನ್ನು ಪೂರ್ಣದೃಷ್ಟಿಯಿಂದ ನೋಡಿದನು. ಆ ಕಣ್ಣುಗಳು ಗೊತ್ತಿಲ್ಲದ ಶಬ್ದಶೂನ್ಯಭಾಷೆಯಲ್ಲಿ "ನೀನು ನಮ್ಮ ಅಪ್ಪಣೆಯನ್ನು ಲಾಲಿಸುವುದಿಲ್ಲವೆ?" ಎಂದು ಹೇಳುವಹಾಗೆ ತೋರಿತು. ಅಜಯನು ನಾಲ್ಕು ದಿಕ್ಕುಗಳನ್ನು ನೋಡಿದನು. ಒತ್ತಟ್ಟು ತರಂಗಶೀಲವಾದ ವಿಶಾಲವಾದೊಡಲುಳ್ಳ ಪೂರ್ಣಯೌವನವನ್ನು ತಾಳಿದ್ದ ನದಿಯು ಕುಲಕುಲ ಶಬ್ದದಿಂದ ಹರಿಯುತ್ತದೆ. ಮತ್ತೊಂದು ಪಾರ್ಶ್ವದಲ್ಲಿ ಪಲ್ಲವ ಭಾರದಿಂದ ಬಗ್ಗಿ ಹೂವಿನ ಗೊಂಚಲುಗಳಿಂದ ಶೋಭಿಸುತ್ತಿದ್ದ ತರುರಾಜಿಯು ಸುಗಾಳಿಯಲ್ಲಿ ತೂಗುತ್ತದೆ. ಮೇಲೆ ಆಕಾಶವು ಚಂದ್ರನನ್ನು ವಕ್ಷದಲ್ಲಿಟ್ಟು ಆಲಿಂಗನ ಮಾಡಿಕೊಂಡಿದೆ. ಅಜಯಸಿಂಹನು, "ಹೊರಡಿ, ನಿಮ್ಮ ಗಿರಿರಾಣಿಯವರ ರಾಜಭವನವೆಲ್ಲಿ?" ಎಂದನು.

ಗಿರಿರಾಣಿಯು ಗೆಳತಿಯರಿಂದ ಸುತ್ತುವರಿಯಲ್ಪಟ್ಟು ಅಜಯಸಿಂಹನನ್ನು ಸಂಗಡ ಕರೆದುಕೊಂಡು ಹೊರಟಳು! ಸಖಿಯೊಬ್ಬಳು "ರಾಣಿ! ಈ ಸಮಯದಲ್ಲಿ ಇನ್ನೊಂದು ಸಲ ವೇಣುವಿನಲ್ಲಿ ನಿನ್ನಾ ವಸಂತರಾಗವನ್ನು ನುಡಿಸಕೂಡದೆ?" ಎಂದಳು.

ಗಿರಿರಾಣಿಯು ವೇಣುವನ್ನು ತುಟಿಗೆ ತಾಕಿಸಿ ವಸಂತರಾಗವನ್ನು ನುಡಿಸುವುದಕ್ಕೆ ತೊಡಗಿದಳು. ವೇಣುವು ಈದಿನ ಸರಿಯಾಗಿ ನುಡಿಯಲಿಲ್ಲ. ವಸಂತರಾಗವನ್ನು ನುಡಿಸಿದರೆ ನೀಲಾಂಬರಿಗೆ ಹೋಗುವುದು. ನೀಲಾಂಬರಿಯನ್ನು ಸರಿಮಾಡಹೋದರೆ ಕಲ್ಯಾಣಿಯಾಗುವುದು. ಅದುಕಾರಣ ಗಿರಿರಾಣಿಯು ವೇಣುವನ್ನು ನುಡಿಸಲಿಲ್ಲ.

---

## ಮೂರನೆಯ ಪರಿಚ್ಛೇದ.

ಅಜಯಸಿಂಹನು ಗಿರಿರಾಣಿಯ ಜತೆಯಲ್ಲಿ ರಾಜಪ್ರಾಸಾದವನ್ನು ಪ್ರವೇಶಿಸಿದನು. ರಾಜಪ್ರಾಸಾದವು ಕಲ್ಲಿಂದ ನಿರ್ಮಿತವಾದುದಾಗಿ ಒಂದು ಅಂತಸ್ತುಳ್ಳದಾಗಿದ್ದಿತು.

ಪ್ರಾಸಾದಕ್ಕೆರತಕ್ಕ ಕುರುಹುಗಳಲ್ಲಿ ಸುತ್ತಲೂ ಎತ್ತರವಾದ ಪೌಳಿ ಗೋಡೆಯ ಮಧ್ಯದಲ್ಲೊತ್ತಟ್ಟು ಗಿರಿರಾಣಿಯೂ ಅವಳ ಗೆಳತಿಯರೂ ಇರುವ ಮನೆ. ಅದಕ್ಕೆದುರಾಗಿ ದೊಡ್ಡದಾದ ಒಂದು ಅಂಗಳ. ಮತ್ತದಕ್ಕೆ ಪಕ್ಕದಲ್ಲಿ ಕುಸುಮೋದ್ಯಾನ. ಕುಸುಮೋದ್ಯಾನಕ್ಕೆದುರು ದಂಡಿನವರ ಮನೆ. ಅದಕ್ಕೆ ಮಗ್ಗಲು ಅಸ್ತ್ರಾಗಾರ. ಸಮಗ್ರ ಪ್ರಾಸಾದವನ್ನು ಚಿಕ್ಕದೊಂದು ಕೋಟೆ ಅಥವಾ ದುರ್ಗವೆಂದು ಹೇಳಬಹುದು.

ಅಜಯಸಿಂಹನಿಗೆ ವಿಶ್ರಮಿಸಿಕೊಳ್ಳಲು ಅಸ್ತ್ರಾಗಾರಕ್ಕೆ ಮಗ್ಗುಲಲ್ಲಿದ್ದ ಒಂದು ಚಿಕ್ಕ ಕೊಠಡಿಯು ಗೊತ್ತುಮಾಡಲ್ಪಟ್ಟಿದ್ದಿತು. ರಾತ್ರಿ ಅವನು ಗವಾಕ್ಷದ ಬಳಿನಿಂತು ನದಿಯ ತೆರೆಗಳಲ್ಲಿ ಬೆಳದಿಂಗಳು ಸರಸವಾಡುತ್ತಿದ್ದುದನ್ನು ನೋಡುತ್ತಿದ್ದ ಸಮಯದಲ್ಲಿ ಗಿರಿರಾಣಿಯು ಗೆಳತಿಯೊಬ್ಬಳ ಜತೆಯಲ್ಲಿ ಕೊಠಡಿಯೊಳಗೆ ಬಂದು, “ಪಥಿಕರೆ! ವಿಶ್ರಮಿಸಿಕೊಳ್ಳುವುದಕ್ಕೆ ತಮಗಿಲ್ಲಿ ತೊಂದರೆಗಳೇನೂ ಇಲ್ಲವಷ್ಟೆ?” ಎಂದು ಕೇಳಿದಳು.

ಹುಡುಗಿಯ ಕಂಠಸ್ವರವು ಅತಿಮಧುರವಾಗಿಯೂ ಅತಿ ಕೋಮಲವಾಗಿಯೂ ಇದ್ದುದನ್ನು ಅಜಯಸಿಂಹನು ಕೇಳಿ ಏನು ಹೇಳಬೇಕೋ ಅದು ತೋಚದೆ ಯೋಚಿಸುತ್ತಿದ್ದಾಗ ಹುಡುಗಿಯು ಪುನಃ ಇಂದು ನಮ್ಮ ತಂದೆಯಿದ್ದರೆ ತಮ್ಮನ್ನು ನೋಡಿ ಬಹಳ ಸುಖಿಯಾಗುತ್ತಿದ್ದನು” ಎಂದಳು.

ಅಜಯ :—ತಮ್ಮ ತಂದೆಗಳೆಲ್ಲಿ ?

ಗಿರಿರಾಣಿ :—ಆತನು ಯೋಗಸಾಧನೆಯ ಸಲುವಾಗಿ ಪುಷ್ಕರಕ್ಕೆ ಹೋಗಿ ಎರಡು ತಿಂಗಳಾದವು. ಹೋಗುವಾಗ, ಎರಡು ತಿಂಗಳಲ್ಲಿ ಒಂದರುಗಿ ಬಾರದಿದ್ದರೆ ಗೋಕುಲದಾಸನಿಂದ ತನ್ನ ವೃತ್ತಾಂತವನ್ನೆಲ್ಲಾ ತಿಳಿದುಕೊಳ್ಳಬಹುದೆಂದು ಹೇಳಿದ್ದನು. ಇಂದಿಗೆ ಎರಡು ತಿಂಗಳಾಯಿತು.

“ಗೋಕುಲದಾಸನಾರು ?”

“ಗೋಕುಲದಾಸನು ನಮ್ಮ ಪ್ರಧಾನ ಸೇನಾಪತಿ. ತಂದೆಗೆ ಚಿಕ್ಕಂದಿನ ಸ್ನೇಹಿತ. ಚಪಲೆ! ನೀನು ಹೋಗಿ ಗೋಕುಲದಾಸನನ್ನು ಇಲ್ಲಿಗೆ ಬರಹೇಳು. ತಂದೆಯ ಸಮಾಚಾರವನ್ನು ಕೇಳೋಣ”

ಚಪಲೆಯು ಗೋಕುಲದಾಸನನ್ನು ಕರೆತರಲು ಹೋದಳು. ಬಳಿಕ ಗಿರಿರಾಣಿಯು ಹೆದರಿ ಗವಾಕ್ಷದ ಕಡೆಗೆ ಬೆರಳನ್ನು ತೋರಿಸಿ, “ಪುನಃ ಅದೇ! ನೋಡೋಣಾಗಲಿ” ಎಂದಳು.

ಅಜಯನು ಗವಾಕ್ಷದ ಕಡೆ ನೋಡಿದನು. ಗವಾಕ್ಷದ ಹೊರಗಡೆ ದೀರ್ಘವಾದ ಕೂದಲಿಂದ ಅರ್ಧ ಮುಚ್ಚಿಹೋಗಿದ್ದ ದಾಡಿಯನುಳ್ಳ ಯವನನ ಮುಂಡವು ತೀವ್ರವಾದ ದೃಷ್ಟಿಯಿಂದ ಕೊಠಡಿಯೊಳಗೆ ಇಣಿಕಿನೋಡಿದಹಾಗೆ ಕಂಡುಬಂದು ಉತ್ತರಕ್ಷಣದಲ್ಲಿ ಅಂತರ್ಧಾನವಾಗಿ ಹೋಯಿತು. ಅಜಯಸಿಂಹನು ಎದ್ದುನಿಂತು ಕತ್ತಿಯನ್ನು ತೆಗೆದು ಹಿಡಿದುಕೊಂಡು ಹೊರಗೆ ಹೋಗಿ ನಾಲ್ಕು ದಿಕ್ಕುಗಳಲ್ಲಿಯೂ ಹುಡುಕಿದನು. ಯಾರೂ ಕಾಣಿಸಿಕೊಳ್ಳಲಿಲ್ಲ. ಸ್ವಲ್ಪ ಹೊತ್ತಾದ ಬಳಿಕ ಸಮೀಪದಲ್ಲಿ ಕುದುರೆಯ ಗೊರಸಿನ ಶಬ್ದವನ್ನು ಕೇಳಿದನು. ಕುದುರೆ ಸವಾರನನ್ನು ಬೆನ್ನಟ್ಟಿ ಹೋಗಬೇಕೆಂದು ಯೋಚಿಸಿದನು. ಆದರೆ ಕುದುರೆಯು ವೇಗವಾಗಿ ಹೋಗುವ ಶಬ್ದವು ಕೇಳಿತು. ಅದುಕಾರಣ ಅವನು ಹಿಂದಿರುಗಿ ಕೊಠಡಿಯೊಳಗೆ ಬಂದನು. ಬಂದು ನೋಡಲಾಗಿ ಗಿರಿರಾಣಿಯಾಗಲಿ ಅವಳ ಗೆಳತಿಯಾಗಲಿ ಇರಲಿಲ್ಲ. ದೀಪದ ಪಕ್ಕದಲ್ಲಿ ಮುದುಕನೊಬ್ಬನು ನಿಂತಿದ್ದನು. ಮುದುಕನು ಸ್ವಲ್ಪಹೊತ್ತು ಅಜಯನನ್ನು ದೃಷ್ಟಿಸಿ ನೋಡಿ, ಬಳಿಕ ತನ್ನೊಳು ತಾನೇ, "ಈದಿನ ಕನಸು ಕಂಡೆನೆ!" ಎಂದೆಂದುಕೊಂಡನು.

ಹೀಗೆಂದು ಹೇಳಿ ಕರದೀಪವನ್ನು ಕೈಯಲ್ಲಿ ಹಿಡಿದು ಅಜಯನ ಸಮೀಪ ಬಂದು ಬೆಳಕಿನಲ್ಲಿ ಸ್ವಲ್ಪಹೊತ್ತು ನೋಡಿ, ದೀಪವನ್ನು ನೆಲದಮೇಲಿಟ್ಟು ಅಜಯನಿಗೆ ಭೂಮಿಷ್ಠವಾಗಿ ಸಾಷ್ಟಾಂಗವನ್ನು ಮಾಡಿ ಅವನ ಕಾಲುಗಳನ್ನು ಮುಟ್ಟಿದನು. ಅಜಯನು, ಮುದುಕನನ್ನು ಹುಚ್ಚನೆಂದು ತಿಳಿದುಕೊಂಡು, "ಇದೇನು, ತಾವು ನನಗೆ ಪ್ರಣಾಮವನ್ನು ಮಾಡಿದರೇಕೆ? ಎಂದು ಕೇಳಿದನು.

ಮುದುಕ:—ನಾನು ತಮ್ಮನ್ನು ಬಲ್ಲೆನು. ತಾವು ನಮ್ಮ ಪೂಜನೀಯರಾದ ಪ್ರಭು ವೀರಗುರು ಮಹಾರಾಣಾ ಪ್ರತಾಪಸಿಂಹರ ಮಕ್ಕಳು ಅಜಯಸಿಂಹರು.

ಅಜಯ:—(ಅಚ್ಚಗೊಂಡು)—ತಾವಾರು?

ಮುದುಕ:—ಈ ಭೃತ್ಯನ ಹೆಸರು ಗೋಕುಲದಾಸ.

---

## ನಾಲ್ಕನೆಯ ಪರಿಚ್ಛೇದ.

ಗೋಕುಲದಾಸ:—ತಾವು ಅತಿ ಅನುವಾದ ಸಮಯದಲ್ಲಿ ನಮ್ಮ ರಾಣಿಯ ರಾಜ್ಯಕ್ಕೆ ದಯಮಾಡಿಸೋಣಾಯಿತು. ಗಿರಿರಾಣಿಯ ರಾಜಪುರಿಯು ಈಗ ಪಾಳಕ

ರಿಲ್ಲದೆ ಅರಕ್ಷಿತವಾಗಿದೆ. ಈಗ ನಿವಾರ್ಯವಾಗದ ವಿಪತ್ಕಾಲ—ಈ ವಿಪತ್ಕಾಲದಲ್ಲಿ ದೇವರು ದಯಮಾಡಿ ಹುಡುಗಿ ರಾಣಿಯ ರಕ್ಷಣೆಯ ಸಲವಾಗಿಯೂ ನಮ್ಮನ್ನು ಶತ್ರುಗಳ ಕೈಯಿಂದ ಬಿಡುಗಡೆ ಮಾಡಿಸುವ ಸಲವಾಗಿಯೂ ವೀರಕುಲದಿಂದ ಪೂಜಿತನಾದ ಪ್ರತಾಪಸಿಂಹನ ವೀರಪುತ್ರನನ್ನು ಇತ್ತ ಕಡೆ ಕರೆತಂದು ಬಿಟ್ಟನು.

ಅಜಯಸಿಂಹ :—ತಮ್ಮ ಬಾಲಿಕಾ ರಾಣಿಯ ತಂದೆಯು ಎಲ್ಲಿ ?

ಗೋಕುಲದಾಸ :—ಹಾ ! ಅವಳ ತಂದೆಯೆ ? ಆ ವೀರಕ್ಷತ್ರಿಯ ರಾಜನು ಪುಣ್ಯ ಭೂಮಿಯಾದ ರಾಜಪುತಾನದ ರಣಕ್ಷೇತ್ರದಲ್ಲಿ ಯವನ ಯುದ್ಧದಲ್ಲಿ ಕ್ಷತ್ರಿಯ ಸೇನಾಪತಿಯ ಹಾಗೆ ತನುವನ್ನು ಬಿಟ್ಟು, ಗೋಲೋಕ ಧಾಮಕ್ಕೆ ಹೊರಟುಹೋದನು. ಆದರೆ ಆ ಸಮಾಚಾರವನ್ನು ತಾವು ಈಗ ತಿಳಿಯಬೇಕಾದ ಅವಶ್ಯಕವಿಲ್ಲ. ಸಮಯಾಂತರದಲ್ಲಿ ತಿಳಿಯುವಿರಿ. ಆದರೆ ಈಗ ಈ ಹುಡುಗಿಯು ಯಾರನ್ನು ತಂದೆಯೆಂದು ಹೇಳುತ್ತಾಳೋ ಅವನ ವಿಚಾರವನ್ನು ತಾವು ಕೇಳುವದಾಗಿದೆ. ಈ ದುರ್ಗದ ನಾಯಕನು, ಸಂಸಾರತ್ಯಾಗಿಯಾದ ಮಹರ್ಷಿಯು, ಯೋಗ ಬಲದಿಂದ ಅತಿ ಬಲಶಾಲಿಯಾದ ಮಹಾ ಯೋಗಿಯಾದ ಅವನು ರಾಜಪುತಾನದ ವಿಖ್ಯಾತ ವಂಶದಲ್ಲಿ ಹುಟ್ಟಿದನು. ನಿಮ್ಮ ತಂದೆ ಜಯರ್ನಾದ ಪ್ರತಾಪಸಿಂಹನಿಗೆ ಬಹಳ ಸಹಾಯವನ್ನು ಮಾಡಿದನು. ಈಗ್ಗೆ ಹದಿನೈದು ವರ್ಷದಲ್ಲಿ ಅವನು ಘಟನಾಕ್ರಮದಲ್ಲಿ ಒಂದು ದಿನ ಕ್ಷತ್ರಿಯನ ಕತ್ತಿಯನ್ನು ಪರಿತ್ಯಾಗಮಾಡಿ ಯೋಗಿಯ ದಂಡವನ್ನು ಗ್ರಹಣಮಾಡಿದನು. ಆಗ ಏನೋ ಒಂದು ವಿಶೇಷಕಾರಣದಿಂದ ಈ ಹುಡುಗಿಯ ತಂದೆಯಾದ ಕ್ಷತ್ರಿಯ ರಾಜನು ತನ್ನ ಹೆಣ್ಣು ಮಗುವನ್ನು ಆ ರಾಜಪೂತ ಯೋಗಿಯಲ್ಲಿ ಒಪ್ಪಿಸಿದನು. ಅವನ ಹೇಳಿಕೆಯ ಪ್ರಕಾರ ಅವನೇ ಕೊಟ್ಟ ಹಣದಿಂದ ಈ ದುರ್ಗವನ್ನು ಕಟ್ಟಿಸಿ ಅಲ್ಲಿ ಯೋಗಾಭ್ಯಾಸದಲ್ಲಿ ಪ್ರವೃತ್ತನಾದನಲ್ಲದೆ ಹುಡುಗಿಯನ್ನು ಕಾಪಾಡಿಕೊಂಡು ಬರುತ್ತಿದ್ದನು. ಈಗ್ಗೆ ಎರಡು ತಿಂಗಳಿಗೆ ಹಿಂದೆ ಅವನು ಒಂದು ದಿನ ರಾತ್ರಿ ನಾನು ಮಲಗುವ ಕೊಠಡಿಗೆ ಬಂದು ನನ್ನನ್ನು ಎಬ್ಬಿಸಿ ಹೀಗೆಂದು ಹೇಳಿದನು. "ಗೋಕುಲದಾಸ ! ನಾನು ಯೋಗಾಸನದಲ್ಲಿ ಕುಳಿತು ತ್ರಿದಿವ ಪತಿಯ ಧ್ಯಾನದಲ್ಲಿದ್ದಾಗ ಅತ್ಯಂತ ಭಯಂಕರವಾದ ಭವಿಷ್ಯ ಘಟನೆಯೊಂದನ್ನು ಪ್ರತ್ಯಕ್ಷ ಕಂಡೆನು. ಸ್ವಲ್ಪಕಾಲದಲ್ಲೇ ಈಗಿರಿ ರಾಜ್ಯಕ್ಕೆ ಘೋರವಾದ ಅನರ್ಥವೊಂದು ಕಾದಿರುವುದು. ಏಕಾಂತವಾಗಿರುವ ಈ ದುರ್ಗದಲ್ಲಿ ಮನುಷ್ಯರಕ್ತದ ಪ್ರವಾಹವು ಹರಿದು ನನ್ನ ಮಗಳಿಗೆ ಸಮನಾದ ಗಿರಿರಾಣಿಗೆ ವಿಷಮವಾದ ವಿಪತ್ತುಂಟಾಗುವುದು. ಅವಳ ಹಣೆಯಲ್ಲಿ ಬರೆದ ವಿಪತ್ತನ್ನು ಕಣ್ಣಾರೆ ನೋಡಿ ಕಠೋರವಾಗಿರುವ ನನ್ನ ಹೃದಯವು ಕರಗಿ ಹೋಗುವುದು. ಹೇಗೆ ತಾನೇ

ಆ ಅನರ್ಥವನ್ನು ನೋಡಿ ಸಹಿಸಲಾದೀತು ? ಆ ವಿಪತ್ತಿನಿಂದ ಅವಳನ್ನು ಉದ್ಧಾರ ಮಾಡುವುದಕ್ಕೂ ನನಗೆ ಸಾಧ್ಯವಿಲ್ಲ. ಅದು ಕಾರಣ ನಾನೀಗ ಪುಷ್ಕರತೀರ್ಥಕ್ಕೆ ಹೋಗಿ ಆ ಭವಿಷ್ಯ ವಿಪತ್ತಿನ ನಿವಾರಣೆಯ ಸಲುವಾಗಿ ಯೋಗ ಸಾಧನ ಮಾಡುತ್ತಿರುವೆನು. ಕಾರ್ಯಸಿದ್ಧಿಯಾದರೆ ಎರಡು ತಿಂಗಳಲ್ಲಿ ಹಿಂದಿರುಗಿ ಬರುವೆನು. ಇಲ್ಲವಾದರೆ ನನ್ನನ್ನು ಯಾರೂ ಯಾವಾಗಲೂ ನೋಡಲಾರರು. ವಿಪತ್ತುಂಟಾದಾಗ ನೀನು ಹುಡುಗಿಯನ್ನು ರಕ್ಷಿಸಲು ಸಾಧ್ಯವಾದಷ್ಟು ಪ್ರಯತ್ನಪಡು. ಅದರ ಮೇಲೆ ವಿಧಾತನ ಸಂಕಲ್ಪವಿದ್ದಹಾಗೆ ಆಗಿ ಹೋಗಲಿ !'' ಯೋಗಿ ರಾಜನು ಹೀಗೆಂದು ಹೇಳಿ ಕಣ್ಣೀರನ್ನು ಬಿಟ್ಟು ದುರ್ಗದಿಂದ ಹೊರಟುಹೋದನು. ಅವನು ಹೊರಟಂದಿನಿಂದ ದುರ್ಗದಲ್ಲಿ ಪ್ರತಿ ದಿನವೂ ಭಯಂಕರವಾದ ಲಕ್ಷಣಗಳು ಕಂಡು ಬರುತ್ತಿವೆ. ನಿಸ್ತಬ್ಧವಾದ ಸಮರಾತ್ರಿಯಲ್ಲಿ ಕಾನನ ಪ್ರದೇಶದಲ್ಲಿ ಕುದುರೆಗಳು ಓಡುವ ಗೊರಸಿನ ಶಬ್ದವು ಕೇಳುವುದು ! ಗವಾಕ್ಷಗಳಲ್ಲಿ ಭಯಂಕರವಾದ ಯವನ ಮುಖವು ಕಾಣಿಸಿಕೊಂಡು ಕೂಡಲೇ ಮಾಯವಾಗಿ ಹೋಗಿ ಬಿಡುವುದು ! ನದಿಯ ಮರಳಲ್ಲಿ ಏನೋ ಒಂದು ಅಸ್ಫುಟವಾದ ಧ್ವನಿಯು ಕೇಳುವುದು ! ಆದುದರಿಂದಲೇ, ದೇವರು ದಯಮಾಡಿ, ಈ ವಿಪತ್ಕಾಲದಲ್ಲಿ ಅರ್ಬುದರಾದ ಪ್ರತಾಪಸಿಂಹನ ವೀರ ಪುತ್ರನನ್ನು ಇಲ್ಲಿಗೆ ಕರೆತಂದನೆಂದು ಹೇಳಿದನು. ತಾವು ಮಾರ್ಗಾಯಾಸದಿಂದ ಬಳಲಿರುವುದರಿಂದ ಈಗ ವಿಶ್ರಮಿಸಿಕೊಳ್ಳಬಹುದು. ನಾಳೆ ಬೆಳಿಗ್ಗೆ ಕರ್ತವ್ಯವನ್ನು ಕುರಿತು ಆಲೋಚಿಸೋಣ.

ಹೀಗೆಂದು ಹೇಳಿ ಗೋಕುಲದಾಸನು ಅಜಯಸಿಂಹನಿಗೆರಗಿ ಹೊರಟುಹೋದನು. ಅಜಯಸಿಂಹನು ಒಬ್ಬಂಟಿಗನಾಗಿ ಮಲಗಿಕೊಂಡು ಯೋಚನಾಕ್ರಾಂತನಾದನು. ಸರಳ ಸ್ವಭಾವವುಳ್ಳ ಗಿರಿರಾಣಿಗೆ ಆಕಸ್ಮಿಕವಾಗಿ ವಿಪತ್ತುಂಟಾಗುವದೆಂದು ಕೇಳಿ ಅವನ ವೀರಹೃದಯವು ವಿಗಳಿತವಾಯಿತು. ಅಂಥಾ ವಿಪತ್ತಿನಿಂದವಳನ್ನು ಉದ್ಧಾರಮಾಡುವುದು ಅವನಿಗೆ ಸಾಧ್ಯವಾಗಿದ್ದರೆ, ಕ್ಷತ್ರಿಯನಾಗಿದ್ದು ಕ್ಷತ್ರಿಯ ಧರ್ಮದಿಂದ ನಿರಸ್ತನಾಗಬಹುದೆ ? ಆದರೆ ಗಿರಿರಾಣಿಗೆ ಉಂಟಾಗುವ ವಿಪತ್ತು ಯಾವುದು ? ಎಷ್ಟು ದಿನದಲ್ಲಿ ಆ ವಿಪತ್ತುಂಟಾಗುವ ಸಂಭವ ? ಅವನು ಅಲ್ಲಿವರೆಗೂ ಆ ದುರ್ಗದಲ್ಲಿದ್ದು ತೀರೀತೆ ? ಸುಂದರಿಯರಿಂದ ಕೂಡಿ ಅಪ್ಸರೆಯ ಹಾಗಿರುವ ಗಿರಿರಾಣಿಯ ಅಮೃತಮಯವಾದ ವೇಣುನಾದವನ್ನು ಕೇಳಿ ಅವನ ಚಂಚಲವಾದ ಪ್ರಾಣವು ಸ್ಥೈರ್ಯವನ್ನು ತಾಳಿರುವುದೆ ? ಅವನು ಹೃದಯದಲ್ಲಿ ನಾಟಿರುವ ಹಿರಣ್ಮಯಿಯ ಸ್ಮರಣೆಯನ್ನು ಕಿತ್ತು ಹಾಕಲು ಸನ್ಯಾಸಧರ್ಮವನ್ನು ಅವಲಂಬಿಸಿ ಏಕಾಂತವಾದ ಪ್ರದೇಶದಲ್ಲಿದ್ದು ಯೋಗಾಭ್ಯಾಸದಿಂದ ಮನಸ್ಸನ್ನು ಕಟ್ಟಿಹಾಕಬೇಕೆಂದು ಸಂಕಲ್ಪಿಸಿಕೊಂಡಿದ್ದಾನೆ. ಇದು ಆ

ಯೋಗಾಭ್ಯಾಸವೆ? ಇದು ಆ ಕಠೋರ ವ್ರತಕ್ಕೆ ತಕ್ಕ ಸನ್ಯಾಸವೆ? ಅದಲ್ಲದೆ ವಸಂತ ಕಾಲದ ಲತೆಯಹಾಗೆ ಕುಸುಮದಳದಿಂದ ಶೋಭಿತವಾದ ಸುಕುಮಾರ ದೇಹವೂ ಹೊಸದಾಗಿ ಅರಳಿದ ಗುಲಾಬಿಮೊಗ್ಗಿನ ಕಿಸಲಯದಹಾಗಿದ್ದ ಆ ಚೂಚುಕವ ಚುಂಬಿಪ ತಿಲಕದಾಮವೂ ವಸಂತದ ಪ್ರಥಮ ಸಮಾಗಮದಲ್ಲಿ ಕುಸುಮ ಕಾನನದಲ್ಲಿ ಕೋಕಿಲೆಯ ಕಾಕಲಿ ಕೂಗಿನ ಹಾಗೆ ಅಮೃತಮಯವಾದ ಆ ಕಂಠ ಸ್ವರವೂ ಅಮೃತವ ಕರೆದು ಗಗನವನ್ನು ಮುಟ್ಟುವ ಆ ವೇಣುನಾದದ ಇನಿದಾದ ಸ್ವರಮಾಧುರ್ಯವೂ ಬಾರಿಬಾರಿಗೂ ಅವನೆದೆಸೆಯುತ್ತಿದ್ದವು! ಅವನು ಕ್ಷತ್ರಿಯ ರಾಜಕುಮಾರನಾಗಿದ್ದು ಸಹಾಯವಿಲ್ಲದ ಸರಳ ಸ್ವಭಾವದ ಬಾಲೆಯನ್ನು ವಿಪತ್ತಿನಿಂದ ಕಾಪಾಡಲು ಸಾಹಸಗೊಳ್ಳದಿರುವನೆ? ಅಜಯಸಿಂಹನು ಬಹಳಹೊತ್ತು ಯೋಚಿಸಿದನು. ಏನೇನೂ ತೋರಲಿಲ್ಲ. ರಾತ್ರಿ ಬಹಳ ಹೊತ್ತಾದ ಬಳಿಕ ನಿದ್ದೆ ಹತ್ತಿತು.

ಬೆಳಿಗ್ಗೆ ಮುಂಜಾನೆ ಎದ್ದು ಅಜಯನು ಗೋಕುಲದಾಸನನ್ನು ಹುಡುಕಿಕೊಂಡು ಹೋದನು. ಗೋಕುಲದಾಸನು ಉದ್ಯಾನದಲ್ಲಿ ದೇವರ ಪೂಜೆಗೆ ಹೂವೆತ್ತುತ್ತಿದನು. ಅಜಯಸಿಂಹನು ಅವನನ್ನು ಕಂಡು, "ಗೋಕುಲದಾಸ! ಸದ್ಯಕ್ಕೆ ನಾನು ಇಲ್ಲಿಂದ ಹೋಗುವೆನು" ಎಂದನು.

ಗೋಕುಲದಾಸನು ಆಶ್ಚರ್ಯದಿಂದ ಕಣ್ಣುಬಿಟ್ಟು ನೋಡಿ, "ನಾನು ಕನಸುಕಂಡೆನೋ ಎಚ್ಚರವಾಗಿದೆನೋ ಅಮರಸಿಂಹದ ಮಹಾರಾಣಾಪನ ವೀರನಾದ ಕುವರನು ಇಂದು ಕ್ಷತ್ರಿಯ ಧರ್ಮಕ್ಕೆ ತರ್ಪಣವನ್ನು ಕೊಟ್ಟು ಏನೂ ಅರಿಯದ ಹುಡುಗಿಗೆ ವಿಪತ್ಕಾಲದಲ್ಲಿ ಕತ್ತಿಯನ್ನು ಎರವು ಕೊಡಲು ಸಮ್ಮತಿಸದೆ ಇರುವನೆ!" ಎಂದನು.

ಅಜಯಸಿಂಹ:—(ಭ್ರಮೆಗೊಂಡು)—ಗೋಕುಲದಾಸ! ನಾನು ನಿಮ್ಮ ಬಾಲೆಯಾದ ರಾಣಿಗೆ ವಿಪತ್ಕಾಲದಲ್ಲಿ ಪ್ರಾಣದ ಮೇಲೆ ಮಮತೆಯಿಡದೆ ಸಹಾಯ ಮಾಡುವುದಕ್ಕೆ ಸಿದ್ಧನಾಗಿದ್ದೇನೆ. ಆದರೆ ನಾನು ಬೇರೊಂದುದ್ದೇಶವನ್ನು ಸಾಧಿಸುವುದಕ್ಕೆ ಸಲವಾಗಿ ಎರಡುವರುಷಕಾಲ ಜನ ಶೂನ್ಯವಾದ ಸ್ಥಳದಲ್ಲಿದ್ದುಕೊಂಡು ಕಠೋರವಾದೊಂದು ವ್ರತವನ್ನು ಮಾಡಲು ಸಂಕಲ್ಪಿಸಿಕೊಂಡಿದ್ದೇನೆ. ನಿಮ್ಮ ದುರ್ಗದಲ್ಲಿದ್ದರೆ ನನ್ನ ವ್ರತಕ್ಕೆ ವ್ಯಾಘಾತವುಂಟಾಗುವ ಸಂಭವ. ಸ್ವಲ್ಪಕಾಲ ಇಲ್ಲೇ ಹತ್ತಿರ ಕಾನನದಲ್ಲಿ ವಾಸವಾಗಿರಬೇಕೆಂದು ಯೋಚಿಸಿದ್ದೇನೆ! ವಿಪತ್ತುಂಟಾಗುವ ಸಂಭವವು ತೋರಿದರೆ ಕೂಡಲೇ ದುರ್ಗದ ಕೋಟೆ ತೆನೆಯಲ್ಲಿರುವ ಭೇರಿಯನ್ನು ಹೊಡಿದರೆ ಶಬ್ದವನ್ನು ಕೇಳಿದಕೂಡಲೇ ಇಲ್ಲಿಗೆ ಬಂದಿರುವೆನು.

ಗೋಕುಲದಾಸ :—ತಮ್ಮ ಇಷ್ಟವಿದ್ದಂತೆ ಪಾಡಿಷೆಯುದು. ತಮ್ಮ ಅಪ್ಪ ಣೆಯ ಪ್ರಕಾರ ನಡೆಯುವೆನು.

ಅಜಯಸಿಂಹನು ಚಿಂತಿತ ಹೃದಯದಿಂದ ಬೀಳ್ಕೊಂಡು ಮೆಲ್ಲಮೆಲ್ಲಗೆ ಹೊರಟು ಹೋದನು.

ಗೋಕುಲದಾಸನು ನೋಡುತ್ತಿದ್ದಹಾಗೆ ಸ್ವಲ್ಪಹೊತ್ತಿನಲ್ಲಿ ಗಿರಿರಾಣಿಯೊಬ್ಬಳೇ ಮೆಲ್ಲಮೆಲ್ಲಗೆ ಅವನ ಬಳಿ ಬಂದಳು. ರಾಜೀವದ ಹಾಗಿದ್ದ ರಾಣಿಯ ಮುಖಮಂಡ ಲವು ಮಲಿನವಾದ ಹಾಗಿದ್ದಿತು. ದುರ್ಭಾವನೆಯೊಂದಾವುದೋ ಆಕಸ್ಮಿಕವಾಗಿ ಅವಳ ಮನವನ್ನು ಕಳವಳಗೊಳಿಸುವ ಹಾಗೆ ತೋರಿತು. ಮಮತೆಯುಳ್ಳ ಮುದುಕನಾಗಿದ್ದಾ ಗೋಕುಲದಾಸನು ಹುಡುಗಿಯನ್ನು ಮಗಳಹಾಗೆ ನೋಡಿಕೊಂಡಿದ್ದನು. ನಂಬಿಗೆ ಯುಳ್ಳ ಪ್ರಭುಭಕ್ತನಾಗಿದ್ದ ಭೃತ್ಯನು ಗಿರಿರಾಣಿಯನ್ನು ಆಂತರಿಕ ವಿಶ್ವಾಸದಿಂದ ಪ್ರೀತಿ ಸುತ್ತಿದ್ದವನು ಅವಳಿಗೆ ಉಂಟಾಗುವ ಭವಿಷ್ಯ ವಿಪತ್ತನ್ನು ಯೋಚಿಸಿಕೊಂಡು ವ್ಯಾಕುಲ ವುಳ್ಳವನಾಗಿದ್ದನು. ಅವನು ರಾತ್ರಿ ಹಗಲು ಆ ವಿಪತ್ತನ್ನು ನೀಗುವ ಯೋಜನೆಯಿಂದ ಇಳಿದು ಹೋಗಿದ್ದನು. ಅವನು ವಿಪತ್ತಿನ ವಿಚಾರವನ್ನು ಅವಳಿಗೆ ಹೇಳಿರಲಿಲ್ಲ, ರಾಜ ರ್ಷಿಯು ಪುಷ್ಕರಕ್ಕೆ ಹೊರಟು ಹೋಗುವಾಗ ಹೇಳಿದ ಸಂಗತಿಗಳಾವುವನ್ನೂ ಹುಡು ಗಿಯು ಅರಿಯಳು. ಹುಡುಗಿಯು ಎದೆಗುದಿಯಿಂದ ಕಂಗೆಡುವಳೆಂಬ ಭಯದಿಂದ ಗೋ ಕುಲದಾಸನು ಅವಳ ಸಮಾಧಾನಕ್ಕೋಸ್ಕರ ತಂದೆಯು ತೀರ್ಥಯಾತ್ರೆಯಾದಕೂಡಲೇ ಹಿಂದಿರುಗಿ ಬರುವುದಾಗಿ ಹೇಳಿದ್ದನು. ಹಾಗಿದ್ದರೆ ಒಮ್ಮಿಂದೊಮ್ಮೆ ಹುಡುಗಿಯ ಮು ಖಮಂಡಲವು ಮಲಿನವಾದುದೇಕೆ? ಅವಳು ತನಗೆ ಉಂಟಾಗಬಹುದಾದ ವಿಪತ್ತನ್ನು ನೋಡಲಾರದೆ ತಂದೆಯು ಹೊರಟು ಹೋಗಿದ್ದನೆಂದು ತಿಳಿದಿದ್ದಳೆ? ಗೋಕುಲದಾ ಸನು, " ರಾಣಿ! ನೀನು ಅಕಾರಣವಾಗಿ ಚಿಂತಿಸಬೇಡ; ನಿಮ್ಮ ತಂದೆಯು ಕಾರ್ಯ ಸಿದ್ಧಿಯಾಗುತ್ತಲೇ ಹಿಂದಿರುಗಿ ಬರುವನು " ಎಂದನು.

ಹುಡುಗಿ:—ನಿನ್ನಿನ ರಾತ್ರಿ ನೀನು ಹೇಳಿದುದರಲ್ಲಿ ತಂದೆಯ ತೀರ್ಥಯಾತ್ರೆಯು ಪೂರೈಸಿದ ಹಾಗೂ ಬೇಗನೆ ಹಿಂದಿರುಗಿ ಬರವ ಹಾಗೂ ಹೇಳಿದೆ. ಅದಕ್ಕೋಸ್ಕರ ನಾನೇನೂ ಯೋಚನೆ ಮಾಡುವ ಹಾಗಿಲ್ಲ.

ಗೋಕುಲದಾಸ :—ಹಾಗಾದರೆ ಮುಖವು ಬಾಡಿರುವುದೇಕೆ ?

" ಇಲ್ಲವಲ್ಲ ! ನಿನ್ನನ್ನು ಒಂದು ಸಮಾಚಾರವನ್ನು ಕುರಿತು ಕೇಳಬೇಕೆಂದು ಬಂದೆನು. ನಿನ್ನಿನ ರಾತ್ರಿ ಬಂದಿದ್ದ ಅತಿಥಿ ಯೇನಾದನು ? ಅವನು ರಾತ್ರಿ ಮಲಗಿದ್ದ

ಮನೆಯಲ್ಲಿ ಇಲ್ಲ. ನಿನ್ನ ಬಳಿ ಬಂದಿರಬಹುದೆಂದು ಯೋಚಿಸಿ ಇಲ್ಲಿಗೆ ಬಂದು ನೋಡಿದರೆ ಇಲ್ಲಿಯೂ ಇಲ್ಲ. ಅವನೇನು ಹೊರಟು ಹೋದನೆ?"

ಗೋಕುಲದಾಸ:—ನಮ್ಮ ದುರ್ಗದಲ್ಲಿರುವುದಕ್ಕೆ ಅವನಿಗೆ ಅನನುಕೂಲವೆಂದು ಸಮೀಪದಲ್ಲಿರುವ ಕಾನನದಲ್ಲಿರುವುದಾಗಿ ಹೇಳಿ ಹೋದನು. ಪುನಃ ಬಂದು ನೋಡುವುದಾಗಿ ಹೇಳಿದ್ದಾನೆ.

ಹುಡುಗಿ:—(ವ್ಯಸನದಿಂದ) ಅವನೊಬ್ಬನೇ ಅಡವಿಯಲ್ಲಿದ್ದರೆ ವಿಪತ್ತುಂಟಾಗುವ ಸಂಭವವಿಲ್ಲವೆ?

ಗೋಕುಲದಾಸ:—ಅವನು ಕ್ಷತ್ರಿಯ ವೀರನು. ಅವನಲ್ಲಿ ಕತ್ತಿಗಳುಂಟು. ಅವನು ವಿಪತ್ತಿಗೆ ಅಂಜುತಕ್ಕವನಲ್ಲ.

ಗಿರಿರಾಣಿಯು ಮೌನವಾಗಿ ಗೋಕುಲದಾಸನು ಹೂವೆತ್ತುತ್ತಿದ್ದುದನ್ನು ನೋಡುತ್ತಿದ್ದು ಬಳಿಕ ಪುನಃ "ಗೋಕುಲದಾಸ! ಆತನು ಇಲ್ಲಿಗೆ ಪುನಃ ಯಾವಾಗ ಬರುವನು? ಎಂದು ಕೇಳಿದಳು.

ಗೋಕುಲದಾಸ:—ಜಾಗ್ರತೆಯಾಗಿಯೇ ಬರುವನೆಂದು ಖಂಡಿತ ಹೇಳುವುದಕ್ಕಾಗುವುದಿಲ್ಲ.

ಗಿರಿರಾಣಿಯ ಕಣ್ಣುಗಳಲ್ಲಿ ಕಣ್ಣೀರು ತುಂಬಿದುದನ್ನು ಮುದುಕನು ನೋಡಲಿಲ್ಲ.

## ಐದನೆಯ ಪರಿಚ್ಛೇದ.

ಪ್ರದೋಷ ಕಾಲದಲ್ಲಿ ಗಿರಿರಾಣಿಯು ಗೆಳತಿಯರಿಂದ ಕೂಡಿ ಪೂರ್ಣ ನದಿಯ ದಡದಲ್ಲಿ ಬಹಳ ಹೊತ್ತು ತಿರುಗಾಡುತ್ತಿದಳು. ಅವಳು ವೇಣುವಿನಲ್ಲಿ ನಾನಾ ರಾಗಗಳನ್ನು ನಾನಾ ತಾನಗಳಲ್ಲಿ ನುಡಿಸಿದಳು. ಅವಳು ಮನದಲ್ಲಿ, ವಿದೇಶಿಯಾದಾ ಯುವಕನು ಅಂದು ಪುನಃ ಬಂದರೂ ಬರಬಹುದೆಂದು ತಿಳಿದುಕೊಂಡಿದ್ದಳು. ಕ್ರಮೇಣ ನದಿಯ ವಕ್ಷದಲಿ ನಿಶಿಯ ಕಪ್ಪು ಬಿದ್ದಿತು. ಆಗವಳು ನಿರಾಶೆಯಾಗಿ ನಿಟ್ಟುಸುರನ್ನು ಬಿಟ್ಟು ದುರ್ಗದೊಳಗೆ ಹೊರಟು ಹೋದಳು.

ಪ್ರಭಾವತದಲ್ಲಿ ಗಿರಿರಾಣಿಯು ಪಕ್ಕದಲ್ಲಿ ಮಲಗಿದ್ದ ಗೆಳತಿಯನ್ನೆಬ್ಬಿಸಿ, "ಚಪಲೆ! ನಮ್ಮ ಕಾನನದಲ್ಲಿ ಶರತ್ಕಾಲದಲ್ಲಿ ಫಲಪುಷ್ಪಗಳು ತುಂಬಿ ಮನಕೊಳಿತಾಗಿ

ಸುಂದರವಾಗಿರುವುವೇಂದು ಹೇಳಿರಲಿಲ್ಲವೆ ? ಹೊರಡು, ಈ ದಿನ ಕಾನನದಲ್ಲಿ ಹೋಗಿ ನೋಡಿಕೊಂಡು ಬರೋಣ " ಎಂದಳು.

ಚಪಲೆ :—ನಿರ್ಜನ ಕಾನನದಲ್ಲೇನಾದರೂ ನಮಗೆ ತೊಂದರೆಯಾದರೆ ಮಾಡುವುದೇನು ?

ಗಿರಿರಾಣಿ :—ಆ ವಿದೇಶಿಯಾದವನು ಕಾನನದಲ್ಲಿರುವನೆಂದು ಗೋಕುಲದಾಸನು ಹೇಳಿದ್ದಾನೆ. ಅವನು ಕ್ಷತ್ರಿಯ ವೀರನಂತೆ, ಅವನಲ್ಲಿ ಕತ್ತಿ ಇರುವದಂತೆ, ಅವನು ನಮ್ಮನ್ನು ವಿಪತ್ತಿನಿಂದ ಕಾಪಾಡದಿರುವನೆ ?

ಹೀಗೆ ಹೇಳುತ್ತಿದ್ದ ಹಾಗೆ ಗಿರಿರಾಣಿಯ ಕೆನ್ನೆಯು ನಸುಗೆಂಪಾಯಿತು ! ಗಿರಿರಾಣಿಗಿಂತ ಚಪಲೆಯು ಎರಡು ಮೂರುವರ್ಷ ದೊಡ್ಡವಳು. ಗಿರಿರಾಣಿಯ ಮುಖವನ್ನು ನೋಡಿ, ಮೆಲ್ಲಗೆ ನಕ್ಕು, ಹಾಗಾದರೆ ವೇಣುವನ್ನೂ ಸಂಗಡ ತೆಗೆದುಕೊಂಡು ಹೊರಡು. ನಾನು ಹೋಗಿ ಮಿಕ್ಕವರನ್ನೂ ಕರೆತರುವೆನು." ಎಂದು ಹೇಳಿದಳು.

ಚಪಲೆಯು ಮಿಕ್ಕ ಗೆಳತಿಯರನ್ನು ಕರೆತರುವುದಕ್ಕೆ ಹೋದಳು ಹೋಗುತ್ತಿದ್ದಾಗ ತನ್ನೊಳು ತಾನೇ, ಒಮ್ಮೊಂದು ದಿನ ನೋಡಿದುದಕ್ಕೆ ಹೀಗೆ ಪ್ರಾಣಬಿಡುವಳೆಂದು ನಾನರತಿರಲಿಲ್ಲವೆಂದು ಹೇಳಿಕೊಂಡಳು.

ಸ್ವಲ್ಪ ಹೊತ್ತಿನಲ್ಲೇ, ಕಾನನದಲ್ಲಿ ಅತಿ ಲಲಿತವಾಗಿ ಕರುಣರಸವುಳ್ಳ ಗಿರಿರಾಣಿಯ ವೇಣುನಾದವು ಕೇಳಿತು. ಬಹಳ ಹೊತ್ತಿನವರೆಗೂ ಒಂದು ರಾಗವಾದ ಬಳಿಕ ಮತ್ತೊಂದು ರಾಗ, ಹೊಸ ರಾಗವಾದ ಮೇಲೆ ಮತ್ತೊಂದು ಹೊಸರಾಗ, ಲಲಿತವಾದ ರಸದಿಂದ ಲಲಿತತರವಾಗಿಯೂ ಕರುಣಾಪೂರ್ಣ ರಸದಿಂದ ಕರುಣಾತರವಾಗಿಯೂ ರಸವು ಉಕ್ಕಿ ಗಗನವೆಲ್ಲ ನೆರೆಯುವ ಹಾಗೆ ನುಡಿಸಿದಳು. ಇಂದು ವೇಣುಗೆ ವಿರಾಮವಿಲ್ಲ. ಗಿರಿರಾಣಿಗೆ ಶ್ರಮ ತೋರಲಿಲ್ಲ. ಕಡೆಗೆ ಚಪಲೆಯು ಗಿರಿರಾಣಿಯ ಕೈಯನ್ನು ಹಿಡಿದುಕೊಂಡು, "ರಾಣಿ ! ಈ ದಿನ ವೇಣುವು ಮದಿಸಿಹೋಗಿದೆ. ಉನ್ಮತ್ತವಾಗಿರುವುದಕ್ಕೆ ವಿರಾಮವನ್ನು ಕೊಡು. ತಲೆಯೆತ್ತಿ ಆಕಾಶವನ್ನು ನೋಡು, ಎಷ್ಟು ಹೊತ್ತಾಗಿ ಹೋಗಿದೆ ! ಕೆಂಗದಿರನ ಕಿರಣದಿಂದ ಚಂದ್ರಮುಖವು ಬಾಡಿ ಮಲಿನವಾಗುತ್ತಿದೆ. ಹೊರಡು, ಮನೆಗೆ ಹೋಗೋಣ " ಎಂದಳು.

ಗಿರಿರಾಣಿಯು ವೇಣುವನ್ನು ತುಟಿಯಿಂದ ಬಿಡಿಸಿ ನಿಟ್ಟುಸುರನ್ನು ಬಿಟ್ಟು, "ಹೊರಡು " ಎಂದಳು.

ಗಿರಿರಾಣಿಯು ದುರ್ಗಾಭಿಮುಖವಾಗಿ ಹೊರಟಳು. ಆ ಸಮಯದಲ್ಲೊಬ್ಬ ತರುಣ ವಯಸ್ಕನಾದ ಸುಕುಮಾರನು ಅವಳೆದುರಿಗೆ ಬಂದು ನಿಂತು, ಅವಳಿಗೆ ವಂದಿಸಿದನು. ಎಲ್ಲರೂ ನೋಡಿದರು. ದೀರ್ಘವಾದ ಜಟೆಯಿಂದ ಮುಚ್ಚಿದ್ದ ಅವನ ಮುಖಮಂಡಲವು ಪಾಂಡುಪತ್ರದಲ್ಲಿದ್ದ ಪದ್ಮದಹಾಗೆ ಸುಂದರವಾಗಿಯೂ ಸುಕುಮಾರವಾಗಿಯೂ ಇದ್ದಿತು. ಸನ್ಯಾಸಿಯು ಗಿರಿರಾಣಿಯನ್ನು ನೋಡುತ್ತ, "ದೇವಿ! ಅಜಯಸಿಂಹನನ್ನು ಕಾನನದಲ್ಲಿ ನೋಡಲಿಲ್ಲವೆ?" ಎಂದನು.

ಪ್ರಶ್ನೆಯನ್ನು ಕೇಳಿ ಗಿರಿರಾಣಿಯು ಆಶ್ಚರ್ಯಪಟ್ಟು, "ಅಜಯಸಿಂಹನಾರು? ವಿದೇಶಿಯಾದಾ ಕ್ಷತ್ರಿಯಯುವಕನನ್ನು ಕುರಿತು ಹೇಳುವಹಾಗಿದೆಯಲ್ಲವೇ? ಆತನ ಹೆಸರು ಅಜಯಸಿಂಹನೆ? ಅವನನ್ನು ನೀನು ಬಲ್ಲೆಯಾ? ಎಂದು ಕೇಳಿದಳು.

ತಾಪಸಕುಮಾರನು ಮೃದುಸ್ವರದಿಂದ, "ಅಹುದು. ದೇವಿ? ನಾನವನನ್ನು ಬಲ್ಲೆನು" ಎಂದನು.

ಗಿರಿರಾಣಿ :—ಅವನೆಲ್ಲಿ ?

ತಾಪಸಕುಮಾರ :—ಅವನಿದೇ ಕಾನನದಲ್ಲಿರುವನು. ಆತನು ವಿಶೇಷ ಕಾರಣದಿಂದ ತಮ್ಮ ರಾಜಭವನದಲ್ಲಿರುವುದಕ್ಕೊಪ್ಪಲಿಲ್ಲ. ಅದು ಹೋಗಲಿ, ಅವನು ಜಾಗ್ರತೆಯಾಗೀ ವಿಜನ ಕಾನನವನ್ನು ಬಿಟ್ಟು ಬಂದು, ತಮ್ಮ ರಾಜಭವನದಲ್ಲಿ ಆತಿಥ್ಯವನ್ನು ಗ್ರಹಣಮಾಡುವ ಹಾಗೆ ಯತ್ನಪಡುವೆನು. ಕೂಡಲೇ ತಾವು ಆತನನ್ನು ನೋಡುವಿರಿ. ಆ ದಿನ ಸಾಯಂಕಾಲ ತಾವು ಆತನನ್ನು ನೋಡಿದಾಗ ನಾನು ದೂರನಿಂತು ಎಲ್ಲವನ್ನು ನೋಡಿದೆನು. ದೇವಿ! ತಾವು ಮನ್ನಿಸುವುದಾದರೆ ಮತ್ತೊಂದು ಮಾತನ್ನು ಅರಹುವೆನು.

ಗಿರಿರಾಣಿ :—ಏನು, ಹೇಳಬಹುದು ?

ತಾಪಸಕುಮಾರ :—ಆತನ ಪರಿಚಯದಿಂದ ತಮಗೆ ಗೊತ್ತಾಗಬಹುದು. ಆತನು ಜಗತ್ಪೂಜಿತವಾದ ರಾಜವಂಶದಲ್ಲಿ ಹುಟ್ಟಿದವನು. ತ್ರಿಲೋಕದುರ್ಲಭವಾದಾ ಸುಂದರ ಮುಖಮಂಡಲಕ್ಕೆ ತಕ್ಕಹಾಗೆ ಅವನ ಹೃದಯವೂ ಅಶೇಷ ಗುಣಗಳಿಂದಲಂಕೃತವಾಗಿರುವುದು. ತಾವಾದರೋ ಸಾಕ್ಷಾತ್ತು ಸರಸ್ವತಿಯೇ ಧರಾಧಾಮಕ್ಕಿಳಿದು ಬಂದಹಾಗಿರುತ್ತೀರಿ! ತಮ್ಮೊಂದಿಗೆ ಆತನು ಸೇರಿದರೆ ಮಣಿಯೂ ಬಂಗಾರವೂ ಸೇರಿದ ಹಾಗಾಗಿ ಎಷ್ಟು ಅಂದವಾಗುವುದೋ ಅದನ್ನು ವಿವರಿಸಲಸಾಧ್ಯ!

ಗಿರಿರಾಣಿಯ ಕೆನ್ನೆಯು ನಾಚಿಕೆಯಿಂದ ಕೆಂಪಾಯಿತು. ಗೆಳತಿಯರೆಲ್ಲರೂ ಘಟ್ಟಿಯಾಗಿ ನಕ್ಕರು. ಸನ್ಯಾಸಿಯು ಹೇಳತೊಡಗಿದನು :—" ಆದರೆ ತಮ್ಮಲ್ಲಿ ನನ್ನದೊಂದು ಬಿಕ್ಷೆಯುಂಟು. ತಮಗದು ದೊಡ್ಡದಲ್ಲ. ತಾವು ದಯವಿಟ್ಟು ಮನಸ್ಸು ಮಾಡಿದರೆ ಅನಾಯಾಸವಾಗಿ ಆ ಭಿಕ್ಷೆಯನ್ನು ನೀಡಬಹುದು. ನಾನು ಬಹಳ ದೇಶಗಳನ್ನು ತಿರುಗಿ ಸವೆದು ಹೋಗಿದ್ದೇನೆ. ಶಕ್ತಿಯು ಉಡಿಗಿ ಹೋಗಿದೆ. ಈ ರಾಜ್ಯವನ್ನು ಬಿಟ್ಟು ಹೋಗಲಾರದವನಾಗಿದ್ದೇನೆ. ತಮಗೂ ಅಜಯಸಿಂಹನಿಗೂ ಸಂಬಂಧವಾಗಿ ವಿವಾಹವಾದ ಬಳಿಕ ಈ ರಾಜ್ಯದಲ್ಲಿ ಪ್ರಾಸಾದದೆದುರಿಗೆ ಈ ಏಕಾಂತ ಕಾನನವಲ್ಲೊಂದು ಕುಟೀರವನ್ನು ಕಟ್ಟಿಕೊಂಡು ಆಜೀವನವೂ ಅದರಲ್ಲಿರುವುದಕ್ಕೆ ತಮ್ಮ ಅಪ್ಪಣೆಯಾಗಬೇಕು. ನಾನು ದೂರದಿಂದ ತಮ್ಮಿಬ್ಬರು ದಂಪತಿಯರ ಪ್ರೀತಿಯಿಂದರಳಿದ ಮುಖಮಂಡಲವನ್ನು ನೋಡುತ್ತಿರುವೆನು. ಅಮೃತವನ್ನು ಕರೆಯುವ ತಮ್ಮ ವೇಣುನಾದವನ್ನು ಕೇಳುತ್ತಿರುವೆನು. ದೂರದಿಂದ ಪ್ರೇಮನಿಲಯದಲ್ಲಿ ನಿಮ್ಮಿಬ್ಬರ ಸುಖಪರಂಪರೆಯನ್ನು ನೋಡಿ ಕರೆಗೊರಲನ ಚರಣವನ್ನು ಆನಂದಾಶ್ರು ಜಲದಿಂದ ತೊಳೆಯುತ್ತಿರುವೆನು."

ತಾಪಸಕುಮಾರನು ನೆಲಕ್ಕೆ ಮಂಡಿಯನ್ನೂರಿ ನಿಂತು ಕೈಮುಗಿದುಕೊಂಡು, ಕಾತರಸ್ವರದಿಂದ, ಪುನಃ " ದೇವಿ, ಗಿರಿರಾಣಿ ! ನನಗೀ ಭಿಕ್ಷೆಯನ್ನು ಕೊಡಲಾರಿರಾ ?" ಎಂದು ಹೇಳುತ್ತಿದ್ದಹಾಗೆ ಅವನ ಕಂಠವು ರುದ್ಧವಾಯಿತು. ಎರಡು ಕಣ್ಣುಗಳನ್ನೂ ಭೇದಿಸಿಕೊಂಡು ನೀರಿನ ಪ್ರವಾಹವು ಹರಿಯಿತು. ಅವನೆದ್ದು ನಿಂತು, ರುದ್ಧಕಂಠದಿಂದ " ಮತ್ತೊಂದುತಡವೆ ತಮ್ಮನ್ನು ನೋಡುವೆನು " ಎಂದು ಹೇಳಿ ಪ್ರತ್ಯುತ್ತರವನ್ನು ಕೇಳಲು ನಿಲ್ಲದೆ ಅಲ್ಲಿಂದ ಹೊರಟು ಹೋದನು.

ಗೆಳತಿಯೊಬ್ಬಳು :—ಈ ಸನ್ಯಾಸಿಯು ನಿಜವಾಗಿಯೂ ಹುಚ್ಚನು. ಅವನಿಷ್ಟೊಂದು ಹೊತ್ತು ಹೇಳಿದುದರಲ್ಲೊಂದಕ್ಕೂ ಅರ್ಥವಾಗಲಿಲ್ಲ.

ಮತ್ತೊಬ್ಬಳು :—ಹುಚ್ಚನೆಂದು ಹೇಳುವುದಕ್ಕೆ ಸಂದೇಹವೆ ? ಹುಚ್ಚನಾಗದಿದ್ದರೆ ಅಂಥಾ ಸುಂದರವಾದ ಮುಖಕ್ಕೆ ಬೂದಿಯನ್ನು ಬಳಿದುಕೊಂಡು ಜಟೆಯನ್ನು ಹೊತ್ತು ವಾಲ್ಮೀಕಮುನಿಯ ತಪೋವನವಾಗಿ ಮಾಡಿಕೊಂಡು ಅಲಿಯುತ್ತಿದ್ದನೆ ?

" ಹುಚ್ಚನಾದರೂ ಕಣ್ಣುಗಳೂ ತುಟಿಗಳೆರಡೂ ಅತಿಸುಂದರವಾಗಿದ್ದವು !"

ಚಪಲೆ :—ಅವನೆಂದಿಗೂ ಗಂಡಾಗಿರನು. ಅಂಥಾ ಕುಂದಿಲ್ಲದ ಅಂದವಾದ ಮುಖವು ಗಂಡಿಗಿರುವುದೆಲ್ಲಾದರೂ ಉಂಟೆ ? ಮತ್ತೊಂದು ತಡವೆ ಅವನನ್ನು ಕಂಡರೆ, ಮೊದಲು ಹೋಗಿ ಅವನಾಜಟೆಯನ್ನು ಕಿತ್ತುಹಾಕಿ ನೋಡುವೆನು.

ಗಿರಿರಾಣಿಯು ಏನೊಂದು ಮಾತನ್ನುಸುರದೆ, ಗೆಳತಿಯರೊಂದಿಗೆ ದುರ್ಗದೊಳಗೆ ತೆರಳಿ ಹೋದಳು.

## ಆರನೆಯ ಪರಿಚ್ಛೇದ.

ಎರಡು ತಿಂಗಳಾದ ಬಳಿಕ ಅಂಧಕಾರದಲ್ಲೊಂದು ದಿನ ರಾತ್ರಿ ಅಜಯಸಿಂಹನು ಪೂರ್ಣ ನದಿಯ ತೀರದಲ್ಲಿ ಒಬ್ಬೊಂಟಿಗನಾಗಿ ಕುಳಿತು ಅಂಧಕಾರಮಯವಾದ ಆಕಾಶ ವನ್ನು ನೋಡುತ್ತ ಯೋಚನೆಯಲ್ಲಿ ಮುಳುಗಿದನು. ಈ ಎರಡು ತಿಂಗಳಲ್ಲಿ ಅವನು ಅನೇಕ ತಡವೆ ಗಿರಿದುರ್ಗಕ್ಕೆ ಹೋಗಿದ್ದನು. ಹೋದಾಗ ಗೋಕುಲದಾಸನ ಸಂಗಡ ಗಿರಿರಾಣಿಗೆ ಉಂಟಾಗಬಹುದಾದ ವಿಪತ್ತನ್ನು ಕುರಿತು ಮಾತಾಡುವನು. ಗಿರಿರಾಣಿಯು ಅವನನ್ನು ಕಂಡಕೂಡಲೆ ಹರ್ಷದಿಂದವನ ಬಳಿಗೆ ಓಡಿ ಬರುವಳು. ಅವನು ಅಲ್ಲಿರುವ ತನಕ ಅವ ನನ್ನೇ ನೋಡುತ್ತ ಅವನ ಮಾತುಗಳನ್ನು ಕೇಳುತ್ತಿರುವಳು. ಅವನು ಅಲ್ಲಿಂದ ಹೊರಟು ಹೋಗಲು ಬೀಳ್ಕೊಂಡಾಗ ಹುಡುಗಿಯ ಕಣ್ಣುಗಳು ಕೆಂಪಾಗಿ ನೀರು ತುಂಬುವುದು. ಇದೇನು ಪ್ರೇಮವೆ? ಗಿರಿರಾಣಿಯು ಅವನನ್ನು ಪ್ರೀತಿಸುತ್ತಿದ್ದಳೆ? ಪುನಃ ಬಂದು ನೋಡುವ ಹೊತ್ತು ಮೀರಿದರೆ ಗಿರಿರಾಣಿಯು ಅವನನ್ನು ಕರೆತರಲು ಜನರನ್ನು ಕಳು ಹಿಸುತ್ತಿದ್ದಳು. ಒಂಮೊಂದು ಸಮಯದಲ್ಲಿ ಗೆಳತಿಯರನ್ನು ಜತೆಯಲ್ಲಿ ಕರೆದುಕೊಂಡು ತಾನೇ ಸ್ವಂತವಾಗಿ ಕಾನನಕ್ಕೆ ಹೋಗಿ ವೇಣುವನ್ನೂದುವಳು. ಅವನನ್ನು ಕಾಣದಿದ್ದರೆ ಹುಡುಗಿಯ ಹೃದಯವು ಕಳವಳಗೊಳ್ಳುತ್ತಿತ್ತೆ? ಹಾಗಿಲ್ಲದಿದ್ದರೆ ಅದು ಬಾಲ್ಯದ ಸುಲಭ ವಾದ ಚಾಪಲ್ಯವೋ? ಅವನು ಹತ್ತಿರ ಕಣ್ಣೆದುರಿಗಿದ್ದರೆ ಅವಳ ವೇಣುವು ಅತ್ಯಂತ ಸುಖವಾಗಿ ಪುಲಕದಿಂದ ನುಡಿಯುವುದು! ಅವನು ಕಣ್ಣೆದುರಿಗಿಲ್ಲದೆ ದೂರದಿಂದ ಕೇಳುವಹಾಗಿದ್ದರೆ ಕರುಣ ಸ್ವರದಿಂದ ಮರ್ಮವೇದನೆಯುಂಟು ಮಾಡುವಹಾಗೆ ನುಡಿಯುವುದು! ಅದನ್ನು ನೋಡಿದರೆ ಸ್ಪಷ್ಟವಾದ ಪ್ರೇಮದ ಲಕ್ಷಣವಾಗಿಯೇ ಇರುವುದೆಂದು ತೋರುತ್ತದೆ! ಅಥವಾ ಅಷ್ಟೊಂದು ಅಲ್ಪಕಾಲವಾದ ಎರಡು ತಿಂಗಳಲ್ಲಿ ಹುಡುಗಿಯ ಕೋಮಲ ಹೃದಯದಲ್ಲಿ ಪ್ರೇಮವು ಬೇರುಗೊಂಡಿರಲಾರದೆಂದು ಹೇಳಿ ದರೂ ಹೇಳಬಹುದು. ಆದರೆ ಪ್ರೇಮದ ಮೊಳಕೆಯನ್ನು ಬೇರೊಂದಿಗೆ ಕಿತ್ತು ಹಾಕ ದಿದ್ದರೆ ಬರುತ ಬರುತ ಬಲವಾಗಿ ಬೇರೂರಿಕೊಳ್ಳುವ ಸಂಭವವುಂಟು! ಹಾಗಾದರೆ ಅವನು ಸರಳ ಸ್ವಭಾವವುಳ್ಳ ಆ ಹುಡುಗಿಯನ್ನು ಆಜೀವನವೂ ನಿರಾಶೆಯುಳ್ಳ ಪ್ರೇಮದ ಕ್ರೂರವಾದ ಯಾತನೆಗೆ ಗುರಿಮಾಡಲು ಕಾರಣನಾಗ ಬಹುದೆ? ಅವಳಿಗೆ ಸವಿಯಾದ ಮಾತುಗಳನ್ನು ಹೇಳಿ ಅವಳ ಆ ಭ್ರಮೆಯನ್ನು ಹೋಗಲಾಡಿಸಬೇಕೆಂದು ಅವನು ಮನ

ದೊಳು ಯೋಚಿಸಿಕೊಳ್ಳುವನು. ಆದರೆ ಅವಳೆದುರಿಗೆ ಬಂದು ನಿಂತು, ಅವಳ ಆ ಮುಖವನ್ನು ನೋಡಿ ಇನಿದಾದ ಅವಳ ನುಡಿಗಳನ್ನು ಕೇಳಿದಾಗ ಅವಳಿಗಾವ ಮಾತನ್ನು ಹೇಳುವುದಕ್ಕೂ ತೋಚದೆ ಸುಮ್ಮನಿರುವನು! ಅಂಥಾ ಸಮಯದಲ್ಲಿ ಮನನೋಯಿಸುವ ನಿಷ್ಠುರವಾದ ನುಡಿಗಳನ್ನು ಹೇಳಿ ಹುಡುಗಿಯು ಮನ ನೊಂದುಕೊಳ್ಳುವಹಾಗೆ ಮಾಡಬಹುದೆ? ಎಂದು ಹೇಳಿಕೊಳ್ಳುವನು. ಹಾಗಾದರೆ, ಏನೂ ಹೇಳದೆ ಅವಳ ಸಹವಾಸವನ್ನು ಬಿಟ್ಟು ಅವಳನ್ನು ನೋಡುವ ಆಶೆಯನ್ನು ತೊರೆದು ಒಮ್ಮಿಂದೊಮ್ಮೆ ದೂರ ದೇಶಕ್ಕೆ ಹೊರಟು ಹೋಗಿ ಬಿಡುವುದುಚಿತವೆ? ಹೀಗೆಂದು ಯೋಚಿಸಿಕೊಂಡಾಗ ಮನಕ್ಕೆ ವ್ಯಾಕುಲವುಂಟಾಗುವುದು. ತಂದೆಯಿಲ್ಲದ ಸರಳತನದ ಹುಡುಗಿಯನ್ನು ವಿಪತ್ಕಾಲದಲ್ಲಿ ಕೈ ಹಿಡಿಯದೆ ಕಣ್ಣೀರಲ್ಲಿ ತೇಲಿಬಿಟ್ಟು ಹೊರಟು ಹೋಗುವುದು ಪಾಷಂಡನ ಕೆಲಸ! ಹಾಗಾದರೆ ಹುಡುಗಿಯನ್ನು ತಾನೂ ಪ್ರೀತಿಸುತ್ತಿದ್ದನೆ? ಎಂಬೀ ಪ್ರಶ್ನೆಯು ಇದ್ದಹಾಗೆ ಮಿಂಚಿನ ಹೊಳಪಿನಹಾಗೆ ಮನದಲ್ಲಿ ಹೊಳೆತ ಹಾಗಾಯಿತು! ಮನದೊಳಗೆ ದೃಷ್ಟಿಸಿ ನೋಡುವುದಕ್ಕೆ ಸಲವಾಗಿ ಕಣ್ಣು ಮುಚ್ಚಿಕೊಂಡನು. ಪ್ರಾಣದೊಳಗೆ, ಅಂಧಕಾರ ಮಯವಾದ ಹೃದಯದಂತಸ್ಥಲದಲ್ಲಿ ಉಜ್ವಲವಾಗಿ ಬೆಳಗುತ್ತಿದ್ದ ಚಿರಪ್ರೇಮಮಯವಾದ ದೇವಿಯ ಮೂರ್ತಿಯೊಂದು ಮಾತ್ರ ಕಣ್ಗೊಳಿಸುತ್ತಿತ್ತು. ಚಿಕ್ಕಂದಿನಿಂದ ಯಾವ ಮೂರ್ತಿಯನ್ನಾರಾಧಿಸುತ್ತಿದ್ದನೋ ನಿದ್ರಾವಸ್ಥೆಯಲ್ಲಿಯೂ, ಜಾಗ್ರತಾವಸ್ಥೆಯಲ್ಲಿಯೂ, ಶಯನದಲ್ಲಿಯೂ, ಸ್ವಪ್ನದಲ್ಲಿಯೂ, ಸಂಪತ್ತಿನಲ್ಲಿಯೂ, ವಿಪತ್ತಿನಲ್ಲಿಯೂ, ಆನಂದೋತ್ಸವಗಳಲ್ಲಿಯೂ, ಯುದ್ಧದ ಕೋಲಾಹಲದಲ್ಲಿಯೂ ಯಾವ ಮೂರ್ತಿಯು ಹೃದಯದಲ್ಲಿ ವಿರಾಜಮಾನವಾಗಿದ್ದಿತೋ ಅದೇ ಪ್ರತಿಮೆಯೇ ಈಗಲೂ ಕಣ್ಗೊಳಿಸುತ್ತಿತ್ತು. ಅವನು ಯಾವ ಪ್ರತಿಮೆಯನ್ನು ವಿಸರ್ಜಿಸುವುದಕ್ಕೆ ಸಲವಾಗಿ ಮನೆಯನ್ನು ಬಿಟ್ಟು ನೂರಾರು ಗಾವದದ ದೂರ ಓಡಿ ಬಂದು ಗಿರಿ ಗುಹೆಗಳಲ್ಲಿಯೂ ಘೋರಾಂಧಕಾರದಲ್ಲಿಯೂ ಯೋಗಿಯ ಹಾಗೆ ಅಲೆಯುತ್ತಿದ್ದನೋ, ಈಗಲೂ ಅದೇ ಪ್ರತಿಮೆಯು ಅದೇ ಪೂರ್ಣಗೌರವದಿಂದಲೂ ಅದೇ ಸೌಂದರ್ಯದಿಂದಲೂ ಹೃದಯದ ಮಧ್ಯದಲ್ಲಿ ಪ್ರಕಾಶಿಸುತ್ತಿತ್ತು! ಗಿರಿರಾಣಿಯಾದರೋ! ಆ ಗೌರವಮಯವಾದ ಆನಂದಮಯವಾದ ಹಿರಣ್ಮಯಿಯ ಪ್ರತಿಮೆಯ ಚರಣತಲದಲ್ಲಿ ಅಸ್ಪಷ್ಟವಾಗಿ ಲಕ್ಷ್ಯವನ್ನು ತಾಳದಿರುವ ಛಾಯೆಯು ಬಿದ್ದಿರುವ ಹಾಗೆ ತೋರುವಳು. ಛಾಯೆಯು ಬೆಳಕಿನಲ್ಲಿ ಹಿಡಿದು, ಜೊಂಪೆಯಾಗಿ ಪ್ರಾಣಪ್ರತಿಷ್ಠೆ ಮಾಡಿ, ಅದನ್ನು ಪೂರ್ಣಗೌರವಮಯವಾದ ಪ್ರತಿಮೆಯು ಇದ್ದ ಸಿಂಹಾಸನದ ಮೇಲೆ ಪ್ರತಿಷ್ಠೆ ಮಾಡುವುದು ಸಂಭವವೆ? ಇದಕ್ಕೆ ಸಲವಾಗಿಯೆ ದೇವರು ಅವನನ್ನು ಗಿರಿರಾಣಿಯ ಬಳಿಗೆ ಕರೆತಂದು ಬಿಟ್ಟಿದ್ದಾನೆಯೆ?

ಈ ಸಮಯದಲ್ಲಿ ಯಾರೋ ಹಿಂದಿನಿಂದ "ಅಜಯಸಿಂಹ" ಎಂದು ಕರೆದ ಹಾಗಾಯಿತು. ಅವನು ಹಿಂದಿರುಗಿ ನೋಡಿದನು. ತಾಪಸ ಕುಮಾರನೊಬ್ಬನು ಪಕ್ಕದಲ್ಲಿ ನಿಂತಿದ್ದನು. ಅವನು ಮನಸ್ಸಿನಲ್ಲಿ "ನಾನು ಹಿರಣ್ಮಯಿಯನ್ನು ಮರೆಯಬಲ್ಲನೆ? ಈ ಅಪರಿಚಿತ ಸನ್ಯಾಸಿಯ ಕೊರಳನ್ನು ಕೇಳಿ ಹಿರಣ್ಮಯಿಯ ಕೊರಳೆಂದು ಭ್ರಮಿಸಿದೆನು" ಎಂದೆಂದುಕೊಂಡನು.

ತಾಪಸ ಕುಮಾರ:—ಅಜಯಸಿಂಹ! ನೀನು ಬಹಳ ನಿಷ್ಠುರನು. ಸರಳವಾದ ಬೊಂಬೆಯ ಹಾಗಿರುವ ಗಿರಿರಾಣಿಯು ನಿನ್ನನ್ನು ನೋಡಲು ಪ್ರಾಣ ಬಿಟ್ಟುಕೊಳ್ಳುತ್ತಾಳೆ. ನೀನಾದರೋ ಬೇಕೆಂದು ಅವಳಿಗೆ ವೇದನೆಯುಂಟುಮಾಡುತ್ತಿ.

ಅಜಯಸಿಂಹ:—ನೀನಾರು? ಈಗ್ಗೆ ಬಹಳ ದಿವಸಕ್ಕೆ ಹಿಂದೆ ವಿಂಧ್ಯಗಿರಿಯಲ್ಲಿ ಭೀಷಣ ಅಂಧಕಾರಮಯವಾಗಿದ್ದ ಗುಹೆಯಲ್ಲೊಬ್ಬ ಸನ್ಯಾಸಿಯನ್ನು ನೋಡಿದ್ದೆನು. ನೀನೇ ಅವನೆ?

"ಸನ್ಯಾಸಿಯ ಪರಿಚಯವೇಕೆ? ನಾನು ನಿನಗೆ ತಿಳಿಸಬೇಕೆಂದು ತಂದಿರುವ ಸುದ್ದಿಯನ್ನು ಮೊದಲು ಕೇಳು. ಗಿರಿರಾಣಿಗೆ ಬಹು ಕೆಟ್ಟ ವಿಪತ್ತು ಒದಗಿಬಂದಿದೆ. ಅವಳಿಗೆ ಮಾತ್ರವೆ ಅಲ್ಲ. ಆ ವಿಪತ್ತು ನಿನಗೂ ಉಂಟಾಗುವುದು!"

"ನಾನು ಯಾರು? ನೀನು ಬಲ್ಲೆ, ಹೇಗೆ?"

"ಪರಿಚಯವನ್ನು ಹೇಳುವುದಕ್ಕಿದು ಸಮಯವಲ್ಲವೆಂದು ಈಗ ಹೇಳಿದೆನು. ನಾನು ಕಾನನದಲ್ಲಿ ಮರದಡಿ ಕುಳಿತು ನನ್ನ ಅಭೀಷ್ಟವು ಕೈಗೂಡಲೆಂದು ಭವಾನಿಪತಿಯನ್ನಾರಾಧಿಸುತ್ತಿದ್ದೆನು. ಆಗ ಕೆಲವು ಮಂದಿ ಮುಸಲಮಾನ ಸೈನಿಕರು ಒಟ್ಟಿಗೆ ಸೇರಿ ತಮ್ಮ ತಮ್ಮಲ್ಲಿಯೇ ಆಲೋಚನೆ ಮಾಡಿಕೊಳ್ಳುತ್ತಿದ್ದರು. ಅದನ್ನು ಕೇಳಿ ವ್ಯಾಕುಲನಾಗಿ ನಿನ್ನ ಬಳಿ ಓಡಿ ಬಂದೆನು. ಅವರಲ್ಲೊಬ್ಬನು—'ಈಗ ನಿನ್ನ ಅಭಿಪ್ರಾಯವೇನು? ನನಗೆ ಸಹಾಯವನ್ನು ಮಾಡಲಾರೆಯೊ, ಇಲ್ಲವೆ?' ಎಂದು ಕೇಳಿದುದಕ್ಕೆ ಮತ್ತೊಬ್ಬನು, 'ನನಗೆ ಬೇರೊಂದು ಇಷ್ಟವೇನೂ ಇಲ್ಲ. ಹುಡುಗಿ ಗಿರಿರಾಣಿಯನ್ನು ಬಲವಂತವಾಗಿ ಹಿಡಿದುಕೊಂಡು ಹೋಗಬೇಕೆಂಬುದೊಂದೇ ಆಶೆ. ನನಗೆ ಸಹಾಯ ಮಾಡುವ ಜನರಿಗೆ ಕಡಿಮೆ ಇಲ್ಲ. ಅವರೆ ನಿನ್ನ ವೀರ ಯೋಧರು ಸಹಾಯವನ್ನು ಮಾಡಿದರೆ ಈ ಕೆಲಸವು ಅನಾಯಾಸವಾಗಿ ನೆರವೇರುವುದು" ಎಂದುತ್ತರವನ್ನು ಕೊಟ್ಟನು. ಮೊದಲು ಮಾತಾಡಿದವನು, "ಅಜಯಸಿಂಹನನ್ನು ಸೋಲಿಸಿ ಸೆರೆಯಲ್ಲಿಡಬೇಕಾದುದು ಮೊದಲು ಅವಶ್ಯಕ. ಅವನನ್ನು ಪ್ರಾಣದಿಂದ ಹೊಡೆದು ಹಾಕ ಕೂಡದು. ಗಿರಿರಾಣಿಯ ದುರ್ಗದವರು ಅವನ ಸಹಾಯಕ್ಕೆ ಬಂದರೆ ನಿನ್ನ ಸೈನ್ಯದ ಸಹಾಯವು

ಅವಶ್ಯಕವಾಗಿ ಬೇಕಾಗುವುದು " ಎಂದನು. ಇಷ್ಟೊಂದುವಾತನ್ನು ಈಗ ತಾನೇ ಕೇಳಿ ನಿನ್ನನ್ನು ಹುಡುಕಿಕೊಂಡೋಡಿ ಬಂದೆನು. ಈಗ ಕರ್ತವ್ಯವನ್ನು ನಿರ್ಧಾರಣೆಮಾಡಿದ ಕೂಡಲೆ ಗಿರಿರಾಣಿಯ ಬಳಿ ಹೋಗಿ ಅವಳನ್ನು ಕಾಪಾಡಿಕೊಳ್ಳುವ ಯೋಚನೆಮಾಡು."

ಅಜಯಸಿಂಹ :—ಗಿರಿರಾಣಿಗೆ ವಿಪತ್ತುಂಟಾಗುವುದೆಂದು ನಾನು ಮೊದಲಿಂದಲೂ ಬಲ್ಲೆನು. ಅವಳಿಗೆ ಸಹಾಯವನ್ನು ಮಾಡಬೇಕೆಂತಲೇ ಇದುವರೆಗೂ ಇಲ್ಲಿದ್ದೆನು. ಇಲ್ಲವಾಗಿದ್ದರೆ ಈ ವರೆಗೆ ಬಹಳದೂರ ಹೊರಟು ಹೊಗುತ್ತಿದ್ದೆನು !

ತಾಪಸಕುಮಾರ :—ಅಂಥಾ ಅಭಿಪ್ರಾಯವುಳ್ಳವನಾಗಿದ್ದರೆ ಅಡವಿಯಲ್ಲಿ ವಾಸಮಾಡದೆ ಗಿರಿರಾಣಿಯ ದುರ್ಗದಲ್ಲಿ ವಾಸವಾಗಿರಲಿಲ್ಲವೇಕೆ ?

ಅಜಯಸಿಂಹನು ಪ್ರಶ್ನೆಗೆ ಉತ್ತರವನ್ನು ಕೊಡಲಿಲ್ಲ. ಸನ್ಯಾಸಿಯು "ಆಹಾ ! ಗೊತ್ತಾಯಿತು ! ನನಗೊಂದು ಹೆದರಿಕೆಯುಂಟಾಗಿದೆ; ಅವಳ ದುರ್ಗದಲ್ಲಿರುತ್ತಿದ್ದರೆ ಭುವನವನ್ನು ಮೋಹಗೊಳಿಸುವ ರೂಪವತಿಯಾದಾ ಬಾಳೆಯ ಸುಧಾಮಯವಾದ ಸಹವಾಸದಿಂದ ಮುಗ್ಧನಾಗಿ ಹೋಗಿ, ಪುನಃ ಸಂಸಾರಿಯಾಗುವೆನೆಂಬ ಭಯದಿಂದ ದೂರದಲ್ಲಿರುತ್ತಿದ್ದೆಯಲ್ಲವೆ ?" ಎಂದನು.

ಅಜಯಸಿಂಹನು ಚಮಕಿತನಾಗಿ, "ಅಂತರ್ಯಾಮಿಯಾದ ಸನ್ಯಾಸಿಯೆ ! ನೀನು ನಿಜವನ್ನು ಹೇಳಿದೆ. ಅವಳ ಸಹವಾಸದಲ್ಲಿರುವುದಕ್ಕೆ ಇಷ್ಟವಿಲ್ಲದೆ ಅವಳು ಎಷ್ಟೊಂದು ಕೇಳಿಕೊಂಡು ಪ್ರಯತ್ನ ಪಟ್ಟರೂ ಅವಳ ದುರ್ಗವನ್ನು ಬಿಟ್ಟು ಬಂದು ಈ ನಿರ್ಜನ ಕಾನನದಲ್ಲಿರುತ್ತಿದ್ದೆನು ! ಈ ಸನ್ಯಾಸವ್ರತವನ್ನು ನನ್ನ ಜೀವಮಾನದಲ್ಲಿ ಬಿಡಲಿಷ್ಟವೆನಗಿಲ್ಲ." ಎಂದು ಹೇಳಿದನು.

ತಾಪಸಕುಮಾರ :—ನೀನು ವಿಷಮ ಭ್ರಮೆಯಿಂದ ಬಿದ್ದು ಒದ್ದಾಡುವ ಹಾಗಿದೆ. ಅದಕ್ಕೆ ಸಂದೇಹವಿಲ್ಲ. ನೀನು ಕ್ಷತ್ರಿಯವೀರನು. ನಿನಗಿನ್ನೂ ಚಿಕ್ಕ ವಯಸ್ಸು. ನನ್ನ ಮನಸ್ಸಿಗೆ ತೋರುವುದು ನಿಜವಾಗಿದ್ದರೆ, ನೀನು ಯಾವುದೋ ಒಂದು ದೊಡ್ಡ ಖ್ಯಾತಿಗೊಂಡ ರಾಜವಂಶದಲ್ಲಿ ಹುಟ್ಟಿರುವವನಾಗಿ ಕಾಣುತ್ತಿ. ಈ ಸನ್ಯಾಸವು ನಿನ್ನಲ್ಲಿ ಶೋಭಿಸುವುದೆ ? ಯುವನರಿಂದ ದಳಿತವಾಗಿ ಮ್ಲೇಚ್ಛರ ಪದತಳದಲ್ಲಿ ಬಿದ್ದು ಸಂಕಟಪಡುವ ಭಾರತಭೂಮಿಯು ನಿನ್ನಂಥ ವೀರಯುವಕರನ್ನು ಬೇಕೆಂದು ಅಪೇಕ್ಷಿಸುತ್ತಿರುವುದು. ಯವನರ ಕರಾಳಗ್ರಾಸದಿಂದ ಪುಣ್ಯಭೂಮಿಯಾದೀ ಆರ್ಯಾವರ್ತವನ್ನು ಈಗಲೂ ಉದ್ಧಾರ ಮಾಡಬಹುದು. ನಿನ್ನ ಭೂಮಿಯು ಬಿದ್ದು ಹೋಗಿ ಗೋಳಾಡುತ್ತಿರುವುದನ್ನು ನೋಡಿ ನಿನ್ನ ವೀರಹೃದಯವು ವಿಗಳಿತವಾಗಲಾರದೆ ಹೋಯಿ

ತೆ? ಯಾವ ಸೌಭಾಗ್ಯವತಿಯಾದ ರಮಣಿಯು ನಿನ್ನನ್ನು ಈ ಬ್ರಹ್ಮಚರ್ಯ ವ್ರತದಿಂದ ಬಿಡಿಸುವಳೋ ನಾನಂಥವಳನ್ನು ದೇವಿಯೆಂದು ಭಾವಿಸಿ ಅವಳ ಚರಣಕಮಲವನ್ನು ಪೂಜಿಸುವೆನು.

ಅಜಯಸಿಂಹ—ನೀನು ನನ್ನ ಹೃದಯದೊಳಗಣ ಅವಸ್ಥೆಯನ್ನು ತಿಳಿಯುವವನಾಗಿದ್ದರೆ ನನ್ನನ್ನು ಹೀಗೆ ತಿರಸ್ಕರಿಸುತ್ತಿರಲಿಲ್ಲ.

ತಾಪಸಕುಮಾರ—ಅಜಯಸಿಂಹ! ಗಿರಿರಾಣಿಯು ಗುಣದಲ್ಲಿಯೂ ರೂಪದಲ್ಲಿಯೂ ಸಾಕ್ಷಾತ್ತು ಸರಸ್ವತಿ! ನಿನಗಾದರೋ, ಪೂರ್ವವಯಸ್ಸು. ಕಮನೀಯವಾದ ಕಾಂತಿಯುಳ್ಳ ರೂಪವು. ಹೀಗೆಂದು ಹೇಳುತ್ತಿದ್ದ ಹಾಗೆ ಸನ್ಯಾಸಿಯ ಕಂಠಸ್ವರವು ಯಾವದೋ ಅನನುಭವನೀಯವಾದೊಂದು ಚಿತ್ತವೃತ್ತಿಯ ವೇಗದಿಂದ ಕಂಪಿತವಾದ ಹಾಗಾಯಿತು. ಸನ್ಯಾಸಿಯ ಕಣ್ಣುಗಳಿಂದ ವಾರಿಧಾರೆಯು ಸುರಿಯುತ್ತಿದ್ದುದನ್ನು ಕತ್ತಲೆಯಲ್ಲಿ ಅಜಯಸಿಂಹನು ನೋಡಲಿಲ್ಲ. ಸನ್ಯಾಸಿಯು ಮುಂದೆ ಹೇಳತೊಡಗಿದನು—ನಿನ್ನ ಕಮನೀಯವಾದ ಕಾಂತಿಯುಳ್ಳ ರೂಪವು ಗಿರಿರಾಣಿಯೊಂದಿಗೆ ಸೇರಿದರೆ ಎಷ್ಟೊಂದು ಅಂದವಾಗಿರುವುದು! ಆದುಕಾರಣ ಗಿರಿರಾಣಿಯು ನಿನಗೆ ಮದುವೆಯಾಗಲೆಂದು ಭವಾನೀಪತಿಯಲ್ಲಿ ನಿತ್ಯವೂ ಪ್ರಾರ್ಥಿಸುತ್ತಿದ್ದೇನೆ. ನೀನು ಈ ಬ್ರಹ್ಮಚರ್ಯ ವ್ರತವನ್ನು ಬಿಟ್ಟು ಪುನಃ ರಾಜಧರ್ಮದಲ್ಲಿ ದೀಕ್ಷಿತನಾಗು. ಲೋಕಸುಂದರಿಯಾದ ಗಿರಿರಾಣಿಯನ್ನು ಮದುವೆಮಾಡಿಕೊಂಡು ಯವನರಿಂದ ಪೀಡಿತವಾದ ಪುಣ್ಯಭೂಮಿಯ ಮಂಗಳವನ್ನು ಸಾಧಿಸು. ದೀನಹೀನನಾದ ಸಿಪಾಯಿಯು ಧರ್ಮಚಾರಿಯಾದ ನಾನು ಈ ಕಾನನದಲ್ಲಿದ್ದು ಪ್ರತಿದಿನವೂ ನವದಂಪತಿಯರಿಗೆ ಮಂಗಳವಾಗಲೆಂದು ಭವಾನೀಪತಿಯನ್ನು ಪೂಜಿಸುತ್ತ ಉಳಿದಿರುವ ಕಾಲವನ್ನು ಕಳೆಯುವೆನು.

ಅಜಯಸಿಂಹನು ಆಶ್ಚರ್ಯಗೊಂಡು ಸ್ತಂಭಿತನಾಗಿ ಸನ್ಯಾಸಿಯ ಮುಖಮಂಡಲವನ್ನು ದೃಷ್ಟಿಸಿ ನೋಡಿದನು. ಆ ಸಮಯದಲ್ಲಿ ಗಿರಿದುರ್ಗದಲ್ಲಿ ಅಕಸ್ಮಾತ್ತಾಗಿ ಕೊಳ್ಳಿಬೆಳಕು ಕಂಡಿತು. ಬಹಳ ಜನರ ಗದ್ದಲವು ಕೇಳಿತು. ಅದರೊಂದಿಗೆ ಕೋಟೆಯೊಳಗಿನಿಂದ ಭೇರಿಯ ನಾದವೂ ಕೇಳಿತು. ಅಜಯಸಿಂಹನು ಒರೆಗಳಚಿದ ಕತ್ತಿಯನ್ನು ಹಿಡಿದುಕೊಂಡು ದುರ್ಗಾಭಿಮುಖವಾಗಿ ಓಡಿಹೋದನು. ತಾಪಸಕುಮಾರನೂ ಅವನ ಹಿಂದೆ ಹೋದನು.

## ಏಳನೆಯ ಪರಿಚ್ಛೇದ.

ಅಜಯಸಿಂಹನು ದುರ್ಗಕ್ಕೆ ಬಂದು ನೋಡಲಾಗಿ ಬಾಗಿಲಿಗೆದುರಾಗಿ ಕೆಲವು ಸೈನಿಕರ ಮೃತದೇಹಗಳು ಬಿದ್ದಿದ್ದವು! ಕಳ್ಳರಾದ ಶತ್ರುಗಳು ಒಳಗೆ ಹೋಗಿರಬೇಕೆಂದು ತಿಳಿದು, ಒಳಗೆ ಹೋಗಿ ಗಿರಿರಾಣಿಯನ್ನು ಹುಡುಕಿ ನೋಡಿದನು. ದುರ್ಗವನ್ನು ಮುತ್ತಿಗೆ ಹಾಕಿದ್ದ ಗುರುತುಗಳಾವುವೂ ಕಾಣಲಿಲ್ಲ. ಹೆಂಗಸರು ಮಾತ್ರ ಚೀರಿಡುತ್ತ ಗೋಳಾಡುತ್ತಿದ್ದರು. ಗಿರಿರಾಣಿಯು ಅಲ್ಲಿರಲಿಲ್ಲ. ಓಡಿಹೋಗಿ ನೋಡಿದನು. ಇಪ್ಪತ್ತೈದು ಮಂದಿ ಕಾಲಾಳುಗಳು ನೂರಾರು ಕುದುರೆಸವಾರರನ್ನು ಎದುರಿಸುತ್ತಿದ್ದರು. ಅವರೆದುರಿಗೆ ಮುದುಕ ಗೋಕುಲದಾಸನು ಉನ್ಮತ್ತನ ಹಾಗೆ ಸಾಹಸದಿಂದ ಕತ್ತಿಯನ್ನು ತಿರುಗಿಸುತ್ತಿದ್ದನು. ಗಿರಿರಾಣಿಯು, ಕುದುರೆ ಸವಾರನೊಬ್ಬನು ಅವಳನ್ನು ಕುದುರೆಯ ಮೇಲೆ ಹಿಡಿದು ಕುಳ್ಳಿರಿಸಿಕೊಂಡಿದ್ದಹಾಗೆ ಮೂರ್ಛೆ ಬಿದ್ದಿದ್ದಳು. ನಿಮಿಷದಲ್ಲಿ ಅಜಯಸಿಂಹನು ಹೋಗಿ ಗೋಕುಲದಾಸನ ಬಲಪಾರ್ಶ್ವನಿಂತನು. ಮುಹೂರ್ತದಲ್ಲಿ ಅವನಾ ಕರಾಳವಾದ ಕತ್ತಿಯ ಪೆಟ್ಟಿನಿಂದ ಹನ್ನೆರಡು ಮಂದಿ ಕುದುರೆ ಸವಾರರು ನೆಲವನ್ನು ಹಿಡಿದರು. ಮುಸಲಮಾನ ಕಳ್ಳರು ಅಜಯಸಿಂಹನ ಯುದ್ಧ ಕೌಶಲ್ಯವನ್ನೂ ದಂಡನ್ನು ನಡಿಸುವುದರಲ್ಲಿ ಅವನ ದಕ್ಷತೆಯನ್ನೂ ಅಸಾಧಾರಣವಾದ ಬಾಹುಬಲವನ್ನೂ ಅವನಾ ಸುಕುಮಾರ ಮುಖಮಂಡಲದಲ್ಲಿ ಉತ್ಸಾಹ ಸ್ಫೂರ್ತಿ ಮುಂತಾದ ಲಕ್ಷಣಗಳನ್ನೂ ನೋಡಿ ಅವನನ್ನೆದುರಿಸಿ ಯುದ್ಧದಲ್ಲಿ ಜಯವು ಅಸಂಭವವೆಂದು ತಿಳಿದುಕೊಂಡರು. ಮೂರ್ಛೆ ಹೋಗಿದ್ದ ಗಿರಿರಾಣಿಯನ್ನು ಹಿಡಿದಿದ್ದ ಕುದುರೆ ಸವಾರನು ಉಚ್ಚಕಂಠದಿಂದ "ನೀವೆಲ್ಲರೂ ಈ ಕಾಫರನನ್ನು ಎದುರಿಸಿ ನಿಲ್ಲಿಸಿಕೊಂಡಿದ್ದರೆ ಅಷ್ಟರೊಳಗೆ ನಾನು ಹತ್ತು ಮಂದಿ ಸವಾರರನ್ನು ಮಾತ್ರ ಜತೆಯಲ್ಲಿ ಕರೆಕೊಂಡು ವೇಗವಾಗಿ ಹೋಗುವೆನು" ಎಂದು ಹೇಳಿದನು. ಹೀಗೆಂದು ಹೇಳುತ್ತಾ ಕುದುರೆ ಸವಾರನು ಒಂದು ಕೈಯಿಂದ ಗಿರಿರಾಣಿಯನ್ನು ಹಿಡಿದು ಮತ್ತೊಂದು ಕೈಯಿಂದ ಕಡಿವಾಣವನ್ನು ಹಿಡಿದು ಕುದುರೆಯನ್ನು ಓಡಿಸಿಕೊಂಡು ಹೋದನು. ಉಳಿದಿದ್ದ ಸವಾರರು ಅಜಯಸಿಂಹನನ್ನೂ ದುರ್ಗದ ಸೈನಿಕರನ್ನೂ ಆಕ್ರಮಣ ಮಾಡಿದರು. ಅಜಯನು ಓಡಿಹೋಗುತ್ತಿದ್ದ ಸವಾರರನ್ನು ಬೆನ್ನಟ್ಟಿ ಹೋಗಿ ಗಿರಿರಾಣಿಯನ್ನುದ್ಧಾರ ಮಾಡದಿದ್ದರೆ ರಕ್ತಪಾತವು ನಿರರ್ಥಕವೆಂದು ಯೋಚಿಸಿ ಅಲ್ಲಿದ್ದ ಮುಸಲಮಾನರನ್ನೆದುರಿಸಲು ಗೋಕುಲದಾಸನಿಗೆ ಹೇಳಿ ಹೋಗಬೇಕೆಂದು ಹಿಂದಿರುಗಿ ನೋಡಿದನು. ಗೋಕುಲದಾಸನು ಮೃತನಾಗಿ ಬಿದ್ದಿದ್ದನು. ಅವನು ಶತ್ರುಗಳನ್ನು ಬೆನ್ನಟ್ಟಿ ಹೋಗುತ್ತಿದ್ದವನು ಶತ್ರುಗಳಿಂದ ಹೊಡೆಯಲ್ಪಟ್ಟು ಸತ್ತು ಹೋಗಿದ್ದನು. ಅಜಯಸಿಂಹನು ಕಳವಳಗೊಂಡು

ಮತ್ತಾರ ಮೇಲೆ ಯುದ್ಧ ಮಾಡುವ ಭಾರವನ್ನು ವಹಿಸಿ ಹೋಗೋಣವೆಂದು ನಾಲ್ಕು ಕಡೆಯೂ ನೋಡುತ್ತಿದ್ದನು. ಪಾರ್ಶ್ವದಲ್ಲಿದ್ದವನೊಬ್ಬನು “ ಅಜಯಸಿಂಹ ! ನಾನಿಲ್ಲಿ ರುವೆನು; ನೀನು ಗಿರಿರಾಣಿಯನ್ನು ಹಿಂದಟ್ಟಿ ಹೋಗು. ಯುದ್ಧಕ್ಷೇತ್ರದಲ್ಲಿ ನಾನು ಸೇನಾಪತಿಯಾಗಿರುವೆನು ” ಎಂದು ಹೇಳಿದನು.

ಗೋಕುಲದಾಸನು ನೆಲಕ್ಕೆ ಬಿದ್ದ ಕೂಡಲೇ ತಾಪಸ ಕುಮಾರನು ಕುದುರೆ ಸವಾರನೊಬ್ಬನನ್ನು ಕೆಡಹೊಡಿದು ಅವನ ಕತ್ತಿಯನ್ನು ಕಸಕೊಂಡು ಅವನ ಕುದು ರೆಯ ಮೇಲೆ ಹತ್ತಿ ಅಜಯನ ಪಾರ್ಶ್ವ ಬಂದು ನಿಂತಿದ್ದುದನ್ನು ಅಜಯಸಿಂಹನು ನೋಡಲಿಲ್ಲ. ಅಜಯಸಿಂಹನು ಕಂಠಸ್ವರವನ್ನು ಕೇಳಿ ಆಶ್ಚರ್ಯದಿಂದ ತಿರುಗಿ ನೋಡಿ ದನು. ಜಟೆಯಿಂದ ಮುಚ್ಚಿದ್ದ ಮುಖವುಳ್ಳ ತಾಪಸಕುಮಾರನಾಗಿದ್ದನು. ಮುಖವು ಜಟಾಜಾಲದಿಂದ ಪೂರ್ತಿಯಾಗಿ ಮುಚ್ಚಿಹೋಗಿ ಕಣ್ಣುಗಳೆರಡು ಮಾತ್ರ ಕಾಣುತ್ತಿ ದ್ದವು. ಈ ಕಣ್ಣುಗಳು ಅಜಯನು ಕಾಣದ ಕಣ್ಣುಗಳೆ ? ಉಜ್ವಲವಾದಾ ಜ್ಯೋತಿ ರ್ಮಯವಾದ ಕಣ್ಣುಗಳು ಮತ್ತಾರಿಗೂ ಇರಕೂಡದೆ ? ಪ್ರೇಮಮಯವಾಗಿಯೂ ಅಮೃತಮಯವಾಗಿಯೂ ಇದ್ದಾ ಕಟಾಕ್ಷವೂ ಅಮರಭವನದಾ ಜ್ಯೋತಿಯು ಮತ್ತಾರ ಕಣ್ಣುಗಳಲ್ಲಿರುವ ಸಂಭವ ? ಸನ್ಯಾಸಿಯು ಪುನಃ “ ಅಜಯ ! ಬೇಗನೆ ಹೋಗು ! ಗಿರಿರಾಣಿಯನುದ್ಧಾರ ಮಾಡು ” ಎಂದನು.

ಪುನಃ ಅದೇ ಸುಧಾಮಯವಾದ ಅದೇ ಮನೋಹರವಾದ ಅದೇ ಹೃದಯೋ ನ್ಮಾದಕರವಾದ ಕಂಠಸ್ವರ ! ಅಜಯಸಿಂಹನು ಪ್ರಚಂಡವಾದ ಆಘಾತದಿಂದ ಎದುರಿ ಗಿದ್ದ ಶತ್ರುಸೈನಿಕರನ್ನು ಕೆಡಹೊಯ್ದು ಕಡಿವಾಣವನ್ನು ಹಿಡಿದು ಹಾರಿ ಕುದುರೆಯ ಮೇಲೆ ಕುಳಿತು ಹುಚ್ಚನ ಹಾಗೆ ಕುದುರೆಯನ್ನು ಚಬುಕಿನಿಂದ ಹೊಡಿದು, “ ನೀನು ನಿಜವಾದ ಅಪರಿಚಿತ ಸನ್ಯಾಸಿಯಾಗಿಯಾದರೂ ಇರು; ಅಥವಾ ಚಿಕ್ಕಂದಿನಿಂದ ನಾನು ಪೂಜಿಸುತ್ತಿದ್ದಾ ದೇವಿಯ ಮೂರ್ತಿಯಾಗಿಯಾದರೂ ಇರು; ಇಂದು ನೀನು ನನ್ನ ಹೃದಯದಲ್ಲಿ ಅಮೃತವನ್ನು ಹೊಯ್ದ ಹಾಗಾಯಿತು ! ಇದೋ ನೋಡು ! ನಿನ್ನ ಅಪ್ಪಣೆಯ ಪ್ರಕಾರ ಸಹಸ್ರಾಧಿಕ ಯವನರನ್ನು ಪದತಲದೊಳಿಟ್ಟೊರಸುವುದು ಅಜಯ ಸಿಂಹನಿಗೆ ಎಷ್ಟುಮಾತ್ರವೂ ದೊಡ್ಡ ಕೆಲಸವಲ್ಲ ” ಎಂದು ಹೇಳಿದನು.

ಪ್ರಚಂಡವಾದಾ ಚಬುಕಿನ ಪೆಟ್ಟಿನಿಂದ ಕುದುರೆಯು ಹಾರಿ ಹಾರಿ ಹೊರಟಿತು! ಅಜಯಸಿಂಹನ ಕತ್ತಿಯು ತೆರಪಿಲ್ಲದೆ ತಿರುಗಲಾರಂಭಿಸಿತು ! ಅಮೃತವನ್ನು ಸವಿದು ಮತ್ತನಾಗಿದ್ದಾ ಯೋಧಪತಿಯ ಹಾದಿಯನ್ನೆದುರಿಸಲಾರಿಗೆ ಸಾಧ್ಯ ! ಅಜಯನು

ಹಾದಿಯನ್ನಡ್ಡಗಿಸಿದ್ದ ಸೈನ್ಯದವರನ್ನು ನಿಮಿಷದಲ್ಲಿ ಹೊಡೆದು ಹಾಕಿ ಒಬ್ಬೊಂಟಿಗನಾಗಿ ಗಿರಿರಾಣಿಯು ಬೆನ್ನಟ್ಟಿದನು. ಅವನ ಕುದುರೆಯು ಬಂಡೆಗಳನ್ನುಲ್ಲಂಘಿಸುತ್ತ ಹಳ್ಳಗಳನ್ನು ಹಾರುತ್ತ ಪವನವೇಗದಿಂದ ಹೊರಟಿತು. ಸ್ವಲ್ಪ ದೂರದಲ್ಲೇ ಓಡಿಹೋಗುತ್ತಿದ್ದವರು ಕಣ್ಣಿಗೆ ಬಿದ್ದರು. ಅಜಯನು ಅವರ ಮುಂಬಳಿ ಹೋಗಿ ಅಡ್ಡ ಹಾಕಿದನು. ಸೈನಿಕರು ಒಬ್ಬೊಂಟಿಗನಾಗಿದ್ದ ಅಜಯನನ್ನು ನೋಡಿ ಅಂಜದೆ ಗಿರಿರಾಣಿಯನ್ನೆತ್ತಿಕೊಂಡಿದ್ದ ವೃದ್ಧನಾಗಿದ್ದ ಸೈನಿಕನು ನಕ್ಕು, "ಎಲೈ ಮೂರ್ಖ! ಯುದ್ಧ ಕೌಶಲ್ಯದಲ್ಲಿ ನಿಪುಣರಾದ ಹತ್ತು ಮಂದಿ ಯೋಧರೆದುರಿಗೆ ತರುಣನೊಬ್ಬನು ನಿಂತು ವ್ಯರ್ಥವಾಗಿ ಪ್ರಾಣಬಿಡಲೇಕೆ ಬಂದೆ? ಎಂದನು. ಅಜಯಸಿಂಹ—ಪ್ರಾಣದಮೇಲೆ ಆಶೆ ಇದ್ದರೆ ಗಿರಿರಾಣಿಯನ್ನು ಬಿಟ್ಟು ಹೋಗು. ಇಲ್ಲದಿದ್ದರೆ ನಿನ್ನಂಥಾವರು ನೂರುಮಂದಿ ಬಂದರೂ ಈ ಪವಿತ್ರವಾದ ಕತ್ತಿಯೆದುರಿಗೆ ನಿಲ್ಲಲಾರರು.

ಹತ್ತು ಮಂದಿ ಯೋಧರು ಏಕಕಾಲದಲ್ಲಿ ಅಜಯನ ಮೇಲೆ ಕತ್ತಿಗಳನ್ನು ಬೀಸಿದರು. ಆದರೆ ಅವುಗಳಲ್ಲಾವುದೂ ಅವನ ಮೈಗೆ ಸೋಕಲಿಲ್ಲ. ಅವನ ಉದ್ದವಾಗಿದ್ದ ಕತ್ತಿಯ ಝಣಝಣ ಶಬ್ದದಿಂದ ತಿರುಗುವ ವೇಗದಲ್ಲಿ ಅವೆಲ್ಲವೂ ಪ್ರತಿಹತವಾಗಿ ಅದರೊಂದಿಗೆ ಇಬ್ಬರ ಕತ್ತಿಗಳು ದೂರ ಹೋಗಿ ಬಿದ್ದವು. ಮತ್ತೊಬ್ಬನ ಬಾಹುವು ಕತ್ತಿಯಸಮೇತ ನೆಲಕ್ಕೆ ಬಿದ್ದಿತು. ದೀರ್ಘ ಸ್ಮಶ್ರುವಿನಿಂದ ಮುಚ್ಚಿದ್ದ ಕಡಿದ ಮುಂಡವು ದೂರ ಬಿದ್ದು ಉರುಳಿತು. ಆದರೆ ಆ ಸಮಯದಲ್ಲಿ ಮತ್ತೊಂದು ದಳದ ಶತ್ರುಸೈನ್ಯವು ಬಂದು ಸೇರಿ ಅವನನ್ನು ಆಕ್ರಮಣ ಮಾಡಿತು. ಒಬ್ಬನ ಕತ್ತಿಯ ಪೆಟ್ಟಿನಿಂದ ಅಜಯನ ಕುದುರೆಯು ಬಿದ್ದು ಹೋಯಿತು. ಅಜಯನು ಕುದುರೆಯಿಂದ ಧುಮುಕಿ ನೆಲದ ಮೇಲೆ ನಿಂತು ಕತ್ತಿಯನ್ನು ಚಾಲನ ಮಾಡಿದನು. ಭಿನ್ನ ಮುಂಡಗಳ ಮೇಲೆ ಭಿನ್ನ ಮುಂಡಗಳು ಕತ್ತರಿಸಿ ಬಿದ್ದವು. ಶವದ ಮೇಲೆ ಶವವು ಬಿದ್ದವು. ರಕ್ತನದಿಯು ಪ್ರಬಲ ಪ್ರವಾಹದಿಂದ ಹರಿಯಿತು. ಆದರೂ ಯುದ್ಧಕ್ಕೆ ತೆರಪಿಲ್ಲ. ಅಜಯನ ಕತ್ತಿಯು ಏಕಕಾಲದಲ್ಲಿ ನೂರಾರು ಕೋಲು ಮಿಂಚುಗಳ ಹಾಗೆ ಪೊಳಚುತ್ತ ಪ್ರಚಂಡ ವೇಗದಿಂದ ಶತ್ರುಹೃದಯವನ್ನು ಶೀಳಲಾರಂಭಿಸಿತು ಜಯ! ರಾಜಪೂತ ವೀರನಿಗೆ ಜಯ! ಇಂದು ಯವನ ರಕ್ತದಲ್ಲಿ ತೃಷೆಯುಳ್ಳ ಮಿವಾರದ ರಾಜಕುಮಾರನ ಕತ್ತಿಯು ದಾಹವು ಇಂಗುವ ಹಾಗೆ ಶತ್ರುರಕ್ತವನ್ನು ಪಾನ ಮಾಡುತ್ತಿದೆ. ನಾಲ್ಕು ದಿಕ್ಕುಗಳಲ್ಲಿಯೂ ಹಿಂದೂ, ಮುಂದೂ, ಪಕ್ಕ, ಎಲ್ಲಾಕಡೆಯಲ್ಲಿಯೂ ಯವನ ಸೇನೆ! ಮೈಯಲ್ಲಿ ಯವನರ ರಕ್ತಧಾರೆ! ಪದತಲದಲ್ಲಿ ಯವನರ ದೇಹ, ಯವನರ ಮುಂಡ! ಬಹು ಸಂಖೆಯುಳ್ಳ ಯವನ ಸೈನ್ಯವನ್ನು ಅಜಯಸಿಂಹನು

ಅಸೀಮ ಉತ್ಸಾಹದಿಂದ ಅತುಳ ಸ್ಫೂರ್ತಿಯಿಂದ ಈಡಕಟ್ಟಿಲ್ಲದೆ ಕಡಹೊಡಿಯುತ್ತಿದ್ದನು. ಆದರೆ ಎಷ್ಟು ಹೊತ್ತು ಈಡಾಗಬಲ್ಲ. ಅವನು ಇಂದು ಮರಣವು ಸಿದ್ಧವೆಂದು ವೆಂದು ಖಂಡಿತ ಮಾಡಿಕೊಂಡು ದಾನವ ರಕ್ತದ ತೃಷೆಯುಳ್ಳ ಕತ್ತಿಗೆ ಪರಿತೃಪ್ತಿಯಾಗಲೆಂದು ಹೆಣಗಾಡಿದನು! ಕ್ರಮವಾಗಿ ಬಾಹುಗಳಲ್ಲಿ ಬಲವು ಕುಂದುತ ಬಂತು. ಘಾಯಗಳಿಂದ ರಕ್ತವು ಸುರಿದು ದೇಹವು ಅವಸನ್ನವಾಗುತ್ತ ಬಂತು. ಕತ್ತಿಯು ಕಂಪಿತವಾಯಿತು. ಎಚ್ಚರಿಕೆಯು ಹೋಗುತ ಬಂತು! ಆಗ ಶತ್ರುಸೈನ್ಯದಲ್ಲಿ "ಯುದ್ಧವನ್ನು ನಿಲ್ಲಿಸಿರಿ. ರಾಜಪೂತನನ್ನು ಬದುಕಿರುವ ಹಾಗೆ ಬಂದಿಯಾಗಿ ಹಿಡಿದಿರಿ!" ಎಂದು ಕೂಗಿ ಹೇಳಿದುದನ್ನು ಕೇಳಿದನು.

ದೂರದಿಂದ ಮತ್ತೊಬ್ಬನು ಮೇಘಗರ್ಜನೆಯಹಾಗಿದ್ದ ಕಂಠದಿಂದ, "ಭಾರತೇಶ್ವರ ಅಕಬರನಿಗೆ ಪುತ್ರಾಧಿಕ ಪ್ರಿಯತರನಾದ ಅಜಯಸಿಂಹನ ದೇಹವನ್ನು ಮುಟ್ಟಲು ಯಾರಿಗೆ ಧೈರ್ಯ!" ಎಂದು ಹೇಳಿ ಮುಗಿಸುವುದರೊಳಗೆ ಮತ್ತೊಂದು ಧ್ವನಿಯು ಅವನ ಕಿವಿಗೆ ಬಿದ್ದಿತು. ಅದರಿಂದ ಅಜಯಸಿಂಹನ ಕ್ಷತವಾಗಿದ್ದ ಹೃದಯದಲ್ಲಿ ಅಮೃತಧಾರೆಯು ಸುರಿದ ಹಾಗಾಗಿ ಅವಸನ್ನವಾಗಿದ್ದ ದೇಹದಲ್ಲಿ ಪ್ರಾಣಸಂಚಾರವಾದ ಹಾಗಾಯಿತು. ಅಮೃತಮಯವಾದ ಸ್ವರದಿಂದ, "ಜಯ! ಮಹಾರಾಣಾ ಪ್ರತಾಪಸಿಂಹನ ವೀರ ಪುತ್ರ ಅಜಯಸಿಂಹನಿಗೆ ಜಯ!" ಎಂದು ಕೂಗಿ ಹೇಳಿದ ಗಂಭೀರವಾದ ಕೊರಳು ಅವನ ಕಿವಿಗೆ ಬಿದ್ದಿತು. ಈ ಎರಡು ಧ್ವನಿಗಳು ಗಗನವನ್ನು ಮುಟ್ಟಿ ರಂಗಸ್ಥಳವೆಲ್ಲಾ ಶಿಲೆಗೊಂಡವು. ಅಜಯಸಿಂಹನು ಕಣ್ದೆರೆದು ನೋಡುತ್ತಿದ್ದಹಾಗೆ ಸಮ್ರಾಜ ಅಕ್ಬರಷಹನೂ ಅಂದಿನಾ ತಾಪಸಕುಮಾರನೂ ಬಂದು ಎದುರಿಗೆ ನಿಂತಿದ್ದರು! ತಾಪಸಕುಮಾರನ ಮೈಯೆಲ್ಲಾ ರಕ್ತಮಯವಾಗಿ ಅವನ ಕೈಯಲ್ಲಿದ್ದ ಕತ್ತಿಯು ಕಣ್ಣೀರ ಧಾರೆಯಿಂದ ಕೆಂದುಹೋಗಿತ್ತು. ಸಮ್ರಾಜನು, ವತ್ಸ, ಅಜಯಸಿಂಹ! ನಾನು ವೀರನೊಲ್ವ ಸ್ನೇಹಿತನಾದ ಅಕ್ಬರನು ನಿನ್ನ ಪಾರ್ಶ್ವ ನಿಂತಿರುವೆನು. ಬಹಳ ಹುಡುಕಿದ ಬಳಿಕ ನೀನಿಲ್ಲಿರುವುದು ಗೊತ್ತಾಗಿ ನಿನ್ನನ್ನು ನೋಡಲು ದೂರವಾದ ಪಂಜಾಬು ದೇಶದಿಂದ ಬಂದಿರುವೆನು." ಎಂದನು.

ಸನ್ಯಾಸಿಯು, "ನಾನಾದರೋ, ನಿಷ್ಕಾಮಧರ್ಮಚಾರಿಯಾದ ತಪಸ್ವಿಯು. ವೀರ ಅಜಯನ ಮಂಗಳಾಕಾಂಕ್ಷಿಯಾಗಿ ಅವನಿಗೆ ಸಲವಾಗಿ ಪ್ರಾಣವನ್ನು ಮಾಸಲಾಗಿ ಸಮರ್ಪಿಸಲು ಸಿದ್ಧವಾಗಿದ್ದೇನೆ. ಕೇಳು, ಅಜಯ! ನಾನು ಇಂದು ವಹಿಸಿಕೊಂಡ ಯುದ್ಧದಲ್ಲಿ ಈ ವೀರನ ಸಹಾಯದಿಂದ ಜಯವನ್ನು ಹೊಂದಿದೆನು. ಎಂದು ಹೇಳಿದನು.

ಪುನಃ ಅದೇ ಮೋಹಮಯವಾದ ಮನೋಮೋಹನ ಕಂಠಸ್ವರ! ಅಜಯನು ತಾಪಸಕುಮಾರನ ಮುಖವನ್ನು ದೃಷ್ಟಿಸಿ ನೋಡಿದನು. ಜಟಾ ಕಲಾಪದೊಳಗೆ ಅದೇ ಜ್ಯೋತಿರ್ಮಯವಾದ, ಅಮೃತಪೂರ್ಣವಾದ, ವಿಶಾಲವಾದ ಉಜ್ವಲವಾದ ಕಣ್ಣುಗಳು! ಅಜಯನು ಚೇತನ ಹೋದವನ ಹಾಗಾಗಿ ಸನ್ಯಾಸಿಯ ಚರಣತಲದಲ್ಲಿ ಬಿದ್ದುಬಿಟ್ಟನು.

## ಎಂಟನೆಯ ಪರಿಚ್ಛೇದ.

ಅಕಬರಷಹನು ಯುದ್ಧರಂಗದಲ್ಲಿ ನಾಲ್ಕೂಕಡೆಯೂ ನೋಡಿ ಹಿಂದೆ ನಿಂತಿದ್ದ ಸೈನಿಕನೊಬ್ಬನನ್ನು ಸಂಬೋಧಿಸಿ, “ಹಾ, ಮೂರ್ಖ ಸಲಿಮ! ನೀನು ವೇಷವನ್ನು ಬೇರ್ಮಾಡಿಕೊಂಡರೆ ನಿನ್ನನ್ನು ಗುರ್ತಿಸಲಾರೆನೆಂದು ತಿಳಿದಿರುವಿಯಾ? ಎಂದನು

ಯುವರಾಜ ಸಲಿಮನು ಉತ್ತರವನ್ನು ಕೊಡದೆ ತಲೆ ಬಗ್ಗಿಕೊಂಡು ಸುಮ್ಮನೆ ನಿಂತಿದ್ದನು. ಅಕಬರಷಹನು ಹೇಳತೊಡಗಿದನು:—“ಇಂದಿನ ಯುದ್ಧದ ಪರಿಣಾಮವು ಭಾರತವರ್ಷದ ಭವಿಷ್ಯ ಸಮ್ರಾಟನ ಯೋಗ್ಯತೆಗೆ ಈಡು ಜೋಡಾಗಿವೆ! ರಣಭೂಮಿಯನ್ನೊಂದು ಕಣ್ಣು ಬಿಟ್ಟು ನೋಡು. ಒಬ್ಬ ಹಿಂದೂ ವೀರನೊಂದು ಕತ್ತಿಯಿಂದ ಇಪ್ಪತ್ತೈದು ಯವನ ಸೈನ್ಯಗಳ ಕಡಿದ ತಲೆಗಳು ರಂಗಭೂಮಿಯಲ್ಲಿ ಉರುಳಾಡುತ್ತಿವೆ! ಒಂದು ವೇಳೆ ನಾನು ಇಲ್ಲಿಗೆ ಬಾರದಿದ್ದರೆ, ನಿನ್ನ ಶಿರವೂ ಉಳಿದಿರುವ ಕಳ್ಳರಾದ ನಿನ್ನ ಸಂಗಾತಿಗಳ ಶಿರಗಳೂ ಈ ತರ ಕಳಚಿ ಬಿದ್ದು ನೆಲದಲ್ಲಿ ಉರುಳಾಡುತ್ತಿದ್ದವೆಂದು ತೋರುತ್ತದೆ. ಇಂದಿನಿಂದ ಎದೆಗುಂದದೀ ರಾಜಪೂತ ಬಾಲಕನನ್ನು ನರನಿಗೆ ಆದರ್ಶ ಸ್ವರೂಪನೆಂದು ತಿಳಿದು ಪೂಜಿಸುತ್ತಿರುವೆನು. ಅದರಲ್ಲಿ, ಈಗ ನಿನ್ನನ್ನು ಕೇಳುತ್ತೇನೆ, ಹೇಳು; ಯಾವ ನಿನ್ನ ಅಭೀಷ್ಟವನ್ನು ಸಾಧಿಸುವುದಕ್ಕೆ ಸಲುವಾಗಿ ಕಳ್ಳರ ಯಜಮಾನನ ಹಾಗೆ ಈ ಕಳ್ಳರ ಜತೆಯಲಿ ಸೇರಿ ಹುಡುಗಿಯಾಗಿದ್ದ ರಾಣಿಯ ಅಂತಃಪುರವನ್ನು ಹೊಕ್ಕು ಅವಳನ್ನು ಕಳ್ಳನ ಹಾಗೆ ಅಪಹರಿಸದೆ?” ಎಂದನು. ಸಲಿಮ—ನಾನು ಗಿರಿರಾಣಿಯನ್ನ ಪಹರಿಸಿಕೊಂಡೊಯ್ಯಲು ಇಲ್ಲಿಗೆ ಬಂದವನಲ್ಲ. ತಾವು ಯಾವನನ್ನು ವೀರನೆಂದು ಪುರಸ್ಕರಿಸಿರುವಿರೋ ನಾನು ಆ ರಾಜಪೂತ ಯುವಕನನ್ನು ಕಳ್ಳನೆಂದು ತಿರಸ್ಕರಿಸಿ ಅವನಿಗೆ ತಕ್ಕ ದಂಡ ವಿಧಾನವನ್ನು ಮಾಡುವುದಕ್ಕೆ ಸಲುವಾಗಿ ಬಂದವನು. ಯಾವದಿನ ಆ ಕಾಫರನು ಕಳ್ಳನ ಹಾಗೆ ಮೊಗಲ ಸಮ್ರಾಜನ ಅಂತಃಪುರವನ್ನು ಪ್ರವೇಶಮಾಡಿದನೋ, ಆ ದಿನವೇ, ನಾರಿಯ ಹೃದಯವುಳ್ಳ ದಿಲ್ಲೀಶ್ವರನು ಅಡ್ಡಿಯಾಗಿ ಬಾರದಿದ್ದರೆ,

ಅವನಿಗೆ ತಕ್ಕ ಶಿಕ್ಷೆಯನ್ನು ಮಾಡುತ್ತಿದ್ದೆನು. ಅನಂತರ ಚೌರ್ಯವೃತ್ತಿಯುಳ್ಳ ರಾಜಪುತ್ರನು ತಮ್ಮಲ್ಲಿ ಬ್ರಹ್ಮಚರ್ಯದ ವೇಷವನ್ನು ತಾಳಿ ದಿಲ್ಲಿಯ ರಾಜನ ಅಂತಃಪುರದಿಂದ ಹಿರಣ್ಮಯಿಯನ್ನಪಹರಿಸಿಕೊಂಡು ಈ ದೇಶಕ್ಕೆ ಓಡಿ ಬಂದಿದ್ದಾನೆ.

ತಾಪಸಕುಮಾರನು ಅದುವರೆಗೂ ಮೂರ್ಛೆಗೊಂಡಿದ್ದ ಅಜಯಸಿಂಹನಿಗೆ ಉಪಚರಿಸಿಕೊಂಡಿದ್ದವನು “ಸುಳ್ಳು ಮಾತು! ವೀರನಾದ ಅಜಯಸಿಂಹನ ಮೇಲೆ ದೋಷಾರೋಪಣೆ ಮಾಡುವವನು ಹುಸಿಗನು! ಯವನನು ಮುಟ್ಟಿದುದರಿಂದ ಕಳಂಕಿಯಾದ ನಿರ್ಭಾಗ್ಯೆ ಹಿರಣ್ಮಯಿಯ ನೆವನವನ್ನು ಮನದಿಂದರಿಸುವ ಸಲುವಾಗಿ ಅಜಯಸಿಂಹನು ಗಿರಿಗುಹೆಗಳಲ್ಲಿಯೂ ನಿರ್ಜನ ಕಾನನಗಳಲ್ಲೂ ವಾಸಮಾಡುತ್ತಿದ್ದನೆಂದು ನಾನು ಚೆನ್ನಾಗಿ ಬಲ್ಲೆನು” ಎಂದು ಹೇಳಿದನು.

ಸಲಿಮನು ಸನ್ಯಾಸಿಯನ್ನು ನೋಡಿ ಅವನ ಬಳಿಗೆ ಮುಂದುವರಿದು ಬರುತ್ತಿದ್ದಾಗ ಸಮ್ರಾಜನು, “ಅಹುದು, ಅದು ಸುಳ್ಳೆಂದು ನಾನೂ ಬಲ್ಲೆನು! ಈಗ ಗಿರಿರಾಣಿಯು ಎಲ್ಲಿ? ಬೇಗನೆ ಹೇಳು.” ಎಂದನು.

ಸಲಿಮ:—ಗಿರಿರಾಣಿಯನ್ನಪಹರಿಸಿಕೊಂಡೊಯ್ಯಲು ಬಂದು ದುರ್ಗವನ್ನು ಆಕ್ರಮಣ ಮಾಡಿದವನು ಅವಳನ್ನೆತ್ತಿಕೊಂಡು ಈಗಲೇ ಓಡಿಹೋದನು.

ತಾಪಸಕುಮಾರ:—(ಕೈಮುಗಿದುಕೊಂಡು)—ದಿಲ್ಲೀಶ್ವರ! ಯಾರನ್ನುದ್ಧಾರ ಮಾಡುವುದಕ್ಕೆ ಸಲುವಾಗಿ ಇಷ್ಟೊಂದು ರಕ್ತಪ್ರವಾಹವುಂಟಾಯಿತೋ, ಅಜಯಸಿಂಹನು ಯಾರಿಗೆ ಸಲುವಾಗಿ ತನ್ನ ರಕ್ತವನ್ನು ಸುರಿಸಿ ಅಚೇತನನಾಗಿ ಬಿದ್ದಿದ್ದಾನೋ, ತಾವು ದಯವಿಟ್ಟು ಅವಳನ್ನು ರಕ್ಷಿಸೋಣವಾಗಲಿ.

ಈ ಸಮಯದಲ್ಲಿ ದುರ್ಗದಲ್ಲಿ ಉಳಿದಿದ್ದ ಸೈನ್ಯದವರು ಅಲ್ಲಿಗೆ ಬಂದರು. ಆಕಬರಷಹನು ಅವರನ್ನು ಕುರಿತು “ನೀವು ಇಲ್ಲಿದ್ದುಕೊಂಡು ಅಜಯಸಿಂಹನಿಗೆ ಮೂರ್ಛೆ ತಿಳಿಯುವ ಹಾಗೆ ಶುಶ್ರೂಷೆಯನ್ನು ಮಾಡಿರಿ. ನಾನು ಹೋಗಿ ನಿಮ್ಮ ಗಿರಿರಾಣಿಯನ್ನು ಹುಡುಕುವೆನು. ಸಲಿಮ! ನೀನೂ ನಿನ್ನ ಕಳ್ಳರ ಗುಂಪನ್ನು ಸಂಗಡ ಕರೆದುಕೊಂಡು ನನ್ನ ಹಿಂದೆ ಬರಬೇಕು.” ಎಂದು ಹೇಳಿ ಬೇಗನೆ ಅಲ್ಲಿಂದ ಹೊರಟನು. ಸಲಿಮನು ತನ್ನನುಚರರನ್ನು ಕರೆದುಕೊಂಡು ಸಮ್ರಾಜನ ಹಿಂದೆ ಹೋದನು. ತಾಪಸಕುಮಾರನು ದುರ್ಗದ ಸೈನಿಕರನ್ನು ಕುರಿತು, “ನೀವು ಬೇಗನೆ ಹೋಗಿ ದುರ್ಗದಿಂದೊಂದು ಪಲ್ಲಕ್ಕಿಯನ್ನು ತೆಗೆದುಕೊಂಡು ಬನ್ನಿರಿ, ನಾನಿಲ್ಲಿದ್ದು ಶುಶ್ರೂಷೆಯನ್ನು ಮಾಡುವೆನು” ಎಂದನು.

ತಾಪಸಕುಮಾರನು ಅಜಯನ ಅಚೇತನವಾಗಿದ್ದ ದೇಹವನ್ನೆತ್ತಿ ತೊಡೆಯಮೇಲೆ
ಮಲಗಿಸಿಕೊಂಡು ಉಪಚರಿಸುತ್ತಿದ್ದನು. ಅವನ ಕಣ್ಣುಗಳಿಂದ ಅಜಸ್ರವಾಗಿ ಅಶ್ರುಜ
ಲಧಾರೆಯು ಸುರಿದು ಅಜಯಸಿಂಹನ ಕ್ಷತವಾಗಿದ್ದ ದೇಹವನ್ನು ತೋಯಿಸಿತು!
ಆ ಅಮೃತಧಾರೆಯಿಂದಲೊ ಎಂಬ ಹಾಗೆ ಕ್ರಮೇಣ ಅಜಯಸಿಂಹನ ಅಚೇತನವಾಗಿದ್ದ
ದೇಹದಲ್ಲಿ ಪ್ರಾಣ ಸಂಚಾರವಾಗುತ್ತ ಬಂದಿತು.

ಪ್ರಭಾತದಲ್ಲಿ ತಾಪಸಕುಮಾರನು ನದಿಯಲ್ಲಿ ಸ್ನಾನಮಾಡಿ ಮೈ ರಕ್ತವನ್ನು
ತೊಳೆದುಕೊಂಡು ಕೃತ್ರಿಮವಾಗಿದ್ದ ಜಟೆಯನ್ನೂ ಕಾವಿ ಬಟ್ಟೆಯನ್ನೂ ನದಿಯ ನೀರಿ
ನಲ್ಲಿ ತೇಲಿಬಿಟ್ಟನು. ನೆಲವನ್ನು ತಾಕುತ್ತಿದ್ದ ತಲೆಯ ಕೂದಲನ್ನು ಹೆರಳುಹಾಕಿ
ವೇಣಿಯನ್ನು ತಲೆಗೆ ಸುತ್ತಿಕೊಂಡು ಅದರ ಮೇಲೊಂದು ರುಮಾಲನ್ನು ಕಟ್ಟಿ
ಕೊಂಡನು. ಕುತ್ತಿಗೆಯಿಂದ ಕಾಲವರೆಗೂ ನಿಲುವಂಗಿಯೊಂದನ್ನು ತೊಟ್ಟು ಪಾಯಿ
ಜಾಮನ್ನು ಹಾಕಿಕೊಂಡನು. ಭುಜದ ಮೇಲೊಂದು ಕೆಂಪುಬಣ್ಣದ ಉತ್ತರೀಯವನ್ನು
ಹಾಕಿಕೊಂಡನು. ಈತೆರ ವೇಷವನ್ನು ಬೇರ್ಮಾಡಿಕೊಂಡು ನೀಲಜಲದಲ್ಲಿ ತನ್ನ ಮುಖ
ವನ್ನು ನೋಡಿಕೊಂಡು ಬಳಿಕ ನದಿಯ ಮೃತ್ತಿಕೆಯನ್ನು ತೆಗೆದು ಕಣ್ಣಿಗೆ ಸುತ್ತಲೂ
ಹಚ್ಚಿ ನೀರಿನಲ್ಲಿ ಅಂಗಾರವನ್ನು ತೇಯ್ದು ಆ ಕಪ್ಪಿನಿಂದ ತುಟಿಗಳನ್ನು ರಂಜನೆ ಮಾಡಿ
ಕೊಂಡನು. ಹಾ! ಕಲ್ಪಿತವೇಷಧಾರಿ ತಾಪಸಕುಮಾರ! ಅಮೃತಪೂರ್ಣವಾದ ಓಷ್ಠಾ
ಧರವೂ ಭುವನವಿಜಯಿಯಾದಾನಯನಗಳೂ ಮೃತ್ತಿಕೆಯ ಲೇಪದಿಂದಲೂ ಅಂಗಾರದ
ರಂಜನೆಯಿಂದಲೂ ಸೌಂದರ್ಯದ ಲೇಶವನ್ನಾದರೂ ಕಳಕೊಳ್ಳ ಬಲ್ಲವೇ? ಹಿರಣ್ಮಯಿ
ಯು ಪುನಃ ನದಿಯ ಸ್ವಚ್ಛವಾದ ಜಲದಲ್ಲಿ ತನ್ನ ಪ್ರತಿಬಿಂಬವನ್ನು ನೋಡಿಕೊಂಡು
" ಈಗ ಒಂದು ಪ್ರಕಾರ ಆದ ಹಾಗಿದೆ. ಅಂಧಕಾರದಲ್ಲಿ ಯಾರೂ ಗುರ್ತಿಸಲಾರರು.
ಆದರೆ ಕಂಠಸ್ವರವನ್ನು ಅವನಲ್ಲಿ ಮಾರ್ಮಾಡಕೊಳ್ಳಲಾಗದೆ? ದೇವರೆ! ಅಜಯನು ಗಿರಿ
ರಾಣಿಯನ್ನು ಮದುವೆಮಾಡಿಕೊಂಡು ಗಿರಿರಾಣಿಯ ಪ್ರೇಮದಲ್ಲಿ ನಿರ್ಭಾಗ್ಯೆ ಹಿರಣ್ಮ
ಯಿಯ ಅಂಧಕಾರಮಯವಾದ ಸ್ಮರಣೆಯನ್ನು ಅವನ ಹೃದಯದಿಂದ ಅಳಿಸಿ ಹೋಗುವ
ದಿನ ಬರುವುದೇ? ಇದೇನು! ಅವನ ಹೆಸರನ್ನುಚ್ಚಾರಣ ಮಾಡಿದ ಮಾತ್ರಕ್ಕೆ ಈ
ದಿನ ಮನಸ್ಸು ಕಳವಳಗೊಳ್ಳುವದೇಕೆ? ಅಂಬರ ಕುಮಾರಿಯ ಸಹಾಯದಿಂದ ಮುಸಲ
ಮಾನ ದುರ್ಗದಿಂದ ಹೊರಟವಳು ಪ್ರಾಣಕಾಂತ ಅಜಯನನ್ನು ಗಿರಿಗಳಲ್ಲಿಯೂ ಕಾನನ
ಗಳಲ್ಲಿಯೂ ದೂರದಿಂದ ನೋಡುತ್ತಾ ಕಣ್ಣುಗಳಿಗೆ ತೃಪ್ತಿಯುಂಟುಮಾಡಿಕೊಳ್ಳುತ್ತಿ
ದ್ದೆನು. ಅದು ಮೊದಲ್ಗೊಂಡು ಇಂದಿನವರೆಗೂ ಮನಸ್ಸಿಗೆ ಇಷ್ಟೊಂದು ಚಂಚಲ
ವುಂಟಾಗಿರಲಿಲ್ಲ. ದೇವ ಭವಾನಿಪತಿಯೆ! ಪ್ರಾಣಕ್ಕೆ ಪ್ರಾಣನಾದವನನ್ನು ಪ್ರಾಣ

ದಿಂದ ಕಿತ್ತು ಗಿರಿರಾಣಿಗೊಪ್ಪಿಸುವ ಸಮಯದಲ್ಲಿ ಈ ಹೃದಯವು ಕಾತರಗೊಳ್ಳದಿರುವ ಹಾಗೆ ಮಾಡು. ನನ್ನ ಅಜಯ, ನನ್ನ ಶೈಶವದ ಸಖನಾಗಿಯೂ ಕೈಶೋರದ ಸಹಚರನಾಗಿಯೂ ಯೌವನದ ಏಕಮಾತ್ರ ಸಂಗಾತಿಯಾಗಿಯೂ ನನ್ನ ಪ್ರಾಣಕ್ಕೆ ವಲ್ಲಭನಾಗಿಯೂ ಹೃದಯದ ದೇವತೆಯಾಗಿಯೂ ನನ್ನ ಅಂಧಕಾರಮಯವಾದ ಜೀವನಕ್ಕೆ ಪೂರ್ಣ ಚಂದ್ರನಾಗಿಯೂ ಅಕೂಲಸಾಗರಕ್ಕೆ ತರಣಿಯಾಗಿಯೂ ನನ್ನ ಪರಲೋಕಕ್ಕೆ ಇಷ್ಟಗುರುವಾಗಿಯೂ ಇಹದಲ್ಲಿ ನನಗೆ ಆರಾಧ್ಯದೇವತೆಯಾಗಿಯೂ ಬ್ರಹ್ಮಚರ್ಯಕ್ಕೆ ಜಪಮಂತ್ರಸ್ವರೂಪನಾಗಿಯೂ ಇರುವ ಅಜಯನನ್ನು ಅಕಾತರೆಯಾಗಿ ಅತುಲ ಆನಂದದಿಂದ ರೂಪಶಾಲಿಯಾಗಿಯೂ ಗುಣವಂತೆಯಾಗಿಯೂ ಇರುವ ಗಿರಿರಾಣಿಗೆ ಮದುವೆ ಮಾಡಿಸುವುದಕ್ಕೆ ಸಾಹಸವನ್ನು ಕೊಡು! ಎಂದೆಂದುಕೊಂಡಳು.

ಹಿರಣ್ಮಯಿಯು ಬಹಳ ಹೊತ್ತು ಕೈಮುಗಿದುಕೊಂಡು ಕಣ್ಣುಗಳನ್ನು ಮುಚ್ಚಿ ತಲೆಯನ್ನೆತ್ತಿಕೊಂಡು ನೋಡುತ್ತಿದ್ದಳು. ಬಳಿಕ ಕೋಮಲವಾದ ಕೈಗಳನ್ನು ಎದೆಯ ಮೇಲಿಟ್ಟುಕೊಂಡು ಕುಳಿತಿದ್ದಳು. ಅನಂತವನ್ನುದ್ದೇಶಿಸಿಕೊಂಡು ಹೋಗುತ್ತಿದ್ದ ನದಿಯ ಪ್ರವಾಹದ ತೆರೆಗಳಲ್ಲಿ ಹಿರಣ್ಮಯಿಯ ಕಣ್ಣೀರು ಸೇರಿ ಹರಿದುಹೋಗುತ್ತಿತ್ತು.

## ಒಂಭತ್ತನೆಯ ಪರಿಚ್ಛೇದ.

ಸಮರಾತ್ರಿಯ ಸಮಯ. ಗಿರಿದುರ್ಗದಲ್ಲಿ ಏಕಾಂತವಾದದ್ದೊಂದು ಕೊಠಡಿಯಲ್ಲಿ ಅಜಯಸಿಂಹನು ಮಲಗಿ ನಿದ್ದೆಹೋಗುತ್ತಿದ್ದಾನೆ. ಅವನ ಕಾಲಿನಬಳಿ ರಾಜಪೂತ ಸೈನಿಕನೊಬ್ಬನು ಬಂದು ಮೌನವಾಗಿ ಕುಳಿತ್ತಿದ್ದಾನೆ. ಅಜಯಸಿಂಹನು ಯವನರ ಯುದ್ಧದಲ್ಲಿ ಘಾಯಪಟ್ಟು ಮಲಗಿ ಮೂರು ದಿನಗಳಾದವು. ಇಂದು ಬಹಳ ಮಟ್ಟಿಗೆ ಆರೋಗ್ಯವಾಗಿ ನಿದ್ರೆಯು ಹತ್ತಿದೆ. ಅವನ ಆಲಸ್ಯದಲ್ಲಿ ರಾಜಪೂತ ಸೈನಿಕನು ಪ್ರತಿದಿನವೂ ರಾತ್ರಿಯಲ್ಲಿ ಜಾಗರಣೆಮಾಡಿ ಅಜಯಸಿಂಹನಿಗೆ ಶುಶ್ರೂಷೆಯನ್ನು ಮಾಡುತ್ತಿದ್ದಾನೆ. ಹಗಲು ದುರ್ಗದ ಬೇರೆ ಭೃತ್ಯರು ಶುಶ್ರೂಷೆಮಾಡುವರು. ರಾತ್ರಿ ಕಾಲದಲ್ಲಿ ಭೃತ್ಯರನ್ನೊಪ್ಪಿಸಿಕೊಂಡು ರಾಜಪೂತ ಸೈನಿಕನೊಬ್ಬನೇ ಎಚ್ಚರವಾಗಿ ಕುಳಿತು ಕಾದಿರುವ ಭಾರವನ್ನು ವಹಿಸಿದ್ದನು. ಅವನಿಗೆ ನಿದ್ರೆ ಇಲ್ಲ—ಆಲಸ್ಯವಿಲ್ಲ! ಪ್ರದೋಷ ಕಾಲದಿಂದ ಪ್ರಭಾತದ ವರೆಗೂ ರಾಜಪೂತ ಸೈನಿಕನು ಬೇರೆ ಯೋಚನೆಯಿಲ್ಲದೆ ಮತ್ತಾವ ಆಶೆಯೂ ಇಲ್ಲದೆ ರುಗ್ಣಶಯ್ಯೆಯಲ್ಲಿ ಮಲಗಿದ್ದ ಅಜಯಸಿಂಹನ ಕಾಲಿನ

ದೆಶೆಯಲ್ಲಿ ಕುಳಿತು ಅವನ ಮುಖವನ್ನು ನೋಡುತ್ತಿರುವನು ! ರಾಜಪೂತ ಸೈನಿಕನಾರೆಂಬುದನ್ನು ಪಾಠಕರಿಗೆ ಹೇಳಬೇಕಾದುದಿಲ್ಲ.

ಹೊತ್ತು ಹುಟ್ಟುವುದಕ್ಕೆ ಹೆಚ್ಚು ಹೊತ್ತಿದ್ದ ಸಮಯದಲ್ಲಿ ಅಜಯಸಿಂಹನು ಕಣ್ದೆರೆದು ನೋಡಿದನು. ಪ್ರಪಂಚವೆಲ್ಲಾ ನಿದ್ರೆಯಲ್ಲಿದ್ದು ನಿಶ್ಶಬ್ದವಾಗಿ ಮೌನವಾಗಿದ್ದಿತ್ತು. ಕೊಠಡಿಯಲ್ಲಿ ಸಣ್ಣದೊಂದು ದೀಪವು ಸಣ್ಣನಾಗಿ ಮಿಣುಕುತ್ತಿತ್ತು. ಅಜಯಸಿಂಹನು ಮಬ್ಬುಮಬ್ಬಾಗಿ ಮಸುಗುತ್ತಿದ್ದ ಸಣ್ಣ ಬೆಳಕಿನಲ್ಲಿ ನೋಡಿ ತಲೆಯೆತ್ತಿ, ಕುತೂಹಲದಿಂದ "ನೀನಾರು ?" ಎಂದು ಕೇಳಿದನು.

"ನಾನು ಆ ರಾಜಪೂತ ಸೈನಿಕನು."

ಅಜಯಸಿಂಹನ ತಲೆಯು ಪುನಃ ತಲೆದಿಂಬಿನ ಮೇಲೆ ಬಿದ್ದಿತು. ಸೈನಿಕನು ತಲೆಯನ್ನೆತ್ತಿ ತೊಡೆಯಮೇಲಿಟ್ಟುಕೊಂಡನು. ಅಜಯಸಿಂಹನು ನಿರಾಶೆಯುಳ್ಳ ನಯನಗಳಿಂದ ಸೈನಿಕನನ್ನು ನೋಡುತ್ತ, "ಆ ದಿನದ ಯುದ್ಧದಲ್ಲಿದ್ದ ತಾಪಸಕುಮಾರನನ್ನು ನೀವಾರೂ ಪುನಃ ನೋಡಲಿಲ್ಲವೆ ?" ಎಂದು ಕೇಳಿದನು.

"ಆ ಸನ್ಯಾಸಿಯು ಯುದ್ಧವು ಪೂರೈಸಿದ ಬಳಿಕ ಎಲ್ಲೋ ಹೊರಟು ಹೋದನು. ಪುನಃ ಅವನನ್ನಾರೂ ನೋಡಲಿಲ್ಲ."

ಅಜಯಸಿಂಹನು ಹೇಳತೊಡಗಿದನು:—"ನಾನು ಕನಸು ಕಂಡೆನು. ನಾನು ಮುಸಲಮಾನ ಕಳ್ಳರಸಂಗಡ ಯುದ್ಧ ಮಾಡುತ್ತಿದ್ದಾಗ ನನ್ನ ಪ್ರಾಣವು ಹೋಗಿ ಪ್ರಾಣವಿಲ್ಲದ ದೇಹವು ನೆಲದಮೇಲೆ ಬಿದ್ದಹಾಗೂ ಆಗ ತಾಪಸಕುಮಾರನು ಆ ದೇಹವನ್ನೆತ್ತಿ ತನ್ನ ತೊಡೆಯ ಮೇಲೆ ಇಟ್ಟುಕೊಂಡು ಮುದ್ದಿಟ್ಟುಕೊಂಡ ಹಾಗೂ, ಅವನ ಅಮೃತಮಯವಾದ ಅಧರದ ಸ್ಪರ್ಶದಿಂದ ಶೀತಲವಾಗಿದ್ದ ನನ್ನ ಜಡ ದೇಹದಲ್ಲಿ ರಕ್ತಪ್ರವಾಹವುಂಟಾಗಿ ಬಳಿಕ ತಾಪಸಕುಮಾರನ ಕಣ್ಣುಗಳಿಂದ ನನ್ನ ಕಪೋಲದಲ್ಲಿ ಅಮೃತಬಿಂದುವು ತೊಟ್ಟಿಕ್ಕಿದ ಹಾಗೂ, ಆ ಅಮೃತ ಧಾರೆಯಿಂದ ನನ್ನ ಮೃತ ದೇಹದಲ್ಲಿ ಪ್ರಾಣ ಸಂಚಾರವಾದಹಾಗೂ ಬಳಿಕ ಸನ್ಯಾಸಿಯು ಹೃದಯೋನ್ಮಾದಕರವಾದ ಕಂಠ ಸ್ವರದಿಂದ ನನ್ನನ್ನು ಸಂಬೋಧಿಸಿ 'ಅಜಯ !' ಎಂದು ಕರೆದಹಾಗೂ, ಸುಧಾಮಯವಾದ ಚೇತನ ಶೂನ್ಯವಾಗಿದ್ದ ನನ್ನ ಜಡ ಹೃದಯವು ನೃತ್ಯ ಮಾಡಿದ ಹಾಗೂ, ಹೊಸದಾದ ಪ್ರಾಣಕಳೆಯಿಂದ ತುಂಬಿ ಹೊಸದಾದ ಸ್ಫೂರ್ತಿಯಿಂದ ನೆಲದಿಂದೆದ್ದು ಅವನನ್ನು ನೋಡಿದಹಾಗೂ, ಸನ್ಯಾಸಿಯ ಜಟೆಯು ತಲೆಯಿಂದ ಬಿದ್ದು ಚಂಚಲವಾಗಿದ್ದ ಮನೋಹರವಾದ ಸೋಮುರ್ಡಿಯು ಬಿಚ್ಚಿಹೋಗಿ ನೆಲವನ್ನು ಮುಟ್ಟಿ ಹಾರಾಡು

ತ್ತಿದ್ದ ಹಾಗೂ, ತಾಪಸಕುಮಾರನು ನನ್ನ ಚಿಕ್ಕಂದಿನ ಸಂಗಾತಿಯಾಗಿಯೂ ನನ್ನ ಪ್ರಾಣ ಸಹಚರಿಯಾಗಿಯೂ ಇದ್ದ ದೇವಸುಂದರಿಯ ಹಾಗೆ ಸೊಗಯಿಪ ರೂಪವತಾಳಿ ನನ್ನೆದುರಿಗೆ ನಿಂತ ಹಾಗೂ ನಾನು ಉನ್ಮತ್ತವಾದ ಹೃದಯದಿಂದಲೂ ವಿಹ್ವಲವಾದ ಪ್ರಾಣದಿಂದಲೂ ಅವಳನ್ನು ವಕ್ಷದಲ್ಲಿ ಧಾರಣಮಾಡಿಕೊಳ್ಳಲು ಬಾಹುಗಳನ್ನು ನಿಡಿದಾಗಿ ನೀಡಿದ ಹಾಗೂ, ಹಿರಣ್ಮಯಿಯು ಭುವನವನ್ನು ಮೋಹಗೊಳಿಸುವ ಕಟಾಕ್ಷದಿಂದ ತನ್ನನ್ನು ಮುಟ್ಟಬೇಡವೆಂದು ಸೈಗೆಮಾಡಿ ದಯಾರ್ದ್ರ ಕಂಠದಿಂದ, 'ಎಲೈ ವೀರ ಅಜಯ! ಇಷ್ಟುದಿನವಾದರೂ ಶುದ್ಧವಿಲ್ಲದೆ ಕಳಂಕವುಳ್ಳ ರಮಣಿಯನ್ನು ಮರೆತು ಹೋಗಲಾರದೆಹೋದೆಯಾ? ನನ್ನ ಅರಿಕೆಯನ್ನು ಲಾಲಿಸು, ನನ್ನನ್ನು ಮರೆತು ಬಿಡು; ಹೃದಯವನ್ನು ಸ್ವಾಧೀನಪಡಿಸಿಕೊಳ್ಳಲೆತ್ನಿಸು; ಗಿರಿರಾಣಿಯನ್ನು ಪ್ರೀತಿಸುವುದಕ್ಕೆ ಯತ್ನಪಡು' ಎಂದು ಹೇಳುತ್ತ ನನ್ನನ್ನು ಘೋರಾಂಧಕಾರದಲ್ಲಿ ಬಿಟ್ಟು ಅಂತರ್ಧಾನವಾಗಿ ಹೋದ ಹಾಗೂ ಕನಸಿನಲ್ಲಿ ನೋಡಿದೆನು."

ಅಜಯಸಿಂಹನ ದುರ್ಬಲವಾಗಿದ್ದ ದೇಹವು ಅದುರಿತು. ರಾಜಪೂತ ಸೈನಿಕನು ಎದ್ದು ಹೋಗಿ ಅಜಯನ ಕಾಲಿನ ದೆಸೆಯಲ್ಲಿ ಕುಳಿತನು. ಅಜಯನ ಕಾಲಿನಮೇಲೆ ಉಷ್ಣಜಲದ ಬಿಂದುವೊಂದು ಬಿದ್ದಿತು. ಅಜಯನು. "ನೀನೇಕೆ ಅಳುವುದು?" ಎಂದು ಕೇಳಿದನು.

ರಾಜಪೂತ ಸೈನಿಕನು ಎರಡು ಕೈಗಳಿಂದಲೂ ಅಜಯನ ಕಾಲನ್ನು ಮುಟ್ಟಿ, "ತಮ್ಮಲ್ಲಿ ನನ್ನದೊಂದು ಬಿನ್ನಹವುಂಟು" ಎಂದನು.

"ಹೇಳು! ನನ್ನಿಂದಾಗುವುದಾದರೆ ಸಾಧ್ಯವಾದಷ್ಟು ಪ್ರಯತ್ನ ಪಟ್ಟು ನಡೆಸುವೆನು"

ಸೈನಿಕ:—ನಾನು ಗಿರಿರಾಣಿಯ ಭೃತ್ಯನು. ಅವಳ ಸುಖವೇ ನನ್ನ ಸುಖ! ಅಭಾಗ್ಯೆಯಾದ ಸರಳಬಾಲೆಯು ತಂದೆ ಇಲ್ಲದೆ ಸಹಾಯವಿಲ್ಲದವಳಾಗಿದ್ದಾಳೆ. ಅವಳಿಗೆ ಪ್ರಿಯನಾಗಿದ್ದ ನಂಬಿಕೆಯಾದ ಗೋಕುಲದಾಸನೂ ಅವಳನ್ನು ಬಿಟ್ಟುಹೋಗಿ ಬಿಟ್ಟನು! ಅವಳನ್ನು ನೋಡಿದರೆ ಕಲ್ಲು ಬಂಡೆಯೂ ಕರಗಿ ಹೋಗುವುದು! ತಾವು ಕೃಪೆಯಿಂದ ಗಿರಿರಾಣಿಯನ್ನು ದೃಷ್ಟಿಸಿ ನೋಡಬಾರದೆ!

ಅಜಯಸಿಂಹ:—ನನ್ನಿಂದಾಗಬೇಕಾದ ಸಹಾಯದಲ್ಲಿ ಸ್ವಲ್ಪವೂ ಕಡಿಮೆ ಮಾಡೆನು.

ಸೈನಿಕ:—ಗಿರಿರಾಣಿಯು ಕೂಡಲೇ ಹಿಂದಿರುಗಿ ಬರುವಳು. ಬಂದೊಡನೆ ಅವಳ ಪಾಣಿಗ್ರಹಣ ಮಾಡಿಕೊಂಡು ನನ್ನ ಇಷ್ಟಾರ್ಥವನ್ನು ಕೈಗೂಡಿಸಬೇಕು.

ಅಜಯಸಿಂಹ :—ರಾಜಪೂತ ಸೈನಿಕ! ನಾನೀ ಪ್ರಸ್ತಾಪಕ್ಕೊಪ್ಪಿಕೊಳ್ಳುವುದು ಎಷ್ಟರಮಟ್ಟಿಗೆ ಅಸಂಭವವೆಂಬದನ್ನು ನೀನರಿಯೆ. ನನ್ನೆದೆಯನ್ನು ಬಿಚ್ಚಿ ತೋರಿಸ ಬಹುದಾಗಿದ್ದರೆ ನೀನು ನೋಡಬಹುದಾಗಿತ್ತು. ಈ ಹೃದಯದಲ್ಲಿ ಗಿರಿರಾಣಿಗೆ ಸಲ ವಾಗಿ ಎಳ್ಳಷ್ಟಾದರೂ ಸ್ಥಳವಿಲ್ಲ. ಬಾಲ್ಯದಲ್ಲಿ ಬುದ್ಧಿ ಬಂದ ಮೊದಲು ಅತುಲ ಸೌಂದರ್ಯಮಯಿಯಾದ ಪ್ರತಿಮೆಯೊಂದನ್ನು ಈ ಹೃದಯದಲ್ಲಿ ಪ್ರತಿಷ್ಠೆಮಾಡಿಟ್ಟು ಕೊಂಡಿದ್ದೇನೆ. ಮನೋ ಮೋಹಿನಿಯಾದಾ ದೇವಿಯ ತೆರಪಿಲ್ಲದ ಸ್ನೇಹದಿಂದಲೂ ಅವಿರಾಮವಾದ ಪ್ರೇಮ ಕಟಾಕ್ಷದಿಂದಲೂ ಮಿತಿಯಿಲ್ಲದ ಸುಖದಿಂದಲೂ ಬಾಲ್ಯ ವನ್ನು ಕಳೆದು ಯೌವನವು ಪ್ರಾಪ್ತವಾಯಿತು. ಒಮ್ಮಿಂದೊಮ್ಮೆ ಒಂದು ದಿನ ಮೇಘವಿಲ್ಲದ ಆಕಾಶದಿಂದ ಸಿಡಿಲು ಬಿದ್ದಹಾಗೆ ನಿಷ್ಠುರನಾಗಿದ್ದ ವಿಧಾತನು, 'ನಿರ್ಭಾಗ್ಯ ಅಜಯಸಿಂಹ! ಆನಂದಮಯಿಯಾದಾ ನಿನ್ನ ಹೃದಯೇಶ್ವರಿಯ ಪ್ರತಿಮೆ ಯನ್ನು ನಿನ್ನ ಹೃದಯದಿಂದ ವಿಸರ್ಜನಮಾಡು!' ಎಂದು ನುಡಿದನು. ನಾನು ರಾಜಪೂತ ವೀರನ ಹಾಗೆ, ನಿಷ್ಠುರನಾದಾ ವಿಧಾತನ ಕಟ್ಟಾಜ್ಞೆಯನ್ನು ಕಾಪಾಡುವು ದಾಗಿ ಪ್ರತಿಜ್ಞೆಮಾಡಿದೆನು. ಈ ಹೃದಯವು ಅಮಾನುಷಿಕವಾದ ಹೆಣೆಗಾಟದಲ್ಲಿ ಕ್ಷತವಿಕ್ಷತವಾಗಿ ಸೀಳಿಹೋಗಿದ್ದರೂ ಪುಡಿ ಪೂರ್ಣವಾದಾ ಹೃದಯದೊಳಗೆ ರಕ್ತ ವನ್ನು ಕಾರುತ್ತಿರುವ ಪ್ರಾಣದ ಒಂದೊಂದು ಪದರದಲ್ಲಿಯೂ ಆನಂದಮಯಿವಾದಾ ಪ್ರತಿಮೆಯು ಪೂರ್ಣಗೌರವದಿಂದ ಬೆಳ್ಳಿಸುತ್ತಿಹುದು. ಆದುದರಿಂದ ಈ ಹೃದಯ ದಲ್ಲಿ ನಿಮ್ಮ ಗಿರಿರಾಣಿಗೆ ಸಲವಾಗಿ ಎಳ್ಳಷ್ಟಾದರೂ ಸ್ಥಳಸಿಕ್ಕದು.

ಅಜಯಸಿಂಹನ ಕಾಲಿನಮೇಲೆ ಪುನಃ ಉಷ್ಣೋದಕವು ಬಿದ್ದಿತು. ಈ ತಡವೆ ಬೊಟ್ಟುಬೊಟ್ಟಾಗಿ ಬೀಳಲಿಲ್ಲ. ಅಜಸ್ರಧಾರೆಯಲ್ಲಿ ಪ್ರಬಲ ಪ್ರವಾಹದಿಂದ ರಾಜಪೂತ ಸೈನಿಕನ ಕಣ್ಣುಗಳನ್ನು ಭೇದಿಸಿಕೊಂಡು ಜಲಪ್ರವಾಹವು ಹರಿದುಹೋಯಿತು.

ಈ ಸಮಯದಲ್ಲಿ ದುರ್ಗದ ಹೊರಗಡೆ ಅನೇಕ ಕುದುರೆಗಳ ಗೊರಸಿನ ಶಬ್ದವೂ ಬಹು ಜನರ ಕೋಲಾಹಲವೂ ಕೇಳಿದವು. ಹೊರಗೆ ಯಾರೋ ಗಂಭೀರಸ್ವರದಿಂದ, 'ಗಿರಿದುರ್ಗದ ಸೈನಿಕರಾ! ಏಳಿರಿ, ಇದೋ ನೋಡಿರಿ, ನಿಮ್ಮ ಗಿರಿರಾಣಿಯು ಹಿಂದಿ ರಗಿ ಬಂದಳು!' ಎಂದು ಹೇಳಿದ ಹಾಗೆ ಕೇಳಿತು.

ಸೈನ್ಯದವರೆದ್ದು ಹೊರಗೆ ಬಂದು ಬಂದಿದ್ದವನಿಗೆ ವಂದಿಸಿದರು. ಬಂದಿದ್ದವನು, 'ಯಾವ ವೀರಪುರುಷನಿಗೆ ಸಲವಾಗಿ ನೀವು ನಿಮ್ಮ ಗಿರಿರಾಣಿಯನ್ನು ಪುನಃ ಹೊಂದಿ ರುವಿರೋ ಆ ಕ್ಷತ್ರಿಯ ವೀರನಾದ ಅಜಯಸಿಂಹನಿಗೆ ವಂದಿಸಿರಿ. ಅಜಯಸಿಂಹನು ಈಗ ಎಲ್ಲಿ ಹೋಗಿದ್ದಾನೆ? ಮೊದಲು ಹೇಳಿರಿ' ಎಂದನು.

ಉತ್ತರ :—ಆತನು ಇಂದು ಚೆನ್ನಾಗಿ ಆರೋಗ್ಯಲಾಭವನ್ನು ಹೊಂದಿ ಈ ದುರ್ಗದಲ್ಲಿರುವನು.

ಬಂದಿದ್ದವನು:—ಕೇಳಿರಿ, ಗಿರಿದುರ್ಗದ ಸೈನಿಕರಾ! ಗಿರಿರಾಣಿಯ ಗೆಳತಿಯರಾ! ಗಿರಿರಾಜ್ಯದ ಹಿತಕಾಂಕ್ಷಿಗಳಿರಾ! ನಿಮ್ಮ ಗಿರಿರಾಣಿಯು ದೊಡ್ಡ ವಂಶದ ಕ್ಷತ್ರಿಯ ಕುಮಾರಿಯೆಂದು ನೀವೆಲ್ಲರೂ ಬಲ್ಲವರಾಗಿರಬಹುದೆಂದು ತೋರುತ್ತದೆ. ಆದರೆ ನೀವು ಅಜಯಸಿಂಹನ ಪರಿಚಯವನ್ನು ಚೆನ್ನಾಗಿ ತಿಳಿದಿದ್ದವರಾಗಿ ಕಾಣುವುದಿಲ್ಲ. ಆತನು ಹಿಂದೂ ಕುಲಕ್ಕೆ ಗೌರವ ಸ್ವರೂಪನಾಗಿಯೂ ಜಗದ್ವಿಖ್ಯಾತನಾಗಿಯೂ ಇರುವ ಪ್ರತಾಪಸಿಂಹನ ಮಗನು! ಆತನು ಆರ್ಯಾವರ್ತದಲ್ಲಿ ಶ್ರೇಷ್ಠತಮನಾದ ವೀರನು. ಆತನು ಭಾರತೇಶ್ವರ ಅಕಬರಷಹನಿಗೆ ಬಲದ ಬಾಹು ಸ್ವರೂಪನಾಗಿಯೂ ಪುತ್ರನಿಗಿಂತ ಹೆಚ್ಚು ಪ್ರೀಯನಾಗಿಯೂ ಇರತಕ್ಕವನು. ನಾನಾರೆಂದರೋ ಕೇಳಿರಿ! ನಾನು ಭಾರತೇಶ್ವರನಾದ ಅಕಬರಷಹ! ಈಗ ನೀವೆಲ್ಲರೂ ನನ್ನ ಅಪ್ಪಣೆಯನ್ನು ಮನವಿಟ್ಟು ಕೇಳಿರಿ. ಇಂದಿನಿಂದ ಇನ್ನೆರಡು ವಾರಗಳಲ್ಲಿ ನೀವು ಒಂದು ಶುಭದಿನವನ್ನು ಗೊತ್ತು ಮಾಡಿರಿ. ಆ ಶುಭದಿನದಲ್ಲಿ ಮಹಾ ಸಮಾರೋಹದಿಂದ ಬಹು ಉತ್ಸವದಲ್ಲಿ ದಿಲ್ಲಿಯ ರಾಜ ಭಾಂಡಾರದ ವೆಚ್ಚದಿಂದ ದಿಲ್ಲೀಶ್ವರನ ನಯನ ಸಮಕ್ಷಮದಲ್ಲಿ ಕ್ಷತ್ರಿಯ ಗೌರವ ಸ್ವರೂಪನಾದ ಅಜಯಸಿಂಹನಿಗೆ ನಿಮ್ಮ ರೂಪಗುಣಶೀಲೆಯಾದ ಗಿರಿರಾಣಿಯನ್ನು ಕೊಟ್ಟು ಶುಭವಿವಾಹ ಮಹೋತ್ಸವವು ಜರುಗುವುದು! ನವದಂಪತಿಗಳಿಗೆ ಯೌತುಕ ಸ್ವರೂಪವಾಗಿ ಇಪ್ಪತ್ತು ಸಾವಿರ ವರಹಾದ ಬೆಲೆಯುಳ್ಳ ರತ್ನ ಮಾಣಿಕ್ಯಗಳನ್ನೂ ಅತಿ ವಿಸ್ತಾರವಾದ ಭೂಖಂಡ ಪ್ರದೇಶವನ್ನೂ ದಿಲ್ಲೀಶ್ವರನು ಕೊಟ್ಟಿರುವನು! ಇಂದಿನಿಂದ ನೀವೆಲ್ಲರೂ ಆನಂದೋತ್ಸವಗಳನ್ನು ನಡೆಸುತ್ತಿರಿ. ಮತ್ತು ಈ ಶುಭ ಸಮಾಚಾರವನ್ನು ಸರ್ವತ್ರ ಪ್ರಸಿದ್ಧ ಪಡಿಸಿರಿ.

ಎಲ್ಲರೂ ಆನಂದದಿಂದ ಕೈತಟ್ಟಿ ತಾರ ಸ್ವರದಿಂದ, "ಜಯ! ದಿಲ್ಲೀಶ್ವರ ಅಕಬರಷಹನಿಗೆ ಜಯ! ನವದಂಪತಿಯರು ಗಿರಿರಾಣಿಗೂ ಅಜಯಸಿಂಹನಿಗೂ ಜಯವಾಗಲಿ!" ಎಂದು ಕೂಗಿ ಹೇಳಿದರು.

ಆ ರಾತ್ರಿಯ ಸಮಯದಲ್ಲಿ ಆಕಾಶ ಭೇದಿಯಾದಾ ಜಯಧ್ವನಿಯು ರುಗ್ಣಶಯ್ಯೆಯಲ್ಲಿ ಮಲಗಿದ್ದ ಅಜಯಸಿಂಹನ ಕಿವಿಗೂ ಅವನಿಗೆ ಶುಶ್ರೂಷೆಯನ್ನು ಮಾಡುತ್ತಿದ್ದ ರಾಜಪೂತ ಸೈನಿಕನ ಕಿವಿಗೂ ಬಿತ್ತು. ಅಜಯಸಿಂಹನು ಕಣ್ಣು ಮುಚ್ಚಿಕೊಂಡನು. ಅವನ ತಲೆಯು ತಲೆದಿಂಬದಿಂದ ಸರಿದು ನೆಲದ ಮೇಲೆ ಬಿದ್ದಿತು! ರಾಜಪೂತ ಸೈನಿಕನು (ಏತಕೋ ನಾವದನ್ನರಿಯೆವು) ನಡುಗಿ ಕೈಗಳಿಂದ ತನ್ನೆದೆಯನ್ನು ಅದುಮಿ ಹಿಡಿದುಕೊಂಡನು.

## ಹತ್ತನೆಯ ಪರಿಚ್ಛೇದ.

ಪ್ರಭಾತದಲ್ಲಿ ಅಜಯಸಿಂಹನು ಕಣ್ದೆರೆದು ನೋಡಿದನು. ರಾಜಪೂತ ಸೈನಿಕನು ಅಲ್ಲಿರಲಿಲ್ಲ. ಗಿರಿರಾಣಿಯೂ ಅವಳ ಗೆಳತಿ ಚಪಲೆಯೂ ತಲೆದೆಸೆಯಲ್ಲಿ ನಿಂತಿದ್ದರು. ಅಜಯಸಿಂಹನು ಗಿರಿರಾಣಿಯ ಸರಳತಾಮಯವಾದ ಸುಂದರಮುಖವನ್ನು ನೋಡಿದನು. ಸುಂದರವಾದಾ ಮುಖಮಂಡಲದಲ್ಲಿ ಹೊಸದಾದ ಸ್ಫೂರ್ತಿಯೂ ಹೊಸದಾದ ಉತ್ಸಾಹವೂ ಪ್ರಕಾಶಗೊಂಡಿದ್ದವು. ಗಿರಿರಾಣಿಯು ಅಜಯಸಿಂಹನ ಬಳಿ ಕುಳಿತು ಅವನ ಕೈಗಳನ್ನು ಹಿಡಿದುಕೊಂಡು "ಅಜಯ! ನೀನು ನನ್ನನ್ನು ರಕ್ಷಿಸುವುದಕ್ಕೆ ಸಲವಾಗಿ ನಿನ್ನ ಮೈರಕ್ತವನ್ನು ಸುರಿಸಿ ರುಗ್ಣಶಯ್ಯೆಯಲ್ಲಿ ಮಲಗಿದೆ. ನಾನೀ ಜನ್ಮದಲ್ಲಿ ಅದಕ್ಕೇನು ಪ್ರತಿಮಾಡಬಲ್ಲೆನು!" ಎಂದಳು.

ಅಜಯ:—ನಾನು ನಿನ್ನನ್ನು ವಿಪತ್ತಿನಿಂದ ಕಾಪಾಡಿದೆನೆಂಬುದು ನನ್ನ ಕ್ಷತ್ರಿಯ ಜಾತಿಯ ಧರ್ಮವನ್ನು ನಡೆಸಿದ ಹಾಗಾಯಿತೆ ಹೊರ್ತು ಬೇರೆ ಹೆಚ್ಚು ಕೆಲಸವನ್ನು ಮಾಡಿದ ಹಾಗಾಗಲಿಲ್ಲ.

ಗಿರಿರಾಣಿ:—(ಕಣ್ಣೀರು ತುಂಬಿದವಳಾಗಿ)-ಹಾ, ಅಜಯ! ನೀನರಿಯೆ—ನಾನೆಂಥಾ ಮಹಾ ಸಮುದ್ರದಲ್ಲಿ ಬಿದ್ದಿದ್ದೆನೋ ಹೇಳಲಸಾಧ್ಯ. ನೀನು ಇಲ್ಲಿರದಿದ್ದರೆ ನನ್ನ ಗತಿ ಯೇನಾಗುತ್ತಿತ್ತು? ಮುಸಲಮಾನ ಕಳ್ಳನ ಕುದುರೆಯ ಮೇಲೆ ಜ್ಞಾನ ತಪ್ಪಿದವಳಾಗಿದ್ದಾಗ ರಣಕೋಲಾಹಲದಲ್ಲಿ ಇದ್ದ ಹಾಗೆ ನಿನ್ನ ಕಂಠಸ್ವರವು ಕೇಳಿಬಂದು ಸ್ವಲ್ಪ ಮೂರ್ಛೆ ತಿಳಿದ ಹಾಗಾಗಿ ಕಣ್ಣು ಬಿಟ್ಟು ನೋಡಲಾಗ ನೀನು ಮುಸಲಮಾನರ ಹಾದಿಯನ್ನು ಅಡ್ಡಿಮಾಡಲು ಕತ್ತಿಯನ್ನು ತಿರುಗಿಸುತ್ತಿದ್ದೆ! ಅದೇ ಸಮಯದಲ್ಲಿ ಕಳ್ಳನು ನನ್ನನ್ನೆತ್ತಿಕೊಂಡು ರಣರಂಗವನ್ನು ಬಿಟ್ಟು ಓಡಿಹೋದನು. ಪುನಃ ನಾನು ನಿನ್ನನ್ನು ನೋಡಲಿಲ್ಲ. ಪುನಃ ಮೂರ್ಛೆ ಹೋದೆನು. ಮೂರ್ಛಿತಾವಸ್ಥೆಯಲ್ಲಿ ಸ್ವಪ್ನದಲ್ಲಿ ನಿನ್ನ ಮುಖಮಂಡಲವು ನನ್ನ ಹೃದಯದಲ್ಲಿ ಜಾಗರಿತವಾಗಿತ್ತು. ಹಾಗಿಲ್ಲದಿದ್ದರೆ ನಾನುಳಿಯುತ್ತಿರಲಿಲ್ಲ.

ಚಪಲೆ:—ರಾಣಿ! ಈ ಸುಖದ ದಿನ ಆ ದುಃಖದ ಸುದ್ದಿಯೇಕೆ? ದಿಲ್ಲೀಶ್ವರನ ಬಾಯಿಯಿಂದ ಕೇಳಿದ ಸಮಾಚಾರವನ್ನು ಅಜಯಸಿಂಹನಿಗೆ ಹೇಳು. ಅದೋ, ನೋಡು! ಬಾದಷಹನೇ ಇಲ್ಲಿಗೆ ಬರುವ ಹಾಗಿದೆ!

ಗಿರಿರಾಣಿ:—ಸಖಿ! ಹೊರಡು—ನಾವು ಇಲ್ಲಿಂದ ಹೋಗೋಣ. ಬಾದಷಹನು ಬಂದು ಸ್ವಂತವಾಗಿ ನಿನ್ನಿನ ರಾತ್ರಿಯ ಸಮಾಚಾರವನ್ನು ಹೇಳುವನು.

ಗಿರಿರಾಣಿಯೂ ಚಪಲೆಯ ಸಂಗಡ ಹೊರಗೆ ಬಂದಳು. ಚಪಲೆಯು, "ರಾಣಿ! ಇತ್ತಕಡೆಬಾ, ಮರೆಯಲ್ಲಿ ನಿಂತು ಅವರು ಮಾತಾಡುವುದನ್ನು ಕೇಳೋಣ" ಎಂದಳು.

ಗಿರಿರಾಣಿ:—ಬೇಡ ನನ್ನ ಮನಸ್ಸಿಗೆ ಏನೋ ಒಂದು ಭಯವು ತೋರುತ್ತದೆ. ನನ್ನೆದೆಯು ಮುಟ್ಟಿನೋಡು. ಎದೆಯು ಬಡಕೊಳ್ಳುತ್ತದೆ.

ಚಪಲೆಯು ನಕ್ಕು "ಯಾತರ ಭಯ!" ಎಂದಳು.

ಗಿರಿರಾಣಿಯು ಬಾಡಿದ ಮುಖವುಳ್ಳವಳಾಗಿ ಚಪಲೆಯ ಮುಖವನ್ನು ನೋಡುತ್ತ, "ಹಾ, ಸಖಿ! ಅಜಯಸಿಂಹನು ಒಂದುವೇಳೆ ಬಾದುಷಹನ ಪ್ರಸ್ತಾಪಕೊಪ್ಪಿದ್ದರೆ!" ಎಂದಳು.

ಚಪಲೆ:—ಅಂಥಾ ಮೂರ್ಖನಾರು ಇರುವನು? ಸಮುದ್ರದ ತಲದಲ್ಲಿರುವ ಅಮೂಲ್ಯವಾದ ರತ್ನವನ್ನು ಹೊಂದಿ ಕಪ್ಪೇಚಿಪ್ಪೆಂದು ಬಿಟ್ಟುಬಿಡುವವನಾರು?

ಗಿರಿರಾಣಿ:—ನೀನು ಹಾಸ್ಯಮಾಡುತ್ತಿ—ಆದರೆ ನನಗೇನೋ ಭಯವಾಗಿದೆ. ಅಜಯಸಿಂಹನು ಜಗತ್ಪೂಜಿತನಾದ ಮಹಾರಾಣಾ ಪ್ರತಾಪಸಿಂಹನ ಮಗನೆಂದು ಕೇಳಲಿಲ್ಲವೆ? ನಾನು ಯಾವದರಲ್ಲಿಯೂ ಅವನಿಗೆ ದಾಸಿಯಾಗಲೂ ತಕ್ಕವಳಲ್ಲ.

ಗಿರಿರಾಣಿಯು ಚಪಲೆಯ ಕೈ ಹಿಡಿದುಕೊಂಡು ದೂರ ತನ್ನ ಕೊಠಡಿಯ ಕಡೆ ಹೊರಟು ಹೋದಳು.

ಅಜಯಸಿಂಹನು ಸಮ್ರಾಜನನ್ನು ನೋಡಿ ಅಭಿವಂದಿಸಿದನು. ಅಕಬರನು ಅವನನ್ನಾಲಿಂಗನ ಮಾಡಿಕೊಂಡು ನಗು ಮೊಗನಾಗಿ, "ವೀರ ಅಜಯಸಿಂಹ! ವೀರ ಸಖನಾದ ಅಕಬರಷಹನು ಇಂದು ನಿನ್ನ ವೀರತ್ವಕ್ಕೆ ಪುರಸ್ಕಾರವನ್ನು ಕೊಡಲು ಆತುರನಾಗಿದ್ದಾನೆ" ಎಂದನು.

ಅಜಯ:—ಕ್ಷತ್ರಿಯ ಯೋದ್ಧನು ನ್ಯಾಯಸಮ್ಮತವಾದ ಯುದ್ಧದಲ್ಲಿ ಪರಾಕ್ರಮವನ್ನು ತೋರಿದರೆ ಅದಕ್ಕೆ ಸಲವಾಗಿ ಪುರಸ್ಕಾರವನ್ನು ಅಪೇಕ್ಷಿಸುವುದಿಲ್ಲ.

ಅಕಬರ:—ವೀರ ಪುರುಷನು ಪುರಸ್ಕಾರವನ್ನು ಅಪೇಕ್ಷಿಸದಿದ್ದರೂ ಅವನನ್ನು ಪುರಸ್ಕೃತನನ್ನಾಗಿ ಮಾಡುವುದು ರಾಜನಿಗೆ ಧರ್ಮವಾಗಿರುವುದು. ನಾನು ನಿನಗೆ ಮತ್ತೊಂದು ದಿನ, ವೀರಪುರುಷನಿಗೆ ಎಲ್ಲದಕಿಂತ ಶ್ರೇಷ್ಠವಾದ ಪುರಸ್ಕಾರವು ಸುಂದರಿಯ ಪುರಸ್ಕಾರವೆಂದು ಹೇಳಿದುದು ನೆನಪಿನಲ್ಲಿದೆಯೆ!

ಅಜಯಸಿಂಹನ ಮುಖವು ಬೆಳ್ಳಗಾಯಿತು. ಅಕಬರಷಹನು ಮುಂದೆ ಹೇಳತೊಡಗಿದನು:—"ಕೇಳು ಅಜಯ! ನಾನು ಬಹಳ ಪರೀಕ್ಷಿಸಿ ನೋಡಿದೆನು. ಸರಳ ಹೃದಯವುಳ್ಳ ಗಿರಿರಾಣಿಯು ಅಜಯಸಿಂಹನ ವೀರತ್ವಕ್ಕೆ ತಕ್ಕ ಪುರಸ್ಕಾರ. ಅದು

ಕಾರಣ ನಿನ್ನಿನ ರಾತ್ರಿ ನಾನು ಇಲ್ಲಿಗೆ ಹಿಂದಿರುಗಿ ಬಂದ ಕೂಡಲೇ, ಇಂದಿನಿಂದ ಎರಡು ವಾರದೊಳಗೆ ಸುಂದರಿ ಗಿರಿರಾಣಿಯು ಸುಕುಮಾರ ದೇಹವನ್ನು ಮಹಾರ್ಘರತ್ನಾಲಂಕಾರಗಳಿಂದಲಂಕರಿಸಿ. ಅವಳನ್ನು ನನ್ನ ಪ್ರಿಯತಮ ಸೇನಾಪತಿಯ ಪಾರ್ಶ್ವದಲ್ಲಿ ಅವಳ ಹೃದಯದೊಂದಿಗೆ ವಿಸ್ತಾರವಾದ ಭೂಖಂಡ ಪ್ರದೇಶದ ಸಿಂಹಾಸನದ ಮೇಲೆ ಕುಳ್ಳಿರಿಸಿ ಪ್ರತಿಷ್ಠೆ ಮಾಡಬೇಕೆಂದು ಅಪ್ಪಣೆಯನ್ನು ಮಾಡಿದೆನು"

ಅಜಯಸಿಂಹ :—ದಿಲ್ಲೀಶ್ವರ! ಯಾವ ಗುರುತರ ಅಪರಾಧಕ್ಕೆ ಸಲುವಾಗಿ ಇಂದೀ ಸಂಸಾರತ್ಯಾಗಿಯಾಗಿ ಬ್ರಹ್ಮಚರ್ಯಾವಲಂಬಿಯಾದ ಅಜಯಸಿಂಹನ ವಿಚಾರವಾಗಿ ಇಂಥಾ ನಿಷ್ಠುರವಾದ ದಂಡವಿಧಾನವನ್ನು ಮಾಡೋಣಾಯಿತು!

ಅಕಬರಷಹನ ಮುಖದಲ್ಲಿ ಬೇಸರಗೊಂಡ ಲಕ್ಷಣಗಳು ಪ್ರಕಟಿತವಾದವು. ಅವನು ಹೇಳತೊಡಗಿದನು :—" ಮಹಾರಾಣಾ ಪ್ರತಾಪಸಿಂಹನ ಮಗನು ಕೃತಘ್ನತೆಯೆಂಬುದನ್ನು ಅರಿಯನೆಂದು ನಾನು ಚೆನ್ನಾಗಿ ಬಲ್ಲೆನು. ಅಯ್ಯೋ! ಗೊತ್ತಾಯಿತು. ಹಿರಣ್ಮಯಿಯ ಸ್ಮರಣೆಯು ಇನ್ನೂ ನಿನ್ನ ಹೃದಯದಿಂದ ಅಳಿಸಿ ಹೋಗಿಲ್ಲ. ಕೇಳು ಅಜಯಸಿಂಹ! ನೀನು ಕ್ಷತ್ರಿಯ ವೀರನು. ನಿನ್ನ ಸ್ವಂತ ಹೃದಯದೊಂದಿಗೆ ಹೆಣಗಾಡಿ ಕಟ್ಟಕಡೆಗೆ ನೀನೇ ಸೋತುಹೋಗುವುದು ಕೇವಲ ಲಜ್ಜಾಸ್ಪದವಾದುದು! ಸರಳ ಸ್ವಭಾವವುಳ್ಳ ದಿಕ್ಕಿಲ್ಲದ ಗಿರಿರಾಣಿಯು ನಿನ್ನ ಪ್ರೇಮದಲ್ಲಿ ಮುಗ್ಧೆಯಾಗಿರುವುದನ್ನು ನೀನು ನೋಡುವುದಿಲ್ಲವೆ? ಅವಳು ನಿನ್ನ ಸಹವಾಸಕ್ಕೆ ಸಲುವಾಗಿ ಎಷ್ಟು ಆಶೆಯುಳ್ಳವಳಾಗಿದ್ದಾಳೆ? ನೀನು ಅವಳನ್ನು ತೊರೆದು ಹೊರಟು ಹೋದರೆ ಅವಳ ಗತಿಯೇನಾಗಬೇಕು? ಈಗ್ಗೆ ಎರಡು ವರ್ಷಕ್ಕೆ ಹಿಂದೆ ನಿನ್ನ ತಂದೆಯಲ್ಲಿ ನೀನು ಮಾಡಿದ ಪ್ರತಿಜ್ಞೆಯನ್ನು ಮರೆತೆಯಾ? ಈಗ ದೇವರು ನಿನ್ನಾ ಪ್ರತಿಜ್ಞೆಯನ್ನು ನೆರವೇರಿಸುವುದಕ್ಕೆ ತಕ್ಕ ಉಪಾಯವನ್ನು ತೋರಿದ್ದಾನೆ. ನಿನ್ನ ತಂದೆಯ ಅಪ್ಪಣೆಯ ಪ್ರಕಾರ ನಡಿಯಬೇಕೆಂತಲೇ ಈಗ ನಾನು ಹೇಳುವ ಮಾತಾಗಿದೆ. ನಿನ್ನ ಸ್ನೇಹಿತನಾದ ಅಕಬರನ ಬುದ್ಧಿವಾದವನ್ನೂ ಕೇಳು. ಗಿರಿರಾಣಿಯನ್ನು ರಕ್ಷಿಸಿ ಕ್ಷತ್ರಿಯ ಧರ್ಮವನ್ನೂ ಕಾಪಾಡು."

ಅಜಯಸಿಂಹನು ಅಕಬರಷಹನ ಮುಖವನ್ನು ದೃಷ್ಟಿಸಿ ನೋಡಿ, ನೆಲದ ಮೇಲೆ ಕುಳಿತು ಸ್ವಲ್ಪ ಹೊತ್ತು ಮೌನವಾಗಿ ಯೋಚಿಸಿದನು. ಅವನ ಕಣ್ಣುಗಳು ಕೆಂಡಗೊಂಡು ಅಶ್ರುಜಲದಿಂದ ಪೂರ್ಣವಾಗಿ ತುಂಬಿದವು. ವೀರನ ಹೃದಯವೂ ಕಣ್ಣೀರಿಂದ ತೊಳೆದ ಹಾಗಾಯಿತೋ ಇಲ್ಲವೋ ನಾವು ಅದನ್ನರಿಯೆವು. ಅಜಯಸಿಂಹನು ಕಣ್ಣೊರಸಿಕೊಂಡು ಪುನಃ ಎದ್ದು ನಿಂತುಕೊಂಡು ವಿಶ್ವಾಸದಿಂದ ಹೇಳತೊಡಗಿ

ದನು :—"ದೇವತೆ! ಇಂದು ನನ್ನನ್ನು ಉನ್ಮತ್ತನಾಗಿ ಮಾಡುವುದಕ್ಕೆ ಸಲವಾಗಿ ನಿನ್ನ ಸಮಗ್ರ ಜಗತ್ತೂ ಸಂಚುಮಾಡಿದೆ—ತಂದೆಯ ಅಪ್ಪಣೆ—ಭಾರತ ಸಮ್ರಾಜನ ಮೆಚ್ಚಿಕೆ—ರಾಜಪೂತ ಸೈನಿಕನ ಕಣ್ಣೀರು—ಸನ್ಯಾಸಿಯ ಉಪದೇಶ—ಇಷ್ಟೂ ಸೇರಿ ಒಳಸಂಚು ನಡೆದಿದೆ. ದಿಲ್ಲೀಶ್ವರ! ತಾವು ಹೇಳುವ ಪ್ರಸ್ತಾಪಕ್ಕೊಪ್ಪಿದೆನು. ಅಮೃತಮುಖಿಯಾದ ಸುರಸುಂದರಿ ಹಿರಣ್ಮಯಿ! ಇಂದೀ ಪಾಷಾಣ ಹೃದಯವುಳ್ಳ ಅಜಯಸಿಂಹನು ಇಷ್ಟು ಕಾಲವಾದ ಬಳಿಕ ಕಲುಷಮಯವಾದೀಪಾಪ ಹೃದಯದಿಂದ ಪವಿತ್ರವಾದ ನಿನ್ನ ಪ್ರತಿಮೆಯನ್ನು ವಿಸರ್ಜನೆಮಾಡಿದ್ದಾನೆ."

ಅದುವರೆಗೂ ಗವಾಕ್ಷಕ್ಕೆ ಪಾರ್ಶ್ವದಲ್ಲಿ ರಾಜಪೂತ ಸೈನಿಕನೊಬ್ಬನೇ ನಿಂತು ಅವರ ಮಾತುಗಳನ್ನು ಮನವಿಟ್ಟು ಕೇಳುತ್ತಿದ್ದನು. ಅಜಯಸಿಂಹನ ಮಾತು ಪೂರೈಸಿದ ಕೂಡಲೇ ರಾಜಪೂತ ಸೈನಿಕನು ಕಾತರ ಪ್ರಾಣನಾಗಿಯೂ ಮರ್ಮಾಹತ ಹೃದಯನಾಗಿಯೂ ಹಿಡಿದ ನಿಟ್ಟುಸಿರನ್ನು ಬಿಟ್ಟನು. ಅದನ್ನು ಯಾರೂ ಕೇಳಲಿಲ್ಲ. ಏತಕ್ಕೆಂದರೆ ಕೊಠಡಿಯ ಮತ್ತೊಂದು ಪಾರ್ಶ್ವದಲ್ಲಿ ಜಮಲಿಯು ಶಂಖವನ್ನು ಕೈಲಿಟ್ಟುಕೊಂಡು ನಿಂತು ಸಮ್ರಾಜನಿಗೂ ಅಜಯನಿಗೂ ನಡೆದ ಸಂವಾದವನ್ನು ಕೇಳುತ್ತಿದ್ದವಳು ಅಜಯನು ಸಮ್ರಾಜನ ಪ್ರಸ್ತಾಪಕ್ಕೊಪ್ಪಿಗೆಯನ್ನು ಸೂಚಿಸಿದ ಕೂಡಲೇ ಘಟ್ಟಿಯಾಗಿ ಶಂಖವನ್ನೂದಿ ಮಂಗಳಧ್ವನಿ ಮಾಡಿದಳು. ರಾಜಪೂತ ಸೈನಿಕನ ಗಂಭೀರ ಮರ್ಮಭೇದಿಯಾದ ಹಿಡಿದ ನಿಟ್ಟುಸಿರು ಶಂಖದ ಧ್ವನಿಯಲ್ಲಿ ವಿಲೀನವಾಗಿ ಹೋಯಿತು!

## ಹನ್ನೆರಡನೆಯ ಪರಿಚ್ಛೇದ.

ಸಮ್ರಾಜ ಅಕಬರನು ನದಿಯ ತೀರದಲ್ಲಿದ್ದ ಪಾಳೆಯದಲ್ಲೊಬ್ಬನೇ ಕುಳಿತು ಒಂದು ಚಿತ್ರಪಟವನ್ನು ಗಮನವಿಟ್ಟು ನೋಡುತ್ತಿದ್ದನು. ಚಿತ್ರಪಟವನ್ನು ಬಹಳ ಹೊತ್ತು ಕಣ್ಣೆದುರಿಗಿಟ್ಟು ನೋಡಿ ಬಳಿಕ ತನ್ನೊಳು ತಾನೇ "ಆಶ್ಚರ್ಯ ಸೌಸಾದೃಶ್ಯ! ಇದರಲ್ಲಿ ಸ್ವಲ್ಪಮಾತ್ರವೂ ಅನುಮಾನವುಂಟಾಗುವ ಸಂಭವವಿಲ್ಲ. ಇದುವರೆಗೂ ಆಶ್ಚರ್ಯಕರವಾದೀಸಂಘಟನೆಯನ್ನು ಸಂಪೂರ್ಣವಾಗಿ ಮರೆತುಹೋಗಿದ್ದುದೂ ಆಶ್ಚರ್ಯ ವಿಷಯವಾಗಿದೆ!" ಎಂದೆಂದುಕೊಂಡನು.

ಈ ಸಮಯದಲ್ಲಿ ದುರ್ಗದ ದ್ವಾರಪಾಲಕನೊಬ್ಬನು ಬೆಸಬೆಸನೆ ಬೆಸೆಯಾಗಿ ಬಂದು ನಿಂತು, "ಪ್ರಭುವೆ! ಪರದೆಯಿಂದ ಮುಖವನ್ನು ಮುಚ್ಚಿಕೊಂಡಿರುವ ರಮಣಿಯೊಬ್ಬಳು ಪ್ರಭುಗಳ ಸನ್ನಿಧಾನಕ್ಕೆ ಬರಬೇಕೆನ್ನುತ್ತಾಳೆ. ಎಷ್ಟು ತಡೆದು ಹೇಳಿದರೂ ಕೇಳುವ ಹಾಗಿಲ್ಲ" ಎಂದನು.

ಸಮ್ರಾಜನು ಚಮಕಿತನಾಗಿ ಎದ್ದುನಿಂತು, ಆಕೆಯನ್ನು ಮರ್ಯಾದೆಯಿಂದ ಕರೆತರಬೇಕೆಂದು ಅಪ್ಪಣೆಮಾಡಿದನು.

ಸಮ್ರಾಜನ ಮಾತು ಪೂರೈಸುವುದರೊಳಗೆ ಉನ್ಮಾದಿನಿಯು ಒಳಗೆ ಬಂದು ಮುಖದ ಪರದೆಯನ್ನು ತೆಗೆದುಹಾಕಿದಳು. ಆವಳು ಕ್ಷಣಮಾತ್ರ ಸುಮ್ಮನಿದ್ದು ಬಳಿಕ ಹೇಳತೊಡಗಿದಳು—"ಭಾರತೇಶ್ವರ! ತಾವು ಔದಾರ್ಯದ ಅವತಾರವಲ್ಲವೆ? ತಮ್ಮ ಅನಂತ ಗುಣಗಳಿಂದಲ್ಲವೆ ಈ ಸಾಮ್ರಾಜ್ಯವು ಮಂತ್ರದಿಂದ ಮುಗ್ಧವಾದ ಹಾಗಿರುವುದು? ಹಾಗಿದ್ದು ತಾವು ಕಾಪುರುಷನ ಹಾಗೆ, ಸ್ವಾರ್ಥಪರನಾದ ನೀಚಾಶಯ ಮನುಷ್ಯನ ಹಾಗೆ, ಒಬ್ಬ ರಮಣಿಯು ಕಾತರಪ್ರಾಣದಿಂದ ಗೋಳಿಡುವುದನ್ನು ಕಿವಿಯ ಮೇಲೆ ಹಾಕಿಕೊಳ್ಳದೆ ಉದಾಸೀನರಾಗಿರುವುದೇಕೆ? ಅಯ್ಯೋ! ಹೀಗೆಂದು ತಿಳಿದಿದ್ದರೆ ಬಿರಾರು ದೇಶವನ್ನು ಮೊಗಲ ಸಮ್ರಾಜನಿಗೆ ಬಿಟ್ಟು ಕೊಡುತ್ತಿದ್ದೆನೆ? ನನ್ನ ನೂರ ನಾರಿಯರ ಸೈನ್ಯದಿಂದ ಯುದ್ಧದಲ್ಲಿ ಹತ್ತು ಸಾವಿರದ ಮೊಗಲಸೈನ್ಯವನ್ನು ಕಡಿಹೊಡೆದು ಪ್ರಪಂಚವೇ ಬೆಚ್ಚಿ ಬೆರಗಾಗುವ ಹಾಗೆ ಮಾಡದಿರುತ್ತಿದ್ದೆನೆ? ಹೀಗೆಂದು ತಿಳಿದಿದ್ದರೆ ರಕ್ತದ ದಾಹವುಳ್ಳ ನನ್ನ ಕತ್ತಿಯಿಂದ ತಮ್ಮ ಹೊಸ ಸೇನಾಪತಿಯು ಬಿಡುಗಡೆಯಾಗುತ್ತಿದ್ದನೆ? ಹಾ! ನನಗೆ ಸಹಾಯವನ್ನು ಮಾಡುವ ಮಾತು ಹಾಗಿರಲಿ! ನನ್ನ ಹೃದಯದ ಏಕಾಂತವನ್ನು ಬಿಚ್ಚಿ ತಮಗೆ ಹೇಳಿ ಬೇಡಿಕೊಂಡ ಭಿಕ್ಷವ ನೀಡುವುದು ಬಿಟ್ಟು ತಾವೇ ಸ್ವಂತವಾಗಿ ನಿಂತು ನನಗೆ ವೈರಿಯ ಹಾಗೆ ಆಚರಿಸಬಹುದೆ? ಹೇಳಬೇಕಾಗಲಿ, ಭಾರತೇಶ್ವರ! ಯಾವ ಅಪರಾಧಕ್ಕೆ ಸಲವಾಗಿ ತಾವು ಹೀಗೆ ವೈರನಿರ್ಯಾತನೆಯಲ್ಲಿ ಪ್ರವೃತ್ತರಾದಿರಿ?"

ಸಮ್ರಾಜ:—ರಾಜ್ಞಿ! ತಾವು ಇಷ್ಟು ಕಾತರರಾಗಕೂಡದು. ತಮ್ಮ ಇಷ್ಟಾರ್ಥವು ಕೂಡಲೇ ಕೈಗೂಡುವುದು. ಈ ಚಿತ್ರಪಟದಲ್ಲಿ ಅಂಕಿತವಾಗಿರುವ ಬಾಲೆಯ ಹಾಗಿದ್ದ ರಮಣಿಯನ್ನು ನಾನಿದುವರೆಗೂ ನೋಡಿರಲಿಲ್ಲ.

ಹೀಗೆಂದು ಹೇಳಿ ಸಮ್ರಾಜನು ತನ್ನೆದುರಿಗಿದ್ದ ಚಿತ್ರಪಟವನ್ನು ತೆಗೆದು ಉನ್ಮಾದಿನಿಗೆ ಕೊಟ್ಟನು. ಉನ್ಮಾದಿನಿಯು ಪಟವನ್ನು ದೂರೆಸೆದು ಘಟ್ಟಿಯಾಗಿ ನಕ್ಕು ಪುನಃ ಹೇಳತೊಡಗಿದಳು:—"ಚಿತ್ರಪಟವನ್ನು ನೋಡಿ ಆವಳ ಸಾದೃಶ್ಯವನ್ನು ತಿಳಿಯಬೇಕೆ? ಈ ಪಾಷಾಣ ಹೃದಯಕ್ಕಿರುವ ಸಹಸ್ರದ್ವಾರಗಳಿಂದಲೂ ಹೊಕ್ಕು ಭುವನವನ್ನು ಮೋಹಗೊಳಿಸುವಾ ಪ್ರತಿಕೃತಿಯು ಉಜ್ವಲವರ್ಣದಿಂದ ಮನದಲ್ಲಿ ಅಂಕಿತವಾಗಿದೆ. ನನ್ನ ಹೃದಯದ ಧನವನ್ನು ವಕ್ಷದಲ್ಲಿ ಧರಿಸಿ ಮುದ್ದಿಟ್ಟುಕೊಳ್ಳಬೇಕೆಂದು ಇಷ್ಟು

ಕಾಲ ಹುಡುಕಿ ಅವಳಿದ್ದ ಸ್ಥಳವನ್ನು ಕಂಡುಹಿಡಿದು ಅವಳನ್ನು ನನ್ನ ಬಳಿ ಕರೆತಲು ಮಹಾರಾಣಿ ಚಾಂದಸುಲತಾನೆಯು ದಯಮಾಡಿ ತನ್ನ ಸೈನ್ಯವನ್ನು ಕಳುಹಿದಳು. ತಾವಾದರೋ ತಸ್ಕರವೃತ್ತಿಯನ್ನವಲಂಬಿಸಿ ತಾವೇ ಅವಳನ್ನಪಹರಿಸಿಕೊಂಡು ಬಂದಿರೋಣಾಗಿದೆ. ಈಗ ಉನ್ಮಾದಿನಿ ಮುಮತಾಜಬೇಗಮಳೊಬ್ಬಳೇ ಬಂದು ತಮ್ಮೆದುರಿಗೆ ನಿಂತಿದ್ದಾಳೆ. ತಮಗೆ ಧೈರ್ಯವಿದ್ದರೆ ಅವಳಿಗೆ ವಿರೋಧವಾಗಿ ಆಚರಿಸಬಹುದು!"

ಅಕಬರಷಹನು ಸ್ಥಿರಭಾವದಿಂದ, ಹೀಗೆಂದು ಹೇಳಿದನು:—" ತಾವು ಅಕಾರಣವಾಗಿ ನನ್ನಮೇಲೆ ಕೋಪ ಮಾಡೋಣಾಗುತ್ತದೆ. ಈಗತಾನೇ ಚಿತ್ರಪಟವನ್ನು ಹೋಲಿಸಿ ನೋಡಿ ಹುಡುಗಿಯು ಸಾದೃಶ್ಯವನ್ನು ತಿಳಿದುಕೊಂಡು ಮುಂದೆ ಮಾಡತಕ್ಕದೇನೆಂದು ಯೋಚಿಸುತ್ತಿದ್ದ ಸಮಯದಲ್ಲಿ ತಾವು ಬಂದು ನಿಂತುಕೊಂಡಿರುವಿರಿ. ಆದರೂ ಈ ರಹಸ್ಯವನ್ನು ಭೇದಿಸಲಸಮರ್ಥನಾಗಿದ್ದೇನೆ. ಗಿರಿರಾಣಿಯು ದೊಡ್ಡವಂಶದ ರಾಜಪೂತರಮಣಿಯಾಗಿದ್ದಾಳೆ! ಅವಳಿಗೂ ಈ ಚಿತ್ರಕ್ಕೂ ಹೋಲಿಕೆ ಇದ್ದರೂ ತಾವು ಹುಡುಕುತ್ತಿರುವ ಹುಡುಗಿಯು ಬೇರೆಯಾಗಿರಬೇಕೆಂದು ತೋರುತ್ತದೆ.

ಉನ್ಮಾದಿನಿ:—(ಹೆಚ್ಚು ಸ್ಥಿರಭಾವದಿಂದ) ಹಾ, ದಿಲ್ಲೀಶ್ವರ! ಇದರಲ್ಲಿ ಅಣುಮಾತ್ರವೂ ಭ್ರಮೆಯುಂಟಾಗುವ ಸಂಭವವಿಲ್ಲ. ಅಂಥಾ ಸುಧಾಮಯರೂಪರಾಶಿಯು ಜಗತ್ತಿನಲ್ಲಿ ಬೇರೆ ಮತ್ತೆಲ್ಲಿರಬಲ್ಲದು! ಹಾಗಾದರೆ ಕೇಳೋಣಾಗಲಿ, ದಿಲ್ಲೀಶ್ವರ! ನಾರಿಯ ಹೃದಯದ ಗೂಢರಹಸ್ಯವನ್ನು ಕಾಲಾಂತರದಲ್ಲಿ ತಿಳಿಸುವುದಾಗಿ ತಮಗೊಂದು ದಿನ ಹೇಳಿದ್ದೆನು. ಗಿರಿರಾಣಿಯು ರಾಜಪೂತರಾಜನ ಔರಸಮಗಳೇನೋ ಅಹುದು. ಆದರೆ ಕುಮಾರಿಯಾಗಿದ್ದ ಮುಮತಾಜಿಯು ಹೊಟ್ಟೆಯಲ್ಲಿ ಹುಟ್ಟಿದವಳು. ಆ ಕೌಮಾರಿಕಾವಸ್ಥೆಯ ಕಾಲದ ನನ್ನ ರತ್ನವನ್ನು ವಕ್ಷದಲ್ಲಿಟ್ಟು ಮುದ್ದಿಟ್ಟುಕೊಳ್ಳಬೇಕೆಂಬ ಆಶೆಯಿಂದ ಇರುವರೆಗೂ ಛದ್ಮವೇಷದಲ್ಲಿ ದೇಶ ದೇಶ ಹೋಗಿ ಹುಡುಕುತ್ತಿದ್ದೆನು. ಅರಾವಳಿ ಬೆಟ್ಟದಲ್ಲೊಂದುದಿನ ಉನ್ಮಾದಿನಿಯ ವೇಷದಲ್ಲಿ ತಿರುಗುತ್ತಿದ್ದೆನು. ಆ ರಾಕ್ಷಸಿಯ, ನನ್ನಾ ಪಾಪಿಯಾದ, ಸವತಿಯ ಮಗಳು ಹಿರಣ್ಮಯಿಯನ್ನು ನೋಡಿದೆನು. ಪ್ರತಾಪಸಿಂಹನ ಮಗನ ಸಂಗಡ ಆ ಹುಡುಗಿಯು ವಿಹರಿಸುತ್ತಿದ್ದಳು. ನೋಡಿ ಹೃದಯದ ಬೆಂಕಿಯ ಉರಿಯು ಹೆಚ್ಚಾಯಿತು. ಹುಡುಗಿಯನ್ನು ಸರ್ವನಾಶಮಾಡಿ ಅವಳ ತಾಯಿಯ ಮೇಲಿನ ಕ್ರೋಧವನ್ನು ತೀರಿಸಿಕೊಳ್ಳಬೇಕೆಂದು ಪ್ರತಿಜ್ಞೆಯನ್ನು ಮಾಡಿದೆನು. ಅವಳಾರಾಕ್ಷಸಿಯಾದ ತಾಯಿಯು ನನ್ನನ್ನು ಮುಸಲಮಾನಿಯೆಂದು ನನ್ನ ಪ್ರಾಣಕಾಂತನನ್ನು ನನ್ನಿಂದಪರಿಹರಿಸಿದ್ದಳೆಂಬ ಸ್ಮರಣೆಯು ಪುನಃ ಉಂಟಾಗಿ, ಅವಳ ಮಗಳನ್ನು ನೀಚಕುಲದಲ್ಲಿ ಹುಟ್ಟಿದೊಬ್ಬ ಮುಸಲಮಾನನಿಗೆ ಮದುವೆ ಮಾಡಿಸ

ಕೊಡದೇಕೆ? ಎಂದು ತೋರಿತು. ಅನೇಕ ಪ್ರಯತ್ನಗಳಿಂದಲೂ ಅನೇಕ ಒಳಸಂಚು ಗಳಿಂದಲೂ ನನ್ನ ಆಶೆಯು ಕೈಗೂಡುವುದಕ್ಕೆ ಬಂದಿದ್ದಿತು. ಬಳಿಕ ತಾವು ಅಕಸ್ಮಾತ್ತಾಗಿ ಬಂದು ಹಿರಣ್ಮಯಿಯ ಮದುವೆಯಾಗುವುದನ್ನು ಅಡ್ಡಿ ಮಾಡಿದುದು ನೆನಪನಲ್ಲಿದೆಯೆ? ಆದಿರಲಿ—ದಿನವು ವರ್ಷದಲ್ಲೂ ವರ್ಷವು ಯುಗದಲ್ಲೂ ಪರಿಣಮಿಸಿ ಹೋಯಿತು. ನನ್ನ ಧನವು ಎಲ್ಲಿಯೂ ಸಿಕ್ಕಲಿಲ್ಲ. ಅನನ್ಯೋಪಾಯಿಯಾಗಿ ನನ್ನ ದೊಡ್ಡಪ್ಪನ ಮಗ ಳಾದ ಮಹಾರಾಣಿ ಚಾಂದಸುಲತಾನೆಯ ಮರೆ ಹೊಕ್ಕಿದನು. ಅವಳು ಈ ನಿರ್ಭಾಗ್ಯೆ ತಂಗಿಯ ದುಃಖವನ್ನು ನೋಡಿ ಮರುಗಿದನು. ನನ್ನ ಕೋರಿಕೆಯ ಪ್ರಕಾರವೇ ಅವಳು ಬಿರಾರು ದೇಶವನ್ನು ಬಿಟ್ಟುಕೊಟ್ಟು ತಮ್ಮೊಂದಿಗೆ ಸಂಧಿಯನ್ನು ಮಾಡಿಕೊಂಡಳು. ಅವಳ ಹೇಳಿಕೆಯ ಪ್ರಕಾರವೇ ತಮಗೆ ಬರೆದ ಕಾಗದದಲ್ಲಿ ಚಿತ್ರಪಟವನ್ನಿಟ್ಟು ಕಳುಹಿ ಸಿದ್ದೆನು''. ಹೀಗೆಂದು ಹೇಳುತ್ತಿದ್ದಹಾಗೆ ಮುಮತಾಜಿಯು ಹುಚ್ಚಿಯ ಹಾಗೆ ನಕ್ಕು ಪುನಃ ಹೇಳತೊಡಗಿದಳು :—'' ಇಂದೇ ನನ್ನ ಆಶೆಯು ಕೈಗೂಡುವುದು: ಅಪ್ಪಣೆ ಯನ್ನು ಕೊಟ್ಟರೆ ಈಗಲೇ ಹೋಗಿ ನನ್ನ ರತ್ನವನ್ನು ತಬ್ಬಿ ಮುದ್ದಿಟ್ಟುಕೊಳ್ಳುವೆನು. ಈ ಪ್ರಾಣದ ಜ್ವಾಲೆಯು ಕಡಿಮೆಯಾಗುವುದು.''

ಅಕಬರ:—ರಾಜ್ಞಿ! ಇಷ್ಟು ಕಾತರೆಯಾಗಬೇಕೆ? ಈ ವಿಚಾರವನ್ನು ಕುರಿತು ತಮ್ಮ ಸಂಗಡ ಆಲೋಚಿಸಬೇಕಾಗಿದೆ.

ಉನ್ಮಾದಿನಿ:—(ಹಲ್ಲು ಕಡಿದುಕೊಂಡು) ಹೇಳಬೇಕಾದುದನ್ನು ಬೇಗನೆ ಹೇಳೋಣಾಗಲಿ—ತಡವುಬೇಡ.

ಸಮ್ರಾಜ:—ನಾನು ಹೇಳುವುದನ್ನು ಸ್ಥಿರಚಿತ್ತದಿಂದ ಲಾಲಿಸಬೇಕು. ತಮ್ಮ ಮಗಳ ಮಂಗಳಕ್ಕೆ ಸಲವಾಗಿ, ಅವಳ ಭವಿಷ್ಯ ಸುಖಕ್ಕೆ ಸಲವಾಗಿ, ಬಹಳ ಯೋಚಿ ಸುತ್ತಿದ್ದೇನೆ. ಘಟನಾಪರಂಪರೆಯ ಸಂಘಟನದಿಂದ ರಾಣಾಪ್ರತಾಪಸಿಂಹನ ಮಗ ಅಜಯಸಿಂಹನಿಗೂ ಗಿರಿರಾಣಿಗೂ ಪರಸ್ಪರ ಸದ್ಭಾವವುಂಟಾಗಿದೆ. ಆದುಕಾರಣ ನನ್ನ ಇಷ್ಟಪ್ರಕಾರ ಅವರವರಿಗೆ ಈ ದಿನರಾತ್ರಿ ಮದುವೆಯಾಗುವುದು. ಈ ಸಂಬಂಧವು ತಮ್ಮ ಮಗಳಿಗೆ ಹೆಚ್ಚು ಮಂಗಳಕರವಾದುದೆಂದು ನಿಮಗೂ ಗೋಚರವಾಗಬಹುದು. ಆದರೆ ಗಿರಿರಾಣಿಯನ್ನು ಹಿಂದೂ ಎಂದು ಎಲ್ಲರೂ ತಿಳಿದಿದ್ದಾರೆ. ಮುಸಲಮಾನಿಯ ಗರ್ಭದಲ್ಲಿ ಹುಟ್ಟಿದವಳೆಂದು ಯಾರೂ ಅರಿಯರು. ನಾನು ಇದುವರೆಗೂ ತಿಳಿದಿರಲಿಲ್ಲ ತಾವು ನಿಜವಾದ ಪರಿಚಯವನ್ನು ಹೊರಪಡಿಸಿದರೆ ಗರ್ವಿತನಾದ ಹಿಂದೂರಾಜನ ಮಗ ಅಜಯಸಿಂಹನು ಈ ಮದುವೆಗೆ ಸಮ್ಮತಿಸನು. ಆಗ ತಾವಾಗಿಯೇ ತಮ್ಮ ಮಗಳ ಭವಿಷ್ಯ ಸುಖವನ್ನು ನಷ್ಟಮಾಡಿದ ಹಾಗಾಗುವುದು. ಆದುದರಿಂದ ತಾವು ಈ ಮದು ವೆಯಾಗುವವರೆಗೂ ತಮ್ಮ ಮಗಳನ್ನು ನೋಡದಿರಬೇಕೆಂದು ಬೇಡುತ್ತೇನೆ.

ಉನ್ಮಾದಿನಿ:—(ಹಲ್ಲು ಕಡಿದು)ಹಾಗಾದರೆ, ಈಗ ನಾನು ಪುನಃ ಅಹಮದ ನಗರಕ್ಕೆ ಹಿಂದಿರಿಗಿ ಹೋಗುವುದು ತಮ್ಮ ಇಷ್ಟವಲ್ಲವೆ? ಅದೀಗ ಉತ್ತಮವಾದ ಆಲೋಚನೆ!

ಸಮ್ರಾಜ:—ಮದುವೆಯಾಗಿ ಪೂರೈಸುವವರೆಗೆ ನೋಡುವುದು ಬೇಡ. ಆದ ಬಳಿಕ ಇಷ್ಟವಿದ್ದ ಹಾಗೆ ಮಾಡಬಹುದು.

ಮುಮತಾಜೆ:—(ಘಟ್ಟಿಯಾಗಿ ನಕ್ಕು) ಅಕಬರಷಹ! ತಾವು ಇಷ್ಟುಕಾಲ ವಿಸ್ತಾರವಾದೀ ಭಾರತಭೂಮಿಯ ರಾಜದಂಡವನ್ನು ಧಾರಣಮಾಡಿದ್ದರೂ ನಾರಿಯ ಹೃದಯವನ್ನರಿಯಲಾರದವರಾಗಿದ್ದೀರಿ. ಈ ಹೃದಯದಲ್ಲಿ ಉರಿಯುವ ಪ್ರಚಂಡವಾದ ಜ್ವಾಲೆಯನ್ನು ತಿಳಿಯ ಬಲ್ಲಿರಾ? ಕೇಳೋಣಾಗಲಿ, ದಿಲ್ಲೀಶ್ವರ! ತಾವು ಬೇಡಿದರೂ ಭಯವನ್ನು ತೋರಿದರೂ ಉನ್ಮಾದಿನಿಯ ಪ್ರಾಣವು ಈಗಲೇ ಹೋದರೂ, ಪ್ರಪಂಚವೇ ಹಾಳಾಗಿ ಹೋದರೂ ನಾನು ತಮ್ಮ ಮಾತನ್ನು ಕೇಳತಕ್ಕವಳಲ್ಲ. ಇದೋ ಹೊರಟೆನು. ಈ ನಿಮಿಷದಲ್ಲಿ ಹೋಗಿ ನನ್ನ ರತ್ನವನ್ನೆತ್ತಿಕೊಂಡು ಮುದ್ದಿಟ್ಟುಕೊಳ್ಳುವೆನು. ಧೈರ್ಯವಿದ್ದರೆ ಬಂದು ನನ್ನನ್ನು ಅಡ್ಡಿಮಾಡೋಣಾಗಲಿ!

ಉನ್ಮಾದಿನಿಯು ಪರದೆಯ ಬಟ್ಟೆಯನ್ನು ತಲೆಯ ಮೇಲೆ ಹಾಕಿಕೊಂಡು ಅಲ್ಲಿಂದ ಬೇಗನೆ ಹೊರಟುಹೋದಳು. ಅಕಬರನು ಬೆರಗಾಗಿ ನಿಂತಿದ್ದನು.

## ಹನ್ನೆರಡನೆಯ ಪರಿಚ್ಛೇದ.

ದುರ್ಗದಲ್ಲಿ ಬಹಳ ದೊಡ್ಡ ಉತ್ಸವದ ದಿವಸ. ಇಂದು ವಸಂತದ ಪೂರ್ಣಿಮೆಯ ರಾತ್ರಿ. ಗಿರಿರಾಣಿಯನ್ನು ಅಜಯಸಿಂಹನಿಗೆ ಕೊಟ್ಟು ವಿವಾಹಮಹೋತ್ಸವವು ನಡೆಯುವುದು. ಎಲ್ಲರ ಮುಖಮಂಡಲದಲ್ಲೂ ಸ್ಫೂರ್ತಿಯೂ ಆನಂದವೂ ಪ್ರಕಾಶಗೊಂಡಿರುವುವು. ಸಮೀಪ ಪ್ರದೇಶಗಳಲ್ಲಿದ್ದ ದೊಡ್ಡ ಕ್ಷತ್ರಿಯ ವಂಶದವರಿಗೆ ಲಗ್ನಪತ್ರಿಕೆಗಳು ಹೋಗಿ ಅವರೆಲ್ಲರೂ ಬಂದಿರುವರು. ದುರ್ಗದೆದುರಿಗೆ ಹೂವಿನ ತೋರಣಗಳು. ಕೋಟೆ ತೆನೆಗಳಿಗೆಲ್ಲಾ ಹೂವಿನ ಹಾರಗಳು. ಬಹು ಬೆಲೆಯುಳ್ಳ ಪೊಂಜರಿಗೆಯಿಂದ ಕಸೂತಿ ಮಾಡಿದ್ದ ಚಂದ್ರಾತಪಗಳು ಗಗನತಲದಲ್ಲಿ ಕಣ್ಕೋರೈಸುತ್ತಿದ್ದವು. ಗಾಯಕ ಗಾಯಕಿಯರು ಪಾಡುತ್ತಿದ್ದ ಸಂಗೀತದ ಧ್ವನಿಯೂ ವಿವಿಧ ವಾದ್ಯ ಯಂತ್ರಗಳ ಮಧುರ

ನಿನಾದವೂ ವಸಂತದ ಮೃದುಮಾರುತಮಯವಾದ ಗಗನ ಪಟದಲ್ಲೂ ಕಲನಾದವುಳ್ಳ ಪೂರ್ಣಾ ನದಿಯ ಪೂರ್ಣ ವೇಗಮಯವಾದ ಹೃದಯದಲ್ಲೂ ಮಾರ್ದನಿಗೊಳಿಸುತ್ತಿದ್ದವು. ಸಮೀಪದಲ್ಲಿ ಭಾರತಸಮ್ರಾಜ ಅಕಬರಷಹನ ಬಹು ಸೈನ್ಯದ ವಿಸ್ತಾರವಾದ ಶಿಬಿರವು ಕಾಣುತ್ತಿತ್ತು. ಅರ್ಧ ಹರಿದಾರಿಯ ದೂರದಲ್ಲಿ ಅಜಯಸಿಂಹನ ಶಿಬಿರವು ಸ್ಥಾಪಿತವಾಗಿದ್ದಿತು.

ಹೊತ್ತು ಎರಡನೆಯ ಜಾಮು. ದುರ್ಗಕ್ಕೆ ಸಮೀಪದಲ್ಲಿದ್ದ ಪುಷ್ಪೋದ್ಯಾನವು ವಸಂತದ ಪ್ರಾರಂಭಕಾಲದ ಸುವಾಸನೆಯುಳ್ಳ ವಿವಿಧ ಕುಸುಮಗಳಿಂದ ಶೋಭಿಸುತ್ತಿದೆ. ಅಶೋಕ ವೃಕ್ಷದ ಕೊಂಬೆಯ ಮೇಲೆ ಕೋಕಿಲೆಯು ಪಂಚಮರಾಗದಲ್ಲಿ ಗಾನ ಮಾಡುತ್ತಿದೆ. ಅದರ ಪಾರ್ಶ್ವದಲ್ಲಿ ಕದಂಬ ವೃಕ್ಷದೊಳಗೆ ಸಣ್ಣ ಮೈಯನ್ನು ಬಚ್ಚಿಟ್ಟುಕೊಂಡು ಪಾಪಿಯಾ ಹಕ್ಕಿಯು ಸಪ್ತಮಸ್ವರದಲ್ಲಿ ಉಚ್ಚತರವಾದ ಮಧುರತರ ತಾನದಲ್ಲಿ ಕೋಕಿಲೆಯ ಮಧುರಗಾನಕ್ಕೆ ಉತ್ತರವನ್ನು ಕೊಡುತ್ತಿದೆ. ಪೂಗಾಳಿಯು ಪೂರ್ಣಾ ನದಿಯ ಶೀತಲವಾದ ಜಲದಲ್ಲಿ ಮುಳುಗಿ ಹೊಸದಾಗಿ ಅಲರ್ದ ಕುಸುಮ ಕುಲವನ್ನು ಆಲಿಂಗನೆ ಮಾಡಿ ಮೃದವಾದ ದೇಹವನ್ನು ಸೌರಭದಿಂದ ತುಂಬಿಕೊಂಡು ಉದ್ಯಾನದಲ್ಲಿ ಸರಸವಾಡುತ್ತಿದೆ. ಮೃದು ಮಾರುತದಿಂದ ಸೇವಿತವಾಗಿಯೂ ಹಕ್ಕಿಯ ಕಾಕಲಿ ಕೂಗಿನಿಂದ ತುಂಬಿದುದಾಗಿಯೂ ಪೂದೊಡಂಬೆಯಿಂದ ಶೋಭಿತವಾಗಿಯೂ ಇದ್ದ ಕದಂಬ ತರುವಿನ ತಲದಲ್ಲಿ ಪುಷ್ಪದ ಸಿಂಹಾಸನದಲ್ಲಿ ಪುಷ್ಪಾಲಂಕಾರಗಳಿಂದ ಶೋಭಿತೆಯಾಗಿ ನಗುಮೊಗದವಳಾಗಿ ಗಿರಿರಾಣಿಯು ರಾಜ ರಾಜೇಶ್ವರಿಯ ಹಾಗೆ ವಿರಾಜಿಸುತ್ತಿದ್ದಳು! ಚಪಲೆಯು ಚರಣ ತಲದಲ್ಲಿ ಕುಳಿತು ಅಲಕ್ತಕದಿಂದ ಗಿರಿರಾಣಿಯ ಚರಣಗಳನ್ನು ರಂಜನೆ ಮಾಡಿ ನಲುಂಗಿಡುತ್ತಿದ್ದಳು. ಉಳಿದ ಗೆಳತಿಯರಲ್ಲಿ ಒಬ್ಬೊಬ್ಬರೊಂದೊಂದು ಕೆಲಸವನ್ನು ಮಾಡುತ್ತಿದ್ದರು. ಒಬ್ಬಳು ವೀಣೆಯನ್ನು ನುಡಿಸುತ್ತಿದ್ದಳು. ಕೆಲವರು ಹೂವುಗಳನ್ನೆತ್ತುತ್ತಿದ್ದರು. ಒಬ್ಬಳು ಹೂವು ರಾಶಿಯನ್ನು ಮುಂದಿಟ್ಟುಕೊಂಡು ಹಾರವನ್ನು ಪೋಣಿಸುತ್ತಿದ್ದಳು. ಕೆಲವರು ಒಟ್ಟಿಗೆ ಕುಳಿತು ಅಂದಿನ ರಾತ್ರಿ ನವದಂಪತಿಯರ ಸೆಜ್ಜೇಮನೆಯಲ್ಲಿ ರಮಣಿಯರಿಗೆ ಪ್ರಮೋದಕರವಾದ ರಂಗಭೂಮಿಯಲ್ಲಿ ಪೂವಾಸೆಯನ್ನು ಮಾಡುವ ವಿಧಾನಗಳನ್ನೂ ಅವರವರು ಸರಸ ಮಾಡುವ ಕ್ರಮಗಳನ್ನೂ ಕುರಿತು ತಂತಮ್ಮಲ್ಲಿ ಮಾತಾಡಿಕೊಳ್ಳುತ್ತಿದ್ದರು. ಆ ಸಮಯದಲ್ಲಿ ರಾಜಪೂತ ಸೈನಿಕನೊಬ್ಬನು ಮೆಲ್ಲಮೆಲ್ಲಗೆ ಬಂದು ಗಿರಿರಾಣಿಯೆದುರಿಗೆ ನಿಂತು ಅವಳಿಗೆ ಅಭಿವಂದಿಸಿದನು. ಗಿರಿರಾಣಿಯು ಬೇಸರಗೊಂಡವಳಾಗಿ "ನೀನಾರು" ಎಂದು ಕೇಳಿದಳು.

ರಾಜಪೂತ ಸೈನಿಕ:—ರಾಣಿ! ಇಂದು ಗಿರಿರಾಜ್ಯದಲ್ಲಿ ಆನಂದದ ಕೋಲಾಹಲ. ಸುಂದರಿಯರ ಕುಲಕ್ಕೆ ಈಶ್ವರಿಯಾಗಿರುವ ಗಿರಿರಾಣಿಯನ್ನು ನಮ್ಮ ರಾಜಕುಮಾರ ಅಜಯಸಿಂಹನಿಗೆ ಕೊಟ್ಟು ವಿವಾಹ ಮಹೋತ್ಸವವು ಬೆಳೆಯುವುದೆಂದು ಕೇಳಿ ದೂರದೇಶ ವಾದ ಮೇವಾರದೇಶದಿಂದ ನಾನೊಬ್ಬ ದರಿದ್ರ ರಾಜಪೂತ ಸೈನಿಕನು ಉತ್ಸವವನ್ನು ನೋಡಲು ಬಂದವನು. ದೇವಿ! ಈ ದಿನ ಈ ಬಡವನ ಆನಂದಕ್ಕೆ ಪಾರವೇ ಇರದು. ಅದುಕಾರಣ ನವದಂಪತಿಯರಿಗೆ ಉಡುಗೆರೆಯಾಗಿ ಈ ಪುಷ್ಪಾಲಂಕಾರಗಳನ್ನು ಕೊಡಲು ತಂದಿರುವೆನು. ತಾವು ದಯವಿಟ್ಟು ಈ ಬಡ ಉಡುಗೆರೆಯನ್ನು ಸ್ವೀಕರಿಸಬೇಕು.

ರಾಜಪೂತ ಸೈನಿಕನು ಬಟ್ಟೆಯ ಗಂಟನ್ನು ಎರಡು ಪುಷ್ಪದ ಕಿರೀಟಗಳನ್ನು ತೆಗೆದು ಗಿರಿರಾಣಿಯ ಕಾಲಿನ ಹತ್ತಿರ ಇಡಗಿ '' ನಾನು ಬಹಳ ಶ್ರಮಪಟ್ಟು ರಾತ್ರಿ ಯೆಲ್ಲಾ ನಿದ್ದೆ ಇಲ್ಲದೆ ಈ ಎರಡು ಕಿರೀಟಗಳನ್ನು ಮಾಡಿದೆನು. ತಾವು ಬಡವನ ಕಾಣಿಕೆ ಯೆಂದು ಉದಾಸೀನ ಮಾಡದೆ ಇದನ್ನೊಪ್ಪಿಸಿಕೊಂಡರೆ ನನ್ನ ಶ್ರಮವು ಸಾರ್ಥಕವಾಗುವುದು '' ಎಂದು ಹೇಳಿದನು.

ಅತಿ ವಿಚಿತ್ರವಾಗಿಯೂ ಅತಿ ಆಶ್ಚರ್ಯಕರವಾಗಿಯೂ ನಿರ್ಮಿತವಾಗಿದ್ದ ಕಿರೀಟಗಳನ್ನು ನೋಡಿ ಗಿರಿರಾಣಿಯೂ ಚಪಲೆಯೂ ಬೆರಗಾದರು. ಪುಷ್ಪಗಳಿಂದ ಆ ಮಾದರಿಯ ಅಲಂಕಾರವನ್ನು ಮಾಡಲಾಗುವುದೆಂದು ಅವರು ತಿಳಿದಿರಲಿಲ್ಲ. ವಿಧ ವಿಧ ಹೂವುಗಳು ವಿವಿಧ ವರ್ಣಗಳಿಂದ ಕಣ್ಣೊಳದು ವಿವಿಧ ಸೌರಭದಿಂದ ಮನವೊಲಿಸಿ ಕಿರೀಟಗಳೆರಡೂ ಗಿರಿರಾಣಿಯ ಚರಣದಲ್ಲಿ ಪ್ರಕಾಶಿಸುತ್ತಿದ್ದವು.

ಗಿರಿರಾಣಿ:—ಇಂಥಾ ಸುಂದರವಾದ ಹೂವು ನಿನಗೆಲ್ಲಿ ಸಿಕ್ಕಿತು?

ಸೈನಿಕ:—ದೇವಿ! ನಿನ್ನೆನ ರಾತ್ರಿ ಈ ಕಾನನದಲ್ಲಿ ಒಂದೊಂದು ಬಳ್ಳಿಯನ್ನೂ ಒಂದೊಂದು ಎಲೆಯನ್ನೂ ಹುಡಿಕಿ ತಂದೆನು.

ಚಪಲೆ:—ಇವುಗಳನ್ನು ಕಟ್ಟಿ ಹೀಗೆ ಮಾಡಿದವರಾರು?

'' ನಾನು ನನ್ನ ಕೈಯಿಂದ ಮಾಡಿದೆನು. ಚಿಕ್ಕಂದಿನಲ್ಲಿ ಪುಷ್ಪಸೌರಭಮಯ ವಾದ ನಮ್ಮ ವಾಸ ಭೂಮಿ ಮೇವಾರ ದೇಶದಲ್ಲಿ ಪುಷ್ಪಾಲಂಕಾರಗಳನ್ನು ಮಾಡುವು ದನ್ನು ಕಲಿತಿದ್ದೆನು. ಆಗ ಕಲಿತಿದ್ದುದು ಈಗ ಸಾರ್ಥಕವಾಯಿತು ''

ಚಪಲೆಯೂ ಸ್ವಲ್ಪ ಹೊತ್ತು ಸೈನಿಕನ ಮುಖವನ್ನು ನೋಡುತ್ತಿದ್ದು ಬಳಿಕ ನಕ್ಕು '' ಪುರುಷನು ಪುಷ್ಪಗಳ ಗೌರವವನ್ನು ಹೀಗೆ ತಿಳಿಯಬಲ್ಲನೆ! ನಿನ್ನನ್ನು

ಮತ್ತೆಲ್ಲೋ ನೋಡಿದ್ದ ಹಾಗೆ ನೆನಪಿದೆ. ನೀನು ಇದಕ್ಕೆ ಮೊದಲು ಈ ರಾಜ್ಯಕ್ಕೆ ಬಂದಿರಲಿಲ್ಲವೆ ?'' ಎಂದು ಹೇಳಿದಳು.

ರಾಜಪೂತ ಸೈನಿಕನು ಚಪಲೆಯ ಮಾತಿಗೆ ಉತ್ತರವನ್ನು ಕೊಡದೆ ಎದ್ದು ನಿಂತು, ''ರಾಣಿ! ಅಪ್ಪಣೆಯಾದರೆ ಈಗ ಹೋಗುತ್ತೇನೆ. ರಾತ್ರಿ ಉತ್ಸವದ ಕಾಲದಲ್ಲಿ ಪುನಃ ಬರುವೆನು'' ಎಂದನು.

ಚಪಲೆಯು ಎದ್ದು ನಿಂತು ಮುಂದವರಿದು ಹೋಗಿ ಅವನ ಕೈಯನ್ನು ಹಿಡಿದು, ನಗುತ ನಗುತ, ''ಹೋಗುವುದೆಲ್ಲಿಗೆ ? ನಾನು ಕೇಳಿದುದಕ್ಕೆ ಉತ್ತರವನ್ನು ಕೊಡು'' ಎಂದಳು.

ಗಿರಿರಾಣಿಯು ತಿರಸ್ಕಾರ ಸೂಚಕವಾದ ಸ್ವರದಿಂದ ಚಪಲೆಯನ್ನು ಕುರಿತು, ''ಛೀ! ನಿನಗೆ ಸ್ವಲ್ಪವೂ ಲಜ್ಜೆ ಬೇಡವೆ ? ಪುರುಷನೊಂದಿಗೆ ಹೀಗೆ ಸರಸ ಮಾತಾಡುವುದುಂಟೇ ?'' ಎಂದಳು.

ಚಪಲೆಯು ರಾಜಪೂತ ಸೈನಿಕನನ್ನು ಆಲಿಂಗನೆ ಮಾಡಿಕೊಂಡು ಅವನ ಮುಖವನ್ನು ಮುದ್ದಿಟ್ಟು ನಗುತ, ನಗುತ, ''ರಾಣಿ! ದಾಡಿ ಇದ್ದ ಮಾತ್ರಕ್ಕೆ ಪುರುಷರಾಗುತ್ತಾರೆಯೆ? ಹೆಂಗಸರಿಗೆ ಉದ್ದ ದಾಡಿ ಇರುವುದು ನೀವಾವಾಗಲೂ ನೋಡಿಲ್ಲವೆ? ನಿಮಗೆ ನೆನಪಿಲ್ಲವೆ ? ನಾವು ನಮ್ಮ ಕಾನನದಲ್ಲೊಂದುದಿನ ಒಬ್ಬ ಸನ್ಯಾಸಿಯನ್ನು ನೋಡಲಿಲ್ಲವೆ ? ಅವನಿಗೆ ಜಟೆಯೂ ಇದ್ದಿತು! ಆದರೆ ಅವನಿಗೂ ಇವನ ಹಾಗೆ ನೀಲ ಪದ್ಮದ ಹಾಗಿದ್ದ ಮುದ್ದಾದ ಕಣ್ಣುಗಳು, ಇವನ ಹಾಗೆ ಮೋಹಗೊಳಿಸುವ ವಿಲೋಲ ಕಟಾಕ್ಷ, ಇವನ ಹಾಗೆ ಗುಲಾಬಿಹೂವಿನ ಹಾಗಿದ್ದ ತುಟಿಗಳು ಹೀಗೇವೇ ವಸಂತದ ಪೂಗಾಳಿಗೆ ಬಳುಕುವ ಲತೆಯ ಹಾಗೆ ಮೈ. ಹೀಗೆ ನಿನ್ನ ಕೊಳಲಲ್ಲಿ ಬರುವ ಮಲ್ಲಾರಿ ರಾಗದ ಕಡೆಯ ತಾನದ ಹಾಗೆ ಕಲ್ಲನ್ನು ಕರಗಿಸುವ ಕಂಠಸ್ವರ. ಅದಕ್ಕೆ ಸಾಕ್ಷಿ ಬೇಕಾದರೆ ನೋಡು!'' ಎಂದು ಹೇಳಿ ರಾಜಪೂತ ಸೈನಿಕನ ದಾಡಿಯನ್ನೂ ಉತ್ತರೀಯವನ್ನೂ ಬಲವಾಗಿ ಹಿಡಿದೆಳೆದಳು. ಸೈನಿಕನ ಕೃತ್ರಿಮ ದಾಡಿಯು ಕಳಚಿ ನೆಲಕ್ಕೆ ಬಿತ್ತು, ಮುದುರಿದ್ದ ದೀರ್ಘವಾದ ಸೋರ್ಮುಡಿಯು ಬಿಚ್ಚಿಹೋಗಿ ಚರಣವನ್ನು ಚುಂಬನ ಮಾಡಿತು. ಉಚ್ಚವಾದ ಉರಸು ತೆರೆಯಿಂದ ಮೇಲಕ್ಕೆಸೆದ ಕಮಲಯುಗಳದಂತೆ ಕಂಪಿತವಾಯಿತು. ಮುಖಮಂಡಲವು ಮೊಬ್ಬಾದ ಮೇಘದಿಂದ ತೆರೆಮುಬಿಟ್ಟ ಪೂರ್ಣಚಂದ್ರನ ಹಾಗೆ ಒಮ್ಮಿಂದೊಮ್ಮೆ ದಿವ್ಯ ಕಾಂತಿಯಿಂದ ಪ್ರಕಾಶಗೊಂಡಿತು! ದಿಙ್ಮಂಡಲವನ್ನು ಬೆಳಕುಮಾಡಿ ಉದ್ಯಾನವನ್ನು ಸೊಗಯಿಸ ಮಾಡುತ್ತಿದ್ದ ಕುಸುಮ

ರಾಶಿಯನ್ನು ಜರಿದು ಗಿರಿರಾಣಿಯನ್ನೂ ಚಪಲೆಯನ್ನೂ ಬೆರಗುಮಾಡಿ ರಾಜಪೂತ ಸೈನಿಕನು ಅತುಲ ಸೌಂದರ್ಯಮಯವಾದ ಭುವನ ಮೋಹಿನೀ ಕಿಶೋರಿಯ ರೂಪವನ್ನು ತಾಳಿದನು! ಚಪಲೆಯು ಸ್ವಲ್ಪ ಹೊತ್ತು ಮುಗ್ಧನೇತ್ರೆಯಾಗಿ ಆ ರೂಪರಾಶಿಯನ್ನು ನೋಡಿ ಬಳಿಕ ಗಿರಿರಾಣಿಯನ್ನು ಕುರಿತು "ರಾಣಿ! ನೋಡಿದೆಯಾ? ನಾನು ಹೇಳಿದುದು ನಿಜವೋ ಸುಳ್ಳೊ? ಯಾವ ದಿನ ನಾನು ಇವಳನ್ನು ಸನ್ಯಾಸಿಯ ವೇಷದಲ್ಲಿ ನೋಡಿದೆನೋ ಆ ದಿನವೇ ಇವಳು ಪುರುಷನಲ್ಲವೆಂದು ತಿಳಿದೆನು. ಅನುಪಮವಾದೀ ಕಾಂತಿಯು ಪುರುಷವೇಷದಿಂದ ಮರೆಯಾಗಿ ಹೋಗಬಲ್ಲದೆ?" ಎಂದಳು.

ಗಿರಿರಾಣಿಯು ಆಶ್ಚರ್ಯದಿಂದ, "ಇದು ಆಶ್ಚರ್ಯ! ನನಗೇನೂ ಗೊತ್ತಾಗಲಿಲ್ಲ! ಅವಳ ಪರಿಚಯವನ್ನು ಕೇಳಿ ನೋಡು. ನನಗೆ ಬಹಳ ಕುತೂಹಲವುಂಟಾಗಿದೆ" ಎಂದಳು.

ಚಪಲೆಯು ಸುಂದರಿಯ ಕೈಯನ್ನು ಹಿಡಿದು ಗುಲಾಬಿಹೂವಿನ ಹಾಗಿದ್ದ ಅವಳ ಗಲ್ಲವನ್ನು ಹಿಡಿದೆತ್ತಿ, "ಸನ್ಯಾಸಿಗಳೆ! ತಮ್ಮ ತಪೋವನವಿರುವುದೆಲ್ಲಿ?" ಎಂದಳು.

ಗಿರಿರಾಣಿಯು, "ಚಪಲೆ! ಕುಚೋದ್ಯವನ್ನು ಬಿಡು. ಪರಿಚಯವನ್ನು ಕೇಳು" ಎಂದಳು.

ಚಪಲೆ:—(ಕೈಮುಗಿದುಕೊಂಡು) ಹಾಗಾದರೆ ಸನ್ಯಾಸಿಮಹಾಶಯರೆ! ತಾವು ಯಾವ ದೇಶದ ಸನ್ಯಾಸಿಗಳು? ಈ ಸನ್ಯಾಸವ್ರತವನ್ನು ಉದ್ಯಾಪನೆ ಮಾಡುವುದು ಯಾವಾಗ? ಯಾವ ಸಾಧನೆಗೆ ಸಲುವಾಗಿ, ಯಾವ ರಾಜಸಿಂಹಾಸನವನ್ನಲಂಕರಿಸುವುದಕ್ಕೆ ಸಲುವಾಗಿ, ಇಂಥಾ ಚಂದ್ರನ ಹಾಗಿರುವ ಮುಖವನ್ನು ವಾಲ್ಮೀಕ ಮುನಿಗಳ ತಪೋವನಗಾಗಿ ಮಾಡಿಕೊಂಡಿರುವಿರಿ? ಇಂಥಾ ಕಮನೀಯವಾದ ಕನಕಲತೆಯನ್ನು ಕಾವಿಬಟ್ಟೆಯಿಂದ ಮುಚ್ಚಿಟ್ಟುಕೊಂಡಿರುವಿರಿ?

ಹಿರಣ್ಮಯಿಯು ಚಪಲೆಯ ಮಾತಿಗೆ ಉತ್ತರವನ್ನು ಹೇಳದೆ ಗಿರಿರಾಣಿಯ ಬಳಿ ಹೋಗಿ ನಿಂತಳು. ಚಪಲೆಯು ಪುನಃ ಹೋಗಿ ಅವಳ ಭುಜದ ಮೇಲೆ ಕೈ ಹಾಕಿಕೊಂಡು ಒಂದು ಕೈಯಿಂದ ಗಲ್ಲವನ್ನು ಹಿಡಿದು ಹಾಡಿದಳು-—"ಪ್ರೇಮವೆ ಪ್ರಿಯಳೆ ಜೋಗವು. ಪ್ರೇಮದಿ ಜೋಗಿಯು ಕಮಲತನುಗೆ ಬೂದಿ ಸಖಿ! ಶ್ಯಾಮಳೆ ರೂಪು ಜ್ಞಾನಂ, ಕೋಮಲ ವನಮಾಲಿ ಜಾನವು ನೀನೆ ಮಂತ್ರಂ||"

ಹಿರಣ್ಮಯಿಯು ಗಿರಿರಾಣಿಯನ್ನು ಕುರಿತು, "ನನಗೆ ಅಪ್ಪಣೆಯನ್ನು ಕೊಟ್ಟರೆ ಹೋಗುವೆನು" ಎಂದಳು.

ಗಿರಿರಾಣಿಯು ಎದ್ದು ನಿಂತು ಹಿರಣ್ಮಯಿಯ ಕೈಯನ್ನು ಹಿಡಿದುಕೊಂಡು, “ ನೀನಾರು ? ಹೇಳು ನಿನ್ನ ಪರಿಚಯವನ್ನು ತಿಳಿಯಲು ಬಹಳ ಆತುರವುಳ್ಳವಳಾಗಿದ್ದೇನೆ ” ಎಂದಳು.

ಹಿರಣ್ಮಯಿಯು ಗಿರಿರಾಣಿಯನ್ನು ಆಲಿಂಗನೆ ಮಾಡಿಕೊಂಡು ಹೇಳತೊಡಗಿದಳು :—“ ದೇವಿ ! ಕ್ಷಮಿಸಬೇಕು. ಇದು ನನ್ನ ಪರಿಚಯವನ್ನು ಹೇಳಿಕೊಳ್ಳುವ ಸಮಯವಲ್ಲ. ಈ ಸಂತೋಷಕಾಲದಲ್ಲಿ ಈ ಉತ್ಸವದ ದಿವಸ ನನ್ನ ದುಃಖದ ಸಮಾಚಾರವನ್ನು ಹೇಳಿ ತಮ್ಮ ಸರಳಾಂತಃಕರಣಕ್ಕೆ ಚಿಂತೆಯನ್ನುಂಟುಮಾಡಲಾರೆನು. ಈ ಶುಭ ವಿವಾಹಮಹೋತ್ಸವವು ನಡೆಯಲಿ; ವೀರ ಅಜಯನ ಮನವೂ ಗಿರಿರಾಣಿಯ ಮನವೂ ಸೇರಿ ಒಂದಾಗಿ ಹೋಗಲಿ. ಬಳಿಕ ಅತುಲಾನಂದದಿಂದ ತಮ್ಮ ಬಳಿ ಎಲ್ಲಾ ಸಂಗತಿಯನ್ನು ವಿವರವಾಗಿ ಹೇಳುವೆನು. ಆಗ ವಿಚಾರವೆಲ್ಲಾ ಎಲ್ಲರಿಗೂ ಗೊತ್ತಾಗುವುದು. ”

ಪಾರ್ಶ್ವದಲ್ಲಿದ್ದ ಅಶೋಕವೃಕ್ಷದ ಅಂತರಾಳದಲ್ಲಿ ಯಾರೋ ಘಟ್ಟಿಯಾಗಿ, “ ಎಲ್ಲಾ ಗೊತ್ತಾಯಿತು ! ಎಲ್ಲಾ ತಿಳಿದೆನು ! ” ಎಂದು ಹೇಳುವುದರೊಂದಿಗೆ ಶಬ್ದವೂ ಕರತಾಳಿಯ ಶಬ್ದವೂ ಉದ್ಯಾನವನವನ್ನೆಲ್ಲಾ ಶಿಲೆಗೊಳಿಸಿದವು. ಎಲ್ಲರೂ ಚಮಕಿತರಾಗಿ ಭಯದಿಂದ ಅತ್ತಕಡೆ ನೋಡಿದರು. ಉನ್ಮಾದಿನಿಯೊಬ್ಬಳು ಅತ್ತಕಡೆಯಿಂದ ಬರುತ್ತಿದ್ದಳು. ಹಿರಣ್ಮಯಿಯು ಉನ್ಮಾದಿನಿಯನ್ನು ದೃಷ್ಟಿಸಿ ನೋಡಿ ಎದೆಯಮೇಲೆ ಕೈಯಿಟ್ಟು ಕಣ್ಣುಗಳನ್ನು ಮುಚ್ಚಿಕೊಂಡು ನೆಲದಮೇಲೆ ಕುಳಿತುಬಿಟ್ಟಳು. ಅವಳ ತಲೆಯು ತಿರುಗಿ ಜ್ಞಾನವು ಹೋಗುತ ಬಂದಿತು. ಗಿರಿರಾಣಿಯೂ ಚಪಲೆಯೂ ಭಯದಿಂದ ಕೂಗಿಕೊಂಡು ಪರಸ್ಪರ ತಬ್ಬಿಕೊಂಡು ಜ್ಞಾನ ಹೋದವರ ಹಾಗಾಗಿ ಉನ್ಮಾದಿನಿಯನ್ನು ನೋಡುತ್ತಿದ್ದರು. ಉನ್ಮಾದಿನಿಯು 'ಚಪಲೆಯನ್ನು ನೆಲದಮೇಲೆ ಕೆಡುಹಿ ಅವಳ ಆಲಿಂಗನದಿಂದ ಗಿರಿರಾಣಿಯನ್ನು ಬಿಡಿಸಿ ಅವಳನ್ನು ತಬ್ಬಿಕೊಂಡು, “ ನನ್ನ ಹೃದಯದ ರತ್ನವೆ ! ನನ್ನಲ್ಲಿ ಬಂದು ಈ ಸಂತಪ್ತವಾಗಿರುವ ಉನ್ಮತ್ತಪ್ರಾಣವನ್ನು ಶೀತಲ ಮಾಡು—ನಾನು ನಿನ್ನ ತಾಯಿ ರಾಜರಾಜೇಶ್ವರಿ ಮುಮತಾಜಬೇಗಂ; ನಿನ್ನನ್ನೊಂದುತಡವೆ ಆಲಿಂಗನ ಮಾಡಿಕೊಳ್ಳುವುದಕ್ಕೆ ಸಲವಾಗಿ ಈ ಹದಿನಾರು ವರ್ಷಕಾಲ ಉನ್ಮಾದಿನಿಯ ವೇಷದಲ್ಲಿ ದೇಶದೇಶ ಅಲಿಯುತ್ತಿದ್ದೆನು ” ಎಂದು ಹೇಳಿದಳು.

## ಹದಿಮೂರನೆಯ ಪರಿಚ್ಛೇದ.

ಸಂಜೆ ಹೊತ್ತು ಮೀರಿ ಹೋಗಿತ್ತು. ಪೂರ್ಣಿಮಾ ರಾತ್ರಿಯ ಪೂರ್ಣಶಶಿಯು ಪೂರ್ಣ ನದಿಯ ಶೀತಲವಾದ ತರಳ ಹೃದಯದೊಂದಿಗೆ ಪೂರ್ಣ ಸುಖದಿಂದ ಸರಸವಾಡುತ್ತಾನೆ. ಚಿರಪ್ರೇಮಮಯವಾದ ನದಿಯ ಪೂರ್ಣ ಪ್ರೇಮದ ಉಛ್ವಾಸವು ತರಂಗ ಭಂಗದಿಂದಲೂ ಮಧುರ ಸಂಗೀತ ಧ್ವನಿಯಿಂದಲೂ ಉಕ್ಕುತ್ತಿದೆ. ಅಮರ ನಂದಿನಿಯಾದಾ ನದಿಯು ನಾವು ಅರಿಯದ ಅಮರ ಲೋಕದ ಭಾಷೆಯಲ್ಲಿ ಸ್ವರ್ಗೀಯ ತಾನದಲ್ಲಿ ಚಂದ್ರನೊಂದಿಗೆ ಪ್ರೇಮಾಲಾಪವನ್ನು ಮಾಡುವ ಹಾಗಿದೆ.

ಚಂದ್ರಕಿರಣದಿಂದ ಸ್ನಾತವಾದಾ ನಿರ್ಜನ ಪ್ರದೇಶದಲ್ಲಿ ಅಮರ ಗೀತದಿಂದ ನಿನಾದಿತವಾದಾ ನದಿಯ ಮರಳಲ್ಲಿ ಹಿರಣ್ಮಯಿಯೊಬ್ಬಳೇ ಕುಳಿತು ರೋದನ ಮಾಡುತ್ತಿದ್ದಾಳೆ. ಚಿಕ್ಕಂದಿನಿಂದ ನಡೆದು ಬಂದ ಜೀವನದ ಘಟನಾವಳಿಗಳೆಲ್ಲವೂ ಬಾರಿಬಾರಿಗೂ ಅವಳ ಹೃದಯದಲ್ಲಿ ಒಂದೊಂದಾಗಿ ಚಿತ್ರಿತವಾಗುತ್ತ ಬಂದವು. ಬಹಳ ಹೊತ್ತಿನ ಮೇಲೆ ಹಿರಣ್ಮಯಿಯು ಸೆರಗಿನಿಂದ ಕಣ್ಣೊರಸಿಕೊಂಡು ಹೇಳತೊಡಗಿದಳು :—" ಇಂದು ಸುಂದರಿ ಗಿರಿರಾಣಿಯನ್ನು ವೀರನಾದ ಮೀವಾರದ ರಾಜಕುಮಾರನಿಗೆ ಕೊಟ್ಟು ಮದುವೆಯಾಗುವುದು! ಇಂದು ನನ್ನ ಅಜಯನ ಹೃದಯದೊಂದಿಗೆ ಸರಳ ಹೃದಯವುಳ್ಳ ಗಿರಿರಾಣಿಯ ಪವಿತ್ರವಾದ ಪ್ರಾಣವು ಸೇರುವುದು! ಇಂದು ನನ್ನ ಪ್ರಾಣಸಖನಾದ ಅಜಯನ ನಿಷ್ಕಳಂಕ ಹೃದಯದಿಂದ ಕಳಂಕಿನಿಯಾದ ಹಿರಣ್ಮಯಿಯ ಪಾಪ ಪ್ರತಿಕೃತಿಯು ಅಳಿಸಿಹೋಗುವುದು! ಹಾಗಾದರೆ ಇಂಥಾ ಸುಖದ ದಿನದಲ್ಲಿ ಇಂಥಾ ಆನಂದೋತ್ಸವದ ಸಮಯದಲ್ಲಿ ನಿರ್ಭಾಗ್ಯೆ ಹಿರಣ್ಮಯಿಯ ನಯನ ಜಲವು ಪೂರ್ಣ ನದಿಯ ಪವಿತ್ರವಾದ ಜಲವನ್ನು ಕಲುಷಿತ ಮಾಡಲೇಕೆ? ನನ್ನ ಅಜಯನು, ನನ್ನ ಪ್ರಾಣಸಖನು ನನ್ನವನಾಗದೆ ಗಿರಿರಾಣಿಯವನಾಗುವನೆಂದು ಈ ಪಾಪ ಹೃದಯವು ಅಷ್ಟೊಂದು ಕಾತರವಾಗುವುದೇನು? ಇಲ್ಲ! ಪ್ರಭು. ಅಂತರ್ಯಾಮಿ! ನೀನು ತಿಳಿಯುವೆ, ಅಜಯನೊಂದು ನಿಮಿಷದ ಸುಖಕ್ಕೆ ಸಲವಾಗಿ ಹಿರಣ್ಮಯಿಯು ತುಚ್ಛವಾದೀ ಪ್ರಾಣವನ್ನು ನೂರು ತಡವೆ ಬಲಿಯಾಗಿ ಒಪ್ಪಿಸುವಳು! ಆದರೆ ದೇವ! ಈ ದಿನ ಉನ್ಮಾದಿನಿಯ ಬಾಯಿಯಿಂದೇನು ಕೇಳಿದೆನು? ಗಿರಿರಾಣಿಯು ಯವನಿಯಾದ ಬೇಗಂಮುಮತಾಜಿಯ ಮಗಳೆ? ಕಡೆಗೆ ಹಿಂದೂ ಸೂರ್ಯನಾದ ಮಹಾರಾಣಾ ಪ್ರತಾಪಸಿಂಹನ ಪುತ್ರನು ಯವನರಾಣಿಯ ಮಗಳನ್ನು ಮದುವೆ ಮಾಡಿಕೊಳ್ಳುವುದೆ? ಅಜಯನು ಇದಾವುದನ್ನೂ ಅರಿಯನು. ಆದರೆ ಈ ಮದುವೆ

ಯಾದ ಬಳಿಕ ಈ ರಹಸ್ಯವು ಹೊರಪಡುವುದು. ಆಗ ಈ ಅಮೃತ ರಾಶಿಯು ವಿಷವಾಗಿ ಪರಿಣಮಿಸುವುದು. ಶುಭಕರವಾದೀ ಮಹೋತ್ಸವದಿಂದ ಘೋರವಾದ ಅನರ್ಥವುಂಟಾಗುವುದು! ದೇವರೆ! ಇಂದು ಅಮೃತದ ಪೂರ್ಣ ಕುಂಭದಲ್ಲಿ ವಿಷದೊಂದು ತೊಟಕನ್ನು ತೊಟಕಿಸಲೇಕೆ?"

ಹಿರಣ್ಮಯಿಯು ಅಲ್ಲೇ ಬಹಳ ಹೊತ್ತು ಕುಳಿತು ಚಿಂತಿಸುತ್ತಿದ್ದಳು. ಹಾಗಾದರೆ ಅವಳು ಅಜಯನ ಬಳಿಗೆ ಹೋಗಿ ಈ ಭಯಂಕರವಾದ ರಹಸ್ಯವನ್ನು ಅವನ ಕಿವಿಯ ಮೇಲೆ ಹಾಕೋಣವೆ? ಬೇಡ! ಅಜಯಸಿಂಹನು ತಂದೆಯಲ್ಲಿ, ಎರಡು ವರ್ಷದಲ್ಲೀ ಪಾಪಿಯಾದ ಹಿರಣ್ಮಯಿಯ ಪಾಪ ಚಿತ್ರವನ್ನು ಹೃದಯದಿಂದ ಕಿತ್ತು ಹಾಕಲಸಮರ್ಥನಾದರೆ ಪ್ರಾಣವನ್ನು ಬಿಡುವುದಾಗಿ ಶಪಥವನ್ನು ಮಾಡಿದ್ದಾನೆ! ಈ ಮದುವೆಯಾಗದೆ ಹೋಗಿ ಈ ನಿರ್ಭಾಗ್ಯೆಯ ಪ್ರತಿಮೆಯು ಪುನಃ ಅವನ ಹೃದಯದಲ್ಲಿ ಚಿತ್ರಿತವಾಗಿ ನೆಲೆಯಾಗಿ ನಿಂತುಹೋದರೆ ಸತ್ಯವ್ರತನಾದ ಅಜಯನು ತನ್ನ ಪ್ರತಿಜ್ಞೆಯನ್ನು ನೆರವೇರಿಸಿಬಿಡುವನು. ಈ ಸಂದರ್ಭದಲ್ಲಿ ಹಿರಣ್ಮಯಿಗೆ ತಾನು ಮಾಡಬೇಕಾದುದಾವುದೂ ತೋಚದೆಹೋಯಿತು. ಕಂಬನಿ ಕೂಡಿದ್ದ ಅವಳ ಕಣ್ಣುಗಳೆದುರಿಗಿದ್ದ ನದಿಯೊಂದಿಗೆ ಚಂದ್ರನು ಪ್ರೇಮದ ಕೇಳಿಯನ್ನು ಸಂಪೂರ್ಣ ಸರಸದಿಂದ ತರಂಗಭಂಗದಿಂದ ಅಭಿನಯಿಸುತ್ತಿದ್ದನು. ಆ ಅಭಿನಯವನ್ನು ನೋಡುತ್ತ ಹಿರಣ್ಮಯಿಯ ಹೃದಯವು ಪೂರ್ವ ಎಂದಿಗೂ ಅನುಭೂತವಾಗದ ವಿಕಾರವನ್ನು ತಾಳಿತು-ಜಾಗ್ರತಾವಸ್ಥೆಯಲ್ಲಿ ಕನಸು ಕಾಣತೊಡಗಿದಳು. ಅವಳು ವಸಂತದ ಪೂರ್ಣಿಮೆಯ ರಾತ್ರಿ ಮಿವಾರದ ಪ್ರಾಸಾದಕ್ಕೆ ಪಾರ್ಶ್ವದಲ್ಲಿದ್ದ ಉದ್ಯಾನದಲ್ಲಿ ಅಜಯನೊಂದಿಗೆ ಹೋಗಿ ಆಡುತ್ತಿದ್ದ ಹಾಗೂ ಅಜಯನು ತನ್ನನ್ನು ಹಿಡಿಯುವದಕ್ಕೆ ನಗುತ್ತ ಓಡಿ ಬರುತ್ತಿದ್ದ ಹಾಗೂ ತಾನು ದೂರದಿಂದ ಅವನ ಮೇಲೆ ಕುಂಕುಮವನ್ನೂ ಅಶೋಕ ಪುಷ್ಪವನ್ನೂ ಎರಚಿ ಹಾಡನ್ನು ಹಾಡುತ್ತ ಓಡಿಹೋಗುತ್ತಿದ್ದ ಹಾಗೂ ತೋರಿತು. ಹಿರಣ್ಮಯಿಯು ಹೃದಯದಾ ವಿಕೃತಾವಸ್ಥೆಯಲ್ಲಿ ಉಚ್ಚಕಂಠದಲ್ಲಿ ಹಾಡುವುದಕ್ಕೆ ತೊಡಗಿದಳು.

ಇದ್ದ ಹಾಗೆ ಬೆಳದಿಂಗಳಿಂದ ಬೆಳಗುತ್ತಿದ್ದ ಅಂಬರವು ಮಧ್ಯಾಹ್ನದ ಸೂರ್ಯನೆದ್ದ ಹಾಗೆ ಪ್ರಕಾಶಗೊಂಡಿತು. ಅಕಸ್ಮಾತ್ತಾಗಿ ಕಾನನವನ್ನೂ ಪರ್ವತವನ್ನೂ ಆಕಾಶವನ್ನೂ ಸಮೀರಣವನ್ನೂ ಕಂಪಿಸಿ, ವ್ಯಾಕುಲವುಳ್ಳ ಅಶ್ರುಮತಿಯಾದ ಹಿರಣ್ಮಯಿಯೆದುರಿಗೆ ಪ್ರೇಮೋಚ್ಛ್ವಾಸಮಯವಾಗಿದ್ದ ನದಿಯು ಮೌನವಾಗಿ ನಟಿಸುತ್ತಿ

ನಿಷ್ಠುರವಾದ ಅಭಿನಯವನ್ನು ಉಚ್ಚಘೋಷದಿಂದ ಪರಿಹಾಸ್ಯಮಾಡಿ ಕಿವಿಗಡಚಿಕ್ಕಿಸುವ ವಿಧವಿಧ ಯಂತ್ರವಾದ್ಯಗಳ ಶಬ್ದವೆದ್ದಿತು! ಇಂದು ರಾತ್ರಿ ಎರಡು ಜಾಮದ ಸಮಯದಲ್ಲಿ ಅಜಯಸಿಂಹನಿಗೆ ಗಿರಿರಾಣಿಯನ್ನು ಕೊಟ್ಟು ಮದುವೆಯಾಗುವುದು. ಬಹು ಜನರಿಂದೊಡಗೂಡಿ ಅಕಬರಷಹನು ಅಜಯನನ್ನು ಉಜ್ವಲವಾದ ಬೆಳಕುಗಳಿಂದಲೂ ವಾದ್ಯಗಳಿಂದಲೂ ವಿವಾಹದ ಮಂಟಪಕ್ಕೆ ಮೆರವಣಿಗೆಯಿಂದ ಕರೆದುಕೊಂಡು ಬರುತ್ತಿದ್ದನು. ಎಲ್ಲರಿಗೆ ಮುಂಬಳಿ ಸಮ್ರಾಜನು. ಅವನ ಪಕ್ಕದಲ್ಲಿ 'ದಾನವದಮನ' ವೆಂಬ ಕುದುರೆಯ ಮೇಲೆ ಅಜಯನು. ಅಕಬರನು ಈ ಮಹೋತ್ಸವಕ್ಕೆ ಸಲವಾಗಿ ಅಜಯನಿಗೆ ಇಷ್ಟವಾಗಿದ್ದ 'ದಾನವದಮನ' ವೆಂಬ ಕುದುರೆಯನ್ನು ಆಗ್ರಾದಿಂದ ತರಿಸಿದ್ದನು. ಅಜಯನ ಮುಖವು ಬಹಳ ಕಂದಿದ್ದಿತು. ಮನವು ಮರ್ಮವೇದನೆಯಿಂದ ಕಳವಳಗೊಂಡಿದ್ದ ಹಾಗೆ ತೋರಿತು. ಅಕಬರಷಹನು ಅವನನ್ನು ಕುರಿತು, 'ವತ್ಸ ಅಜಯ! ಇಂಥಾ ಸಂತೋಷಕರವಾದ ದಿವಸ ನಿನ್ನ ಮುಖಮಂಡಲವು ಕಂದಿರುವದನ್ನು ಕಂಡು ಮನಸ್ಸಿಗೆ ವ್ಯಥೆಯುಂಟಾಗುತ್ತದೆ' ಎಂದನು.

ಅಜಯಸಿಂಹನು ಶುಷ್ಕಕಂಠನಾಗಿ "ದಿಲ್ಲೀಶ್ವರ! ಈ ವಾದ್ಯಗಳ ಗಂಭೀರ ಶಬ್ದದಿಂದ, ಮನವು ಇರಿದಹಾಗಾಗುತ್ತದೆ. ಕಾರಣವು ಗೊತ್ತಿಲ್ಲ. ಆ ಶಬ್ದವನ್ನು ನಿಲ್ಲಿಸುವ ಹಾಗೆ ಅಪ್ಪಣೆ ಮಾಡಬೇಕು" ಎಂದನು.

ಸಾಮ್ರಾಜನ ಅಪ್ಪಣೆಯ ಪ್ರಕಾರ ವಾದ್ಯಗಳು ನಿಲ್ಲಿಸಲ್ಪಟ್ಟವು.

ಅಜಯಸಿಂಹನು ಪುನಃ ತೀವ್ರ ದೃಷ್ಟಿಯಿಂದ ನೋಡುತ, "ಭಾರತ ಸಮ್ರಾಜ! ಇಷ್ಟು ಬೆಳಕುಗಳೇಕೆ? ಈಗೊಮ್ಮೆ, ನಿಶ್ಶಬ್ದವಾದ ಅಂಧಕಾರದಲ್ಲಿಯೇ ಹೋಗಿರಲು ಮನವೆಳೆಸುತ್ತದೆ" ಎಂದನು.

ಅಕಬರಷಹ—ಅಜಯ! ನಾನು ಬೇಡುವೆನು. ಇಂದು ಈ ಶುಭದಿವಸದಲ್ಲಿ ಈ ಸುಖಸಮಯದಲ್ಲಿ ಹೃದಯಕ್ಕೆ ಶಾಂತಿಯನ್ನು ತಂದುಕೊಂಡು ಎಲ್ಲರನ್ನು ಸಂತೋಷಪಡಿಸು. ನೀನೂ ಸಂತೋಷಪಡು. ಅಕಬರನ ಇಷ್ಟಾರ್ಥವನ್ನು ಕೈಗೂಡಿಸು. ಗಿರಿರಾಣಿಯ ಪ್ರೇಮಕ್ಕೆ ಪುರಸ್ಕಾರವನ್ನು ಕೊಡು.

ಹೀಗೆಂದು ಹೇಳಿ ಪುನಃ ವಾದ್ಯಗಳಾಗಲೆಂದು ಅಪ್ಪಣೆ ಮಾಡಿದನು. ಅಜಯನು ಇದ್ದ ಹಾಗೆ ಚಮಕಿತನಾಗಿ ಅತಿ ಉಚ್ಚವಾದ ವಿಕೃತಸ್ವರದಿಂದ "ಬೇಡ, ಬೇಡ! ಎಲ್ಲರೂ ಮೌನವಾಗಿ ಕಿವಿಕೊಟ್ಟು ಕೇಳಿರಿ! ದಿಲ್ಲೀಶ್ವರ! ತಾವೂ ಕೇಳೋಣಾಗಲಿ" ಎಂದನು.

ದಿಲ್ಲೀಶ್ವರನು, “ಏನು ಕೇಳಬೇಕು” ಎಂದನು.

ಅಜಯಸಿಂಹ—ಕೇಳೋಣಾಗಲಿ, ಪೂರ್ಣ ನದಿಯ ತೀರದಲ್ಲಿ ಹಾಡುವವ ರಾರು ? ಹೇಳಬಲ್ಲಿರಾ ?

ಅಕಬರಷಹನು ಮನ ಒಡ್ಡಿ ಕೇಳಿದನು. ದೂರ ನದಿಯ ತೀರದಲ್ಲಿ ಕಾನನದಲ್ಲಿ ಯಾರೋ ಅಮೃತಮಯವಾದ ಉಚ್ಚಕಂಠದಿಂದ ಹಾಡುತ್ತಿದ್ದುದು ಕೇಳಿಬಂದಿತು. ಅಜಯಸಿಂಹ—ದಿಲ್ಲೀಶ್ವರ! ತಾವು ದಯವಿಟ್ಟು ಸ್ವಲ್ಪ ತಡಮಾಡಬೇಕು. ಕೂಡಲೇ ಹಿಂದಿರಿಗಿ ಬರುವೆನು. ನನ್ನ ಸಂಗಾತಿಯರಾರೋ ಇಲ್ಲಿ ಬರಲು ಧೈರ್ಯವಿಲ್ಲದೆ ದೂರ ಇರುವ ಹಾಗಿದೆ. ಹಾಡುವವರಾರೋ, ನೋಡಿಕೊಂಡು ಬರುವೆನು.

## ಹದಿನಾಲ್ಕನೆಯ ಪರಿಚ್ಛೇದ.

ಅಜಯಸಿಂಹನ ಕುದುರೆಯು ನಿಮಿಷದಲ್ಲಿ ನದಿಯ ತೀರಕ್ಕೆ ಬಂದಿತು. ಬೆಳ ದಿಂಗಳನ್ನುಟ್ಟು ಮಧುರವಾಗಿ ನಗುತ್ತ ಸರಸದಿಂದ ಓಡುತ್ತಿದ್ದ ನದಿಯ ಪಾರ್ಶ್ವದಲ್ಲಿ ಬಾಚಿಕೊಳ್ಳದೆ ಕೆದರಿದ್ದ ಕೂದಲುಳ್ಳ ರಮಣಿಯೊಬ್ಬಳು ಒಬ್ಬೊಂಟಿಗಿತ್ತಿಯಾಗಿ ಕುಳಿತು ಕೈತಾಳ ಹಾಕುತ್ತ ಹಾಡುತ್ತಿದ್ದಳು. ಅಜಯಸಿಂಹನು ಕುದುರೆ ಯಿಂದಿಳಿದು ಬಂದು, ರಮಣಿಯೆದುರಿಗೆ ನಿಂತನು. ರಮಣಿಯು ಬೆಚ್ಚಿ ಎದ್ದು ನಿಂತಳು. ಅಮೃತಮಯಿಯಾದ ಸುರಸುಂದರಿ ಹಿರಣ್ಮಯಿಯು ಅವನೆದುರಿಗೆ ನಿಂತಿದ್ದಳು. ಅಜ ಯಸಿಂಹನು ಶೈಶವದಿಂದ ಯಾವ ದೇವಿಯ ಪ್ರತಿಮೆಯನ್ನು ಹೃದಯದಲ್ಲಿಟ್ಟು ಪೂಜಿಸಿ ಇಂದು ಅದನ್ನು ಹೃದಯಮಂದಿರದಿಂದ ಹೊರಗೆ ಹಾಕಿ ವಿಸರ್ಜನೆ ಮಾಡಿ ಆ ಸ್ಥಾನ ದಲ್ಲಿ ಗಿರಿರಾಣಿಯ ಪ್ರತಿಮೆಯನ್ನಿಡಬೇಕಾಗಿಯಿದೆಯೋ ಆ ಅತುಲ ಸೌಂದರ್ಯಮ ಯವಾದ ದೇವಿಯ ವಿಗ್ರಹವೇ ಸಜೀವವಾಗಿ ಸಮಕ್ಷಮದಲ್ಲಿ ವಿರಾಜಿಸುತ್ತಿದೆ! ಎಲ್ಲಿಂದೆಲ್ಲಿಗೆ ಸಾಮ್ಯ! ಸುರಲೋಕದ ಸುವರ್ಣಮಯವಾದ ಹಿರಣ್ಮಯಿ-ದೇವಿಗೂ ಪಾಪಿಷ್ಠ ಮರ್ತ್ಯಭೂಮಿಯ ಮೃಣ್ಮಯದ ಪ್ರತಿಮೆಯ ಸ್ವರೂಪವಾದ ಗಿರಿರಾಣಿಗೂ ಸಾಮ್ಯವೆ ?

ಅಜಯಸಿಂಹನು ಹಿರಣ್ಮಯಿಯ ಕಾಲಲ್ಲಿ ಬಿದ್ದು ಪುನಃ ಪುನಃ ಚುಂಬನಮಾಡಿ ಬಳಿಕ ಕೈಮುಗಿದುಕೊಂಡು, “ಹಿರಣ್ಮಯಿ! ದೇವಿ! ಸುರಸುಂದರಿ! ನನ್ನ ಅಪರಾಧ ವನ್ನೊಮ್ಮೆ ಕ್ಷಮಿಸು! ನಿನ್ನ ಅಮೃತಮಯವಾದ ಮೂರ್ತಿಯನ್ನು ನನ್ನ ಹೃದಯ

ದಲ್ಲೊಮ್ಮೆ ಧಾರಣಮಾಡಿಕೊಂಡು ತೃಷಿತವಾದೀ ಪ್ರಾಣದ ಅಸಹ್ಯವಾದ ಜ್ವಾಲೆಯನ್ನು ನಿವಾರಣಮಾಡಿಕೊಳ್ಳುವೆನು" ಎಂದನು.

ಹಿರಣ್ಮಯಿ—ಇದೇನು, ಅಜಯ? ಪುನಃ ಈ ನಿನ್ನ ಸುಖದ ದಿವಸ ಗಿರಿರಾಣಿಯೊಂದಿಗೆ ಪರಿಣಯದ ಸಮಯದಲ್ಲಿ ನಿರ್ಭಾಗ್ಯೆಯಾದ ನನ್ನನ್ನು ಸ್ಮರಿಸಿಕೊಳ್ಳುವುದೇಕೆ?

ಅಜಯ—ಹಾ ಹಿರಣ್ಮಯಿ! ನೀನು ಹೇಗೆ ತಿಳಿಯಬಲ್ಲೆ! ನಿನ್ನ ಸಿಂಹಾಸನವನ್ನು ನಿನ್ನಿಂದ ಅಪಹರಿಸಿ ಮತ್ತೊಬ್ಬಳಿಗೆ ಕೊಡುವುದಕ್ಕೆ ಸಲುವಾಗಿ ನೃಶಂಸನಾದ ಕೃತಘ್ನ ಅಜಯನು ಈ ನಿನ್ನ ರಾಜ್ಯದಲ್ಲಿ ಎಷ್ಟೊಂದು ಭಯಂಕರವಾದ ಸಮರಾನಲವನ್ನೆಬ್ಬಿಸಿ ಉರಿಸಿದ್ದನೆಂಬದನ್ನು ನೀನು ತಿಳಿಯಲಾರೆ! ಇಷ್ಟು ಕಾಲವಾದ ಬಳಿಕ ನಿನ್ನೀ ಸಿಂಹಾಸನದಿಂದ ನಿನ್ನನ್ನು ತಪ್ಪಿಸುವುದು ಬ್ರಹ್ಮಾದಿ ಮನುಷ್ಯರಿಗೆ ಸಾಧ್ಯವಲ್ಲವೆಂದು ತಿಳಿದೆನು.

ಹಿರಣ್ಮಯಿಯು ಅಳುತ ಅಳುತ, "ಹಾಗಾದರೆ ಈಗ ಮಾಡುವುದೇನು? ನಿನ್ನ ಪವಿತ್ರವಾದ ಸಿಂಹಾಸನಕ್ಕೆ ಕಳಂಕಿನಿಯಾದೀ ಹಿರಣ್ಮಯಿಯು ತಕ್ಕವಳಲ್ಲ" ಎಂದಳು.

ಅಜಯನು ಎದ್ದುನಿಂತು ಹಿರಣ್ಮಯಿಯ ಕುತ್ತಿಗೆಯನ್ನು ಕಟ್ಟಿಕೊಂಡು, "ಇಂದು ವಸಂತ ಪೂರ್ಣಿಮೆ! ಬಾ, ಹಿರಣ್ಮಯಿ! ಇಂದೀ ಸುಂದರವಾದ ಬೆಳದಿಂಗಳಲ್ಲಿ ಮೃದುನಾದವುಳ್ಳ ಈ ನದಿಯ ತೀರದಲ್ಲಿ ಚಿಕ್ಕಂದಿನಲ್ಲಿದ್ದ ಹಾಗೆ ಅದೇ ಕಾಲದ ಮನಸ್ಸಿನಿಂದಲೂ ಅದೇ ಕಾಲದ ಸುಖದಿಂದಲೂ ಮನದಾಶೆಯು ದಣಿಯುವ ತನಕಾ ಒಮ್ಮೆ ಹೋಳಿಯಾಡೋಣ! ವಿಷಾದ ಸಮುದ್ರವನ್ನು ಪಾರಾಗಿ ಇಷ್ಟು ಕಾಲವಾದ ಮೇಲೆ ನಿನ್ನನ್ನು ಪುನಃ ಪಡೆದಿರುವೆನು! ಬಾ, ಹಿರಣೆ! ನಿನ್ನನ್ನು ಮತ್ತೊಂದು ತಡವೆ ತಬ್ಬಿಕೊಂಡು ಪ್ರಜ್ವಲಿಪ ಪ್ರಾಣವನ್ನು ಶೀತಲಮಾಡಿಕೊಳ್ಳುವೆನು!" ಎಂದನು.

ಹಿರಣ್ಮಯಿಯು ಅಜಯನ ಬಾಹುಗಳಿಂದ ಕುತ್ತಿಗೆಯನ್ನು ಬಿಡಿಸಿಕೊಂಡು "ಬೇಡ, ಅಜಯ! ನನಗಿದ್ದ ಸುಖದ ಕಾಲವು ಕಳೆದುಹೋಯಿತು! ಆ ಸುಖ ಸ್ವಪ್ನವು ಕೊನೆ ಕಂಡು ಹೋಯಿತು! ನಿನ್ನನ್ನು ವಿನಯದಿಂದ ಬೇಡಿಕೊಳ್ಳುವೆನು. ಈಗ ಹೋಗು! ಹೋಗಿ ಗಿರಿರಾಣಿಯೊಂದಿಗೆ ಹೊಸದಾಗಿ ಸರಸವಾಡಲೆತ್ನಿಸು! ಈ ನಿರ್ಭಾಗ್ಯೆ ಹಿರಣ್ಮಯಿಯು ಗಂಭೀರವಾದ ಈ ಕಪ್ಪಾದ ನೀರೊಳಗೆ ಪ್ರವೇಶಮಾಡಿ

ಉರಿಯುವ ಪ್ರಾಣವನ್ನು ತಂಪುಮಾಡಿಕೊಳ್ಳುವುದಕ್ಕೆ ಸಲವಾಗಿ ಅಪ್ಪಣೆಯನ್ನು ಕೊಡು !" ಎಂದಳು.

ಅಜಯಸಿಂಹನ ನರಗಳಲ್ಲಿ ರಕ್ತಪ್ರವಾಹವು ಪ್ರಬಲವೇಗದಿಂದ ಪ್ರವಹಿಸಿತು. ಇದ್ದಹಾಗೆ, ತಾನು ತಂದೆಯ ಬಳಿ ಎರಡು ವರ್ಷಗಳ ಹಿಂದೆ ಹಿರಣ್ಮಯಿಯನ್ನು ಮರೆಯಲಾರದವನಾಗಿ ಹೋದರೆ ವಕ್ಷದಿಂದ ಹೃತ್ಪಿಂಡವನ್ನು ಕಿತ್ತು ತೆಗೆದು ಯಮುನೆ, ಗಂಗೆ, ಗೋದಾವರಿ, ಅಥವಾ ನರ್ಮದಾ ಈ ನದಿಗಳಲ್ಲಾವುದಾದರೂ ಒಂದು ನದಿಯ ಪವಿತ್ರವಾದ ಜಲದಲ್ಲಿ ತೇಲಿ ಬಿಡುವನೆಂದು ಶಪಥ ಮಾಡಿದ್ದುದು ಮನದಲ್ಲಿ ಹೊಳೆಯಿತು.

ಆಗವನು ಚಮತ್ಕೃತನಾಗಿ ನದಿಯ ತರಂಗದ ಕಡೆ ನೋಡುತ್ತ ಕೈಚಪ್ಪಳೆ ಹೊಡಿದು ನಗುತ್ತ, "ಆಹಾ ! ಹಿರಣ್ಮೆ ! ಸರಿಯಾಗಿ ಹೇಳಿದೆ ! ಗಭೀರವಾದ ಕಪ್ಪಾದ ಜಲದಲ್ಲಿ ! ಎರಡು ವರ್ಷವಾಯಿತು ! ತಂದೆಯು, ಪವಿತ್ರವಾದ ನೀರಿನ ಶೀತಲವಾದ ಗರ್ಭದಲ್ಲಿ ಹಾಕಿದರೆ ಹೃತ್ಪಿಂಡದ ಜ್ವಾಲೆಯು ತಂಪಾಗಿ ತೃಷಿತ ಹೃದಯವು ಶಾಂತಿ ಯನ್ನು ಹೊಂದುವುದೆಂದು ಹೇಳಿದ್ದನು." ಎಂದನು.

ಹಿರಣ್ಮಯಿ—(ಘಟ್ಟಿಯಾಗಿ ನಕ್ಕು)—ನನಗೂ ಉನ್ಮಾದಿನಿಯೊಬ್ಬಳು ನನ್ನ ಭವಿಷ್ಯದಲ್ಲಿ ಈ ತಪಿಸುವ ಹೃದಯವನ್ನು ಕಪ್ಪಾದ ನೀರಿನಲ್ಲಿ ಮುಳುಗಿಸಿ ಶೀತಲಮಾಡಿ ಕೊಳ್ಳಬೇಕೆಂದು ಹೇಳಿದ್ದಳು. ಈಗ್ಗೆ ಹನ್ನೆರಡು ವರ್ಷಗಳಿಗೆ ಹಿಂದೆ ಅರಾವಳಿ ಬೆಟ್ಟದ ಉಪತ್ಯಕೆಯಲ್ಲಿ ಉನ್ಮಾದಿನಿಯೊಬ್ಬಳು ಹೇಳಿದ್ದಳು.

ಇಬ್ಬರೂ ಘಟ್ಟಿಯಾಗಿ ನಕ್ಕು ಪರಸ್ಪರ ಆಲಿಂಗನಮಾಡಿಕೊಂಡರು. ಸಮೀಪ ದಲ್ಲಿ ಅಜಯಸಿಂಹನ ಕುದುರೆಯು ಮೌನವಾಗಿ ನಿಂತಿದ್ದುದು ಅವರಿಬ್ಬರನ್ನು ನೋಡಿ ಕುನುಕುತ್ತ ಆಗಿನ ಅವರ ಮನೋಭಾವದಲ್ಲಿ ತನ್ನ ಸಹಾನುಭೂತಿಯನ್ನು ಸೂಚಿಸಿತು. ಅಜಯಸಿಂಹನು ಹಿರಣ್ಮಯಿಯನ್ನು ಎತ್ತಿಕೊಂಡು ಕುದುರೆಯ ಮೇಲೆ ಏರಿದನು. ಕುದು ರೆಯು ಹೋಗತಕ್ಕ ದಿಕ್ಕನ್ನು ತಿಳಿಯಲು ನದಿಯ ಕಡೆ ನೋಡಿ ಬಳಿಕ ಅಜಯಸಿಂಹನ ಕಡೆಗೆ ತಿರುಗಿ ನೋಡಿತು. ಅಜಯಸಿಂಹನು, "ದಾನವದಮನ ! ಈ ತರಂಗಿಣಿಯ ಶೀತಲ ಗರ್ಭದೊಳಗೆ ಪ್ರವೇಶಮಾಡಿದರೆ ಹೃದಯದ ಬೆಂಕಿಯು ಆರಿಸಿಹೋಗುವು [illegible] !" [illegible]

ಈ ಸಮಯದಲ್ಲಿ ಅಕಬರಷಹನೂ ಅವನ ಅನುಚರರೂ, ಅಜಯನು ಬಹಳ ಹೊತ್ತಾದರೂ ಬಾರಲಿಲ್ಲವಾದ ಕಾರಣ ಅವನನ್ನು ಹುಡುಕಿಕೊಂಡು ಅಜಯನಿದ್ದ ಸ್ಥಳಕ್ಕೆ ಬಂದರು. ಅಜಯಸಿಂಹನು ಹಿರಣ್ಮಯಿಯನ್ನೆತ್ತಿಕೊಂಡು ಕುದುರೆಯ ಮೇಲೆ ಕುಳಿತಿರುವುದನ್ನು ಕಂಡು ಎಲ್ಲರೂ ಬೆರಗಾಗಿ ನಿಂತುಕೊಂಡರು. ಸಮ್ರಾಜನು, "ಇದೇನು, ಅಜಯಸಿಂಹ! ನಿನಗೇನು ಜ್ಞಾನಹೋಯಿತೆ?" ಎಂದನು.

ಅಜಯಸಿಂಹನು ಸಮ್ರಾಜನ ಮಾತನ್ನು ಕಿವಿಯ ಮೇಲೆ ಹಾಕಿಕೊಳ್ಳದೆ ವಿಕೃತವಾದ ಸ್ವರದಿಂದ ಘಟ್ಟಿಯಾಗಿ "ಪೂರ್ಣವಾಗಿ ಹರಿಯುವ ಈ ನದಿಯು ಪವಿತ್ರವಾದ ಗೋದಾವರಿಯ ನದಿಯ ಶಾಖೆಯೆ? ನೀವಾರಾದರೂ ಹೇಳಬಲ್ಲಿರಾ?" ಎಂದು ಹೇಳಿದನು.

ಅಕಬರನು ಅಜಯನ ಕುದುರೆಯ ಕಡಿವಾಣವನ್ನು ಹಿಡಿದುಕೊಳ್ಳಲು ಮುಂದು ವರಿದು ಹೋದನು. ಅಜಯಸಿಂಹನು, "ಜೋಪಾನ, ಯವನ ಸಮ್ರಾಜನೇ! ಒಂದು ತಡವೆ ಯವನನು ಹಿರಣ್ಮಯಿಯನ್ನು ಮುಟ್ಟಿದ್ದುದನ್ನು ಕ್ಷಮಿಸಿದೆನು!" ಎಂದನು.

ಸಮ್ರಾಜ—ಅಜಯಸಿಂಹ! ನಿನಗೆ ಹುಚ್ಚೆ?

ಅಜಯಸಿಂಹನು ವಿಕಟವಾಗಿ ನಕ್ಕು, ನಾನು ಹುಚ್ಚ; ವಿಧಾತನ ಪ್ರಪಂಚ ದೊಂದಿಗೆ ಭಾರತ ಸಮ್ರಾಜನೂ ಹುಚ್ಚೆ? ಯಾವ ಹೃದಯದಲ್ಲಿ ಸುರಲೋಕವನ್ನು ಬೆಳಗುವ ಸುರಸುಂದರಿಯು ಪ್ರಕಾಶಿಸುತ್ತಿರುವಳೋ ಅಂಥಾ ಹೃದಯದಲ್ಲಿರುವುದಕ್ಕೆ ಗಿರಿರಾಣಿಯು ಯೋಗ್ಯಳಾದವಳೆ?" ಎಂದನು.

ಅಜಯನು ಕ್ಷಣಮಾತ್ರ ಸುಮ್ಮನಿದ್ದು ಬಳಿಕ ಹೇಳತೊಡಗಿದನು :—"ಕೇಳೋ ಣಾಗಲಿ, ದಿಲ್ಲೀಶ್ವರ! ಈ ಪಾಪಮಯವಾದ ಮರ್ತ್ಯ ಭೂಮಿಯಲ್ಲಿ ಈ ನಶ್ವರವಾದ ನರಜೀವನವು ಎಷ್ಟರದು? ಹಿರಣ್ಮಯಿಯನ್ನೊಮ್ಮೆ ಹೀಗೆ ಆಲಿಂಗನಮಾಡಿಕೊಳ್ಳುವ ದಕ್ಕೆ ಸಲವಾಗಿ ನೂರು ತಡವೆಯಾದರೂ ಪ್ರಾಣವನ್ನು ಬಿಟ್ಟು ಅಮರಾವತಿಯಿಂದ ನರಕಕ್ಕೆ ಹೋಗಲು ಹಿಂಜರಿಯೆನು! ತಂದೆಗೆ ತಿಳಿಸೋಣಾಗಲಿ; ನನ್ನ ಈ ದೇವದಾನವರ ಯುದ್ಧವು ಕೊನೆಗಂಡಿತೆಂದೂ, ಅನಂತವಾದ ಜೀವನದಲ್ಲೂ ಅಜಯನು ಹಿರಣ್ಮಯಿ ಯನ್ನು ಮರೆಯಲಾರನೆಂದೂ, ಅದುಕಾರಣ ಆತನ ಕಟ್ಟಾಜ್ಞೆಯನ್ನು ಕ[illegible]ಗಿ ಕಾಪಾ ಡುವುದಕ್ಕೆ ಸಲವಾಗಿ, ಇದು ನೋಡೋಣಾಗಲಿ, ಮಿವಾರದ ರಾಜವಂಶದ ಪವಿತ್ರ ವಾದ ಈ ಕತ್ತಿಯ ಪ್ರಹಾರದಿಂದ ಈ ಅಕಿಂಚಿತ್ಕರವಾದ ಹೃದಯವನ್ನು ಕಿತ್ತು [illegible]!" [illegible]

ಹೇಳುತ್ತ ಹಿರಣ್ಮಯಿಯನ್ನು ಹಿಡಿದಿದ್ದ ಹಾಗೆ ಕಾಲಿಂದ ಕುದುರೆಯನ್ನು ಮುಂದಾಗಲು ಸೈಗೆ ಮಾಡಿ ಕೈಯಲ್ಲಿದ್ದ ಒರೆಯೊಗೆದ ಕತ್ತಿಯನ್ನು ತನ್ನೆದೆಯಲ್ಲಿ ಆಮೂಲವಾಗಿ ಕೂರಿಸಿದನು । ದಾನವದಮನವು ಹೇಷಾರವದಿಂದ ಕುಣಿಯುತ್ತ ಹಿರಣ್ಮಯಿ ಅಜಯರೊಂದಿಗೆ ನದಿಯ ಗರ್ಭದೊಳಗೆ ಪ್ರವೇಶಮಾಡಿ ಬಿಟ್ಟಿತು । ಎರಡು ಪ್ರಾಣಿಗಳ ಜ್ವಲಂತವಾದ ವಕ್ಷವು ಶೀತಲವಾದ ಜಲದಲ್ಲಿ ಅಳಿಸಿಹೋಯಿತು । ಅನಂತವಾದ ಹೃದಯದ ಅನಂತವಾದ ಪ್ರೇಮವು ಅನಂತಪ್ರವಾಹಿಣಿಯಾದ ತರಂಗಿಣಿಯ ಅನಂತವಾದೊಡಲಲ್ಲಿ ವಿಲೀನವಾಗಿ ಹೋಯಿತು !

ಪ್ರೇಕ್ಷಕರೆಲ್ಲರೂ ಕೋಲಾಹಲ ಮಾಡುತ್ತ ನದಿಯ ತೀರಕ್ಕೆ ಓಡಿಬಂದರು. ಅಕಬರಷಹನ ಅಪ್ಪಣೆಯ ಪ್ರಕಾರ ಅನೇಕರು ನದಿಯಲ್ಲಿ ಧುಮುಕಿದರು. ದೂರದಲ್ಲಿ ರಮಣಿಯರೆಲ್ಲರೂ ರೋದನ ಮಾಡತೊಡಗಿದರು. ಬಹು ಸಂಖ್ಯೆಯುಳ್ಳ ನೋಟಕರಲ್ಲೊಬ್ಬ ರಮಣಿಯು ಮಾತ್ರ ಸ್ಥಿರ ಗಂಭೀರಭಾವದಿಂದ ಮೌನವಾಗಿ ನಿಂತಿದ್ದಳು । ಸಮ್ರಾಜ ಅಕಬರಷಹನು ಭೀಷಣವಾದ ಆ ರಂಗಭೂಮಿಯಲ್ಲಿ ವ್ಯಾಕುಲ ಹೃದಯದವನಾಗಿ ನಾಲ್ಕೂ ಕಡೆಯೂ ನೋಡುತ್ತಿದ್ದವನು ಸ್ವಲ್ಪ ದೂರದಲ್ಲಿ ನಿರ್ವಾತ ನಿಷ್ಕಂಪ ಪ್ರದೀಪದ ಹಾಗೆ ಜ್ಯೋತಿರ್ಮಯವಾಗಿ ಚಂಚಲವಿಲ್ಲದಿದ್ದೊಂದು ಬಾಲೆಯ ಮೂರ್ತಿಯನ್ನು ಕಂಡನು. ಗಿರಿರಾಣಿಯು ನೀರವವಾಗಿ ನಿಸ್ಪಂದವಾದ ನಯನಗಳಿಂದ ಆ ಭಯಂಕರವಾದ ಅಭಿನಯವನ್ನು ನೋಡುತ್ತಿದ್ದಳು !

# ಉಳಿದುದು.

ಏಳು ವರ್ಷಗಳ ತರುವಾಯ ಒಂದಾನೊಂದು ದಿನ ಅಕಬರಷಹನು ಬಹುಸಂಖ್ಯಕ ಸೈನ್ಯ ಸಮೇತನಾಗಿ ಆಗ್ರಾದಿಂದ ಹೊರಟು ದಕ್ಷಿಣ ದೇಶಾಭಿಮುಖವಾಗಿ ಅದೇ ಮಾರ್ಗವಾಗಿ ಹೋಗುತ್ತಿದ್ದನು. ಪೂರ್ಣ ನದಿಯ ತೀರದಿಂದ ವೇಣುನಾದದ ಲಲಿತ ಸಂಗೀತದ ಧ್ವನಿಯು ಕೇಳಿಸಿತು. ಅವನು ತನ್ನ ಸೈನ್ಯವನ್ನು ಮುಂದುವರಿದು ಹೋಗಲು ಅಪ್ಪಣೆಮಾಡಿ ಒಬ್ಬೊಂಟಿಗನಾಗಿ ಆ ಸ್ಥಳಕ್ಕೆ ಹೋದನು. ಗಿರಿದುರ್ಗವು ನೆಲಸಮನಾಗಿ ಕಲ್ಲಿನ ರಾಶಿಯಾಗಿ ಪರಿಣಮಿಸಿದ್ದಿತು. ನದಿಯಲ್ಲಿ ಅಜಯಸಿಂಹ ಹಿರಣ್ಮಯಿ ಇವರಿಬ್ಬರ ಅಪಾರ್ಥಿವ ಪ್ರೇಮದ ಪಾರ್ಥಿವ ಜಲಸಮಾಧಿಯಾಗಿದ್ದೆಡೆಯಲ್ಲಿ ಚಿಕ್ಕದೊಂದು ಪರ್ಣಕುಟೀರವು ನಿರ್ಮಿತವಾಗಿದ್ದಿತು. ನದಿಯ ತೀರದಲ್ಲಿ ಪರ್ಣಕುಟೀರಕ್ಕೆದುರಾಗಿ ಬೆಳದಿಂಗಳಲ್ಲಿ ಕಾವಿ ಬಟ್ಟೆಯ ಧರಿಸಿದ್ದೊಬ್ಬ ತಾಪಸ ಕುಮಾರಿಯು ಏಕಾಕಿನಿಯಾಗಿ ನಿಂತುಕೊಂಡು ಸುಧಾಮಯವಾದ ತಾನದಲ್ಲಿ ವೇಣುವನ್ನು ನುಡಿಸುತ್ತಿದ್ದಳು. ಆ ತಾಪಸ ಕುಮಾರಿಯು ಗಿರಿರಾಣಿಯಾಗಿದ್ದಳು! ಅಕಬರಷಹನು ಅವಳ ಕಂಠದಲ್ಲೊಂದು ವಜ್ರದ ಹಾರವು ಬೆಳದಿಂಗಳಲ್ಲಿ ತಳತಳಿಸುತ್ತಿದ್ದುದನ್ನು ನೋಡಿದನು! ಆ ವಜ್ರದ ಹಾರದಲ್ಲಿ ಉಜ್ವಲವಾದ ಅಕ್ಷರದಲ್ಲಿ "ಮೇವಾರದ ರಾಜಕುಮಾರ ಅಜಯಸಿಂಹ!" ಎಂದು ಬರೆದಿತ್ತು. ಅಮೃತವನ್ನು ಕರೆಯುತ್ತಿದ್ದಾತಾಪಸಿಯ ವೇಣುವಿನ ಮೋಹಮಯವಾದ ನಾದವು ಸುಧಾಂಶುವಿನ ಅಮೃತ ಕಿರಣದಲ್ಲಿ ಅಮೃತ ರಾಶಿಯನ್ನು ಹೊಯ್ದು ಅಮೃತ ಭಾಷಿಣಿಯಾದ ಕಲ್ಲೋಲಿನಿಯನ್ನು (ನದಿಯನ್ನು) ಅಮೃತದ ಉಚ್ಛ್ವಾಸದಿಂದ ವ್ಯಾಕುಲಗೊಳಿಸಿ ಅಜಯ ಹಿರಣ್ಮಯಿಯರಿಬ್ಬರ ಪ್ರೇಮದ ಅಮೃತಮಯವಾದ ಸ್ಮರಣೆಯಿಂದ ಅಕಬರನನ್ನು ಉನ್ಮತ್ತನನ್ನಾಗಿ ಮಾಡಿ ಅಮೃತರಾಶಿಯ ಮೇಲೆ ಅಮೃತರಾಶಿಯನ್ನು ಕರೆಯುತ್ತಿತ್ತು! ಮರ್ತ್ಯಲೋಕದಲ್ಲಿಷ್ಟು ಅಮೃತವಿದೆಯೆಂದು ಭಾರತಸಮ್ರಾಜನು ತಿಳಿದಿರಲಿಲ್ಲ! ಈ ಧರಾಧಾಮದಲ್ಲಿ ಈ ಪ್ರಕಾರ ನಿರವಚ್ಛಿನ್ನವಾದ ಅಮೃತೋಚ್ಛ್ವಾಸವಿರುವುದೆಂದು ಅವನು ಸ್ವಪ್ನದಲ್ಲಿ ಕಲ್ಪಿಸಿಕೊಂಡಾದರೂ ಕಂಡವನಲ್ಲ! ಅಮೃತಮಯವಾದ ಆ ನೋಟದ ಅಮೃತಮಯವಾದ ಸ್ಮರಣೆಯು ಮರಣ ಕಾಲದವರೆಗೂ ಅವನ ಹೃದಯದಲ್ಲಿ ಜಾಗರಿತವಾಗಿದ್ದಿತು! ಅಮೃತಮುಖಿಯಾದ ಆ ತಾಪಸಕುಮಾರಿ ಗಿರಿರಾಣಿಯು ಅಮರಲೋಕಕ್ಕೆ ಹೋಗಿ

ಬಹಳ ಕಾಲವಾಗಿ ಹೋಯಿತು. ಅವಳ ಅಮೃತಮಯವಾದ ಆ ವೇಣುನಾದವನ್ನು ಈಚೆಗೆ ಮತ್ತಾರೂ ಕೇಳಲಿಲ್ಲ. ಆದರೆ ನಾವು ನೋಡಿದುದರಲ್ಲಿ ಆ ಪೂರ್ಣ ನದಿಯು ಈಗಲೂ ಅದೇ ಸ್ಥಳದಲ್ಲಿ ಹಾಗೇ ಅಮೃತೋಚ್ಛ್ವಾಸದಿಂದ ಸರಸವಾಡುತ್ತದೆ. ಈಗಲೂ ಅದರ ತರಂಗಭಂಗದಲ್ಲಿ ಹಾಗೇ ಅಮೃತರಾಶಿಯು ಉಕ್ಕುತ್ತದೆ. ಮುನ್ನೂರು ವರ್ಷಕ್ಕೆ ಹಿಂದೆ ಪವಿತ್ರವಾದ ಆ ಜಲದಲ್ಲಿ ಅಭಿನಯಸಲ್ಪಟ್ಟ ಸ್ವರ್ಗೀಯವಾದ ಆ ನೋಟವನ್ನು ಈಗಲೂ ಅದರ ಒಂದೊಂದು ತೆರೆಯೂ ನೆನಪಿಗೆ ತರುತ್ತಿದೆ. ಈಗ ಆ ಗಿರಿದುರ್ಗವೂ ಇಲ್ಲ—ಆ ಪರ್ಣಕುಟೀರವೂ ಇಲ್ಲ—ಅಲ್ಲೀಗ ಸಣ್ಣದೊಂದು ಗ್ರಾಮವಿದೆ. ಅದರ ಹೆಸರು "ಅಮೃತಪುಲಿನ!"